ಹೊಯ್ಸಳರ ಕಾಲದ ಹಳೇಬೀಡು ಮುಖ್ಯ ನಗರ ಕೇಂದ್ರ ಮತ್ತು ನಗರೀಕರಣ : ಒಂದು ಅಧ್ಯಯನ

(ಇತಿಹಾಸ ಎಂ.ಫಿಲ್ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ನಿಬಂಧ)

ಸಂಶೋಧಕ
ಜಿ.ಬಿ. ಶಿವಣ್ಣ

ಮಾರ್ಗದರ್ಶಕರು
ಡಾ. ಶ್ರೀಕಂಠ

385

ಕರ್ನಾಟಕ ಸಂಘ (ರಿ), ಮಂಡ್ಯ.
ಪ್ರೊ: ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)
2007-2008

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

385

AKSHARA GRANTHALAYA

ACC.NO. 130022

ಹೊಯ್ಸಳರ ಕಾಲದ ಹಳೇಬೀಡು ಮುಖ್ಯ ನಗರ ಕೇಂದ್ರ ಮತ್ತು ನಗರೀಕರಣ : ಒಂದು ಅಧ್ಯಯನ

(ಇತಿಹಾಸ ಎಂ.ಫಿಲ್ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ನಿಬಂಧ)

ಸಂಶೋಧಕ

ಬಿ.ಬಿ. ಶಿವಣ್ಣ

ಮಾರ್ಗದರ್ಶಕರು

ಡಾ. ಶ್ರೀಕಂಠ

ಕರ್ನಾಟಕ ಸಂಘ (ರಿ), ಮಂಡ್ಯ.

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

2007-2008

954.87
SHI h
130022

ಮಾರ್ಗದರ್ಶಕರ ಪ್ರಮಾಣಪತ್ರ

"ಹೊಯ್ಸಳರ ಕಾಲದ ಹಳೇಬೀಡು ಮುಖ್ಯ ನಗರ ಕೇಂದ್ರ ಮತ್ತು ನಗರೀಕರಣ: ಒಂದು ಅಧ್ಯಯನ" ಎಂಬ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯದ ಎಂ.ಫಿಲ್. ಪದವಿಗಾಗಿ ಶ್ರೀ ಜಿ.ಬಿ.ಶಿವಣ್ಣ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ಮೈಸೂರು

ದಿನಾಂಕ: 10-09-2008

(ಡಾ. ಶ್ರೀಕಂಠ)
ಉಪನ್ಯಾಸಕರು, ಇತಿಹಾಸ ವಿಭಾಗ,
ಮಹಾರಾಜ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು

ಸಂಶೋಧಕನ ಪ್ರಮಾಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ 2007–08 ನೇ ಸಾಲಿಗೆ ಇತಿಹಾಸ ಎಂ.ಫಿಲ್ ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು "ಹೊಯ್ಸಳರ ಕಾಲದ ಹಳೇಬೀಡು ಮುಖ್ಯ ನಗರ ಕೇಂದ್ರ ಮತ್ತು ನಗರೀಕರಣ : ಒಂದು ಅಧ್ಯಯನ" ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ. ಶ್ರೀಕಂಠ ರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತ ಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಕನ್ನಡ ವಿಶ್ವ ವಿದ್ಯಾಲಯವು ನೀಡುವ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ಜಿ.ಬಿ. ಶಿವಣ್ಣ

ಸ್ಥಳ : ಮಂಡ್ಯ
ದಿನಾಂಕ : 10-09-2008

(ಜಿ.ಬಿ. ಶಿವಣ್ಣ)
ಸಂಶೋಧಕ, ಚರಿತ್ರೆ ವಿಭಾಗ
ಕರ್ನಾಟಕ ಸಂಘ (ರಿ) ಮಂಡ್ಯ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ–ಮಾನ್ಯತೆ ಪಡೆದಿದೆ.)

ವಿಷಯಸೂಚಿ

ಅಧ್ಯಾಯ 1

1.1 ಪೀಠಿಕೆ

ಭಾರತದ ಇತಿಹಾಸ ರಂಗ ವೇದಿಕೆಯಲ್ಲಿ ಅನೇಕ ರಾಜ ಮನೆತನಗಳು ಆಳಿ–ಅಳಿದು ಹೋಗಿವೆ. ಆದರೆ ಇಂದಿಗೂ ಕೂಡ ಅವರು ಬೆಳೆಸಿ ಪೋಷಿಸಿದ ಧರ್ಮ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪಗಳು ತಮ್ಮ ಕಾಂತಿಯನ್ನು ಕಳೆದುಕೊಳ್ಳದೇ ಜನರ ಜೀವನದೊಂದಿಗೆ ಬೆರೆತು ಮುಂದುವರಿದುಕೊಂಡು ಬಂದಿವೆ. ರಾಜರು ರಾಜಕೀಯವಾಗಿ ಪ್ರಬಲವಾಗಿ ನೆಲೆಯೂರಲು ನಿರ್ಮಿಸಿ ಕೊಂಡ ಭದ್ರವಾದ ಕೋಟೆಗಳು ಪ್ರಮುಖ ನಗರಕೇಂದ್ರಗಳ ಬೆಳವಣಿಗೆಗೆ ಕಾರಣವಾಯಿತು. ಆ ನಿಟ್ಟಿನಲ್ಲಿ ಪ್ರಮುಖ ನಗರಗಳು ತಲೆಯೆತ್ತಿ ಸರ್ವತೋಮುಖವಾದ ಬೆಳವಣಿಗೆಯನ್ನು ಕಂಡವು. ಮುಂದೆ ಈ ನಗರ ಕೇಂದ್ರಗಳೇ ಆಯಾ ರಾಜ–ಮನೆತನಗಳ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಸಾರಿಕೊಂಡು ಬಂದಿವೆ. ಇದೇ ರೀತಿ ಕರ್ನಾಟಕವನ್ನು ಆಳ್ವಿಕೆ ನಡೆಸಿದ ರಾಜ ಮನೆತನಗಳ ಇತಿಹಾಸದಲ್ಲಿ ಇದೇ ಅಂಶಗಳನ್ನು ಕಾಣುತ್ತೇವೆ.

ಕರ್ನಾಟಕವನ್ನು ಆಳ್ವಿಕೆ ನಡೆಸಿದ ರಾಜ ಮನೆತನಗಳಲ್ಲಿ ಹೊಯ್ಸಳರು ಪ್ರಸಿದ್ಧರಾಗಿದ್ದಾರೆ. ಹೊಯ್ಸಳರ ಇತಿಹಾಸಕ್ಕೆ ಸಂಬಂಧಿಸಿದಂತೆ ಬೇಲೂರು, ಹಳೇಬೀಡು, ತಲಕಾಡು, ಸೋಮನಾಥಪುರ ಮುಂತಾದ ಅನೇಕ ನಗರಗಳು ರಾಜಕೀಯ, ಐತಿಹಾಸಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿ ಸರ್ವತೋಮುಖ ಬೆಳವಣಿಗೆಯನ್ನು ಹೊಂದಿದ್ದು ಹೊಯ್ಸಳರ ಕಾಲದಲ್ಲಿ ಇವುಗಳು ಶ್ರೇಷ್ಠ ಆಡಳಿತವನ್ನು ಹೊಂದಿ ಅರಸರ ಔನ್ನತ್ಯಕ್ಕೆ ಗಣನೀಯ ಸೇವೆಯನ್ನು ಸಲ್ಲಿಸಿವೆ ಎಂದರೆ ತಪ್ಪಾಗಲಾರದು.

ಈ ನಗರಗಳು ಕೇವಲ ರಾಜಕೀಯ ಚಟುವಟಿಕೆಗಳ ಕೇಂದ್ರಗಳಾಗಿರದೇ ಈ ನಗರಗಳ ಚಲುವು ಮತ್ತು ವೈಶಿಷ್ಟ್ಯಗಳು ಜನರನ್ನು ಧಾರ್ಮಿಕವಾಗಿ, ವ್ಯಾಪಾರ ಮತ್ತು ವಾಣಿಜ್ಯ ಕೇಂದ್ರಗಳಾಗಿ ಆಕರ್ಷಿಸಿದವು. ಇದರಿಂದ ನಗರಗಳ ಬೆಳವಣಿಗೆ ಹೊಯ್ಸಳರ ಕಾಲದಲ್ಲಿ ತ್ವರಿತವಾಗಿ ಉಂಟಾಯಿತು. ಇಂತಹ ಆಕರ್ಷಣೀಯ ಮತ್ತು ಶ್ರೀಮಂತಿಕೆಯನ್ನು ಹೊಂದಿದ್ದ ನಗರಗಳು ಅನೇಕ ಶತ್ರು ರಾಜ್ಯಗಳ ವಕ್ರದೃಷ್ಟಿಗೆ ಒಳಗಾಗಿ ಹಲವು ಸಂಕಷ್ಟಗಳನ್ನು ಎದುರಿಸಬೇಕಾಗಿ ಬಂದರೂ ಕೂಡ ಹೊಯ್ಸಳ ಅರಸರು ತಮ್ಮ ಪರಾಕ್ರಮಗಳಿಂದ ಶತ್ರುಗಳ ದಾಳಿಗಳಿಂದ ತಮ್ಮ ನಗರಗಳನ್ನು ಹೇಗೆ ರಕ್ಷಿಸಿ, ಪೋಷಿಸಿ ಇತಿಹಾಸದಲ್ಲಿ ಅವುಗಳ ಸ್ಥಾನಮಾನಗಳನ್ನು ಹೇಗೆ ಉನ್ನತ ಮಟ್ಟಕ್ಕೇರಿಸಿದರು

ಎಂಬುದನ್ನು ಸಮಗ್ರವಾಗಿ ಅಧ್ಯಯನ ಮಾಡುವುದೇ ಈ ಸಂಶೋಧನೆಯ ಮೂಲ ಉದ್ದೇಶವಾಗಿದೆ.

1.2 ಅಧ್ಯಯನದ ಸ್ವರೂಪ

ಹೊಯ್ಸಳರ ಕಾಲದಲ್ಲಿದ್ದ ಪ್ರಮುಖ ನಗರಗಳ ಐತಿಹಾಸಿಕ ಹಿನ್ನಲೆ ಮತ್ತು ಅವುಗಳ ಪ್ರಾಮುಖ್ಯತೆ ಮುಂತಾದವುಗಳ ಬಗ್ಗೆ ಮಾಹಿತಿಯು ದೊರಕದಿರುವುದು ಸೋಜಿಗದ ಸಂಗತಿ ಯಾಗಿದೆ. ಈ ಕಾಲದಲ್ಲಿ ಪ್ರಮುಖವಾಗಿ ಬೇಲೂರು ರಾಜಧಾನಿಯಾಗಿ, ಧಾರ್ಮಿಕ ಸ್ಥಳವಾಗಿ, ವ್ಯಾಪಾರ, ವಾಣಿಜ್ಯ ಕೇಂದ್ರವಾಗಿ ಮತ್ತು ಕಲೆ ಮತ್ತು ವಾಸ್ತುಶಿಲ್ಪ ಕೇಂದ್ರವಾಗಿ ಈ ನಗರದ ಪಾತ್ರವೇನು ಹೊಯ್ಸಳರ ಕಾಲದಲ್ಲಿ ಈ ನಗರವು ಹೊಂದಿದಂತಹ ಪಾತ್ರವೇನು ಮತ್ತು ಇದರ ಪ್ರಾಮುಖ್ಯತೆ ಏನು ಇದರಲ್ಲಿ ವಿಶಿಷ್ಟವಾದುದೇನಿದೆ ಎಂಬುದನ್ನು ವಿವರವಾಗಿ ಮತ್ತು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಬೇಕಾದದ್ದು ಅತ್ಯಗತ್ಯವಾಗಿದೆ. ಆದುದರಿಂದ ಈ ಸನ್ನಿವೇಶವನ್ನು ಮನಗಂಡು ಹೊಯ್ಸಳ ಕಾಲದ ಚೌಕಟ್ಟಿನಲ್ಲಿ ಪ್ರಸ್ತುತ ಅಧ್ಯಯನವನ್ನು ಆರಿಸಿಕೊಳ್ಳಲಾಗಿದೆ.

ಹೊಯ್ಸಳರ ಇತಿಹಾಸಕ್ಕೆ ಸಂಬಂಧಿಸಿದಂತೆ ಅನೇಕ ವಿದ್ವಾಂಸರು ಮತ್ತು ಸಂಶೋಧಕರು ಅನೇಕ ಗ್ರಂಥಗಳನ್ನು ಮತ್ತು ಸಂಶೋಧನ ಲೇಖನಗಳನ್ನು ಮಂಡಿಸಿದ್ದಾರೆ. ಆದರೆ ಅವುಗಳ ಹೊಯ್ಸಳರ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಇತಿಹಾಸಕ್ಕೆ ಸಂಬಂಧಿಸಿದವುಗಳಾಗಿವೆ. ಹೊಯ್ಸಳರ ರಾಜಕೀಯ ಇತಿಹಾಸದ ಉಜ್ವಲತೆಯಲ್ಲಿ ಆ ಕಾಲದ ನಗರಗಳ ಪಾತ್ರವೇನು ಅವು ಯಾವ ಮಾದರಿಯಲ್ಲಿದ್ದವು ಅವುಗಳ ವೈಶಿಷ್ಟ್ಯವೇನು, ಅವುಗಳ ಲಕ್ಷಣಗಳೇನು ಕರ್ನಾಟಕದ ಸಂಸ್ಕೃತಿ ಬೆಳವಣಿಗೆಯಲ್ಲಿ ಈ ನಗರಗಳ ಪ್ರಾಮುಖ್ಯತೆ ಏನು ಇವೇ ಮುಂತಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಸಂಶೋಧನಾ ವಿಷಯವನ್ನು ಆರಿಸಿ ಕೊಳ್ಳಲಾಗಿದೆ.

1.3 ರಾಜಕೀಯ ಹಿನ್ನಲೆ

ಹೊಯ್ಸಳರ ಆಳ್ವಿಕೆಯ ಕಾಲ ಕರ್ನಾಟಕದ ಇತಿಹಾಸದಲ್ಲೇ ಅಲ್ಲದೇ ಇಡೀ ದಕ್ಷಿಣ ಭಾರತದ ಇತಿಹಾಸದಲ್ಲೇ ಪ್ರಮುಖ ಅಧ್ಯಾಯಗಳಲ್ಲೊಂದಾಗಿದೆ ಅವರ ರಾಜಕೀಯ ಇತಿಹಾಸ ಎಷ್ಟು ವೈಭವವೋ ಅಷ್ಟೇ ಭವ್ಯವಾದುದು ಅವರ ಸಾಂಸ್ಕೃತಿಕ ಇತಿಹಾಸ. ಇಂತಹ ಒಂದು

ಉಜ್ವಲ ಪರಂಪರೆಗೆ ಅನೇಕ ಪ್ರಮುಖ ಹೊಯ್ಸಳ ಅರಸರು ಕಾರಣರಾದರು. ಹತ್ತನೆಯ ಶತಮಾನದ ಅಂತ್ಯದ ವೇಳೆಗೆ ಅಂದರೆ ಸುಮಾರು ಕ್ರಿ.ಶ.1970 ರಲ್ಲಿ ಸ್ಥಾಪಿಸಿದ ಈ ಮನೆತನ ಸುಮಾರು ನಾನೂರು ವರ್ಷಗಳ ಕಾಲ ಆಳ್ವಿಕೆ ನಡೆಸಿ ಕ್ರಿ.ಶ. 1346ರ ವೇಳೆಗೆ ಕಣ್ಮರೆಯಾಯಿತು. ಇದು ದಕ್ಷಿಣ ಭಾರತದಲ್ಲೇ ಒಂದು ಪ್ರಮುಖ ರಾಜಮನೆತನವೆನಿಸಿಕೊಂಡು ರಾರಾಜಿಸಿತು ನೃಪಕಾಮ. ವಿನಯಾದಿತ್ಯ, ವಿಷ್ಣುವರ್ಧನ, ಎರಡೆಯ ವೀರಬಲ್ಲಾಳ, ಇಮ್ಮಡಿ ನರಸಿಂಹ, ಸೋಮೇಶ್ವರ ಮತ್ತು ಮುಮ್ಮಡಿ ವೀರಬಲ್ಲಾಳ ಮೊದಲಾದ ರಾಜರ ಕಾಲದಲ್ಲಿ ಹೊಯ್ಸಳ ಪ್ರಭುತ್ವ ಉತ್ತುಂಗ ಶಿಖರಕ್ಕೇರಿತು. ಹೊಯ್ಸಳ ಸಂತತಿಯ ಅರಸರು ಸಾಹಿತ್ಯ, ಕಲೆ ಮತ್ತು ಧರ್ಮಕ್ಕೆ ವಿಶೇಷ ಪ್ರಾಶಸ್ತ್ಯ ನೀಡಿ ಸಂಸ್ಕೃತಿಯ ಸಂವರ್ಧನೆಗೆ ಬಹುಮಟ್ಟಿಗೆ ಸಹಕಾರಿಯಾದರು.

ಹೊಯ್ಸಳರ ರಾಜಕೀಯ ಇತಿಹಾಸದಲ್ಲಿ ಮೂರು ಪ್ರಮುಖ ಹಂತಗಳನ್ನು ಗುರುತಿಸಬಹುದು. ಅದು ಪ್ರಾರಂಭಿಕ ಕಾಲ, ಉಚ್ಛ್ರಾಯ ಕಾಲ ಮತ್ತು ಅವನತಿಯ ಕಾಲ ಮೇಲೆ ವಿವರಿಸಿದಂತೆ ಸುಮಾರು ಕ್ರಿ.ಶ. 970 ರ ವೇಳೆಗೆ ಹೊಯ್ಸಳ ರಾಜ್ಯ ಸ್ಥಾಪನೆಯಾಯಿತೆಂದು ಇತಿಹಾಸಕಾರರು ಅಭಿಪ್ರಾಯ ಪಟ್ಟಿದ್ದಾರೆ. ಕ್ರಿ.ಶ. 10 ಮತ್ತು 11ನೇ ಶತಮಾನಗಳಲ್ಲಿ ಕಲ್ಯಾಣಿ ಚಾಲುಕ್ಯರಿಗೂ ಮತ್ತು ಚೋಳರಿಗೂ ದಕ್ಷಿಣ ಭಾರತದ ಸಾರ್ವಭೌಮತ್ವಕ್ಕಾಗಿ ನಿರಂತರವಾಗಿ ಹೋರಾಟಗಳು ನಡೆದವು. ರಾಜ ರಾಜ ಚೋಳರು ಕ್ರಿ.ಶ. 1004 ರಲ್ಲಿ ತಲಕಾಡಿನ ಗಂಗರನ್ನು ಪರಾಭವಗೊಳಿಸಿ ಗಂಗವಾಡಿಯ ಬಹುಭಾಗವನ್ನು ಚೋಳರ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. ಆ ವೇಳೆಗೆ ಬಹುಶಃ ಗಂಗರ ಕೊನೆಗಾಲದಲ್ಲಿ ಮಲೆನಾಡಿನಲ್ಲಿ ಸಣ್ಣ ಸಂಸ್ಥಾನವೊಂದರ ಮಂಡಲಿಕನಾಗಿಯೇ ಅಥವಾ ಗಂಗರ ಆಡಳಿತ ವರ್ಗದಲ್ಲಿ ಚಿಕ್ಕ ಹುದ್ದೆಯಲ್ಲೋ ಇದ್ದ ಸಳನು ಕ್ರಮೇಣ ರಾಜ್ಯ ಸ್ಥಾಪನೆಗೆ ಅನುಕೂಲವಾಗಿದ್ದ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಹೊಯ್ಸಳ ಮನೆತನವನ್ನು ಸ್ಥಾಪಿಸಿದನು.

ಸಳನ ಉತ್ತರಾಧಿಕಾರಿಗಳು ಕಲ್ಯಾಣಿ ಚಾಲುಕ್ಯರ ಅಧೀನರಾಗಿಯೇ ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡರು. ಅವರು ಗಂಗರ ಬಿರುದುಗಳಾದ ‘ರಾಜಮಲ್ಲ ಪೆರುಮಾಡಿ’ ಹಾಗೂ ‘ವಿಕ್ರಮ ಗಂಗ’ ಮುಂತಾದ ಬಿರುದುಗಳನ್ನು ಹೊಂದಿದ್ದರು. ಚೋಳರು ಕ್ರಿ.ಶ. 1004 ರಲ್ಲಿ ತಲಕಾಡನ್ನು ಗೆದ್ದುಕೊಂಡ ನಂತರ ಹೊಯ್ಸಳರು ಗಂಗರ ಪರವಾಗಿ ಹೋರಾಟ ನಡೆಸಿದರೆಂದು ತಿಳಿದು ಬರುತ್ತದೆ. ಕ್ರಿ.ಶ. 1006ರ ಸುಮಾರಿನಲ್ಲಿ ಗಂಗರ ಪರವಾಗಿ ಹೊಯ್ಸಳ ಮಾಂಡಲಿಕನು ಕಲಿಯೂರು

ಎಂಬಲ್ಲಿ ಚೋಳರನ್ನು ಎದುರಿಸಿ ಚೋಳ ಪ್ರಾಂತಾಧಿಕಾರಿಯಾದ ಅಪ್ರಮೇಯನಿಂದ ಸೋಲನ್ನು ಅನುಭವಿಸಿದ ಸಂಗತಿಯು ಶಾಸನವೊಂದರಿಂದ ತಿಳಿದು ಬರುತ್ತದೆ.

ಹೊಯ್ಸಳರ ಮೂಲದ ಬಗ್ಗೆ ವಿದ್ವಾಂಸರು ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರ ಮೂಲವನ್ನು ಕುರಿತ ದಂತಕಥೆಗಳು ಕ್ರಿ.ಶ. 11ನೇ ಶತಮಾನದಿಂದಲೂ ರೂಪುಗೊಳ್ಳುತ್ತಾ ಬಂದಿವೆ. ಅದು ಹೊಯ್ಸಳ ಇತಿಹಾಸದ ಸಂಘಟನೆಯ ಯುಗ. ಆದ್ದರಿಂದ ಈ ಕಥೆಗಳ ಉದ್ದೇಶ ಸಂದೇಹಾಸ್ಪದವಾಗುತ್ತದೆ. ಸಂಗ್ರಹವಾಗಿ ಹೇಳಬೇಕೆಂದರೆ ಈ ವಂಶದ ಮೂಲಪುರುಷ ಸಳ ಎನ್ನುವವನು ಒಬ್ಬ ವೀರ ಮತ್ತು ಕಟ್ಟಾ ಜೈನ ಒಂದು ಸಂದರ್ಭದಲ್ಲಿ ಅವನು ವಾಸಂತಿಕಾದೇವಿ ಯನ್ನು ಪೂಜಿಸುವ ಸಲುವಾಗಿ ದೇವಲಯಕ್ಕೆ ಹೋಗಿದ್ದನು. ದೇವಾಲಯವಿದ್ದುದು ಸೋಸೆವೂರು ಅಥವಾ ಶಶಕಪುರ ಎಂಬಲ್ಲಿ ತನ್ನ ಕುಲದೇವತೆ ವಾಸಂತಿಕಾ ದೇವಿಯನ್ನು ಪೂಜಿಸಿದ ನಂತರ ಅಲ್ಲೇ ಇದ್ದ ತನ್ನ ಗುರುವಾದ ವರ್ಧಮಾನ ಸುದತ್ತರ ಬಳಿಗೆ ಒಂದು ಅವನ ಆಶೀರ್ವಾದವನ್ನು ಮತ್ತು ಧರ್ಮ ಬೋಧನೆಯನ್ನು ಪಡೆಯಲು ಬಂದು ಕುಳಿತನು, ಆ ಕ್ಷಣದಲ್ಲಿ ಸಮೀಪದಲ್ಲಿದ್ದ ಕಾಡಿನಿಂದ ಒಂದು ಭಯಂಕರವಾದ ಹುಲಿಯು ಗರ್ಜಿಸುತ್ತಾ ಅವರ ಮೇಲೆ ಹಾರಿತು. ಆಗ ಗುರುಗಳು ಪೊಯ್ ! ಸಳ ! (ಸಳ ಹೊಡಿ) ಎಂದು ಕೂಗಿದರು. ವೀರನಾಗಿದ್ದ ಶಿಷ್ಯನು ತನ್ನ ಗುರುವಿನ ಆದೇಶದಂತೆ ಆ ಹುಲಿಯನ್ನು ಇರಿದು ಕೊಂದನು, ಅಲ್ಲದೆ ಹೊಯ್ಸಳ ಅಥವಾ ಹೊಯ್ ಸಳ ಎಂಬ ಹೆಸರನ್ನು ತನ್ನ ವಂಶನಾಮವನ್ನಾಗಿ ಮಾಡಿಕೊಂಡನು ಹುಲಿಯನ್ನು ವೀರನು ಕೊಲ್ಲುತ್ತಿರುವ ಚಿತ್ರವು ಅವನ ವಂಶದ ಚಿಹ್ನೆಯಾಯಿತು.[1] ಹೊಯ್ಸಳ ಇತಿಹಾಸದ ನಿರೂಪಣೆಗಳಲ್ಲೆಲ್ಲ ಈ ಕಥೆಯನ್ನೇ ಅಥವಾ ಅಲ್ಪಸ್ವಲ್ಪ ವ್ಯತ್ಯಾಸಗಳೊಂದಿಗೆ ಅದನ್ನು ಹೊಯ್ಸಳ ರಾಜವಂಶದ ಮೂಲವೆಂದು ಹೇಳಿದೆ. ಸಳನ ಆಳ್ವಿಕೆಯ ಕಾಲ ಮತ್ತು ಘಟನೆಗಳಿಗೆ ಸಂಬಂಧಿಸಿದ ಮಾಹಿತಿಗಳು ದೊರೆತಿಲ್ಲ. ಸಳನು ಪರಾಕ್ರಮದಿಂದ ತನಗೆದುರಾದ ಸಮಸ್ಯೆಗಳನ್ನು ನಿವಾರಿಸಿ ರಾಜ್ಯ ಸ್ಥಾಪನೆ ಮಾಡಿ ಹೊಯ್ಸಳ ಸಂತತಿಯ ಸ್ಥಾಪಕನಾದನು.

ನೃಪಕಾಮ (ಕ್ರಿ.ಶ. 1006-1047)

ಹೊಯ್ಸಳ ರಾಜವಂಶದಲ್ಲಿ ಪ್ರಾರಂಭ ಕಾಲದ ಅಸ್ಪಷ್ಟತೆಯ ಮಬ್ಬಿನಿಂದ ಸ್ಪಷ್ಟವಾಗಿ ಮೂಡಿ ಬರುವ ಮೊದಲನೆಯ ವ್ಯಕ್ತಿ ನೃಪಕಾಮ. ಅವನು ಬಹು ಸಮರ್ಥನಾಗಿದ್ದ ಆಶೋತ್ತರಗಳಿದ್ದ ನಾಯಕನು ರಾಜ್ಯವನ್ನಾಳಬೇಕೆಂದು ನಿರ್ಧಾರ ಅವನಲ್ಲಿತ್ತು ಗಣನೀಯ ರಾಜ

ನೀತಿಜ್ಞನು ಆಗಿದ್ದ ನೃಪಕಾಮನು ಗಂಗ ಮತ್ತು ಕದಂಬರೊಂದಿಗೆ ಮೈತ್ರಿ ಬೆಳೆಸಿಕೊಳ್ಳುವ ಅಗತ್ಯವನ್ನು ಮನಗಂಡಿದ್ದನು.

ವಿನಯಾದಿತ್ಯ (ಕ್ರಿ.ಶ. 1047-1097)

ನೃಪಕಾಮನ ನಂತರ ಅವನ ಮಗನಾದ ವಿನಯಾದಿತ್ಯನು ಕ್ರಿ.ಶ. 1047 ರಲ್ಲಿ ಅಧಿಕಾರಕ್ಕೆ ಬಂದನು. ಇವನು ಸುಮಾರು 50 ವರ್ಷಗಳ ಕಾಲ ಆಳ್ವಿಕೆ ನಡೆಸಿದನು. ಈ ಕಾಲದಲ್ಲಿಯೇ ಹೊಯ್ಸಳರು ಕಲ್ಯಾಣದ ಚಾಲುಕ್ಯರೊಡನೆ ಮೈತ್ರಿಯನ್ನು ಬೆಳೆಸಿಕೊಂಡರು. ಕ್ರಿ.ಶ. 1068 ರಲ್ಲಿ ಒಂದನೆ ಸೋಮೇಶ್ವರ ಕಾಲವಾದ ಮೇಲೆ ಅವನ ಮಗನಾದ ಎರಡನೆಯ ಸೋಮೇಶ್ವರ ಮತ್ತು ಅವನ ಸಹೋದರನಾದ ವಿಕ್ರಮಾದಿತ್ಯನಿಗೂ ವೈಮನಸ್ಯ ಹುಟ್ಟಿತು. ಆಗ ವಿನಯಾದಿತ್ಯನ ತನ್ನ ಮಗನಾದ ಎರೆಯಂಗನ ನೇತೃತ್ವದಲ್ಲಿ ಬೃಹತ್ ಸೈನ್ಯವನ್ನು ಸೋಮೇಶ್ವರನ ನೆರವಿಗೆ ಕಳುಹಿಸಿದನು. ಕೆಲವು ವರ್ಷಗಳು ಕಳೆದ ನಂತರ ಎರಡನೆಯ ಸೋಮೇಶ್ವರ ಮರಣ ಹೊಂದಿದನು. ಆಗ ವಿಕ್ರಮಾದಿತ್ಯ ಚಾಲುಕ್ಯ ಸಿಂಹಾಸನದ ಸ್ಪರ್ಧಾರಹಿತ ಅಧಿಪತಿಯಾದನು. ಆಗ ವಿನಯಾದಿತ್ಯನು ವಿಕ್ರಮಾಧಿತ್ಯನ ಸಾರ್ವಭೌಮತ್ವವನ್ನು ಅಂಗೀಕರಿಸಲು ಶಂಕಿಸಲಿಲ್ಲ. ಎರೆಯಂಗ ಇನ್ನೂ ರಾಜಕುಮಾರನಾಗಿದ್ದಾಗಲೇ ಎರಡನೆಯ ಸೋಮೇಶ್ವರನ ಆಹ್ವಾನವನ್ನು ಅಂಗೀಕರಿಸಿ ತನ್ನ ಶೌರ್ಯವನ್ನು ತೋರಿಸಲು ಇನ್ನೊಂದು ಅವಕಾಶವನ್ನು ಹೊಂದಿದನು. ಅವನು ಮಾಲವ ರಾಜ್ಯದ ಪ್ರತಾಪಶಾಲಿ ಎನಿಸಿದ್ದ ಭೋಜರಾಜನ ದುರ್ಗ ಧಾರಾನಗರವನ್ನು ಮುತ್ತಿ ವಶಪಡಿಸಿಕೊಂಡನು.[2]

ಹಾಗೆಯೇ ಅವನು ಚಕ್ರಗೊಟ್ಟವನ್ನು ವಶಪಡಿಸಿಕೊಂಡುದಲ್ಲದೆ ಕಳಿಂಗ ರಾಜ್ಯದ ಸೈನ್ಯವನ್ನು ಸೋಲಿಸಿದನು ಇತರ ಸಾಮಂತ ಅರಸರಿಗಿಂತ ಎರೆಯಂಗನು ಹೆಚ್ಚು ಪ್ರಭಾವಶಾಲಿ ಯಾಗಿ ಮೆರೆದನು. ಇಪ್ಪತ್ತು ವರ್ಷಗಳ ಹಿಂದೆ ಎರೆಯಂಗ ಧಾರಾ ನಗರವನ್ನು ಮುತ್ತಿ ನಾಶಮಾಡಿದುದ್ದಕ್ಕೆ ಸೇಡನ್ನು ತೀರಿಸಿಕೊಳ್ಳಲು ಪರಮಾರರ ದಂಡನಾಯಕನಾದ ಜಗದ್ದೇವ ದೋರಸಮುದ್ರದ ಮೇಲೆ ದಂಡೆತ್ತಿ ಬಂದನು. ಜಗದ್ದೇವನು ಎರೆಯಂಗನಂತೆಯೇ ವಿಕ್ರಮಾದಿತ್ಯನ ಸಾಮಂತನಾಗಿದ್ದನು. ಆಗ ಎರೆಯಂಗನ ಮಕ್ಕಳಾದ ಬಲ್ಲಾಳ ಮತ್ತು ವಿಷ್ಣುವರ್ಧನರು ಈ ದಾಳಿಯನ್ನು ಹಿಮ್ಮೆಟ್ಟಿಸಲು ಯಶಸ್ವಿಯಾದರು.[3]

ಒಂದನೇ ಬಲ್ಲಾಳ (ಕ್ರಿ.ಶ. 1102-1108)

ಎರೆಯಂಗನ ಮರಣದ ನಂತರ ಕ್ರಿ.ಶ. 1102 ರಲ್ಲಿ ಒಂದನೇ ಬಲ್ಲಾಳ ಅಧಿಕಾರಕ್ಕೆ ಬಂದು ಹೊಯ್ಸಳ ರಾಜ್ಯವನ್ನು ವಿಸ್ತರಿಸಿ ರಾಜ್ಯವನ್ನು ಕಲ್ಯಾಣ ಚಾಲುಕ್ಯರ ಅಧೀನದಿಂದ ಸ್ವತಂತ್ರವಾಗಿಸಲು ಬಯಸಿದನು. ಇವನ ಕಾಲದಲ್ಲಿಯೇ ರಾಜಧಾನಿಯು ಸೊಸೇವೂರಿನಿಂದ ಬೇಲೂರಿಗೆ (ವೇಲಾಪುರ) ವರ್ಗಾಯಿಸಲ್ಪಟ್ಟಿತು. ಆಗ ದೋರಸಮುದ್ರ (ಹಳೇಬೀಡು) ಪರ್ಯಾಯ ರಾಜಧಾನಿಯಾಗಿ ಉಳಿಯಿತು.[4]

ಬಲ್ಲಾಳನು ಕ್ರಿ.ಶ. 1104 ರಲ್ಲಿ ಚೆಂಗಾಳ್ವರ ಮೇಲೆ ದಾಳಿ ಮಾಡಿದನು. ಜನಸಾಮಾನ್ಯರ ಮಟ್ಟದಲ್ಲಿ ಶೈವ ಧರ್ಮವು ಜನಪ್ರಿಯವಾಗಿರುವುದನ್ನು ಗಮನಿಸಿ. ಅವನು ಶೈವನಾಗಿ ಮತಾಂತರ ಗೊಂಡನು. ಆತನಿಗೆ ಮಕ್ಕಳಿರಲಿಲ್ಲವಾದ್ದರಿಂದ ನಂತರ ಅವನ ಸಹೋದರನಾದ ವಿಷ್ಣುವರ್ಧನನು ಅಧಿಕಾರಕ್ಕೆ ಬಂದನು.

ವಿಷ್ಣುವರ್ಧನ (ಕ್ರಿ.ಶ. 1108-1142)

ವಿಷ್ಣುವರ್ಧನ ಹೊಯ್ಸಳರ ಕೀರ್ತಿಯನ್ನು ನಿಜವಾಗಿ ಸ್ಥಾಪಿಸಿದವನು ಈತನು ಗಂಗವಾಡಿಯ ಪ್ರದೇಶವನ್ನು ತನ್ನ ಅಧೀನಕ್ಕೆ ಒಳಪಡಿಸಿ ವಿಸ್ತಾರವಾದ ಸಾಮ್ರಾಜ್ಯವನ್ನು ನಿರ್ಮಿಸಿದನು. ಒಂದನೇ ಬಲ್ಲಾಳನ ಮರಣ ನಂತರದ ಕ್ರಿ.ಶ. 1108 ರಲ್ಲಿ ಅಧಿಕಾರಕ್ಕೆ ಬಂದು ಕಲ್ಯಾಣ ಚಾಲುಕ್ಯರ ಅಧೀನದಿಂದ ಮುಕ್ತರಾಗುವುದು ಮತ್ತು ಸಾಮ್ರಾಜ್ಯದ ವಿಸ್ತರಣೆ ಮಾಡುವುದು ಈತನ ರಾಜಕೀಯ ಬೆಳವಣಿಗೆಗಳ ಪ್ರಮುಖ ಅಂಶಗಳಾಗಿದ್ದವು.[5]

ಇವರ ಕಾಲದಲ್ಲಿ ದೋರಸಮುದ್ರ ಅಥವಾ ಹಳೇಬೀಡು ರಾಜ್ಯದ ರಾಜಧಾನಿಯಾಗಿತ್ತು. ರಾಷ್ಟ್ರಕೂಟದ ರಾಜನಾದ ಧ್ರುವನು ಅಲ್ಲಿ ಕಟ್ಟಿಸಿದ ಕೆರೆಯ ಹೆಸರೇ ಅದಕ್ಕೆ ಬಂದಿದೆ.[6] ರಾಜ್ಯದ ಉತ್ತರದಲ್ಲಿ ಬಂಕಾಪುರ, ದಕ್ಷಿಣದಲ್ಲಿ ತಲಕಾಡು, ಪ್ರಾದೇಶಿಕ ರಾಜಧಾನಿಗಳಾದವು. ಅವನು ಹೊಂದಿದ್ದ 'ತಲಕಾಡುಗೊಂಡ' 'ಮಲೆ ಪರೊಳ್‌ಗಂಡ', 'ಗಂಡಗಿರಿನಾಥ', ಕದನ ಪ್ರಚಂಡ ಸತ್ಯ ರತ್ನಾಕರ ವಿವೇಕ ನಾರಾಯಣ ಸಾಹಸಭೀಮ ಮುಂತಾದ ಬಿರುದುಗಳು ಅವನ ಯುದ್ಧ ಸಾಮರ್ಥ್ಯವನ್ನು ಮಹಾ ವ್ಯಕ್ತಿತ್ವವನ್ನು ಹೊಗಳುತ್ತವೆ. ಗಂಗವಾಡಿಯು ಚೋಳರ ಪ್ರಧಾನ ಪ್ರಾಂತ್ಯವಾಗಿ ಇದ್ದುದು ವಿಷ್ಣುವರ್ಧನನಿಗೆ ಸರಿಯಾಗಿ ಕಾಣಲಿಲ್ಲ.

ಹೊಯ್ಸಳ ದಂಡನಾಯಕ ಗಂಗರಾಜನು ಕ್ರಿ.ಶ. 1116 ರಲ್ಲಿ ತಲಕಾಡನ್ನು ಚೋಳರಿಂದ ವಶಪಡಿಸಿಕೊಂಡನು.[7] ವಿಷ್ಣುವರ್ಧನನ ನಾಣ್ಯಗಳಲ್ಲಿ 'ತಲಕಾಡುಗೊಂಡ' ಎಂಬ ಬಿರುದು ಕಂಡು ಬರುತ್ತದೆ. ತಲಕಾಡಿನ ವಿಜಯದ ನಂತರ ಚೋಳ ರಾಜ್ಯದ ಮೇಲೆ ದಿಗ್ವಿಜಯ ಪ್ರಾರಂಭವಾಯಿತು. ವಿಷ್ಣುವರ್ಧನನ ಅನೇಕ ಶಾಸನಗಳಲ್ಲಿ ಅವನು ದಕ್ಷಿಣದಲ್ಲಿ ರಾಮೇಶ್ವರದವರೆಗೂ ದಿಗ್ವಿಜಯ ನಡೆಸಿದ ಉಲ್ಲೇಖವಿದೆ. ಅವನು 'ಕಾಂಚಿಗೊಂಡ' ಎಂದು ಬಿರುದನ್ನು ಹೊಂದಿದನೆಂದು ಒಂದು ಶಾಸನದಿಂದ ತಿಳಿದು ಬರುತ್ತದೆ. ಮಧುರೆಯು ಅವನ ಹಸ್ತಗತವಾಗಿ ನಾಶವಾಯಿತೆಂದು ಅವನ ದಂಡನಾಯಕನೋರ್ವನಿಂದ ಜನನಾಥಪುರವು ನಾಶವಾಯಿತೆಂದು ಕಾಂಚಿಯಲ್ಲಿ ಜಯಭೇರಿಯ ಮೂಲಕ ಪ್ರಸಿದ್ಧ ಪಡಿಸಿಲಾಯಿತೆಂದು ಹೇಳಲಾಗಿದೆ. ಸೇಲಂ, ಕೊಯಮತ್ತೂರು ಮುಂತಾದ ತಮಿಳುನಾಡಿನ ಭಾಗಗಳಲ್ಲಿ ದೊರಕುವ ವಿಷ್ಣುವರ್ಧನನ ಶಾಸನಗಳಲ್ಲಿ ಅವನು 'ಕಾಂಚಿಕೊಂಡ' ಬಿರುದನ್ನು ಹೊಂದಿದುಕ್ಕೆ ಅರ್ಹತೆಯನ್ನು ಸೂಚಿಸಲಾಗಿದೆ. ಅವನ ದಂಡನಾಯಕ ಗಂಗರಾಜನು ಯಶಸ್ವಿಯಾದ ಯುದ್ಧ ನಡೆಸಿದರೂ ಅವನು ಆರನೇ ವಿಕ್ರಮಾದಿತ್ಯನ ಸಾಮಂತನಾಗಿಯೇ ಇದ್ದು ಕ್ರಿ.ಶ. 1126 ರಲ್ಲಿ ವಿಕ್ರಮಾದಿತ್ಯನು ಮರಣ ಹೊಂದಿದ ಮೇಲೆಯೇ ತಾನು ಸ್ವತಂತ್ರ ರಾಜನೆಂದು ಘೋಷಿಸಿಕೊಂಡನು. ಅವನ ಸಾಮ್ರಾಜ್ಯವು ಕೊಂಡು (ಸೇಲಂ) ನಹ್ಗಲಿ (ಕೋಲಾರ ಜಿಲ್ಲೆಯ ಪೂರ್ವಭಾಗ) ತಲಕಾಡು (ಮೈಸೂರು ಜಿಲ್ಲೆ) ಗಂಗವಾಡಿ ನೊಳಂಬವಾಡಿ, ಬನವಾಸಿ ಹಾನಗಲ್, ಹುಲಿಗೆರೆ, ಹಲಸಿಗೆ ಮತ್ತು ಬೆಳವೊಲ ಈ ಪ್ರಾಂತಗಳಿಂದ ಕೂಡಿದ್ದಿತು. ಅವನು ಅಪ್ರತಿಮ ವೀರಯೋಧನೆಂದು ಕೀರ್ತಿ ಎಲ್ಲೆಲ್ಲಿಯೂ ಹರಡಿತ್ತು.

ವಿಷ್ಣುವರ್ಧನನ ಬಹುಮುಖ ಪ್ರತಿಭೆ ಯುದ್ಧದಲ್ಲು, ಶಾಂತಿಯಲ್ಲೂ ಅವನ ಸಮಾನವಾಗಿ ಶ್ರೇಷ್ಠನಾಗಿದ್ದನು. ಸೈನ್ಯ ಸಮೇತನಾಗಿ ಸಂಚರಿಸುತ್ತಲೇ ಇದ್ದು ಅವನಿಗೆ ವಿಶ್ರಾಂತಿಯೇ ಇರಲಿಲ್ಲ. ಅವನ ಆಳ್ವಿಕೆಯಲ್ಲಿ ಕರ್ನಾಟಕದಲ್ಲಿ ಶ್ರೀ ವೈಷ್ಣವ ಧರ್ಮದ ಜನಪ್ರಿಯತೆಯು ಪುನರುಜ್ಜೀವನ ಗೊಂಡಿತು. ಅದು ಜೈನ ಧರ್ಮದ ಉಚ್ಛ್ರಾಯ ಕಾಲವೂ ಆಗಿತ್ತು. ಜೈನಳಾಗಿದ್ದ ಅವನ ರಾಣಿ ಶಾಂತಲದೇವಿಯು ಸಂಗೀತ ನೃತ್ಯಗಳಲ್ಲಿ ಪ್ರವೀಣೆಯಾಗಿದ್ದಳು. ವಿಷ್ಣುವರ್ಧನನು ಜೈನ, ಶೈವ ಮತ್ತು ಶ್ರೀ ವೈಷ್ಣವ ಸಂಸ್ಥೆಗಳಿಗೆ ಸಮಾನವಾಗಿ ಆಶ್ರಯ ನೀಡಿದ್ದನು.[8] ಇವನು ಬೇಲೂರು, ತಲಕಾಡು, ಮೇಲುಕೋಟೆ, ತೊಣ್ಣೂರು, ಗದಗ, ಬಂಕಾಪುರಗಳಲ್ಲಿ ದೇವಾಲಯಗಳನ್ನು ನಿರ್ಮಿಸಿದನು.

ಒಂದನೇ ನರಸಿಂಹ (ಕ್ರಿ.ಶ. 1142-1173)

ವಿಷ್ಣುವರ್ಧನನ ನಂತರ ಅಧಿಕಾರಕ್ಕೆ ಬಂದ ಒಂದನೇ ನರಸಿಂಹನು ಕೇವಲ ಎಂಟು ವರ್ಷದ ಬಾಲಕನಾಗಿದ್ದನು. ಈತನ ಕಾಲದಲ್ಲಿ ಸಾಮಂತರ ನಿಷ್ಠೆ ಕಡಿಮೆಯಾಗಿ ಅವರು ಸ್ವತಂತ್ರರಾಗಲು ಹವಣಿಸುತ್ತಿದ್ದರು. ಕ್ರಿ.ಶ. 1154 ರಲ್ಲಿ ಕಲಚೂರಿ ಬಿಜ್ಜಳನು ಕಲ್ಯಾಣವನ್ನು ವಶಪಡಿಸಿಕೊಂಡನು. ಪರಿಣಾಮವಾಗಿ ಬನವಾಸಿ ಬೆಳವೊಲ, ನೊಳಂಬವಾಡಿ, ಪ್ರದೇಶಗಳು ಹೊಯ್ಸಳರಿಂದ ಕೈಬಿಟ್ಟು ಹೋದವು.[9] ಈತನು ವಿಲಾಸಿಯು ಬೋಗಜೀವಿಯು ಆಗಿದ್ದರಿಂದ ತನ್ನ ನಲವತ್ತನೆಯ ವಯಸ್ಸಿನಲ್ಲಿಯೇ ಮರಣ ಹೊಂದಿದನು.

ಎರಡನೇ ಬಲ್ಲಾಳ (ಕ್ರಿ.ಶ. 1173-1220)

ವಿಷ್ಣುವರ್ಧನನ ನಂತರ ಆಳ್ವಿಕೆ ನಡೆಸಿದವರಲ್ಲಿ ಎರಡನೇ ಬಲ್ಲಾಳ ಪ್ರಸಿದ್ಧನಾಗಿದ್ದಾನೆ. ಇವನ ಕಾಲದಲ್ಲಿ ಸಾಮ್ರಾಜ್ಯವು ವಿಸ್ತಾರವಾಯಿತು. ಇವನಿಂದ ಕೊಂಗಾಳ್ವರು, ಚೆಂಗಾಳ್ವರು ದಮನವಾದರು ರಾಜ್ಯದಲ್ಲಿ ಕಂಡುಬಂದ ಅವ್ಯವಸ್ಥೆ ಅಡಗಿಸಲ್ಪಟ್ಟಿತು. ಉಚ್ಚಂಗಿ ಕೋಟೆ ಕೈವಶವಾಯಿತು. ಬಲ್ಲಾಳನು "ಗಿರಿದುರ್ಗಮಲ್ಲ"ನೆಂಬ ಬಿರುದನ್ನು ಹೊಂದಿದನು, ಉಚ್ಚಂಗಿಯಲ್ಲಿ ಪಾಂಡ್ಯ ಮನೆತನದವರು ಆಳುತ್ತಿದ್ದರು. ಅದು ಅವನ ಕೈವಶವಾದುದು ಒಂದು ಶನಿವಾರವಾದುದರಿಂದ ಬಲ್ಲಾಳನು 'ಶನಿವಾರ ಸಿದ್ಧಿ' ಎಂಬ ಬಿರುದನ್ನು ಹೊಂದಿದನು. ಪಾಂಡ್ಯರ ನೆರೆಯ ರಾಜ ಹಂಜೇರು ಚೋಳನ ಮೇಲು ಉತ್ತರದಲ್ಲಿ ತುಂಗಭದ್ರೆಯ ಆಚೆಗೂ ದಿಗ್ವಿಜಯಗಳು ನಡೆದವು. ಇವುಗಳಲ್ಲಿ ಬಹಳ ಮುಖ್ಯ

ಸೋಮೇಶ್ವರ (ಕ್ರಿ.ಶ. 1236-1254)

ನರಸಿಂಹನ ನಂತರ ಅಧಿಕಾರಕ್ಕೆ ಬಂದ ಸೋಮೇಶ್ವರನು ತಂದೆಯ ಜೊತೆಯಲ್ಲಿ ದೋರ ಸಮುದ್ರದಲ್ಲೇ ಇದ್ದು ರಾಜ್ಯಾಡಳಿತದಲ್ಲಿ ತರಬೇತಿ ಪಡೆದನು. ಇವನಿಗೆ ಸೋವಿದೇವ ಅಥವಾ ಸೋಮೇಶ್ವರ ಎಂಬ ಹೆಸರಿತ್ತು. ಇವನು ತನ್ನ ತಂದೆ ನಡೆಸಿದ ಕೆಲವು ದಂಡಯಾತ್ರೆಗಳಲ್ಲಿ ಭಾಗವಹಿಸಿದ್ದನು. ಆಗ ಹೊಯ್ಸಳರ ದಂಡಯಾತ್ರೆ ಕಾಂಚಿಯವರೆಗೂ ಮುಂದುವರೆಯಿತು. ಸೋಮೇಶ್ವರನು ಫಲವತ್ತಾದ ಮಧುರೈ ಮತ್ತು ಗಂಗೈಕೊಂಡ ಚೋಳಪುರಂಗಳನ್ನು ವಶಪಡಿಸಿ ಕೊಂಡದ್ದು, ಚೋಳರಿಗೂ ಮತ್ತು ಪಾಂಡ್ಯರಿಗೂ ಸಹಿಸದಾಯಿತು. ಮೂರನೇ ರಾಜರಾಜನವರೆಗೂ ನಿಷ್ಠುರವಾಗಿದ್ದ ಚೋಳರು ಮೂರನೇ ರಾಜೇಂದ್ರನು ಅಧಿಕಾರಕ್ಕೆ ಬಂದ ಮೇಲೆ ಹೊಯ್ಸಳರ ವಿರೋಧಿಯಾಗಿ, ಅರಸನಾಗಿದ್ದ ಸೋಮೇಶ್ವರನನ್ನು ಕಾಲ್ದೆಗೆಯುವಂತೆ ಮಾಡಿದರು.[12]

ಜಟಾವರ್ಮ ಸುಂದರ ಪಾಂಡ್ಯನು ಕ್ರಿ.ಶ. 1251 ರಲ್ಲಿ ಅಧಿಕಾರಕ್ಕೆ ಬಂದನು. ಇದು ಪಾಂಡ್ಯರ ಇತಿಹಾಸದಲ್ಲಿ ಒಂದು ಗಣನೀಯ ಅಂಶವಾಯಿತು. ದಕ್ಷಿಣ ಭಾರತದ ಎಲ್ಲಾ ರಾಜರು ಅವನ ಸಾಮರ್ಥ್ಯವನ್ನು ಮನಗಂಡರು. ಈ ಸಾಮಾನ್ಯ ಅಪಾಯದಿಂದ ಹೊಯ್ಸಳರ ಮತ್ತು ಚೋಳರ ನಡುವಿನ ಭಿನ್ನಾಭಿಪ್ರಾಯಗಳು ದೂರವಾಗಿ ಅವರು ಒಪ್ಪಂದಕ್ಕೆ ಮುಂದಾಗಿ ತಮ್ಮ ಸರ್ವಸಾಮರ್ಥ್ಯವನ್ನು ಒಟ್ಟುಗೂಡಿಸಿ ಪಾಂಡ್ಯರ ವಿರುದ್ಧ ಕಾದಾಡಿದರು.[13]

ಮೂರನೆಯ ನರಸಿಂಹ (ಕ್ರಿ.ಶ. 1254-1291)

ಕ್ರಿ.ಶ. 1254 ಸಿಂಹಾಸನವನ್ನೇರಿದ ಮೂರನೇ ನರಸಿಂಹ ಕಾಲದಲ್ಲಿ ಹೊಯ್ಸಳ ಸಾಮ್ರಾಜ್ಯ ವಿಭಜನೆಯಾಯಿತು. ಆಗ ಸಾಮ್ರಾಜ್ಯವು ಹಿಡಿತಕ್ಕೆ ಬಾರದಷ್ಟು ದೊಡ್ಡದಾಗಿತ್ತು. ಕೇವಲ ಆಡಳಿತದ ಸೌಕರ್ಯಕ್ಕಾಗಿಯೇ ರಾಜ್ಯ ವಿಭಜನೆಯಾಯಿತು. ಪಿತ್ರಾರ್ಜಿತ ರಾಜ್ಯದ ಬಹುಭಾಗ ಎಂದರೆ ದೋರಸಮುದ್ರವನ್ನು ರಾಜಧಾನಿಯನ್ನಾಗಿ ಉಳ್ಳ ಅದರ ಸುತ್ತಮುತ್ತಲ ಪ್ರಾಂತ್ಯವು ನರಸಿಂಹನ ಭಾಗಕ್ಕೇ ಸೇರಿತು. ಸೋಮೇಶ್ವರನ ಎರಡನೇ ಮಗನಾದ ರಾಮನಾಥನ ವಶಕ್ಕೆ ತಮಿಳು ಪ್ರಾಂತ್ಯದ ಸೇಲಂ ಜಿಲ್ಲೆ. ಉತ್ತರ ಅರ್ಕಾಟ್ ಮತ್ತು ಚಿತ್ತೂರ್ ಜಿಲ್ಲೆಗಳ ಪಶ್ಚಿಮಾರ್ಧ ಮೈಸೂರು ದೇಶದ ಪೂರ್ವಭಾಗ ಇವೆಲ್ಲವು ಸೇರಿದವು ಕಣ್ಣಾನೂರು ಅವನ ರಾಜಧಾನಿಯಾಯಿತು. ನರಸಿಂಹನು ತನ್ನ ಸಾಮರ್ಥ್ಯದಿಂದ ಪಿತ್ರಾರ್ಜಿತ ರಾಜ್ಯವನ್ನು ಆಳುತ್ತಾ ದಂಡೆತ್ತಿ ಬಂದ ಯಾದವರನ್ನು ಹಿಮ್ಮೆಟ್ಟಿದನು.[14] ಕ್ರಿ.ಶ. 1279 ರಲ್ಲಿ ಚೋಳ ರಾಜೇಂದ್ರ ಚೋಳನ ಅವಸಾನದಿಂದ ಚೋಳ ಸಾಮ್ರಾಜ್ಯದ ಪತನ ಪ್ರಾರಂಭವಾಯಿತು. ಪಾಂಡ್ಯ ರಾಜನಾದ ಮಾರವರ್ಮನ್ ಕುಲಶೇಕರನು ಹೊಯ್ಸಳ ಸಮ್ರಾಜ್ಯಕ್ಕೆ ಸೇರಿ ರಾಮನಾಥನ ಆಡಳಿತಕ್ಕೆ ಸೇರಿದ್ದ ತಮಿಳು ಜಿಲ್ಲೆಗಳು ಮತ್ತು ಚೋಳ ದೇಶಗಳ ಮೇಲೆ ಪ್ರಭುತ್ವನ್ನು ಗಳಿಸಿದುದರಿಂದ ಹೊಯ್ಸಳರಿಗೆ ದಕ್ಷಿಣದಲ್ಲಿ ಭಾರಿಪೆಟ್ಟು ಬಿದ್ದಂತಾಯಿತು.[15]

ಮೂರನೇ ಬಲ್ಲಾಳ (ಕ್ರಿ.ಶ. 1292-1342)

ಮೂರನೇ ಬಲ್ಲಾಳನ ಆಳ್ವಿಕೆಯ · ಕಾಲವು ದಕ್ಷಿಣ ಭಾರತದಲ್ಲಿ ಪ್ರಕ್ಷುಬ್ಧತೆಯ ಕಾಲವಾಗಿತ್ತು. ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಥಮವಾಗಿ ಕ್ರಿ.ಶ. 1310 ರಲ್ಲಿ ಮುಸ್ಲಿಮರು ದಂಡೆಯಾತ್ರೆ ನಡೆಸಿ ದಾಳಿ ಮಾಡಿದರು. ಅಂತಃ ಕಲಹಗಳಿಂದ ಕೂಡಿದ್ದ ರಾಜ್ಯಗಳಿಗೆ ಮುಸ್ಲಿಮರ ಘೋರ ದಾಳಿಯನ್ನು ಎದುರಿಸಿ ರಕ್ಷಣೆ ಮಾಡಿಕೊಳ್ಳುವ ಸಿದ್ದತೆಯೇ ಇರಲಿಲ್ಲ. ಈ ರಾಜ್ಯಗಳಲ್ಲಿ

ಸೇವುಣರೆಂದು ಹೆಸರು ಪಡೆದ ದೇವಗಿರಿಯ ಯಾದವರು, ವಾರಂಗಲ್ಲಿನ ಕಾಕತೀಯರು, ಹೊಯ್ಸಳರು ಮತ್ತು ಪಾಂಡ್ಯರು ಮುಖ್ಯರಾದವರು. ಒಬ್ಬೊಬ್ಬರು ಪರಮಾಧಿಕಾರಕ್ಕಾಗಿ ಹೋರಾಡುತ್ತಿದ್ದರು. ಎಲ್ಲರೂ ಒಂದಾಗಿ ಹಿಂದೂ ಧರ್ಮವನ್ನು ರಕ್ಷಿಸಬೇಕೆಂಬ ಅವಶ್ಯಕತೆ ಇದರ ತರುವಾಯವೇ ಅವರಿಗೆ ಅರಿವಾದದ್ದು, ಮೂರನೆಯ ಬಲ್ಲಾಳನು ಮುಸ್ಲಿಮರ ದಾಳಿಯನ್ನು ಎದುರಿಸುವುದಕ್ಕಾಗಿ ಒಂದು ರೀತಿಯ ಸಂಘಟಿತ ರೂಪದ ಹೋರಾಟಕ್ಕೆ ಪ್ರಯತ್ನಿಸಿದರು. ಅನಾನುಕೂಲಗಳಿಂದ ಅವನ ಮಹಾಯೋಜನೆ ವಿಫಲವಾಯಿತು.

ಅಧ್ಯಾಯ 2

2.1 ಹೊಯ್ಸಳರ ಇತಿಹಾಸಕ್ಕೆ ಸಂಬಂಧಿಸಿದ ಗ್ರಂಥಗಳ ಸಮೀಕ್ಷೆ

ಹೊಯ್ಸಳರ ಇತಿಹಾಸಕ್ಕೆ ಸಂಬಂಧಿಸಿದಂತೆ ಕೆಲವು ಗ್ರಂಥಗಳು ಮಾತ್ರ ಪ್ರಕಟವಾಗಿವೆ. ವಿಲಿಯಂ ಕೊಹಿಲೊ ಅವರು ಮೊಟ್ಟ ಮೊದಲನೆಯದಾಗಿ ಹೊಯ್ಸಳ ಸಂತತಿಯ ಸಾಧನೆಗಳನ್ನು ಕುರಿತಂತೆ 1950 ರಲ್ಲಿ Hoysala Vamsa ಎಂಬ ಗ್ರಂಥವನ್ನು ಪ್ರಕಟಿಸಿದರು ಅದೇ ವರ್ಷ ಕೆ.ಆರ್.ವೆಂಕಟರಾಮಯ್ಯ ಎಂಬುವವರು Hoysalas in the Tamil Country ಎಂಬ ಕಿರುಹೊತ್ತಿಗೆಯನ್ನು ಹೊರತಂದರು. 1957ರಲ್ಲಿ ಜೆ.ಡಂಕನ್ ಎಂ.ಡೆರ್ರೆಟ್ ಅವರು ರಚಿಸಿದ The Hoysalas-A Medieval Royal Family ಎಂಬ ಗ್ರಂಥವು ಪ್ರಕಟವಾಯಿತು. ಈ ಗ್ರಂಥವು ಹೊಯ್ಸಳರ ರಾಜಕೀಯ ಇತಿಹಾಸಕ್ಕೆ ಸಂಬಂಧಸಿದಂತೆ ಸಾಕಷ್ಟು ಮಾಹಿತಿಯನ್ನು ಒದಗಿಸುತ್ತದೆ. 1972 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದಲ್ಲಿ ಹೊಯ್ಸಳರಿಗೆ ಸಂಬಂಧಿಸಿದ ಒಂದು ವಿಚಾರ ಸಂಕಿರಣ ನಡೆಯಿತು. ಈ ಸಂಕಿರಣದ ಸಂಶೋಧನ ಲೇಖನಗಳನ್ನು The Hoysalas Dynasty ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರಕಟಿಸಲಾಗಿದೆ. ಇದರ ಸಂಪಾದಕರು ಪ್ರೊ.ಬಿ.ಷೇಕ್‌ಅಲಿ, ಹೊಯ್ಸಳರ ಆಡಳಿತಕ್ಕೆ ಸಂಬಂಧಿಸಿದಂತೆ ಪ್ರೊ.ಕೆ.ಎಸ್.ಶಿವಣ್ಣ A Critique of Hoysala Polity ಎಂಬ ಗ್ರಂಥವನ್ನು 1989ರಲ್ಲಿ ರಚಿಸಿದ್ದಾರೆ. ಹೊಯ್ಸಳರ ಕಲೆಯ ಇತಿಹಾಸಕ್ಕೆ ಸಂಬಂಧಿಸಿದಂತೆ ಪ್ರೊ.ಎಸ್.ಶೆಟ್ಟರ್ ಅವರು ರಚಿಸಿರುವ Hoysala Temples ಎಂಬ ಎರಡು ಸಂಪುಟಗಳು ಉಪಯುಕ್ತ ಗ್ರಂಥಗಳಾಗಿವೆ. ಇತ್ತೀಚೆಗೆ 1997 ರಲ್ಲಿ ಪ್ರಕಟವಾಗಿರುವ A Complete Guide to Hoysala Temples ಹೊಯ್ಸಳರ ಎಲ್ಲ ದೇವಾಲಯಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಈ ಗ್ರಂಥದ ಕರ್ತೃ ಗೆರಾರ್ಡ್ ಪೋಕಮ (Gerard Foekama). ಹೊಯ್ಸಳರ ಇತಿಹಾಸಕ್ಕೆ ಸಂಬಂಧಿಸಿದಂತೆ ಇನ್ನು ಅನೇಕ ಸಂಶೋಧನ ಲೇಖನ ಮತ್ತು ಪ್ರೌಢ ಪ್ರಬಂಧಗಳಿವೆ. ಆದರೆ ಅವುಗಳು ಪ್ರಕಟವಾಗಿಲ್ಲ. ಆದರೆ ಹೊಯ್ಸಳರ ಕಾಲದ ನಗರೀಕರಣ ಬಗ್ಗೆ ಯಾವುದೇ ಸಂಶೋಧನೆ ನಡೆದಿಲ್ಲ.

2.2 ಅಧ್ಯಯನ ವಿಷಯದ ಮಹತ್ವ ಮತ್ತು ವ್ಯಾಪ್ತಿ

ಪಟ್ಟಣಗಳು ಮಾನವನ ಬದುಕಿನಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ. ಒಂದು ನಾಡಿನ ಚರಿತ್ರೆ ಎಂದರೆ ಆ ಭೂಪ್ರದೇಶಗಳನ್ನು ಆಳ್ವಿಕೆ ನಡೆಸಿ ಮರೆಯಾದ ರಾಜ ಮಹಾರಾಜರ ಕತೆಯಷ್ಟೇ

ಅಲ್ಲ. ಆ ನಾಡಿನ ಜನರ ಸಮಷ್ಟಿಯ ಚರಿತ್ರೆ. ಆ ಜನಾಂಗದ ಒಟ್ಟು ಜೀವನವನ್ನು ಕುರಿತ ಇತಿಹಾಸವಾಗಿದೆ. ಅದು ಒಂದು ನೆಲೆಯ ಜನಪದರ ಆಶೋತ್ತರಗಳು, ನಂಬುಗೆಗಳು ಜೀವನ ಸಿದ್ಧಾಂತಗಳು, ಬದುಕಿನ ಮೌಲ್ಯಗಳು ಮೊದಲಾದವನ್ನು ಪರಿಚಯಿಸುತ್ತದೆ. ಒಂದು ಜನಾಂಗದ ಸಾಂಸ್ಕೃತಿಕ ಅಭಿವೃದ್ಧಿಗೆ ಪಟ್ಟಣವೊಂದು ಮೂಲ ನೆಲೆಯಾಗಲು ಸಾಧ್ಯ. ಕಾಶಿ, ರೋಮ್, ಮೆಕ್ಕಾ ನಗರಗಳು ಆಯಾ ಜನಾಂಗದ ಪ್ರತಿನಿಧಿಗಳಾಗಿ ಕಾರ್ಯ ನಿರ್ವಹಿಸಿವೆ. ಹಾಗೆಯೇ ಕರ್ನಾಟಕದ ಸಂಸ್ಕೃತಿಯ ಹಿರಿಮೆಯನ್ನು ಮೆರೆದ ಪ್ರಮುಖ ಪಟ್ಟಣಗಳಲ್ಲಿ ಸೋಮನಾಥಪುರದ ಅಧ್ಯಯನವು ಇಡಿಯಾಗಿ ನಾಡಿನ ಚರಿತ್ರೆಯನ್ನು ರೂಪಿಸುತ್ತವೆ.

ಒಂದು ದೇಶದ ಇತಿಹಾಸ ರೂಪುಗೊಳ್ಳುವಲ್ಲಿ ಪಟ್ಟಣಗಳ ಪಾತ್ರ ಹಿರಿದಾದುದು. ದೇಶವೆಂಬ ದೇಹಕ್ಕೆ ಪಟ್ಟಣಗಳೇ ಹೃದಯ, ಅದರ ಹೃದಯ ಬಡಿತವೇ ದೇಶದ ನಾಡಿ, ಆದ್ದರಿಂದ ರಾಜಧಾನಿಗಳಾಗಿ ಮೆರೆದ ಪಟ್ಟಣಗಳ ಐತಿಹಾಸಿಕ ಅಧ್ಯಯನವು ಆ ನಾಡಿನ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಜೀವನವನ್ನು ತಿಳಿದುಕೊಳ್ಳಲು ಹೆಚ್ಚು ಸಹಾಯಕಾರಿಯಾಗಿದೆ. ಇಂಥ ಪಟ್ಟಣಗಳು ತಲೆಯೆತ್ತಿದ ಬಗೆ ಮತ್ತು ರಾಜಕೀಯ ಏರಿಳಿತಗಳನ್ನು ಅನುಭವಿಸಿದ ಸ್ಥಿತಿ. ತನ್ನ ಸಾಂಸ್ಕೃತಿಕ ಕ್ಷಿತಿಜವನ್ನು ಹಿಗ್ಗಿಸಿದ ರೀತಿ ಸಾಮಾಜಿಕ ಜೀವನವನ್ನು ವಿಕಸನಗೊಳಿಸಿದ ಪರಿ. ಧಾರ್ಮಿಕ ಬೆಳಕು ಪ್ರಸರಿಸಿದ ವಿಧಾನ ಮೊದಲಾದವುಗಳ ಅಧ್ಯಯನವು ಸ್ವಾರಸ್ಯಪೂರ್ಣ ಹಾಗೂ ಅರ್ಥಪೂರ್ಣವಾಗಿದೆ.

ಹಳೇಬೀಡು ಕ್ರಿ.ಶ. 11 ಮತ್ತು 12ನೇ ಶತಮಾನಗಳಲ್ಲಿ ವೈಭವದ ಔನ್ನತ್ಯವನ್ನು ಅನುಭವಿಸಿ ಹೊಯ್ಸಳರ ಕಾಲದಲ್ಲಿ ಈ ಪಟ್ಟಣ ಸಾಂಸ್ಕೃತಿಕ ನೆಲೆಯಾಗಿತ್ತು. ಈ ಪಟ್ಟಣ ಹೊಯ್ಸಳ ಸಾಮ್ರಾಜ್ಯದ ರಾಜಧಾನಿಯಾಗಿ ರಾಜರ ಮತ್ತು ಮಂತ್ರಿ ವರ್ಗದವರ ರಾಜಕೀಯ ಶಕ್ತಿಯಾಗಿ ಯೋಧರ ವೀರಶ್ರೀಯ ಸೆಲೆಯಾಗಿ ಹಾಗೂ ವ್ಯಾಪಾರಿ ಸಂಸ್ಥೆಗಳ ಪ್ರೇರಣೆಯಾಗಿ ಭಕ್ತರ ಧಾರ್ಮಿಕ ಕೇಂದ್ರವಾಗಿ ಮತ್ತು ಜನರ ಜೀವನದ ಕನ್ನಡಿಯಾಗಿ ಕರ್ನಾಟಕದ ಸಾಂಸ್ಕೃತಿಕ ಕೇಂದ್ರಗಳೆನಿಸಿದ್ದವು. ಇಂಥ ಪಟ್ಟಣವು ಸಾಮ್ರಾಜ್ಯದ ಜೀವನಾಡಿಯಾಗಿದೆ. ಈ ಎಲ್ಲ ಕಾರಣಗಳಿಂದ ನಗರ ಕೇಂದ್ರಗಳು ಮತ್ತು ನಗರೀಕರಣದ ಬಗ್ಗೆ ಅಧ್ಯಯನ ನಡೆಸುವುದು ಬಹಳ ಮುಖ್ಯವಾದ ವಿಷಯವಾಗಿದೆ.

2.3 ಆಧಾರಗಳು

ಹೊಯ್ಸಳರ ಕಾಲದ ನಗರೀಕರಣದ ಇತಿಹಾಸವನ್ನು ರಚಿಸಬೇಕಾದರೆ ಪ್ರಮುಖವಾಗಿ ಶಾನಸಗಳನ್ನೇ ಅವಲಂಬಿಸಬೇಕಾಗಿದೆ. ಶಾಸನಗಳ ಜೊತೆಗೆ ಆ ಕಾಲದಲ್ಲಿ ನಿರ್ಮಿಸಲ್ಪಟ್ಟ ದೇವಾಲಯಗಳು ಆ ಕಾಲದ ಧಾರ್ಮಿಕ, ಸಾಮಾಜಿಕ, ಆರ್ಥಿಕ ವಿಷಯಗಳ ಬಗ್ಗೆ ಅಧ್ಯಯನ ಮಾಡಲು ಅನುಕೂಲವಾಗಿದೆ. ಆದರೆ ಹೊಯ್ಸಳರ ಕಾಲದಲ್ಲಿ ರಚಿತವಾದ ಗ್ರಂಥಗಳು ನಗರೀಕರಣದ ಬಗ್ಗೆ ಹೆಚ್ಚು ಮಾಹಿತಿಯನ್ನು ನೀಡುವುದಿಲ್ಲ. ಜೈನ ಕವಿಯಾದ ನೇಮಿಚಂದ್ರನು ಲೀಲಾವತಿ ಮತ್ತು ನೇಮಿನಾಥ ಪುರಾಣ ಎಂಬ ಎರಡು ಕೃತಿಗಳನ್ನು ರಚಿಸಿದ್ದಾನೆ. ನೇಮಿಚಂದ್ರನು ಅಂದಿನ ವ್ಯಾಪಾರದ ಬಗ್ಗೆ ತಿಳಿಸುತ್ತಾ ಚೀನಾ ದೇಶದೊಡನೆ ವ್ಯಾಪಾರ ಸಂಬಂಧವಿತ್ತೆಂದು ಹಾಗೂ ಪಟ್ಟಣ, ಗ್ರಾಮ, ನಗರ, ಪುರ ಮುಂತಾದ ಶಬ್ದಗಳ ಬಳಕೆ ಮತ್ತು ವಿವಿಧ ವಿಸ್ತೀರ್ಣದ ಊರುಗಳನ್ನು ತಿಳಿಸುತ್ತಾನೆ. ಸಂಸ್ಕೃತ ಗ್ರಂಥವಾದ ರುಕ್ಮಿಣೀ ಕಲ್ಯಾಣದಲ್ಲಿ ರಾಜಧಾನಿ ದೋರಸಮುದ್ರವನ್ನು ಕೃಷ್ಣನ ರಾಜಧಾನಿಯಾಗಿದ್ದ ದ್ವಾರಕೆಗೆ ಹೋಲಿಸಲಾಗಿದೆ.

ಹೊಯ್ಸಳರ ಕಾಲದ ನಗರೀಕರಣದ ಬಗ್ಗೆ ಸಾಹಿತ್ಯಾಧಾರಗಳು ಹೆಚ್ಚು ಬೆಳಕನ್ನು ಚೆಲ್ಲದೇ ಇರುವುದರಿಂದ ಅವುಗಳಿಂದ ಹೆಚ್ಚಿನ ಮಾಹಿತಿ ದೊರಕುವುದಿಲ್ಲ. ಆದ್ದರಿಂದ ನಾವು ಪ್ರಾಕ್ತನಾಧಾರ ಗಳನ್ನೇ ವಿಶೇಷವಾಗಿ ಅವಲಂಬಿಸಬೇಕಾಗಿದೆ. ಪ್ರಾಕ್ತನಾಧಾರಗಳಲ್ಲೂ ಮುಖ್ಯವಾಗಿ ಶಾಸನಗಳೇ ಪ್ರಮುಖ ಆಧಾರಗಳಾಗಿವೆ. ಅನೇಕ ಶಾಸನಗಳು ಹೊಯ್ಸಳರ ನಗರೀಕರಣದ ಬಗ್ಗೆ ವಿವರ ನೀಡುತ್ತವೆ. ಕೆಲವು ಪ್ರಮುಖ ಶಾಸನಗಳನ್ನು ಇಲ್ಲಿ ವಿವರಿಸಲಾಗಿದೆ.

ಕ್ರಿ.ಶ. 1260 ರ ಅರ್ಜುನವಾಡ (ಬೆಳಗಾಂವ್) ಶಾಸನವೊಂದು ನಾಲ್ಕು ಪಟ್ಟಣಗಳು ಎಂದು ಉಲ್ಲೇಖಿಸಿರುವುದಲ್ಲದೆ ಸಂತೆಗಳ ಬಗ್ಗೆಯೂ ತಿಳಿಸುತ್ತದೆ. ಕ್ರಿ.ಶ. 1090 ರ ಬೇಲೂರು ಶಾಸನ ವಿನಯಾದಿತ್ಯನು ತನ್ನ ರಾಜಧಾನಿಯನ್ನು ಸೊಸೆವೂರಿನಿಂದ ಬೇಲೂರಿಗೆ ವರ್ಗಾಯಿಸಿದ್ದನ್ನು ತಿಳಿಸುತ್ತದೆ. ದೋರಸಮುದ್ರದ ಗುಮ್ಮತೀರ ತಿಟ್ಟನಲ್ಲಿರುವ ಶಾಸನವು ಮೂರು ಪ್ರಮುಖ ನೆಲೆಗಳಾದ ದೋರಸಮುದ್ರ, ಬೇಲೂರು .ಮತ್ತು ವಿಷ್ಣುಸಮುದ್ರಗಳ ಬಗ್ಗೆ ತಿಳಿಸುತ್ತದೆ.[17] ಬೇಲೂರಿನ ಶಾಸನವು ರಾಜ್ಯದ ಎಲ್ಲ ವ್ಯಾಪಾರಿಗಳ ಸಾರ್ವಭೌಮ ಕೇಂದ್ರವಾಗಿ ದೋರಮುದ್ರವು ಪರಿಣಮಿಸಿತ್ತು ಎಂದು ತಿಳಿಸುತ್ತದೆ.[18] ದೋರಸಮುದ್ರದ ಹಳೇಕೋಟೆಯ ಶಾಸನವು ಚಿಪ್ಪಿಗ ಗೊತ್ತುವಳಿಗಳು ಸುಮಾರು ಐದು ಪಟ್ಟಣಗಳ ಸಂಘವನ್ನು ರಚಿಸಿಕೊಂಡಿದ್ದರೆಂದು ತಿಳಿಯುತ್ತದೆ.

ಬಸ್ತಿ ಹಳ್ಳಿ ಪಾರ್ಶ್ವನಾಥ ಬಸದಿಯ ಶಾಸನವು ತಾಂಬೂಲಿಗ ಸಾಸಿರ್ವರ ಸಂಘವನ್ನು ಮತ್ತು ಅದು ದಾನ ನೀಡಿದ ವಿವರಗಳನ್ನು ತಿಳಿಸುತ್ತದೆ. ಕ್ರಿ.ಶ.1218 ರ ಒಂದು ಶಾಸನದ ಪ್ರಕಾರ ಹೊಯ್ಸಳರ ಎರಡನೇ ಬಲ್ಲಾಳನ ರಾಣಿಯಾದ ಅಭಿನವ ಕೇತಲ ದೇವಿಯ ಆಜ್ಞೆಯ ಮೇರೆಗೆ ಕುಂದವಾಡದ 'ಗೌಡು'ಗಳು 'ಸೆಟ್ಟಿ'ಗಳು ಸೇರಿ ಊರಿನಲ್ಲಿ ಪ್ರತಿ ಬುಧವಾರದಂದು ಸಂತೆ ನಡೆಯುವಂತೆ ಏರ್ಪಾಡು ಮಾಡಿದ್ದರು. ಮತ್ತೊಂದು ಶಾಸನದ ಪ್ರಕಾರ ಮೂರನೇ ನರಸಿಂಹ ಆಳ್ವಿಕೆಯ ಕಾಲದಲ್ಲಿ ಮೂಗೂರು (ತಿ.ನರಸೀಪುರ ತಾ. ಮೈಸೂರು ಜಿಲ್ಲೆ) ಗ್ರಾಮದ ಪ್ರಭುಗಳು ಮತ್ತು ಗೌಡರು ಸೇರಿ ಆ ಸ್ಥಳದಲ್ಲಿ ಒಂದು ಸಂತೆಯನ್ನು ನಡೆಸುವಂತಾಗಿ ಆ ಗ್ರಾಮವನ್ನು ಪಟ್ಟಣವನ್ನಾಗಿ ಪರಿವರ್ತಿಸಬೇಕೆಂದು ತೀರ್ಮಾನಿಸುತ್ತಾರೆ. ಅಲ್ಲದೆ ಅವರು ಆ ಹೊಸ ಪಟ್ಟಣಕ್ಕೆ ಒಂದು ಸನ್ನದನ್ನು ಕೊಟ್ಟರೆಂದು ತಿಳಿದು ಬರುತ್ತದೆ.

ದೋರಸಮುದ್ರದ ಬೆಣ್ಣೆಗುಡ್ಡ ಶಾಸನವು ಎಣ್ಣೆ ಉತ್ಪಾದಕರಾದ ತೆಲ್ಲಿಗರನ್ನು ಮತ್ತು ಎಣ್ಣೆಗಾಣಗಳನ್ನು ದಾನ ಮಾಡಿದ ವಿವರಗಳನ್ನು ತಿಳಿಸುತ್ತದೆ.[19] ಪಾರ್ಶ್ವನಾಥ ಬಸದಿಯ ಶಾಸನಗಳು ಜೈನ ಮತ್ತು ಶೈವ ಧರ್ಮಗಳಿಗೆ ಸೇರಿದ ವ್ಯಾಪಾರಿಗಳಾದ ಶೆಟ್ಟಿ ಮತ್ತು ಬಣಂಜಿಗರ ಬಗ್ಗೆ ತಿಳಿಸುತ್ತದೆ. ನಗರೇಶ್ವರ ದೇವಾಲಯದ ಶಾಸನ ತಯಾರಿಸಿದ ಉಪ್ಪನ್ನು ಮಾರುವ ಮಳಿಗೆಗಳ ಬಗ್ಗೆ ತಿಳಿಸುತ್ತದೆ.[20] ಬೆಣ್ಣೆಗುಡ್ಡದ ಶಾಸನ ದೋರಸಮುದ್ರವು ಬಟ್ಟೆ ತಯಾರಿಕೆಯ ಕೈಗಾರಿಕೆಗೆ ಪ್ರಸಿದ್ಧವಾಗಿತೆಂದು ಇದರ ಜೊತೆಗೆ ಅರಸೀಕೆರೆ ಕಲ್ಲಂಗೆರೆಗಳು ಈ ಕೈಗಾರಿಕೆಗೆ ಪ್ರಸಿದ್ಧವಾಗಿದೆಯೆಂದು ಮತ್ತು ಹತ್ತಿಯ ವರ್ತಕರ, ಚಿಪ್ಪಿಗರ ಬಗ್ಗೆ ತಿಳಿಸುತ್ತದೆ.[21] ಗುಮ್ಮತೀರ ತಿಟ್ಟವಿನಲ್ಲಿರುವ ಶಾಸನವು ನಾನಾ ದೇಶಿ ವರ್ತಕರು ಬೇರೆ ಬೇರೆ ಸ್ಥಳಗಳಿಂದ ಸರಕುಗಳನ್ನು ಹೇರಿಕೊಂಡು ಬಂದರೆಂದು ಆಗ ಹೊಯ್ಸಳರು ಚೋಳರ ಮತ್ತು ಪಾಂಡ್ಯರ ಪ್ರದೇಶಗಳನ್ನು ಗೆದ್ದುಕೊಂಡಿದ್ದ ಪರಿಣಾಮವಾಗಿ ಉಭಯ ನಾನಾ ದೇಶಿ ವರ್ತಕರು ರಾಜಧಾನಿಗೆ ವ್ಯಾಪಾರಕ್ಕಾಗಿ ಬಂದು ಹೋಗುತ್ತಿದ್ದರೆಂದು ತಿಳಿಸುತ್ತದೆ.[22]

ಕ್ರಿ.ಶ. 1062 ರ ಹಳೇಬೀಡಿನ ಶಾಸನವು ವಿನಯಾದಿತ್ಯನು ದೋರಸಮುದ್ರದ ಕೆರೆಗೆ ಜಲದ್ವಾರಗಳನ್ನು ನಿರ್ಮಿಸಿದುದರ ಬಗ್ಗೆ ತಿಳಿಸುತ್ತದೆ. ಶ್ರವಣ ಬೆಳಗೊಳದ ಶಾಸನವು ವಿನಯಾದಿತ್ಯನು ತನ್ನ ರಾಜಧಾನಿಯಾಗಿದ್ದ ಬೇಲೂರಿನ ಜೊತೆಗೆ ದೋರಸಮುದ್ರದಲ್ಲಿ ಹೊಸ ಕೆರೆಗಳನ್ನು ನಿರ್ಮಿಸಿದ್ದಲ್ಲದೆ ಅದಕ್ಕೆ ನಗರದ ರೂಪವನ್ನು ನೀಡಿದ್ದಾಗಿ ತಿಳಿಸುತ್ತದೆ.

ಗುಮ್ಮತೀರ ತಿಟ್ಟು ಮತ್ತು ಬಸ್ತಿಹಳ್ಳಿಯ ಶಾಸನಗಳು ದೋರಸಮುದ್ರದಲ್ಲಿ ವ್ಯಾಪಾರದ ಸರಕುಗಳನ್ನು ಚಕ್ಕಡಿ, ಎತ್ತು, ಎತ್ತಿನ ಬಂಡಿ, ಕತ್ತೆ, ಕುದುರೆ ಮತ್ತು ಆನೆಗಳ ಮೂಲಕ ಹೇರಿಕೊಂಡು ಗುಂಪುಗುಂಪಾಗಿ ಸಂಚರಿಸುತ್ತಿದ್ದರೆಂದು ತಿಳಿಸುತ್ತದೆ.[23] ಕ್ರಿ.ಶ. 1142ರ ಶಾಸನದ ಪ್ರಕಾರ ಹಳೇಬೀಡಿನಲ್ಲಿ ಇಬ್ಬರು ಪಟ್ಟಣ ಸ್ವಾಮಿಗಳಿದ್ದರು ಎಂದು ತಿಳಿದು ಬರುತ್ತದೆ. ಅವರು ಹೊಯ್ಸಳ ಶೆಟ್ಟಿ ಮತ್ತು ಗುಮಿ ಶೆಟ್ಟಿಗಳಾಗಿದ್ದರು.[24] ಕ್ರಿ.ಶ. 1125ರ ಶಾಸನದ ಪ್ರಕಾರ ಪಟ್ಟಣಸ್ವಾಮಿ ಪೊಯ್ಸಳ ಶೆಟ್ಟಿಯನ್ನು ನೋಳಬಿ ಶೆಟ್ಟಿಯಂತಲು ಸಹ ಕರೆಯಲಾಗುತ್ತಿತ್ತು. ಇವನು ರಾಜ ವಿಷ್ಣುವರ್ಧನನ ಅಧೀನದಲ್ಲಿ ವಾಸಿಸುತ್ತಿದ್ದನು.[25] ಕ್ರಿ.ಶ. 1178ರ ಮತ್ತೊಂದು ಶಾಸನದ ಪ್ರಕಾರ ಪಟ್ಟಣಸ್ವಾಮಿ ಸೋವಿಶೆಟ್ಟಿಯು ರಾಜ ಸಾಮಂತ ನರಸಿಂಗರಾಯ ನಾಯಕನ ಕೈ ಕೆಳಗೆ ಕೆಲಸ ಮಾಡುತ್ತಿದ್ದನೆಂದು ತಿಳಿದು ಬರುತ್ತದೆ.[26] ಶ್ರವಣ ಬೆಳಗೊಳದ ಮತ್ತೊಂದು ಶಾಸನದ ಪ್ರಕಾರ ನಾಗದೇವನು ರಾಜ ಎರಡನೇ ವೀರಬಲ್ಲಾಳನ ಆಳ್ವಿಕೆಯಲ್ಲಿ ಪಟ್ಟಣಸ್ವಾಮಿಯಾಗಿದ್ದನು. ಕ್ರಿ.ಸ. 1328 ರ ಶಾಸನದಿಂದ ಮದ್ದೂರು ಗ್ರಾಮ (ಯಳಂದೂರು ತಾಲ್ಲೂಕು ಚಾಮರಾಜನಗರ ಜಿಲ್ಲೆ) ಪಟ್ಟಣವನ್ನು ಕಟ್ಟುವುದಕ್ಕೋಸ್ಕರ ಉಪೇಂದ್ರಪುರ ಮಹಾಜನರಿಂದ ಆರು ಬಾಡಿಗೆ ರಹಿತ ಮನೆಗಳನ್ನು ಉಚಿತವಾಗಿ ಪಟ್ಟಣಸ್ವಾಮಿಗೆ ಕೊಡಲಾಗಿತ್ತೆಂದು ತಿಳಿದು ಬರುತ್ತದೆ.[27] ಕ್ರಿ.ಶ. 1278ರ ನಂಜನಗೂಡಿನ ಉಪ್ಪಿನ ಹಳ್ಳಿ ಶಾಸನದಿಂದ ಸಂಕಶೆಟ್ಟಿಯೆಂಬ ಪಟ್ಟಣಸ್ವಾಮಿಯು ಮನಾಲಿ ಎಂಬಲ್ಲಿ ಸಂತೆಗಳನ್ನು ಕಟ್ಟುತ್ತಿದ್ದನೆಂದು ತಿಳಿದು ಬರುತ್ತದೆ. ಕ್ರಿ.ಶ.1332 ರ ಬೆಂಗಳೂರು ತಾಲ್ಲೂಕಿನ ಶಾಸನದ ಪ್ರಕಾರ ಚಿಕ್ಕಹುಂಡಿ[28] ಎಂಬಲ್ಲಿ ಮುಕ್ತಿಶೆಟ್ಟಿ ಎಂಬ ಪಟ್ಟಣ ಸ್ವಾಮಿಯಿಂದ ಸಂತೆ ನಿಯೋಜಿಸಲ್ಪಡುತ್ತಿತೆಂದು ತಿಳಿದು ಬರುತ್ತದೆ.

ಕ್ರಿ.ಶ. 1178ರ ನಂಜನಗೂಡಿನ ಒಂದು ಶಾಸನದಿಂದ ಪಟ್ಟಣಸ್ವಾಮಿಯಾದ ಸೋಮಿಶೆಟ್ಟಿ ಮೂರು ಕೆರೆಗಳನ್ನು ಕಟ್ಟಿಸಿದನೆಂದು ತಿಳಿದು ಬರುತ್ತದೆ. ಮೊಸಳೆಯ ವಡ್ಡ ವ್ಯವಹಾರಿ ಬಸವಶೆಟ್ಟಿ ಚತುರ್ವಿಂಶತಿ. ತೀರ್ಥಂಕರರ ಪ್ರತಿಮೆಗಳನ್ನು ಮಾಡಿಸಿದಾಗ (ಸುಮಾರು ಕ್ರಿ.ಶ. 1185) ಮೊಸಳೆಯ ವರ್ತಕರೆಲ್ಲ ಸೇರಿ ಪ್ರಜಾದತ್ತಿಗಳನ್ನು ಕೊಟ್ಟರು.

2.4 ಸಂಶೋಧನಾ ವಿಧಾನ

ಪ್ರಸ್ತುತ ಸಂಶೋಧನೆಯಲ್ಲಿ ಸಂಶೋಧನಾ ಮಾರ್ಗದ ತತ್ವಗಳನ್ನು ಅಳವಡಿಸಿ ಕೊಳ್ಳಲಾಗಿದೆ. ಇತಿಹಾಸ ಸಂಶೋಧನೆಯ ಮಾರ್ಗದರ್ಶನ ಮಾಡುವುದಕ್ಕಾಗಿ ಪ್ರತ್ಯೇಕವಾದ ಒಂದು

ಶಾಸ್ತ್ರವೇ ಬೆಳೆದು ಬಂದಿದೆ. ಅದನ್ನು ಇತಿಹಾಸ ಸಂಶೋಧನಾ ಮಾರ್ಗ ಎಂದು ಕರೆಯುತ್ತಾರೆ. ಈ ಮಾರ್ಗದ ಸೂತ್ರಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಅಳವಡಿಸಿ ಕೊಳ್ಳಲಾಗಿದೆ. ವಿಷಯ ಸಂಗ್ರಹಣೆ ಬಾಹ್ಯ ಮತ್ತು ಆಂತರಿಕ ವಿಮರ್ಶೆಯ ಸೂತ್ರಗಳು ವಿಶ್ಲೇಷಣಾ ಕ್ರಮಗಳು ಮತ್ತು ನಿರೂಪಣಾ ತತ್ವಗಳನ್ನು ಸಂಶೋಧನೆಯಲ್ಲಿ ಅಳವಡಿಸಲಾಗಿದೆ. ಪ್ರಸ್ತುತ ಮಹಾ ಪ್ರಬಂಧದಲ್ಲಿ ವಸ್ತು ವಿಷಯವನ್ನು ವಿಷಯಾನುಕ್ರಮವಾಗಿ ಅಭ್ಯಾಸ ಮಾಡಲಾಗಿದೆ. ಹಾಗೂ ಕಾಲಾನುಕ್ರಮವಾಗಿ ವಿವರಿಸಲಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ ಬೇರೆ ಬೇರೆ ಪೂರಕ ಶಾಸ್ತ್ರಗಳ ಪರಿಕಲ್ಪನೆಗಳನ್ನು ಸಂಶೋಧನೆಯಲ್ಲಿ ಬಳಸಿಕೊಳ್ಳಲಾಗಿದೆ.

2.5 ಅಧ್ಯಯನಗಳ ವಿಭಾಗೀಕರಣ

ಅಧ್ಯಾಯ 1

ಈ ಅಧ್ಯಾಯವು ಪೀಠಿಕಾ ರೂಪದಲ್ಲಿದೆ. ಇದರಲ್ಲಿ ಅಧ್ಯಯನದ ಸ್ವರೂಪ ಮತ್ತು ರಾಜಕೀಯ ಹಿನ್ನಲೆಯನ್ನು ವಿವರಿಸಲಾಗಿದೆ.

ಅಧ್ಯಾಯ 2

ಈ ಅಧ್ಯಾಯದಲ್ಲಿ ಅಧ್ಯಯನದ ವಿಷಯದ ಮಹತ್ವ ಮತ್ತು ವ್ಯಾಪ್ತಿ ಮತ್ತು ಅಧ್ಯಯನದ ಆಕರಗಳು, ಹೊಯ್ಸಳರ ಕಾಲದಲ್ಲಿ ದೊರೆತಂತಹ ಶಾಸನಗಳ ಸಮೀಕ್ಷೆ, ಸಾಹಿತ್ಯಿಕ ಆಧಾರಗಳ ಬಗ್ಗೆ ಕೂಲಂಕುಷ ಚರ್ಚೆಯನ್ನು ಮಾಡಲಾಗಿದೆ. ಹೊಯ್ಸಳರ ಕಾಲದ ನಗರೀಕರಣದ ಬಗ್ಗೆ ಬೆಳಕು ಚೆಲ್ಲುವ ಯಾವ ಗ್ರಂಥಗಳು ಇದುವರೆಗೂ ಲಭ್ಯವಾಗಿಲ್ಲ. ಈ ಅಧ್ಯಾಯದಲ್ಲಿ ಹೊಯ್ಸಳರ ಕಾಲದ ಬಗ್ಗೆ ಪ್ರಕಟಿತವಾಗಿರುವ ಹಾಗೂ ಅಪ್ರಕಟಿತ ಗ್ರಂಥಗಳ ಪರಿಚಯವನ್ನು ಮಾಡಲಾಗಿದೆ. ಈ ಪ್ರಬಂಧವನ್ನು ರಚಿಸಲು ಉಪಯೋಗಿಸಿದ ಮೂಲಾಧಾರಗಳ ಬಗ್ಗೆಯೂ ಹಾಗೂ ಈ ಪ್ರಬಂಧವನ್ನು ಸಿದ್ಧಪಡಿಸಲು ಅನುಸರಿಸಿದ ಸಂಶೋಧನಾ ವಿಧಾನದ ಬಗ್ಗೆಯೂ ಕೂಡ ಚರ್ಚಿಸಲಾಗಿದೆ ಮತ್ತು ಅಪ್ರಕಟಿತ ಗ್ರಂಥಗಳ ಪರಿಚಯವನ್ನು ಮಾಡಲಾಗಿದೆ.

ಅಧ್ಯಾಯ 3

ನಗರ ಅಧ್ಯಯನಗಳು ಮೂರನೆಯ ಅಧ್ಯಾಯದಲ್ಲಿ ನಗರ ಅಧ್ಯಯನಗಳು ನಗರ ಕೇಂದ್ರಗಳು ಹಾಗೂ ಅವುಗಳ ವರ್ಗೀಕರಣವನ್ನು ವಿವರಿಸಲಾಗಿದೆ.

ಅಧ್ಯಾಯ 4

ಈ ಅಧ್ಯಾಯದಲ್ಲಿ ನಗರೀಕರಣದ ಅಂಶಗಳು, ನಗರ ಕೇಂದ್ರಗಳ ಉದಯ, ರಾಜಕೀಯ ಅಂಶ ಮತ್ತು ಧಾರ್ಮಿಕ ಅಂಶಗಳನ್ನು ವಿವರಿಸಲಾಗಿದೆ.

ಅಧ್ಯಾಯ 5

ಈ ಅಧ್ಯಾಯದಲ್ಲಿ ನಗರದ ಬೆಳವಣಿಗೆಯ ಲಕ್ಷಣಗಳು, ದಕ್ಷಿಣ ಭಾರತದಲ್ಲಿ ನಗರ ಬೆಳವಣಿಗೆಗೆ ಅನುಕೂಲಕಾರಿಯಾದ ಸನ್ನಿವೇಶ, ನಗರ ಸ್ವರೂಪ ಹಾಗೂ ವರ್ಗೀಕರಣ, ಪಟ್ಟಣಗಳ ಹುಟ್ಟು ಹಾಗೂ ಬೆಳವಣಿಗೆ, ನಗರ ಕೇಂದ್ರಗಳ ಗಾತ್ರ, ಹಂಚಿಕೆ ಹಾಗೂ ರಚನೆಯನ್ನು ವಿವರಿಸಲಾಗಿದೆ.

ಅಧ್ಯಾಯ 6

ಈ ಅಧ್ಯಾಯದಲ್ಲಿ ಮಧ್ಯಮ ಶ್ರೇಣಿಯ ಪಟ್ಟಣಗಳು, ನಗರ ಆಡಳಿತ, ಪಟ್ಟಣ ಸಭೆ, ಮಧ್ಯಕಾಲೀನ ಕರ್ನಾಟಕದಲ್ಲಿ ಪಟ್ಟಣ ಸಭೆ, ಪಟ್ಟಣಸ್ವಾಮಿ, ಹುದ್ದೆಯ ನೇಮಕ, ಹಾಗೂ ಅವರ ಸ್ಥಾನ ಮತ್ತು ಕಾರ್ಯಗಳು, ವ್ಯಾಪಾರಿ ಸಂಘಗಳು ಮತ್ತು ಅವುಗಳ ಪ್ರಾಮುಖ್ಯತೆ, ನಗರ ಸಮಾಜದ ಸ್ವರೂಪ ಮತ್ತು ಪಟ್ಟಣಗಳಲ್ಲಿ ಜೀವನ ಮುಂತಾದ ವಿಷಯಗಳ ಬಗ್ಗೆ ವಿವರಣೆ ನೀಡಲಾಗಿದೆ.

ಅಧ್ಯಾಯ 7

ಈ ಅಧ್ಯಾಯದಲ್ಲಿ ಹಳೇಬೀಡಿನ ಪ್ರಾಕೃತಿಕ ಸನ್ನಿವೇಶಗಳು ಮತ್ತು ಐತಿಹಾಸಿಕ ಹಿನ್ನಲೆ, ದೋರಸಮುದ್ರದ ಸ್ಥಾಪನೆಯ ಕಾಲ, ದ್ವಾರಸಮುದ್ರದ ಮೂಲ, ರಾಜಧಾನಿಯ ಸ್ಥಳಾಂತರ, ನಗರ ರಚನೆ, ಕೋಟೆ, ಅರಮನೆ, ಹೆದ್ದಾರಿಗಳು, ನೀರಿನ ಪೂರೈಕೆ, ಸಾಮಾಜಿಕ ಸಂರಚನೆ, ಆಡಳಿತ ವರ್ಗಗಳು, ಮಹಾಪ್ರಧಾನರು, ಭಂಡಾರಿಗಳು, ಸೇನುಭೋವ, ಹೆಗ್ಗಡೆಯರು, ವೃತ್ತಿಪರ ವರ್ಗಗಳು, ದೇವಾಲಯದ ಸಿಬ್ಬಂದಿ, ಆರ್ಥಿಕ ವ್ಯವಸ್ಥೆ, ಕೈಗಾರಿಕೆಗಳು, ವ್ಯಾಪಾರ ಕೇಂದ್ರವಾಗಿ ದೋರಸಮುದ್ರ, ವರ್ತಕರು, ದೇವಾಲಯಗಳ ಆರ್ಥಿಕ ಚಟುವಟಿಕೆ, ದೋರಸಮುದ್ರದ ಕಲೆ ಮತ್ತು ವಾಸ್ತುಶಿಲ್ಪ, ಧಾರ್ಮಿಕ ಹಬ್ಬ ಆಚರಣೆಗಳು ಮತ್ತು ದೋರಸಮುದ್ರದ ಅವನತಿಯನ್ನು ವಿವರಿಸಲಾಗಿದೆ.

ಅಧ್ಯಾಯ ೩

ಈ ಅಧ್ಯಾಯದಲ್ಲಿ ಪ್ರಸ್ತುತ ಪ್ರಬಂಧದಿಂದ ಪಡೆದ ಪ್ರಮುಖ ಬೆಳಕರು ಚೆಲ್ಲುವ ವಿವರಗಳನ್ನು ನೀಡಲಾಗಿದೆ. ಪ್ರಸ್ತುತ ನಗರ ಕೇಂದ್ರಗಳ ಸಮೀಕ್ಷೆಯು ಹೊಯ್ಸಳ ಸಾಮ್ರಾಜ್ಯದ ಸುಮಾರು ಕ್ರಿ.ಶ. 10 ರಿಂದ 13ನೇ ಶತಮಾನದಲ್ಲಿನ ನಗರೀಕರಣದ ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಹಲವು ಮುಖಗಳಾದ ಪಟ್ಟಣಗಳ ಹುಟ್ಟು ಬೆಳವಣಿಗೆ ಹಾಗೂ ರಚನೆ ಮತ್ತು ಪಟ್ಟಣಗಳಲ್ಲಿನ ಆಡಳಿತ ಆರ್ಥಿಕ ಮತ್ತು ಸಾಮಾಜಿಕ ಜೀವನಗಳನ್ನು ಅಧ್ಯಯನ ಮಾಡಲಾಗಿದೆ.

ಪಟ್ಟಣಗಳಲ್ಲಿ ಸೇನಾಡಳಿತವೂ ಸೇರಿದಂತೆ ಹಲವು ಆಡಳಿತ ಕಾರ್ಯಗಳಿದ್ದವು. ಅಲ್ಲಿ ಮಾರುಕಟ್ಟೆಗಳು ಹಾಗೂ ಕರಕುಶಲ ವಸ್ತುಗಳ ತಯಾರಿಕೆಯೂ ಇತ್ತು. ಇದರ ಜೊತೆಗೆ ಕೋಟೆಯನ್ನು ಹೊಂದಿದ ನಗರ ಕೇಂದ್ರಗಳೊಳಗೆ ಆಡಳಿತ ಕಾರ್ಯದ ಕೇಂದ್ರೀಕರಣವಿತ್ತು. ಪಟ್ಟಣಗಳು ಹಳ್ಳಿಗಳಿಗಿಂತ ಭಿನ್ನವಾಗಿದ್ದವು ಹಾಗೂ ಹಳ್ಳಿಗಳಿಗೆ ಹೋಲಿಸಿದರೆ ಅಲ್ಲಿನ ಜೀವನ ಹೆಚ್ಚು ಸಂಕೀರ್ಣವೂ ಹಾಗೂ ವೈವಿಧ್ಯಮಯವಾಗಿತ್ತು.

ಒಂದನೇ ಅಧ್ಯಾಯದಿಂದ ಎರಡನೇ ಅಧ್ಯಾಯದವರೆಗಿನ ಅಡಿಟಿಪ್ಪಣಿಗಳು

1) ಎ.ಕೆ.2 ಶ್ರವಣ ಬೆಳಗೊಳ 132

2) ಎಂ.ಎ.ಆರ್. 1916 ಪು 50

3) ಡೆರೆಟ್ – ಜೆ.ಡಿ.ಎಂ.ದಿ ಹೊಯ್ಸಳಾಸ್ ಪು 36

4) ಕರ್ನಾಟಕ ಪರಂಪರೆ ಸಂ 1–1970 ಪು 469

5) ಟೆರೆಡ್ ಜೆ.ಡಿ.ಎಂ. – ಅದೇ ಪು 45

6) ಡೆರೆಟ್ ಜೆ.ಡಿ.ಎಂ. – ಅದೇ ಪು 221

7) ಎ.ಕ.ಸಂ. IX ಪು 191

8) E.C. IV Yd., 1: EC IV Sr. 34

9) ಕರ್ನಾಟಕ ಚರಿತ್ರೆ ಸಂ.2 ಪು 119

10) ಕರ್ನಾಟಕ ಪರಂಪರೆ ಸಂ 1 – ಪು 470

11) ಕರ್ನಾಟಕ ಪರಂಪರೆ ಸಂ 1 – ಪು 471

12) ಕರ್ನಾಟಕ ಪರಂಪರೆ ಸಂ 1 – ಪು 124

13) ಎ.ಇ.ಸಂ.– VII ಪು 176

14) ಕರ್ನಾಟಕ ಪರಂಪರೆ – ಅದೇ ಪು 472

15) ಎ.ಕ.ಸಂ. IX ಹಳೇ ಪು 164

16) ಕರ್ನಾಟಕ ಪರಂಪರೆ – ಅದೇ ಪು 474

17) ಕರ್ನಾಟಕ ಪರಂಪರೆ – ಅದೇ ಪು 475

18) ಎ.ಕ.ಸಂ. IX ಹಳೇ ಪು – 328

19) ಎ.ಕ.ಸಂ. IX ಹಳೇ ಪು 332

20) ಎ.ಕ.ಸಂ. IX ಹಳೇ ಪು 317

21) ಎ.ಕ.ಸಂ. IX ಹಳೇ ಪು 209

22) ಎ.ಕ.ಸಂ. IX ಹಳೇ ಪು 333

23) ಶೇಕ್.ಅಲಿ.ಬಿ.– ದಿ ಹೊಯ್ಸಳ ಡೈ ನಾಸ್ಟಿ, ಮೈಸೂರು 1972 ಪು 164

24) ಎ.ಕ.ಸಂ IX ಹಳೇ ಪು 330

25) ಎ.ಕ.ಸಂ XV ಬಿ.ಎಲ್. 332 ಪು 86

26) ಎ.ಕ.ಸಂ. IV ಹಳೇ ಪು 277

27) ಎ.ಕ.ಸಂ. VII ಹಳೇ ಪು 278

28) ಎ.ಕ.ಸಂ. VI ಹಳೇ ಪು 406

ಅಧ್ಯಾಯ 3

3.1 ನಗರ ಅಧ್ಯಯನ

ನಗರ ಹಾಗೂ ನಗರೀಕರಣಗಳು ನವೀನ ಯುಗದ ವಿಶಿಷ್ಟ ವಸ್ತುಗಳಲ್ಲ. ತಮ್ಮ ಎಲ್ಲಾ ವೈವಿಧ್ಯತೆಗಳು ಹಾಗೂ ಸಂಕೀರ್ಣತೆಗಳೊಂದಿಗೆ ಪ್ರಾಚೀನ ಹಾಗೂ ಮಧ್ಯಕಾಲೀನ ಯುಗದಲ್ಲೇ ಅಸ್ಥಿತ್ವದಲ್ಲಿದ್ದವು. ಸ್ವಲ್ಪ ಮಟ್ಟಿಗೆ ಆಧುನಿಕ ನಗರಗಳು ಪೂರ್ವದ ಮುಂದುವರಿಕೆಯಾಗಿದೆ.[1] ಆದ್ದರಿಂದ ನಗರೀಕರಣವು ನಾಗರೀಕತೆಯಷ್ಟೇ ಪುರಾತನವಾದುದ್ದು ಎಂದು ಹೇಳಬಹುದು. ಈ ಪ್ರಕ್ರಿಯೆಯು ಹಿಂದೆ ಗ್ರಾಮೀಣ ಜನತೆ ಹಲವಾರು ಸ್ವರೂಪಗಳಾಗಿ ಮಾರ್ಪಾಡಾಗುವುದಕ್ಕೆ ಹೊರಟಾಗಲೇ ಪ್ರಾರಂಭವಾಯಿತು. ಹಾಗೂ ಕೃಷಿ ಕೇಂದ್ರಗಳು ಕೇವಲ ಉತ್ಪಾದಕತೆಯ ಭೂಮಿಗಳಾಗಿ ಉಳಿಯದೆ ಹತ್ತು ಹಲವಾರು ಚಟುವಟಿಕೆಗಳ ಕೇಂದ್ರವಾಗಿ ಮಾರ್ಪಟ್ಟಾಗಲೇ ಪ್ರಾರಂಭಗೊಂಡಿತು.[2] ದೇಶದಲ್ಲಿನ ಈ ಪ್ರಕ್ರಿಯೆಯು ಕ್ರಮೇಣವಾಗಿ ಗ್ರಾಮೀಣ ವಸಾಹತುಗಳನ್ನು ನಗರ ಕೇಂದ್ರಗಳನ್ನಾಗಿ ಪರಿವರ್ತಿಸಿತು ಈ ಕಾರಣದಿಂದಾಗಿ ನಗರ ಬೆಳವಣಿಗೆ ಉಂಟಾಯಿತು. ಅದರ ಗಾತ್ರ ಹಾಗೂ ಸಂಖ್ಯೆಗಳೆರಡು ಬೆಳೆದವು. ಈ ಪರಿವರ್ತನೆ ಹಾಗೂ ಬೆಳವಣಿಗೆ ಚಲನೆ ಮತ್ತು ಚಲನಾಶಕ್ತಿಗಳು ನಗರ ಪ್ರದೇಶಗಳಲ್ಲಿ ವಿಶಿಷ್ಟ ಜೀವನ ಹಾಗೂ ಒಂದು ರೀತಿಯ ಸನ್ನಿವೇಶವನ್ನು ಸೃಷ್ಟಿಸಿದವು. ಇದನ್ನೇ 'ನಗರೀಕರಣ' ಎಂದು ಕರೆಯಬಹುದು. ನಗರೀಕರಣ, ನಗರ ಬೆಳವಣಿಗೆ ಹಾಗೂ ನಗರತ್ವಗಳು ಪರಸ್ಪರ ಒಂದನ್ನೊಂದರ ಕಾರಣ ಪರಿಣಾಮಗಳಾದರು ಅವುಗಳು ಅಂತರ ಸಂಪರ್ಕವನ್ನು ಬೆಸೆದುಕೊಂಡಿವೆ.

ನಗರಗಳು ನಾಗರೀಕತೆಯ ಉದಯದ ಪ್ರಾಚೀನ ಮಾನವ ನಿರ್ಮಿತ ವಸ್ತುಗಳಾದರು ನಗರ ಅಧ್ಯಯನವು ಸಾಪೇಕ್ಷವಾಗಿ ವಿದ್ವಾಂಸರ ಆಯ್ಕೆಯ ಇತ್ತೀಚಿನ ಕ್ಷೇತ್ರವಾಗಿದೆ. ಇದು ಯಾಕಾಗಿತೆಂದರೆ ಸಂಶೋಧನಾ ವಿದ್ವಾಂಸರು ನಗರವು ಸಮಾಜದ ಪ್ರತಿಬಿಂಬ ಹಾಗೂ ಸಮಾಜ ಜೀವನದ ವಿಶಿಷ್ಟ ರೂಪವಲ್ಲ ಎಂಬ ಅಭಿಪ್ರಾಯವನ್ನು ಹೊಂದಿದ್ದರು. ಆದರೆ ಕೈಗಾರಿಕ ಕ್ರಾಂತಿಯ ನಂತರ ನಗರಗಳು ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಬಲಿಷ್ಠ ಶಕ್ತಿಗಳಾದಂತೆ ಸಮಾಜ ಹಾಗೂ ನಗರವನ್ನು ಈ ರೀತಿ ಗುರುತಿಸುವುದು ಬದಲಾಯಿತು.[3] ನಗರೀಕರಣದ ಸಂಕೀರ್ಣ ಪ್ರಕ್ರಿಯೆ ಹಾಗೂ ನಗರಗಳಲ್ಲಿನ ವಿಶಿಷ್ಟ ಜೀವನ ರೀತಿಯು ಸಂಶೋಧಕರು ನಗರ ಅಧ್ಯಯನಗಳ ಗಂಭೀರವಾದ ಕೃಷಿಯನ್ನು ನಡೆಸುವಂತೆ ಪ್ರೇರೇಪಿಸಿದವು. ನಗರ ಹಾಗೂ ನಗರೀಕರಣ ಅಧ್ಯಯನಕ್ಕೆ ಒಂದು ವ್ಯವಸ್ಥಿತ ಮಾರ್ಗವನ್ನು ಒದಗಿಸಿಕೊಟ್ಟ ಹರಿಕಾರರೆಂದರೆ ಪಾರ್ಕ್, ಬರ್ಗೆಸ್,

ಮತ್ತು ಮೆಕೆಂಜಿ, ಆಗಿದ್ದಾರೆ.[4] ವಾರ್ಕ್ ನಗರದ ಪರಿಸರ ಸಿದ್ಧಾಂತಕ್ಕೆ ಸಾಮಾನ್ಯ ಚೌಕಟ್ಟನ್ನು ಒದಗಿಸಿದನು. ಅವನ ಪ್ರಕಾರ ನಗರವು ತನ್ನದೇ ಆದ ನಿಯಮಗಳಿಂದ ನಿರ್ಮಿಸಿದ ಸ್ಥಳದಲ್ಲಿನ ಆಳವಾದ ಸಂಘಟಿತ ಕೇಂದ್ರವಾಗಿದೆ.

3.2 ನಗರ ಇತಿಹಾಸಕ್ಕೆ ಸಂಬಂಧಿಸಿದ ಅಧ್ಯಯನಗಳು

ಪಟ್ಟಣಗಳ ಚಾರಿತ್ರಿಕ ನವೀನತೆಗಳು ಅವುಗಳ ವೈಶಿಷ್ಟತೆಗಳು ಅವುಗಳ ವಿಶೇಷ ಸಾಮಾಜಿಕ ಒರೆಕೋರೆಗಳು, ವೈವಿಧ್ಯ, ಆರ್ಥಿಕ, ಸಾಮಾಜಿಕ, ಹಾಗೂ ರಾಜಕೀಯ ಚಟುವಟಿಕೆಗಳ ಮೇಲಿನ ಅವುಗಳ ಆಸಕ್ತಿಯೆಲ್ಲವು ಸಂಶೋಧಕರು ನಗರ ಇತಿಹಾಸದ ಬಗ್ಗೆ ಆಳವಾದ ಅಧ್ಯಯನವನ್ನು ಮಾಡುವಂತೆ ಪ್ರೇರೇಪಿಸಿದವು. ಈ ವಿಷಯವಾಗಿ ಪಿರಿನ್ ಹಾಗೂ ವೆಬರ್ ನೀಡಿರುವ ಮಾದರಿಗಳು ಮಧ್ಯಕಾಲೀನ ಯುಗಕ್ಕೆ ನಗರ ಅಧ್ಯಯನಗಳಿಗೆ ಬಹಳ ಉಪಯುಕ್ತವಾಗಿದೆ.[5] ಗಿಡನ್ ಸ್ಜೆಬರ್ಗ್ ಎಂಬ ಇನ್ನೊಬ್ಬ ಲೇಖಕ ಕೈಗಾರಿಕಾ ಪೂರ್ವ ಹಾಗೂ ಕೈಗಾರಿಕೇತರ ನಗರದ ಸಾಮಾಜಿಕ ಹಾಗೂ ಪರಿಸರ ರಚನೆಗಳನ್ನು ವಿವರಿಸಿ ವಿಶ್ಲೇಷಿಸಲು ಪ್ರಯತ್ನಿಸಿದ್ದಾನೆ.[6]

ಲೇಖಕನು ನೀಡಿರುವ ಸಂಕೇತ ನಿರೂಪಣಾ ಶಾಸ್ತ್ರವು ಬಹಳ ಕುತೂಹಲಕಾರಿಯಾಗಿದೆ. ಲೇಖಕನು ತಾಂತ್ರಿಕತೆಯನ್ನು ಪ್ರಮುಖವಾದ ವ್ಯಯಕ್ತಿಕ ಪರಿವರ್ತನೀಯ ಸಾಧನವನ್ನಾಗಿ ತೆಗೆದುಕೊಳ್ಳುತ್ತಾನೆ. ಇತ್ತೀಚಿನ ವರ್ಷಗಳಲ್ಲಿ ನಗರ ಮಾನವಶಾಸ್ತ್ರಜ್ಞರುಗಳಾದ ಐಡನ್, ಸಾದಾಲ್ ಮತ್ತು ರಿಚರ್ಡ್ ಜಿ. ಫಾಕ್ಸ್ ನಗರೀಕರಣದ ವಿಭಿನ್ನ ಸಂಸ್ಕೃತಿಗಳ ಅಧ್ಯಯನ ನಡೆಸಿದ್ದಾರೆ. ಹಾಗೂ ನಗರಗಳನ್ನು ಅವುಗಳ ಸಾಂಸ್ಕೃತಿಕ ಹಿನ್ನಲೆಯಲ್ಲಿ ವಿಶ್ಲೇಷಿಸಿದ್ದಾರೆ.[7] ಈ ರೀತಿಯಾದ ಸಾಹಿತ್ಯವು ಇತಿಹಾಸ ಪೂರ್ವದ ನಗರಗಳ ಉತ್ತಮವಾದ ಹಾಗೂ ಸ್ಪಷ್ಟವಾದ ಚಿತ್ರಣವನ್ನು ನೀಡುವಲ್ಲಿ ಸಹಾಯಕಾರಿಯಾಗಿದೆ. ಆದಾಗ್ಯೂ ನಗರವನ್ನು ನಿರ್ದಿಷ್ಟವಾಗಿ ಸಂಜ್ಞೆಗಳಲ್ಲಿ ವಿವರಿಸಲು ಹಾಗೂ ಅದರ ಅರ್ಥವನ್ನು ಸಂಪೂರ್ಣವಾಗಿ ಗ್ರಹಿಸಲು ಕಷ್ಟವಾಗಿದೆ. ಈ ಸಂಬಂಧ ಸ್ಟ್ಯಾನ್ಲಿ ಕೆ. ಶುಲ್ಸ್ ಈ ರೀತಿ ಹೇಳುತ್ತಾನೆ.· ನಗರವು ವಿವಿಧ ಐತಿಹಾಸಿಕ ಹಾಗೂ ಪ್ರಾದೇಶಿಕ ಸನ್ನಿವೇಶಗಳಲ್ಲಿ ಹಲವಾರು ಅರ್ಥಗಳನ್ನು ನೀಡುತ್ತದೆ. ನಗರ ಇತಿಹಾಸದ ಸಂಶೋಧಕರಾಗಿ ನಾವು "ನಗರ" ಎಂಬ ಪದವು ಕಾಲ್ಪನಿಕ ಅಸ್ಥಿತ್ವವಾಗಿ ಬಹಳ ಸೂಕ್ಷ್ಮವಸ್ತುವಾಗಿ ಕಂಡುಬರುತ್ತದೆ.[8]

3.3 ಭಾರತದಲ್ಲಿ ನಗರ ಅಧ್ಯಯನ

ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ಎಲ್ಲಾ ಸಾಮಾಜಿಕ ವಿಜ್ಞಾನಗಳಲ್ಲಿ ನಗರ ಅಧ್ಯಯನಗಳ ಬಗ್ಗೆ ಆಸಕ್ತಿಯು ಬೆಳೆಯುತ್ತಾ ಸಾಗುತ್ತಿದೆ. ಆದಾಗ್ಯೂ ಈಗಿನ ಸಮಕಾಲೀನ ನಗರ ಅಧ್ಯಯನವು ಪ್ರಮುಖವಾಗಿ ಸ್ವಲ್ಪ ಪ್ರಮಾಣದ ಇತಿಹಾಸದ ಹಿನ್ನಲೆಯನ್ನು ಹೊಂದಿದೆ. ಸಾಮಾಜಿಕ ವಿಜ್ಞಾನಿಗಳು ಅಧ್ಯಯನ ಮಾಡುವ ವಸ್ತುಗಳು ಸಾಪೇಕ್ಷಕವಾಗಿ ಐತಿಹಾಸಿಕವಾಗಿದೆ ಅವುಗಳು ಬಹಳ ಇತ್ತೀಚಿನ ಮೂಲದ್ದಾಗಿವೆ.[9] ಆದ್ದರಿಂದ ಭಾರತದಲ್ಲಿ ನಗರ ಇತಿಹಾಸದ ಕ್ಷೇತ್ರವು ಸಾಪೇಕ್ಷವಾಗಿ ಭೇದಿಸಲಾಗದ ಹಾಗೂ ಸ್ವಲ್ಪವೇ ಕಾರ್ಯವಾಗಿರುವ ವಸ್ತುವಾಗಿ ಉಳಿದಿದೆ ಅದರೆ ಸಾಮಾಜಿಕ ಹಾಗೂ ಆರ್ಥಿಕ ಇತಿಹಾಸದ ವಿದ್ಯಾರ್ಥಿಯು ಪೂರ್ವಾತಿಹಾಸವನ್ನು ಅರ್ಥ ಮಾಡಿಕೊಳ್ಳಲು ನಗರ ಅಧ್ಯಯನವನ್ನು ಕಡೆಗಾಣಿಸಲಾಗುವಂತಿಲ್ಲ. ನಗರ ಇತಿಹಾಸದ ಹಲವು ಅಂಶಗಳನ್ನು ನಿರ್ಲಕ್ಷಿಸಿ ಜನರ ಜೀವನದ ಅರ್ಥಪೂರ್ಣವಾದ ಹಾಗೂ ವಿಚಾರಪೂರ್ಣವಾದ ವಿವರಣೆಯನ್ನು ನೀಡುವುದು ಬಹಳ ಕಷ್ಟದ ಕಾರ್ಯ. ಭಾರತೀಯ ನಗರ ಸಾಹಿತ್ಯದಲ್ಲಿ ಗಮನಾರ್ಹವಾದ ಸಂಖ್ಯೆಯಲ್ಲಿ ಜೀವನ ಚರಿತ್ರೆಗಳೆಂದು ಕರೆಯಲಾಗುವ ಅಂದರೆ ಪಟ್ಟಣದ ಜೀವನ ಚರಿತ್ರೆ ಅಧ್ಯಯನಗಳಿರುವುದು ಎಂಬುದು ಸತ್ಯದ ಮಾತಾಗಿದೆ. ಈ ರೀತಿಯಾದ ಸಾಹಿತ್ಯವು ಪ್ರಾಥಮಿಕವಾಗಿ ನಿರೂಪಣಾತ್ಮಕ ಹಾಗೂ ವಿವರಣಾತ್ಮಕವಾಗಿಯೂ ಇದೆ. ಕಾಲಾಧಾರದ ಮೇಲೆ ಪಟ್ಟಣದ ಇತಿಹಾಸವನ್ನು ಶೋಧಿಸುತ್ತಾ ಸಾಗುತ್ತದೆ. ಈ ಪ್ರಮುಖ ಘಟನೆಗಳ ಮೇಲೆ ಬೆಳಕು ಚೆಲ್ಲುತ್ತದೆ. ಚಾರಿತ್ರಿಕವಾಗಿ ಪ್ರಮುಖವಾದ ವ್ಯಕ್ತಿಗಳ ಸ್ಥಳಗಳ ಉಲ್ಲೇಖವನ್ನು ಮಾಡುತ್ತಾ ಸಾಗುತ್ತದೆ.[10] ಆದ್ದರಿಂದ ನಗರ ಇತಿಹಾಸದಲ್ಲಿನ ಅಧ್ಯಯನವು ನಗರೀಕರಣವನ್ನು ಸಾಮಾನ್ಯವಾಗಿ ಹಾಗೂ ನಗರ ಕೇಂದ್ರಗಳನ್ನು ವಿಶೇಷ ವಸ್ತುವಾಗಿ ಗಣನೆಗೆ ತೆಗೆದುಕೊಳ್ಳಬೇಕು.[11]

3.4 ಪೂರ್ವ ಮತ್ತು ಮಧ್ಯಕಾಲೀನ ಭಾರತಕ್ಕೆ ಸಂಬಂಧಿಸಿದ ನಗರ ಅಧ್ಯಯನಗಳು

ಸಾಮಾಜಿಕ ಹಾಗೂ ಆರ್ಥಿಕ ಇತಿಹಾಸದ ಹರಿಕಾರರು ಭಾರತದ ಪ್ರಾಗೈತಿಕ ಇತಿಹಾಸದ ಯುಗದ ನಗರ ಜೀವನದ ಹಲವಾರು ಅಂಶಗಳ ಮೇಲೆ ಅಧ್ಯಯನ ಮಾಡಿದರು ನಗರ ಅಧ್ಯಯನಗಳಿಗೆ ಸಂಬಂಧಿಸಿದಂತೆ ಹೆಚ್ಚು ಪಾಲು ಗ್ರಂಥಗಳು ಸಾಕಷ್ಟಿರಲಿಲ್ಲ. ಉದಾಹರಣೆಗೆ ದತ್ತ್.ಬಿ.ಬಿ. ಇವರು ಪ್ರಾಚೀನ ಭಾರತದ ನಗರಗಳ ಬಗ್ಗೆ ಬರೆದವರಲ್ಲಿ ಮೊದಲ ಇತಿಹಾಸಕಾರ ರಾಗಿದ್ದಾರೆ.[12] ಆದರೆ ಅವರ ಗ್ರಂಥವು ನಗರ ಯೋಜನೆಗೆ ಹೆಚ್ಚು ಕೇಂದ್ರೀಕೃತವಾಗಿದೆ. ಸ್ಟುವರ್ಟ್ ಪಿಗಟರ್ ಏಕವಿಷಯ ಪ್ರಬಂಧವು ಪ್ರವಾಸಿಗಳಿಗೆ ಮಾರ್ಗದರ್ಶಿಯಿದ್ದಂತಿದೆ.[13] ಭಾರತದ ನಗರಗಳ

ಮೇಲಿನ ಪಾರೆಸ್ಸರ್ ಚಿತ್ರಣಗಳು ಪ್ರವಾಸಿಗರನ್ನು ಗಮನದಲ್ಲಿಟ್ಟುಕೊಂಡು ಅಭಿಮಾನ ಬೆವರಿನ ಪರಮಾತ್ರವಾಗಿದೆ.[14] ಬಿ.ಎನ್.ಪೂರಿಯಾ ಪಿಗಟ್‌ರ ಗ್ರಂಥವನ್ನು ತನ್ನ ಗ್ರಂಥದಲ್ಲಿ ಪ್ರಾಚೀನ ಭಾರತದ ಹೆಚ್ಚಿನ ನಗರಗಳನ್ನು ಸೇರಿಸುವುದರ ಮೂಲಕ ಪುನರ್ ವಿಮರ್ಶಿಸಿದ್ದಾನೆ.[15] ಅಮಿತಾ ರಾಯ್‌ರವರ ಗ್ರಂಥವು ಪ್ರಾಚ್ಯ ಇತಿಹಾಸ ಮಾಹಿತಿಯನ್ನು ಬಳಸಿಕೊಂಡು ನಗರ ಯೋಜನೆಯ ಮೇಲೆ ಬರೆದ ಗ್ರಂಥವಾಗಿದೆ.[16]

ಜಿ.ಎಸ್.ಘರಿಯೇ ರವರು ಭಾರತದ ನಗರಗಳ ಸಾಮಾಜಿಕ ವಿಶ್ಲೇಷಣೆಯನ್ನು ಮಾಡಿದ್ದರೆ ಹಾಗೂ ಇವರು ಟಾಯ್ನಬಿಯ ರಾಜಧಾನಿಗಳ ಮೇಲಿನ ಅಭಿಪ್ರಾಯಗಳನ್ನು ಚರ್ಚೆ ಮಾಡುವುದರಲ್ಲಿ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಾರೆ. ಪ್ರಾಚೀನ ಪಟ್ಟಣದ ಅಧ್ಯಯನಕ್ಕೆ ಹೆಚ್ಚಿನ ಪ್ರಮಾಣದ ಕೊಡುಗೆಯನ್ನು ನೀಡಿರುವೆಂದರೆ ಎ.ಘೋಷ್[17] ಆದರೆ ಈ ಗ್ರಂಥಗಳೆಲ್ಲವು ಹಾಗೂ ನಗರತ್ವದ ಹಲವಾರು ಅಂಶಗಳನ್ನು ನಿರ್ಲಕ್ಷಿಸಿವೆ.[18] ನಗರೀಕರಣದ ಮೇಲೆ ಪ್ರಮುಖವಾದ ಗ್ರಂಥವನ್ನು ರಚಿಸಿದವರೆಂದರೆ ವಿ.ಕೆ.ಥಾಕೂರ್ ವ್ಯಯಕ್ತಿಕ ನಗರಗಳನ್ನು ಅಧ್ಯಯನ ಮಾಡುವ ಗಣನೀಯ ಪ್ರಮಾಣದ ಸಾಹಿತ್ಯವು ಅಸ್ತಿತ್ವದಲ್ಲಿದೆ.[19]

3.5 ದಕ್ಷಿಣ ಭಾರತಕ್ಕೆ ಸಂಬಂಧಿಸಿದ ಅಧ್ಯಯನ

ಸಾಮ್ರಾಜ್ಯಗಳ ಹುಟ್ಟು ಬೆಳವಣಿಗೆಗೆ ಹಾಗೂ ಪತನದ ರಾಜಕೀಯ ಇತಿಹಾಸವನ್ನು ನಿರೂಪಿಸುವ ದಕ್ಷಿಣ ಭಾರತದ ಸಾಹಿತ್ಯವು ಬಹಳ ವಿಶಾಲವು ಸಮೃದ್ಧಿಯು ಆಗಿದೆ. ಈ ಅಧ್ಯಯನಗಳಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗಳು ಧಾರ್ಮಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು ವಿಶ್ಲೇಷಿಸಲಾಗಿದೆ. ಆದರೆ ಇವುಗಳು ಕೇವಲ ಅನುಬಂಧವಾಗಿ ಕಂಡುಬರುತ್ತದೆ. ಹಾಗೂ ಸಂಶೋಧನೆಯ ವ್ಯಯಕ್ತಿಕ ಕ್ಷೇತ್ರವಾಗಿ ಕಂಡುಬರುವುದಿಲ್ಲ. ನಗರ ವಸ್ತುವಿನ ಅಧ್ಯಯನಕ್ಕೆ ಸಂಬಂಧಿಸಿದಂತೆ ಇದು ಸತ್ಯವೆಂದು ಕಾಣುತ್ತದೆ. ಇದಕ್ಕೆ ಅಪವಾದವೆಂಬಂತೆ ಅಪ್ಪಾದೊರೈ ರವರ "ಏಕನಾಮಿಕ್ ಕಂಡಿಷನ್ ಆಫ್ ಸದರನ್ ಇಂಡಿಯಾ", ದೀಪಕ್ ರಾಜಂದಾಸ್ ರವರ "ದ ಏಕನಾಮಿಕ್ ಹಿಸ್ಟರಿ ಆಫ್ ಡೆಕನ್" ಸತ್ಯನಾರಾಯಣರವರ ದ ಹಿಸ್ಟರಿ ಆಫ್ ಆಂಧ್ರ ಮತ್ತು ತಪನ್ ರಾಯಚೌಧುರಿ ಹಾಗೂ ಇರ್ಫಾನ್ ಹಬೀಬ್‌ರವರ ದ ಕೇಂಬ್ರಿಡ್ಜ್ ಏಕಾನಮಿಕ್ ಹಿಸ್ಟರಿ ಗ್ರಂಥಗಳು ಪ್ರಮುಖವಾಗಿದೆ.[20]

ದಕ್ಷಿಣ ಭಾರತದ ವಿಶ್ವವಿದ್ಯಾನಿಲಯಗಳಲ್ಲಿನ ಪ್ರಕಟಿತ ಹಾಗೂ ಅಪ್ರಕಟಿತ ಪಿಹೆಚ್.ಡಿ. ಪ್ರಬಂಧಗಳ ಸಮೀಕ್ಷೆಯು ಜನರ ಸಾಮಾಜಿಕ, ಆರ್ಥಿಕ ಸ್ಥಿತಿಯನ್ನು ಅಧ್ಯಯನ ಮಾಡುವಲ್ಲಿ ಸಂಶೋಧಕರು ತೋರಿಸುತ್ತಿರುವ ನಿರಂತರ ಕಾಳಜಿಯನ್ನು ತೋರಿಸುತ್ತದೆ. ಇಂತಹ ಹಲವು ಪ್ರಬಂಧಗಳಲ್ಲಿ ಐತಿಹಾಸಿಕ ದೃಷ್ಟಿಕೋನದ ನಿರ್ದಿಷ್ಟದಲ್ಲಿನ ನಿರ್ದಿಷ್ಟ ಪ್ರದೇಶದ ಸಾಮಾಜಿಕ ಹಾಗೂ ಆರ್ಥಿಕತೆಯನ್ನು ನೀಡುವ ಪ್ರಯತ್ನಗಳನ್ನು ಮಾಡಲಾಗಿದೆ. ಆದರೂ ಯಾವುದೇ ಕಾಲ್ಪನಿಕ ಸಹಿತ್ಯದ ಬದಲಾಗಿ ಕೇವಲ ಸಮೃದ್ಧಿಯಾದ ಪ್ರಮಾಣದಲ್ಲಿ ನಿರೂಪಣಾ ಹಾಗೂ ವಿವರಣಾತ್ಮಕ ಗ್ರಂಥಗಳನ್ನು ನೋಡಬಹುದಾಗಿದೆ. ಇತ್ತೀಚಿನ ಹಾಗೂ ಒಂದು ವಿಶಿಷ್ಟ ದೃಷ್ಟಿಕೋನವನ್ನು ಹೊಂದಿರುವ ದಕ್ಷಿಣ ಭಾರತದ ಇತಿಹಾಸದ ಅಧ್ಯಯನವನ್ನು ಬರ್ಟನ್ ಸ್ಪೈನ್ ಮಾಡಿದ್ದಾರೆ. ಇದು ಮುಂದಿನ ಸಂಶೋಧನೆಗೆ ಅಡಕವಾಗುವಂತಹ ಹೊಸ ಆಯಾಮದೆಡೆಗಿನ ವಿವಿಧ ಮಾದರಿ ಹಾಗೂ ಅಂಶಗಳನ್ನು ಒದಗಿಸುತ್ತದೆ.[21]

ಆದರೆ ವ್ಯಯಕ್ತಿಕ ಪಟ್ಟಣಗಳನ್ನು ಅಧ್ಯಯನ ಮಾಡುವಲ್ಲಿ ಸಂಶೋಧಕರು ನೀಡಿರುವ ಮಹತ್ವಪೂರ್ಣವಾದ ಕೊಡುಗೆಯನ್ನು ನಿರ್ಲಕ್ಷಿಸುವಲ್ಲಿ ಇದು ಆಸಕ್ತಿಯನ್ನು ಹೊಂದಿಲ್ಲ. ಈ ಮೊದಲೇ ಹೇಳಿದಂತೆ ಇಂತಹ ಅಧ್ಯಯನಗಳು ಸಾಮಾನ್ಯವಾಗಿ ಪಟ್ಟಣಗಳ ಜೀವನ ಚರಿತ್ರೆಯ ವರ್ಗೀಕರಣದ ಅಡಿಯಲ್ಲಿ ಬರುತ್ತದೆ. 19ನೇಯ ಶತಮಾನದ ದ್ವಿತಿಯಾರ್ಧದಲ್ಲಿ ಹಾಗೂ 20ನೆಯ ಶತಮಾನದ ಆರಂಭದಲ್ಲಿ ಮದ್ರಾಸ್ ನಗರದ ಮೇಲೆ ಎರಡು ಗ್ರಂಥಗಳು ಹೊರಹೊಮ್ಮಿದವು. ಒಂದು ಟಲ್‌ಬಾಯ್ ವ್ಹೀಲರ್‌ನಿಂದ ಬರೆಯಲ್ಪಟ್ಟಿದ್ದರೆ ಮತ್ತೊಂದು ಹೆನ್ರಿ ಡವಿಸ್ಮನ್ ನವ್‌ನಿಂದ ಬರೆಯಲ್ಪಟ್ಟಿತು.[22]

ಮೊದಲ ಗ್ರಂಥವಾದ "ಮದ್ರಾಸ್ ಇನ್ ದ ಓಲ್ಡ್ ಟೈಮ್ಸ್" ಎಂಬ ಆಯ್ದ ಬರಹಗಳ ದೀರ್ಘ ಸರಣಿಗಳಲ್ಲಿ ವಿಷಯ ಹೇಳಲಾದ ಪಟ್ಟಣಗಳ ಇತಿಹಾಸವಾಗಿದೆ. ಹಾಗೂ ಈ ಸರಣಿಗಳನ್ನು ಕಾಲಗಣನೆಯ ಕ್ರಮದಲ್ಲಿ ಜೋಡಿಸಲಾಗಿದೆ. "ವೆಸ್ಟೀಜಿಸ್ ಆಫ್ ಓಲ್ಡ್ ಮದ್ರಾಸ್" ಎಂಬ ಇನ್ನೊಂದು ಗ್ರಂಥವು ನಗರದ ಬೆಳವಣಿಗೆ ಮತ್ತು ಕೋಟೆಯ ನಿರ್ಮಾಣ ಸ್ಥಳೀಯ ಸಂಸ್ಥೆಗಳ ಹುಟ್ಟು ಹಾಗೂ ಬೆಳವಣಿಗೆ ಮತ್ತು ನಿವಾಸಿಗಳ ಜೀವನ ರೀತಿನೀತಿಗಳನ್ನು ವಿವರಿಸುತ್ತದೆ. ಮುಂದೆ ಕೆಲವು ರಾಜಕೀಯ ರಾಜಧಾನಿಗಳು ಕೋಟೆಗಳು ಮತ್ತು ಧಾರ್ಮಿಕ

ಕೇಂದ್ರಗಳು ಅಲ್ಲಿನ ನಗರ ಕೇಂದ್ರಗಳ ಐತಿಹಾಸಿಕ ಬೆಳವಣಿಗೆಯನ್ನು ತಮ್ಮದೇ ದೃಷ್ಟಿಕೋನಗಳಲ್ಲಿ ನೋಡಲು ಸಂಶೋಧಕರನ್ನು ಆಕರ್ಷಿಸಿದವು.[23]

ಇತ್ತೀಚಿನ ಒಂದು ಗ್ರಂಥವು ಪಟ್ಟಣ ನಿವೇಶನ ಇತಿಹಾಸದ ಪ್ರತೀ ನಮೂನೆ ಅಥವಾ ಅವಲೋಕಿಸಿದ ಭಾಗ ಹಾಗೂ ನಿರ್ಮಾಣದ ರೀತಿ ಮತ್ತು ಇದರ ಮೇಲ್ವಿಚಾರಣೆಯಲ್ಲಿರುವ ಮನುಷ್ಯನನ್ನು ಸಾದರಪಡಿಸುವ ಪ್ರಯತ್ನ ಮಾಡುತ್ತದೆ. ಈ ಗ್ರಂಥವು 6 ಅಥವಾ 7 ರಿಂದ 17ನೇ ಶತಮಾನಗಳನ್ನೊಳಗೊಂಡಂತೆ ದಕ್ಷಿಣ ಭಾರತದ ಒಂದು ನಿರ್ದಿಷ್ಟ ಪ್ರದೇಶದಲ್ಲಿನ ಪಟ್ಟಣದ ನಿವೇಶನದ ಒಂದು ವ್ಯಾಪಕ ಅಧ್ಯಯನವಾಗಿದೆ.[24]

3.6 ನಗರ ಕೇಂದ್ರಗಳು ಹಾಗೂ ಅವುಗಳ ವರ್ಗೀಕರಣ

ನಗರ ಯೋಜನೆಯ ವಿಜ್ಞಾನವಾದ ವಾಸ್ತುಶಾಸ್ತ್ರದಲ್ಲಿ ವಿವಿಧ ಬಗೆಯ ನಗರಗಳ ವರ್ಗೀಕರಣವನ್ನು ಅವುಗಳು ನಿರ್ವಹಿಸುವ ಕಾರ್ಯಗಳಾದ ವ್ಯಾಪಾರ, ವಾಣಿಜ್ಯ ಉತ್ಪಾದನೆ, ಆಡಳಿತ ಹಾಗೂ ಸೇನಾ ಕಾರ್ಯಾಚರಣೆಯ ಆಧಾರದ ಮೇಲೆ ಮಾಡಲಾಗಿದೆ. ಒಂದು ನಗರವು ಸಾಮಾನ್ಯವಾದ ಕೋಟೆಯನ್ನು ಹೊಂದಿದ ಪಟ್ಟಣ ಇಲ್ಲಿ ವ್ಯಾಪಾರವು ಒಂದು ಪ್ರಮುಖವಾದ ಚಟುವಟಿಕೆಯಾಗಿತ್ತು. ಪಟ್ಟಣವು ದೊಡ್ಡ ವ್ಯಾಪಾರ ಬಂದರಾಗಿದ್ದು ನದಿ ಅಥವಾ ಸಮುದ್ರದ ದಂಡಯ ಮೇಲೆ ನೆಲೆಸಿತ್ತು. ಧೋಣಮುಖವೂ ಕೂಡ ನದೀ ತೀರದ ಅಥವಾ ಸಮುದ್ರ ತೀರದ ಮೇಲೆ ನೆಲೆಸಿದ್ದ ಮಾರುಕಟ್ಟೆ ಪಟ್ಟಣವಾಗಿತ್ತು. ಈ ನಗರಕ್ಕೆ ವ್ಯಾಪಾರಿಗಳು ಭೇಟಿ ನೀಡುತ್ತಿದ್ದರು. ಖೇತವೂ ಕೂಡ ನದಿಯ ಹತ್ತಿರದ ಒಂದು ಬಯಲು ಪ್ರದೇಶ ಅಥವಾ ಅರಣ್ಯದಲ್ಲಿ ನೆಲೆಸಿದ್ದ ಗೋಡೆಗಳನ್ನು ಹೊಂದಿದ್ದ ಸಣ್ಣ ಪಟ್ಟಣವಾಗಿತ್ತು. ನಿಗಮವೂ ಕೂಡ ಮಾರುಕಟ್ಟೆ ಪಟ್ಟಣವಾಗಿತ್ತು. ಆದರೆ ಅದು ಪ್ರಮುಖವಾಗಿ ಕುಶಲಕರ್ಮಿಗಳನ್ನು ಹೊಂದಿತ್ತು. ರಾಜಧಾನಿಯ ಇನ್ನೊಂದು ಜಿಲ್ಲೆಯ ಮಾದರಿಯ ಪಟ್ಟಣವಾಗಿದ್ದು ವಿಸ್ತಾರವಾದ ಯೋಜನೆಯನ್ನು ಒಳಗೊಂಡಿತ್ತು. ಇದಕ್ಕೆ ಗೋಡೆಗಳು ಹಾಗೂ ಕೊತ್ತಲುಗಳ ಪಟ್ಟಿಯಿದ್ದು ಕಂದಕಗಳು ಹಾಗೂ ಸೇನಾ ಹೊರನೆಲೆಗಳು ಇವುಗಳನ್ನು ಸುತ್ತುವರೆದಿದ್ದವು. ರಾಜಧಾನಿಯ ಒಳಗೆ ಅರಮನೆ ಉನ್ನತ ಅಧಿಕಾರಿಗಳು, ಸೈನಿಕರ ವಸತಿ ನೆಲೆಗಳು ಮತ್ತು ಅಂಗಡಿಗಳಿಗಾಗಿ ಪ್ರತ್ಯೇಕವಾದ ಸ್ಥಳಗಳನ್ನು ನೀಡಲಾಗಿತ್ತು.

ಇದು ಕೆರೆಗಳು ಕೋಟೆಗಳು, ದೇವಾಲಯಗಳು, ಮಧ್ಯದಂಗಡಿಗಳು ಹಾಗೂ ವೇಶ್ಯಾಗೃಹಗಳನ್ನು ಹೊಂದಿತ್ತು. ದುರ್ಗವು ಕೋಟೆಯನ್ನು ಹೊಂದಿದ ಪಟ್ಟಣವಾಗಿದ್ದು, ಯುದ್ಧ ಸಾಮಗ್ರಿಗಳನ್ನು ಶೇಖರಿಸಿಡುವ ಶಾಲೆಯನ್ನು ಹೊಂದಿತ್ತು. ಹಾಗೆಯೇ ಆಹಾರ ಪದಾರ್ಥಗಳಿಂದ ತುಂಬಿತ್ತು. ಇದು ಮಂತ್ರಿಗಳು ಹಾಗೂ ರಾಜರಿಬ್ಬರ ಕೇಂದ್ರಸ್ಥಾನವಾಗಿದ್ದಿತು ಹಾಗೂ ಸೇನಾ ಪಟ್ಟಣವೂ ಆಗಿತ್ತು. ಕೋಟೆಗಳನ್ನು ಮೊದಲು ಎಂಟು ವರ್ಗಗಳಾಗಿ ವರ್ಗೀಕರಿಸಲಾಗುತ್ತದೆ. ಈ ಕೋಟೆಗಳನ್ನು ಅವುಗಳ ಸ್ಥಾನಕ್ಕೆ ತಕ್ಕಂತೆ ಮತ್ತಷ್ಟು ವಿಭಾಗಗಳಾಗಿ ವಿಂಗಡಿಸಲಾಗಿದೆ. ಹಲವು ಸೇನಾ ವಸಾಹತುಗಳೂ ಕೂಡ ಬಹಳ ಪ್ರಸಿದ್ಧವಾಗಿದ್ದವು. ಈ ರೀತಿಯಾಗಿ ಶಿಬಿರ ಎಂಬುದು ರಾಜನ ಸೇನೆಯ ವಿಜಯದ ಶಿಬಿರವಾಗಿತ್ತು. ಸೇನ ಮುಖ ಎಂಬುದು ಒಂದು ಸೇನಾ ನೆಲೆಯಾಗಿದ್ದು ಇದೂ ಒಂದು ಉಪನಗರ ಪಟ್ಟಣವಾಗಿತ್ತು. ಇದು ಮುಖ್ಯ ನಗರಕ್ಕಿಂತ ಸ್ವಲ್ಪ ದೂರದಲ್ಲಿತ್ತು ಹಾಗೂ ಅದನ್ನು ರಕ್ಷಿಸುತ್ತಿತ್ತು. ಸ್ಥಾನಿಯವು ಸ್ಥಳೀಯ ಕೋಟೆಯ ನಗರವಾಗಿದ್ದು ರಾಜನ ಕ್ಷೇತ್ರವಾಗಿದ್ದಿತು ಹಾಗೂ ಕಾವಲು ಪಡೆ ಮತ್ತು ಕೋಟೆಯ ರಕ್ಷಣಾಪಡೆಯನ್ನು ಹೊಂದಿತ್ತು. ಆದರೆ ಇದು ಶಾಶ್ವತವಾದ ರಾಜಧಾನಿಯಾಗಿರಲಿಲ್ಲ. ಇನ್ನೊಂದು ರೀತಿಯ ಪಟ್ಟಣವು ಶಿಕ್ಷಣದ ಉದ್ದೇಶವನ್ನು ಹೊಂದಿ ನಿರ್ಮಿಸಿದ್ದುದಾಗಿತ್ತು. ಇದರಲ್ಲಿ ಗುರುಗಳು ಹಾಗೂ ಶಿಷ್ಯರಿದ್ದರು. ಇನ್ನೊಂದು ವರ್ಗದಲ್ಲಿ ದೇವಾಲಯ ಪಟ್ಟಣಗಳಿದ್ದವು. ಇವುಗಳು ತಮ್ಮದೇ ಆದ ವೈಶಿಷ್ಟ್ಯತೆಗಳನ್ನು ಹೊಂದಿದ್ದವು. ದೇವಾಲಯ ಪಟ್ಟಣಗಳ ಜೊತೆಗೆ ಯಾತ್ರಿಕರನ್ನು ಆಕರ್ಷಿಸುವ ಪವಿತ್ರ ನಗರಗಳೂ ಇದ್ದವು. "ಮಾಯಾಮಾತಾ" ಪ್ರಕಾರ ಹದಿನಾಲ್ಕು ವಿವಿಧ ಹಳ್ಳಿಗಳು, ಪಟ್ಟಣಗಳು ಹಾಗೂ ಕೋಟೆಗಳು ಇದ್ದವು. ಕೆಲವೊಮ್ಮೆ ಈ ವರ್ಗೀಕರಣವನ್ನು ಧ್ವಜ ಅಥವಾ ಆ ಸ್ಥಳದ ಬ್ರಾಹ್ಮಣ ನಿವಾಸಿಗಳ ಸಂಖ್ಯೆಯ ಆಧಾರದ ಮೇಲೆ ಅಥವಾ ಇನ್ನೂ ಕೆಲವೊಮ್ಮೆ ಅಲ್ಲಿನ ಸ್ಥಳದ ಆಧಾರದ ಮೇಲೆ ಅಥವಾ ಆ ಜಾಗದ ಪರಿಧಿಯ ಮೇಲೆ ಮಾಡಲಾಗುತ್ತಿತ್ತು.[25]

3.7 ಮಧ್ಯಕಾಲೀನ ನಗರ

ಮಧ್ಯಕಾಲೀನ ಯುಗದಲ್ಲಿ ಸಾಮಾನ್ಯವಾಗಿ ನಗರಗಳು ದೇವಾಲಯ ಮಾರುಕಟ್ಟೆ ಹಾಗೂ ಬಗೆ ಬಗೆಯ ವೃತ್ತಿಗಳ ಜನಸಮೂಹವನ್ನು ಹೊಂದಿದ್ದವು. ಗ್ರಾಮೀಣ ವಸಾಹತುಗಳಿಗಿಂತ ಗಾತ್ರ, ಜನಸಾಂಧ್ರತೆ ಹಾಗೂ ವೈವಿಧ್ಯತೆಯಲ್ಲಿ ಭಿನ್ನವಾಗಿದ್ದ ಈ ಸ್ಥಳಗಳು ತಮ್ಮ ಸುತ್ತಮುತ್ತಲ ವಾತಾವರಣಕ್ಕಿಂತ ವಿಭಿನ್ನವಾದ ತಮ್ಮದೇ ಆದ ವಿಶಿಷ್ಟ ಲಕ್ಷಣಗಳನ್ನು ಬೆಳೆಸಿಕೊಂಡಿದ್ದವು. ಆದ ಕಾರಣ ಈ ಸ್ಥಳಗಳು ನಗರ ಕೇಂದ್ರಗಳಾಗಿ ಗುರುತಿಸಿಕೊಳ್ಳುವ ಅರ್ಹತೆಯನ್ನು ಪಡೆದವು.

ಮಧ್ಯಕಾಲೀನ ಭಾರತೀಯ ನಗರವು ಹೆಚ್ಚು ಜನವಸತಿ ಹೊಂದಿದ ಬಹಳ ಕಿರಿದಾದ ಸ್ಥಳದೊಂದಿಗೆ ಒಂದು ಆಡಳಿತ ಅಂಗ ಹಾಗೂ ವ್ಯಾಪಾರ ಮತ್ತು ಕೈಗಾರಿಕೆಯನ್ನು ತಮ್ಮ ಆರ್ಥಿಕ ಉತ್ಪಾದಕ ಚಟುವಟಿಕೆಗಳು ಎಂದು ತಿಳಿದಿದ್ದ ಸ್ಥಳ ಎಂದು ಹೇಳಬಹುದು.[26] ಸಮಕಾಲೀನ ಆಧಾರಗಳನ್ನು ಅಧ್ಯಯನ ಮಾಡುವುದರಿಂದ ನಗರ ಕೇಂದ್ರಗಳ ಹುಟ್ಟು ಹಾಗೂ ಬೆಳವಣಿಗೆಗೆ ಕಾರಣವಾಗುತ್ತಿರುವ ಕೆಲವು ಕ್ಷೇತ್ರಗಳಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಶಕ್ತಿಗಳ ಪಾತ್ರವನ್ನು ಗುರುತಿಸುವುದು ಬಹಳ ಸುಲಭವಾಗುತ್ತದೆ. ಇಂತಹ ಸನ್ನಿವೇಶದಲ್ಲಿ ನಗರೀಕರಣವು ಚಲನೆಯ ಪ್ರಕ್ರಿಯೆಯಾಗಿ ಹಲವು ಪರಿವರ್ತನೆಗಳನ್ನು ಉಂಟು ಮಾಡಿತು. ಕೃಷಿಯಲ್ಲಿನ ಅಭ್ಯುದಯ, ಬೆಳೆಯುತ್ತಿರುವ ವ್ಯಾಪಾರ ಹಾಗೂ ವಾಣಿಜ್ಯ ನಾಣ್ಯಗಳ ಚಲಾವಣೆಯಲ್ಲಿನ ಏರಿಕೆ, ಸಾರಿಗೆ ಹಾಗೂ ಸಂಪರ್ಕಗಳ ಉತ್ತಮ ನಿರ್ವಹಣೆ, ಗ್ರಾಮಗಳನ್ನು ನಗರಗಳನ್ನಾಗಿ ಪರಿವರ್ತಿಸುವುದು, ಜನವಲಸೆ, ಸಮಾಜದಲ್ಲಿ ಸಂಘರ್ಷ ಹಾಗೂ ಉದ್ವೇಗ ಇವುಗಳೆಲ್ಲವೂ ನಗರೀಕರಣದ ಸೂಚಿಗಳಾಗಿವೆ. ಇದಕ್ಕೆ ಪ್ರತಿಯಾಗಿ ಇವುಗಳು ಅಭಿವೃದ್ಧಿ ಹೊಂದಿದ ಸಾಮಾಜಿಕ ಆರ್ಥಿಕ ಸ್ಥಿತಿಯನ್ನು ಸೂಚಿಸುತ್ತವೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ನಗರಗಳು ಅಭಿವೃದ್ಧಿಯ ಒಂದು ನಿರ್ದಿಷ್ಟ ಹಂತವನ್ನು ತಲುಪಿರುವ ಒಂದು ಜನಸಮೂಹದ ಸಾಮಾಜಿಕ ಹಾಗೂ ಆರ್ಥಿಕ ಜೀವನದಲ್ಲಿನ ಕೇಂದ್ರ ಬಿಂದು ಹಾಗೂ ಉತ್ಪಾದಕ ವಸ್ತುಗಳಾಗಿ ಅಸ್ಥತ್ವಕ್ಕೆ ಬಂದಿವೆ ಮತ್ತು ನಗರೀಕರಣ ಪ್ರಕ್ರಿಯೆಯು ಅಭಿವೃದ್ಧಿಯ ಸ್ಥಿತಿಯನ್ನು ತಲುಪುತ್ತದೆ.

3.8 ನಗರೀಕರಣ ಒಂದು ಪ್ರಕ್ರಿಯೆ

ಈ ನಗರೀಕರಣ ಪ್ರಕ್ರಿಯೆಯು ವಿವಿಧ ಸ್ಥರಗಳಲ್ಲಿ ಸಂಭವಿಸಬಹುದು. ಆಡಳಿತ, ರಾಜಕೀಯ, ವಾಣಿಜ್ಯ, ಧಾರ್ಮಿಕ ಇತ್ಯಾದಿ ಕೆಲವು ವರ್ಷಗಳ ಕಾಲ ಸಣ್ಣ ಹಾಗೂ ಮಧ್ಯಮ ಗಾತ್ರದ ನಗರಗಳ ಬೆಳವಣಿಗೆ ಸಾಗಿತ್ತು. ಅರಸರು ಅನೇಕ ಆಡಳಿತ ಹಾಗೂ ರಾಜಕೀಯ ಕೇಂದ್ರಗಳನ್ನು ಸ್ಥಾಪಿಸಿದರು. ರಾಜಕೀಯ ಕೇಂದ್ರಗಳ ಜಾಲವೇ ಇತ್ತು. ಇವುಗಳನ್ನು ರಾಜರು ಹಾಗೂ ಮುಖ್ಯಸ್ಥರ ನಡುವೆ ವೈವಾಹಿಕ ಸಂಬಂಧಗಳನ್ನು ಏರ್ಪಡಿಸುವ ಮೂಲಕ ಬಲಪಡಿಸಲಾಗಿತ್ತು. ಸಣ್ಣ ರಾಜಧಾನಿಗಳು ಹಾಗೂ ಸಣ್ಣ ಸಂಸ್ಥಾನಗಳೂ ಇದ್ದವು. ಇವುಗಳ ರಾಜಧಾನಿಯು ಗಾತ್ರದಲ್ಲಿ ಮಧ್ಯಮ ಗಾತ್ರದಿಂದ ಹಿಡಿದು ಸಣ್ಣ ನಗರಗಳೂ ಆಗಿದ್ದವು. ಈ ನಗರಗಳ ಸಾಮಾಜಿಕ ರಚನೆ ಹಾಗೂ ಸಂಘಟನೆಯನ್ನು ಸಾಮ್ರಾಜ್ಯದ ರಾಜಧಾನಿಗಳ ಸಾಲಿನಲ್ಲಿ ವಿನ್ಯಾಸಗೊಳಿಸಲಾಗಿತ್ತು. ಹಾಗೂ ಸಣ್ಣ ಪುಟ್ಟ ಅರಸರು, ಮಂತ್ರಿಗಳು ಮುಖ್ಯಸ್ಥರು ಮತ್ತು

ಭೂಮಾಲೀಕರು ರಾಜರು ಹಾಗೂ ಸಾಮ್ರಾಟರ ಉನ್ನತ ಜೀವನ ಶೈಲಿಯನ್ನು ಅಳವಡಿಸಿ ಕೊಂಡಿದ್ದರು.[27] ಸಂತೆಗಳ (ಮಾರುಕಟ್ಟೆ ನಗರಗಳು) ಬೆಳವಣಿಗೆಯು ವ್ಯಾಪಾರ, ವಾಣಿಜ್ಯಗಳು ವರ್ತಕರಿಗೆ ಹೆಚ್ಚು ರಕ್ಷಣೆ ಸಿಗುವ ರಾಜಧಾನಿಗಳಲ್ಲಿ ಕೇಂದ್ರೀಕೃತಗೊಳ್ಳಲು ಇಚ್ಛಿಸಿದರೂ ಒಂದು ಭಿನ್ನವಾದ ವಿಧಾನವನ್ನು ಅನುಸರಿಸಿತು. ಅವುಗಳನ್ನು ಸೂಕ್ತವಾದ ಹಿನ್ನಾಡು ಹಾಗೂ ಸಂಪರ್ಕ ಮಾರ್ಗಳ ಲಭ್ಯತೆಯ ಆಧಾರದ ಮೇಲೆ ಸಂಘಟಿಸಲಾಯಿತು. ಒಳನಾಡು ಸಂತೇಪೇಟೆಗಳು (ಮಾರುಕಟ್ಟೆ ನಗರಗಳು) ಹಾಗೂ ಸಮುದ್ರ ಬಂದರುಗಳೆರಡೂ ಇದ್ದವು. ಸಂತೆಪೇಟೆಗಳ ಉಳಿವು ಹಾಗೂ ಅಳಿವು, ರಾಜಕೀಯ ಭದ್ರತೆ ದೊರಕಿದರೂ, ಹಿನ್ನಾಡಿನ ಪದಾರ್ಥಗಳು, ಸಾರಿಗೆ ದೊಡ್ಡ ನಗರಗಳ ವ್ಯಾಪಾರ ಮತ್ತು ವಾಣಿಜ್ಯ ಹಾಗೂ ಸಮುದ್ರ ವ್ಯಾಪಾರದ ಮಾರ್ಗಗಳನ್ನು ಕಂಡು ಹಿಡಿಯುವುದರ ಆಧಾರದ ಮೇಲೆ ಇತ್ತು. ಆದರೂ ಕಾಳು ಪದಾರ್ಥಗಳು ಹಾಗೂ ಕೆಲವು ವಾಣಿಜ್ಯ ಸರಕಿನ ಒಳನಾಡಿನ ವ್ಯಾಪಾರದ ಮೇಲೆ ಅವಲಂಬಿತವಾಗಿದ್ದ ಅನೇಕ ಸಂತೆಪೇಟೆಗಳು ರಾಜಕೀಯ ಅಸ್ಥಿರತೆ ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಯ ಬದಲಾವಣೆಯ ಮಧ್ಯೆಯೂ, ನಿರಂತರವಾಗಿ ಕಾರ್ಯ ಸಾಗಿಸುತ್ತಾ ಹೋದವು. ವಿವಿಧ ವಲಯದ ಶ್ರೇಣಿಯ ವಾಣಿಜ್ಯ ಕೇಂದ್ರಗಳ ಒಂದು ಜಾಲವಿತ್ತು. ಸಂತೇಪೇಟೆಗಳು ಹಳ್ಳಿಗಳಿಗಿಂತ ಹೆಚ್ಚಿನ ಸಂಖ್ಯೆಯ ವರ್ತಕರು ಹಾಗೂ ಕುಶಲಕರ್ಮಿಗಳನ್ನು ಹೊಂದಿದ್ದವು. ಹೆಚ್ಚಿದ ಹಣದ ಚಲಾವಣೆಯಿಂದಾಗಿ ಕೆಲವು ನಗರ ಸರಕುಗಳ ಬಳಕೆ ಹಾಗೂ ನಗರ ಜೀವನ ಶೈಲಿಯನ್ನು ಅಳವಡಿಸಿಕೊಳ್ಳುವುದಕ್ಕೆ ನಾಂದಿಯಾಯಿತು. ಸಣ್ಣ ದೇವಾಲಯಗಳು ಹಾಗೂ ಪವಿತ್ರ ಪಟ್ಟಣಗಳ ಪುನರುತ್ಥಾನವೂ ನಡೆಯಿತು. ಇದರಂತೆಯೇ ವಿವಿಧ ಮತಧರ್ಮಗಳ ಪವಿತ್ರ ಭೂಗೋಳದ ಪುನರುತ್ಥಾನವೂ ಸಾಗಿತು. ಈ ನಗರಗಳು ವಿವಿಧ ಬಗೆಯ ಧಾರ್ಮಿಕ ಶರಣರನ್ನು ಹೊಂದಿದ ಚಿಕ್ಕ ಪ್ರದೇಶದ ಪವಿತ್ರ ಕೇಂದ್ರಗಳಾಗಿ ಕಾರ್ಯ ನಿರ್ವಹಿಸಿದವು. ಶ್ರೇಣಿ ವ್ಯವಸ್ಥೆಯ ಪವಿತ್ರ ಕೇಂದ್ರಗಳ ಹಾಗೂ ಗ್ರಾಮೀಣ ಜಾಲಗಳ ಭಾಗವಾಗಿ ನಿಪುಣರ ಒಂದು ಜಾಲವು ನಿರ್ಮಾಣವಾಯಿತು. ರಾಜಾಶ್ರಯದಲ್ಲಿ ದೊಡ್ಡ ಪವಿತ್ರ ನಗರಗಳು ಹಾಗೂ ರಾಜಧಾನಿಗಳಲ್ಲಿ ವಿಸ್ತಾರಗೊಂಡಿದ್ದ ಶ್ರೇಷ್ಠ ಸಂಪ್ರದಾಯಗಳ ಲಕ್ಷಣಗಳನ್ನು ಇದು ತನ್ನಲ್ಲಿ ಮೇಳೈಸಿಕೊಂಡಿತ್ತು.

ಈ ರೀತಿಯಾಗಿ ನಗರೀಕರಣವು ವಿವಿಧ ರೀತಿಗಳ ಹಾಗೂ ಹಂತಗಳಲ್ಲಿ ನಗರ ಕೇಂದ್ರಗಳ ಜಾಲದಲ್ಲಿ ಕಾರ್ಯೋನ್ಮುಖವಾಗಿದ್ದ ಒಂದು ಸಂಕೀರ್ಣ ಪ್ರಕ್ರಿಯೆಯಾಗಿತ್ತು. ಸಣ್ಣ ನಗರಗಳ ಬೆಳವಣಿಗೆಯು ದೊಡ್ಡ ನಗರಗಳಿಂದ ಸಣ್ಣ ನಗರಗಳಿಗೆ ನಗರ ಪ್ರಭಾವವನ್ನು ಬೀರಲು

ಸೂಕ್ತವಾದ ಅಡಿಪಾಯವನ್ನು ಒದಗಿಸಿಕೊಟ್ಟಿತು. ಸಣ್ಣ ನಗರಗಳ ಮೂಲಕ ಹಳ್ಳಿಗರು ನಗರ ಜೀವನ ಶೈಲಿಗಳ ರುಚಿಯನ್ನು ಕಂಡರು. ಈ ತೆರನದ ಜಾಲದಿಂದಾಗಿ ನಗರದ ಸಾಮಾಜಿಕ ರಚನೆ ಹಾಗೂ ಸಂಘಟನೆಯೂ ಕೂಡ ಗ್ರಾಮೀಣ ಜನಜೀವನದ ಮತ್ತು ಸಣ್ಣ ಸಂಪ್ರದಾಯದ ಲಕ್ಷಣಗಳನ್ನೂ ಪಡೆದವು.

3.9 ಹಳ್ಳಿ ಮತ್ತು ಪಟ್ಟಣ ವ್ಯತ್ಯಾಸ

ಈ ಅಧ್ಯಯನಕ್ಕೆ ಸಂಬಂಧಿಸಿದ ಇನ್ನೊಂದು ಸಮಸ್ಯೆಯೆಂದರೆ (ಗ್ರಾಮೀಣ ಪ್ರದೇಶಗಳು) ಹಳ್ಳಿಗಳು ನಗರಗಳಿಗಿಂತ ಭಿನ್ನ ಎಂಬುವ ಅಂಶವಗಿದೆ. ಒಂದು ಪಟ್ಟಣ ಅಥವಾ ನಗರ ಕೇಂದ್ರವು ಹಳ್ಳಿ ಅಥವಾ ಗ್ರಾಮೀಣ ವಸಾಹತುವಿಗಿಂತ ವಿಭಿನ್ನವಾಗಿದೆ. ಗಾತ್ರ, ಸಾಂಧ್ರತೆ ಹಾಗೂ ವೃತ್ತಿಗಳಲ್ಲಿನ ವೈವಿಧ್ಯತೆಗಳ ದೃಷ್ಟಿಯಲ್ಲಿ ಒಂದು ಪಟ್ಟಣವು ಒಂದು ಹಳ್ಳಿಗಿಂತ ಭಿನ್ನವಾಗಿರುತ್ತದೆ. ಈ ಸಂಬಂಧವಾಗಿ ನಗರ ಅಧ್ಯಯನಗಳಲ್ಲಿ ದ್ವಿಭಜನ ಅಧ್ಯಯನವನ್ನು ಅನುಸರಿಸಬೇಕೇ ಅಥವಾ ಅವಿಚ್ಛಿನ್ನ ವಿಧಾನವನ್ನು ಅನುಸರಿಸಬೇಕೇ ಎಂಬುದು ಚರ್ಚಾಸ್ಪದವಾಗಿದೆ.[28] ಪೋಕುಕ್ ಪ್ರಕಾರ ಯಾವುದೇ ಗ್ರಾಮೀಣ ನಗರ ವಿರೋಧಿಗಳಾಗಲೀ ಅಥವಾ ಗ್ರಾಮೀಣನಗರ ದ್ವಿಭಜನೆಯಾಗಲೀ ನಡೆನುಡಿಯಲ್ಲಿ ಪೂರ್ವದ ಸಮಾಜಗಳಲ್ಲಿ ಕಂಡುಬರುವುದಿಲ್ಲ. ಮುಂದೆ ಹಳ್ಳಿ ಹಾಗೂ ಸಾಂಪ್ರದಾಯಿಕ ನಗರವೆರಡು ಒಂದೇ ನಾಗರೀಕತೆಯ ಅಂಗಗಳಾಗಿರುವುದರಿಂದ ಭಾರತದಲ್ಲಿ ಇವುಗಳ ನಡುವೆ ಯಾವುದೇ ವಿಭಜನೆ ಇಲ್ಲ ಎಂದು ವಾದಿಸಲಾಗಿದೆ.[29]

ಎಸ್.ಪಿ.ಮಿಶ್ರಾರವರ ಪ್ರಕಾರ ಮೂಲಭೂತವಾಗಿ ಕೃಷಿ ಆಧಾರಿತ ಆರ್ಥಿಕತೆಯಲ್ಲಿ ಗ್ರಾಮೀಣ ನಗರ ಅಸ್ತಿತ್ವವು ಬಹಳ ಪ್ರಮುಖವಾಗಿದೆ. ಹಲವು ವಿಧಗಳಲ್ಲಿ ಭಾರತೀಯ ನಗರವು ಗ್ರಾಮಗಳ ವಿಸ್ತರಣೆಯಾಗಿದೆ ಹಾಗೂ ಈ ಪ್ರಕ್ರಿಯೆಯಲ್ಲಿ ಅದು ಸಾಮಾಜಿಕ ಏಕತೆಗಳು ಹಾಗೂ ಪ್ರವೃತ್ತಿಗಳನ್ನು ಹೊಂದಿದೆ.

ನಗರದ ಆರ್ಥಿಕ ಚಟುವಟಿಕೆಗಳು ಗ್ರಾಮಗಳಲ್ಲಿ ಆರಂಭಗೊಂಡ ಚಟುವಟಿಕೆಗಳ ವಿಸ್ತರಣೆ ಮಾತ್ರವಾಗಿತ್ತು. ಇವುಗಳ ಸಂಬಂಧಗಳು ಎಷ್ಟು ನಿಕಟ ಹಾಗೂ ವ್ಯಾಪಕವೆಂದರೆ ನಗರವನ್ನು ಅಸ್ತಿತ್ವಕ್ಕೆ ತಂದ ಪ್ರದೇಶ ಅಥವಾ ಅದರ ಆರ್ಥಿಕ ಚಟುವಟಿಕೆಗಳನ್ನು ಬೆಳೆಯಲು ಸಹಾಯ

ಮಾಡಿದ ಪ್ರದೇಶವನ್ನು ಬಿಟ್ಟು ಕೇವಲ ನಗರವನ್ನು ನೋಡುವುದು ನಮ್ಮ ಸಮೀಪ ದೃಷ್ಟಿ ದೋಷಕ್ಕೆ ಉದಾಹರಣೆಯಾಗಿದೆ.[30]

ಮತ್ತೊಂದು ಸನ್ನಿವೇಶದಲ್ಲಿ ನಗರ ಸಮುದಾಯವು ಆರ್ಥಿಕ ಹಾಗೂ ಸಾಮಾಜಿಕ ಸಾಧನಗಳಿಂದ ಹಾಗೂ ನಾಗರೀಕತೆಯ ಸಾಂಸ್ಕೃತಿಕ ಪರಿಸರದಿಂದ ನಿರ್ಮಾಣ ಮಾಡಲ್ಪಟ್ಟು ದೊಡ್ಡ ನಗರದಲ್ಲಿನ ಒಂದು ಉಪವ್ಯವಸ್ಥೆಯಾಗಿದೆ ಎಂದು ಹೇಳಲಾಗಿದೆ. ಇದು ಈ ಪರಿಪೂರ್ಣತೆಯನ್ನು ಪ್ರತಿಬಿಂಬಿಸುತ್ತದೆ ಹಾಗೂ ಅದರೊಳಗೆ ಕಾರ್ಯ ನಿರ್ವಹಿಸುತ್ತದೆ.[31] ಇದರ ಜೊತೆಗೆ ಭಾರತೀಯ ನಿರ್ಮಾಣವು ನಗರ ಹಾಗೂ ಗ್ರಾಮದ ನಡುವೆ ಯಾವುದೇ ನ್ಯಾಯಾಂಗ ವ್ಯತ್ಯಾಸವನ್ನು ಹೊಂದಿರಲಿಲ್ಲ.[32] ಇನ್ನೊಂದು ಪ್ರೋತ್ಸಾಹದಾಯಕ ಅಭಿಪ್ರಾಯವು ಪಿ.ಕೆ.ಆಚಾರ್ಯರಿಂದ ಮಾಡಲ್ಪಟ್ಟಿದೆ. ಅವರು ಬರೆಯುವಂತೆ "ಮಾನಸಾರ ಪ್ರಕಾರ ಹಳ್ಳಿ", ನಗರ ಹಾಗೂ ಕೋಟೆಯ ಮಧ್ಯೆ ಹೆಚ್ಚು ವ್ಯತ್ಯಾಸವಿಲ್ಲ. ನಗರವು ಗ್ರಾಮದ ವಿಸ್ತರಣೆಯಾಗಿದೆ.[33]

ಆದರೆ (ಸಂಶೋಧಕರು) ವಿದ್ವಾಂಸರು ವ್ಯಕ್ತಪಡಿಸಿರುವ ಮೇಲಿನ ಅಭಿಪ್ರಾಯಗಳು ಹಳ್ಳಿ ಹಾಗೂ ಸಾಂಪ್ರದಾಯಿಕ ನಗರದ ನಡುವಿನ ಸಾಮರಸ್ಯತೆಯ ಅತಿಯಾದ ಸರಳೀಕರಣವಷ್ಟೆ. ಧರ್ಮ, ಜಾತಿ ಹಾಗೂ ಬಂಧುತ್ವಗಳು ಹಳ್ಳಿಗಳು ಹಾಗೂ ನಗರಗಳೆರಡರಲ್ಲೂ ಸಾಮಾಜಿಕ ಸಂಘಟನೆಯ ಅಡಿಪಾಯಗಳಿಂದರೂ ಎರಡೂ ಸನ್ನಿವೇಶಗಳಲ್ಲಿನ ಇವುಗಳ ಕಾರ್ಯ ವೈಖರಿಯಲ್ಲಿ ಬಹಳ ಪ್ರಮುಖವಾದ ವ್ಯತ್ಯಾಸಗಳಿವೆ. ಸಾಂಪ್ರದಾಯಿಕ ನಗರ ಸನ್ನಿವೇಶದಲ್ಲಿ ಸಾಂಸ್ಥಿಕ ಚೌಕಟ್ಟು ಹಾಗೂ ನಿಯಂತ್ರಣಗಳಲ್ಲಿ ಕಾರ್ಯೋನ್ಮುಖವಾಗಿದ್ದ ಧರ್ಮ, ಜಾತಿ ಹಾಗೂ ಬಂಧುತ್ವಗಳು ಗ್ರಾಮಗಳಲ್ಲಿ ಇವುವವುಗಳಿಗಿಂತ ಭಿನ್ನವಾಗಿದೆ. ಆದ್ದರಿಂದ ಸಾಂಪ್ರದಾಯಿಕ ಭಾರತದಲ್ಲಿ ಹಳ್ಳಿ ಹಾಗೂ ನಗರದ ನಡುವಿನ ವಿನ್ಯಾಸವು ಮುಂದುವರೆದರೂ ಸ್ಪಷ್ಟವಾದ ಸಂಘಟನಾ ವ್ಯತ್ಯಾಸಗಳಿದ್ದವು ಎಂಬ ಅಭಿಪ್ರಾಯವು ಸತ್ಯವಾಗುತ್ತದೆ.[34]

ಆರ್ಥಿಕ ದೃಷ್ಟಿಯಲ್ಲಿ ನೋಡಿದಾಗ ಹಳ್ಳಿ ಹಾಗೂ ನಗರದ ನಡುವಿನ ವಿಶಿಷ್ಟ ಅಂಶವೆಂದರೆ ಹಳ್ಳಿಯ ಮುಖ್ಯವಾಗಿ ತನ್ನ ಸ್ವಂತ ಉತ್ಪಾದನೆಗೆ ತನ್ನದೇ ಆದ ಪೂರೈಕೆಯನ್ನು ಅವಲಂಬಿಸಿತ್ತು. ಆದರೆ ಇದಕ್ಕೆ ಭಿನ್ನವಾಗಿ ನಗರವು ಜೀವನ ನಿರ್ವಹಣಾ ಸಾಮಗ್ರಿಗಳ ಹೊರಗಿನ ನಿರಂತರ ಪೂರೈಕೆಯ ಮೇಲೆ ಹೆಚ್ಚಾಗಿ ಅವಲಂಬಿತವಾಗಿತ್ತು. ಈ ಅವಲಂಬನೆಗಳು ಹಲವಾರು ಪ್ರಮಾಣ

ಗಳಿದ್ದವು. ಕೆಲವು ನಗರಗಳು ಬಹುಶಃ ದೊಡ್ಡ ಹಳ್ಳಿಗಳಿಗಿಂತೇನು ಉತ್ತಮವಾಗಿರಲಿಲ್ಲ. ಆದರೂ ಹಳ್ಳಿ ಹಾಗೂ ನಗರಗಳ ನಡುವಿನ ವ್ಯತ್ಯಾಸವನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗುತ್ತದೆ. ಎರಡನೆಯದಾಗಿ ನಗರಗಳಲ್ಲಿ ಕರಕುಶಲ ವಸ್ತುಗಳನ್ನು ನಿರ್ಮಿಸಲು ಆಸಕ್ತರಾದ ಅಪಾರ ಜನಸ್ತೋಮವಿತ್ತು. ಇವುಗಳನ್ನು ಸ್ಥಳೀಯ ಬಳಕೆಗಾಗಿ ಉತ್ಪಾದಿಸುತ್ತಿರಲಿಲ್ಲ. ಆದರೆ ದೊಡ್ಡ ಮಾರುಕಟ್ಟೆಗಾಗಿ ತಯಾರಿಸಲಾಗುತ್ತಿತ್ತು. ಆಹಾರದ ಉತ್ಪಾದಕರಾಗಿ ಕೃಷಿಯು ಗ್ರಾಮೀಣ ಬಂಧುಗಳ ಪ್ರಮುಖ ಕಸುಬಾಗುತ್ತದೆ. ಬೇರೆ ಕಸುಬುಗಳು ಇರುವುದೇ ಆದರಲ್ಲಿ ಅವುಗಳ ಕೃಷಿಗೆ ಅಧೀನವಾಗಿರುತ್ತವೆ. ಕೆಲವೊಮ್ಮೆ ಹಳ್ಳಿಯಲ್ಲಿ ಸ್ಥಳೀಯ ಮಾರುಕಟ್ಟೆ ಇದ್ದಿರಬಹುದು ಆದರೆ ಅದು ಹೆಚ್ಚಾಗಿ ಪರಾವಲಂಬಿ ಸ್ಥಿತಿಯಲ್ಲಿ ಸಾಗುತ್ತಿರುತ್ತದೆ.

ಇನ್ನೊಂದೆಡೆಯಲ್ಲಿ ನಗರಗಳು ಕೃಷಿಗೆ ಮುಕ್ತವಾಗಿ ಜೀವಿಸುತ್ತವೆ. ಹಾಗೂ ನಗರವಾಸಿಗಳು ಕೃಷಿಯಲ್ಲದ ವೃತ್ತಿಗಳನ್ನು ಕೈಗೆತ್ತಿಕೊಳ್ಳುತ್ತಾರೆ. ವ್ಯಾಪಾರ ಹಾಗೂ ಉತ್ಪಾದನೆ, ವಾಣಿಜ್ಯ ಹಾಗೂ ಕುಶಲಕೈಗಾರಿಕೆಗಳು ನಗರವಾಸಿಗಳ ಪ್ರಮುಖ ಕಸುಬುಗಳು ಅವರು ಇತರೆ ತೃತೀಯ ಉದ್ಯೋಗಗಳನ್ನು ಬಯಸುತ್ತಾರೆ. ನಗರದ ಇನ್ನೊಂದು ವಿಶಿಷ್ಟ ವೈಶಿಷ್ಟವು ಮಾರುಕಟ್ಟೆಯ ಅಸ್ತಿತ್ವ ಹಾಗೂ ಉಳಿಯುವಿಕೆಯಾಗಿದೆ ಹಾಗೂ ಮಾರುಕಟ್ಟೆಯು ಅದರ ಪ್ರಮುಖ ವಸ್ತುಗಳಲ್ಲಿ ಒಂದಾಗಿದೆ.

ಸಮಕಾಲೀನ ಹಾಗೂ ಸಾಂಪ್ರದಾಯಿಕ ಸಾಹಿತ್ಯದಲ್ಲಿ ಹಳ್ಳಿ, ಪಟ್ಟಣ ಹಾಗೂ ನಗರಗಳನ್ನು ಗ್ರಾಮ, ಪುರ, ನಗರ ಹಾಗೂ ಪಟ್ಟಣವೆಂಬ ಪದಾವಳಿಗಳನ್ನು ಬಳಸುವುದರ ಮೂಲಕವಾಗಿ ಈ ಭಿನ್ನತೆಯನ್ನು ಅಳೆಯಲಾಗುತ್ತಿತ್ತು. ಕೆ.ಸಿ.ಜೈನ್ ರವರ ಪ್ರಕಾರ ಸಂಸ್ಕೃತ ಸಾಹಿತ್ಯದಲ್ಲಿ ನಗರ, ಪುರ ಪುರಿ, ಪಟ್ಟಣವೆಂಬ ಪದಗಳನ್ನು ಅವುಗಳು ಬದಲಾಗದಂತೆ ಕೇವಲ ನಗರ ಪ್ರದೇಶಗಳಿಗೆ ಮಾತ್ರ ಅಳವಡಿಸಲಾಗಿದೆ. ಆದ್ದರಿಂದ ಈ ಪದಗಳಲ್ಲಿ ಯಾವುದೊಂದನ್ನು ಹೊಂದಿರುವ ಪ್ರದೇಶ ಪ್ರದೇಶಗಳು ಪಟ್ಟಣ ಅಥವಾ ನಗರವಾಗಿರುತ್ತದೆ ಎಂದು ಅಭಿಪ್ರಾಯ ಪಡುವುದರಲ್ಲಿ ಸಮಂಜಸತೆಯಿದೆ.[35]

ಆ ಕಾಲದ ಪ್ರವಾಸಿಗರು ಕೂಡ ನಗರಗಳು, ಪಟ್ಟಣಗಳು ಹಾಗೂ ಹಳ್ಳಿಗಳ ಮಧ್ಯೆ ಅಂತರವನ್ನು ಮಾಡುತ್ತಾರೆ. ಮಾಧವನ ಪ್ರಕಾರ ಒಂದು ಪಟ್ಟಣವು ದೊಡ್ಡ ಗಾತ್ರದ ಜನಸಂಖ್ಯೆಯನ್ನು ಹೊಂದಿತ್ತು.[36]

ಮಿತಾಕ್ಷರನು ವಿವರಿಸುವಂತೆ ನಗರವು ಅಪಾರ ಜನಸಂಖ್ಯೆಯ ಸಮೂಹವಾಗಿತ್ತು ಹಾಗೂ ಪಟ್ಟಣವು ಹಳ್ಳಿಯ ಎರಡರಷ್ಟಿತ್ತು ಹಾಗೂ ನಗರವು ನಾಲ್ಕು ಪಟ್ಟ ದೊಡ್ಡದಾಗಿತ್ತು.[37] ಒಂದು ನೂರು ಧನುಸ್ (ಒಂದು ಮಾರಿನ ಅಳತೆ ಧನುಸ್) ಜಾಗವನ್ನು ಒಂದು ಹಳ್ಳಿ ಹಾಗೂ ಜಮೀನಿನ ನಡುವೆ ಬಿಡಬೇಕು. ಸಣ್ಣಪಟ್ಟವಾದರೆ ಇನ್ನೂರು ಹಾಗೂ ನಗರವಾದರೆ ನಾಲ್ಕು ನೂರು ಧನುಸ್ ಜಾಗವನ್ನು ಬಿಡಬೇಕು.[38] ಮಾನಸಾರ ಪ್ರಕಾರ ಅತೀ ಸಣ್ಣ ಪಟ್ಟಣ ಕೇಂದ್ರದ ಪರಿಮಾಣಗಳು 100x200 ದಂಡಗಳು (ಒಂದು ಮಾರು ಅಳತೆ) ಹಾಗೆಯೇ ಅತೀ ದೊಡ್ಡ ನಗರದ ಪರಿಮಾಣಗಳು 7200x14400 ದಂಡಗಳು ಪಟ್ಟಣವೊಂದರಲ್ಲಿ ಹನ್ನೆರಡು ದೊಡ್ಡ ಬೀದಿಗಳಿರಬೇಕು.[39]

ಅನುಕೂಲತೆಗಳು ಹಾಗೂ ಸೌಲಭ್ಯಗಳ ದೃಷ್ಟಿಯಲ್ಲಿ ನಗರವು ಹಳ್ಳಿಗಿಂತ ಉತ್ತಮವಾಗಿತ್ತು. ಸಮಕಾಲೀನ ಸಾಹಿತ್ಯದಲ್ಲಿ ಹಾಗೂ ವಿದೇಶಿ ಪ್ರವಾಸಿಗರು ಚಿತ್ರಿಸಿರುವ ವೈಭವ ಹಾಗೂ ಶ್ರೀಮಂತಿಕೆಯು ಈ ವಿಷಯದಲ್ಲಿ ನಗರಗಳು ಹಳ್ಳಿಗಳಿಗಿಂತ ಭಿನ್ನವಾಗಿದ್ದವೆಂಬುದನ್ನು ತೋರಿಸುತ್ತದೆ. ನಗರದಲ್ಲಿ ಮಾತ್ರ ಶಾಲೆಗಳು, ಆಸ್ಪತ್ರೆಗಳು ಹಾಗೂ ಇತರೆ ಸೌಲಭ್ಯಗಳನ್ನು ನೋಡಬಹುದಾಗಿದೆ.[40]

ಬೊಟೆರ್ ನಗರವನ್ನು ಈ ರೀತಿಯಾಗಿ ವಿವರಿಸುತ್ತಾನೆ. ಅದೊಂದು ಜನಗಳ ಸಮೂಹವಾಗಿದ್ದು ಒಂದೆಡೆ ಒಗ್ಗೂಡಿದ ಜನರ ಗುಂಪಾಗಿದೆ ಹಾಗೂ ಈ ಮೂಲಕ ಅವರು ಸಮೃದ್ಧ ಸುಖೀ ಜೀವನವನ್ನು ನಡೆಸುತ್ತಾರೆ.[41]

ಪ್ರಾಚೀನ ಹಾಗೂ ಮಧ್ಯಕಾಲೀನ ಯುಗಗಳಲ್ಲಿ ಪಟ್ಟಣಗಳು ಹಳ್ಳಿಗಿಂತ ಹೆಚ್ಚಾಗಿ ವ್ಯಾಪಾರವನ್ನು ಅಭಿವೃದ್ಧಿ ಪಡಿಸಿದರೂ ಪಟ್ಟಣಗಳ ಕೃಷಿ ಶೈಶಾವಸ್ಥೆಯ ಅನೇಕ ಲಕ್ಷಣಗಳನ್ನು ಹೊಂದಿದ್ದರು. ಅನೇಕ ಪಟ್ಟಣಗಳಲ್ಲಿ ಜನರು ಸುಮಾರು ಜಮೀನನ್ನು ಹೊಂದಿರುತ್ತಿದ್ದರೂ ಇದನ್ನು ತೋಟಗಳ ಜಮೀನಿಗಾಗಿ ಬಳಸಲಾಗುತ್ತಿತ್ತು ಹಾಗೂ ಪ್ರತೀ ಪಟ್ಟಣದ ಕೋಟೆಯ ಹೊರ ಭಾಗದಲ್ಲಿ ಅಥವಾ ಕೆಲವೊಮ್ಮೆ ಒಳಭಾಗದಲ್ಲೂ ಸಾಕಷ್ಟು ಪ್ರಮಾಣದ ವ್ಯವಸಾಯ ಯೋಗ್ಯ ಜಮೀನಿತ್ತು ಹಾಗೂ ಗೋಮಾಳವಿತ್ತು. ಪಟ್ಟಣಗಳು ಕೆಲವು ಕೃಷಿ ಲಕ್ಷಣಗಳನ್ನು ಹೊಂದಿದ್ದರೂ ನಗರ ಹಾಗೂ ಹಳ್ಳಿಯ ನಡುವಿನ ವ್ಯತ್ಯಾಸವನ್ನು ಸ್ಪಷ್ಟವಾಗಿ ನಿರೂಪಿಸಲಾಗಿತ್ತು.[42]

ಅಧ್ಯಾಯ 4

4.1 ನಗರ ಕೇಂದ್ರಗಳ ಉದಯ

ನಗರ ಅಧ್ಯಯನವು ನಗರಗಳ ಉದಯಕ್ಕೆ ಕಾರಣಗಳು ಹಾಗೂ ನಗರ ಬೆಳವಣಿಗೆಯನ್ನು ನಿರ್ಧರಿಸಿದ ಅಂಶಗಳ ಪರಿಶೀಲನೆಯಿಂದ ಪ್ರಾರಂಭಗೊಳ್ಳುತ್ತದೆ. ಈ ನಗರ ಅಭಿವೃದ್ಧಿಯು ಬಹಳ ಸಂಕೀರ್ಣದ ಪ್ರಕ್ರಿಯೆಯಾಗಿದ್ದು ಯಾವುದೇ ಸರಳವಾದ ಅಥವಾ ಪ್ರತ್ಯೇಕವಾದ ವಿವರಣೆಯನ್ನು ನಿರಾಕರಿಸುತ್ತದೆ. ಆದ್ದರಿಂದ ಇದನ್ನು ಸಂಪೂರ್ಣವಾಗಿ ಸಾಮಾಜಿಕ ಚೌಕಟ್ಟಿನಲ್ಲಿ ಅಭ್ಯಾಸಿಸಬೇಕು.[43] ಮಧ್ಯಕಾಲೀನ ಯುಗಕ್ಕೆ ಸಂಬಂಧಿಸಿದಂತೆ ನಗರೀಕರಣದ ಪ್ರಕ್ರಿಯೆಯ ಒಂದು ವಿಶ್ಲೇಷಣೆಯು ನಗರ ಕೇಂದ್ರಗಳ ಉದಯ ಹಾಗೂ ನಗರೀಕರಣ ಪ್ರಕ್ರಿಯೆಯು ಪ್ರಗತಿಯ ಹಲವಾರು ಅಂಶಗಳ ಅನ್ಯೋನ್ಯ, ಕ್ರಿಯೆಯ ಫಲಿತಾಂಶವಾಗಿದೆ ಎಂಬುದನ್ನು ತೋರಿಸುತ್ತದೆ. ಹಳ್ಳಿಗಳು ನಗರಗಳಾಗಿ, ಹಳ್ಳಿಗರು ನಗರವಾಸಿಗಳಾಗಿ ಪರಿವರ್ತನೆ ಹೊಂದುವುದು ಒಂದು ಸಂಕೀರ್ಣ ಪ್ರಕ್ರಿಯೆಯಾಗಿದೆ. ಕೆಲವು ಇತಿಹಾಸಕಾರರು ಹೇಳುವ ಪ್ರಕಾರ ನಗರ ಬೆಳವಣಿಗೆಗೆ ಸಾಮಾಜಿಕ ಅಂಶವು ಕಾರಣವಾಗಿದೆ. ಇತರರು ಆರ್ಥಿಕ ಅಥವಾ ರಾಜಕೀಯ ಅಂಶಗಳು ಪ್ರಮುಖವಾಗಿದೆ ಎನ್ನುತ್ತಾರೆ.[44] ಸಾಮಾಜಿಕ ಸಿದ್ಧಾಂತಕಾರರಾದ ಮುಮಪ್ರೋಡ್ ಮತ್ತು ಸ್ಟೋಬರ್ಗ್‌ರು ನಗರ ಕೇಂದ್ರಗಳ ಉದಯದಲ್ಲಿ ರಾಜಕೀಯ ಶಕ್ತಿಯ ಪಾತ್ರವನ್ನು ಎತ್ತಿ ಹಿಡಿದಿದ್ದಾರೆ.

ಅವರ ಅಭಿಪ್ರಾಯದಂತೆ ನಗರಗಳಿಗೆ ಜನ್ಮ ನೀಡುವ ಸಮಾಜವನ್ನು ಸಾಮಾಜಿಕ ರಚನೆಯಲ್ಲಿ ಕಾರ್ಯವೆಸಗುವ ರಾಜಕೀಯ ಶಕ್ತಿ ಹಾಗೂ ರಾಜಕೀಯ ಪದ್ಧತಿಗಳ ಮೂಲಕವಾಗಿ ಅಭಿವೃದ್ಧಿಪಡಿಸಿ ನಿರ್ವಹಿಸಬಹುದು. ಇತರರನ್ನು ನೋಡಿಕೊಳ್ಳಲು ಸಾಕಷ್ಟು ಶಕ್ತಿ ಹಾಗೂ ನಿಪುಣತೆಯನ್ನು ಹೊಂದಿದ ಆಡಳಿತ ಗುಂಪಿರಬೇಕು.[45] ಆದರೆ ಸಾಮಾಜಿಕ, ಆರ್ಥಿಕ, ಅಂಶವಾಗಲೀ ಅಥವಾ ರಾಜಕೀಯ ಅಂಶವಾಗಲೀ, ಗ್ರಾಮೀಣ ವಸಾಹತುಗಳನ್ನು ನಗರ ವಸಾಹತುಗಳಿಗೆ ಪರಿವರ್ತಿಸಬಲ್ಲ ವ್ಯಯಕ್ತಿಕ ಶಕ್ತಿಯನ್ನು ಹೊಂದಿಲ್ಲ ಥಾಕೂರ್ ಪ್ರಕಾರ "ಒಂದು ಪ್ರತ್ಯೇಕ ಅಂಶವು ತನ್ನ ಕೋಶದಲ್ಲೇ ಸುತ್ತುವ ಹಾಗೂ ಪ್ರತಿಯಾಗಿ ಸಾಮಾಜಿಕ, ಆರ್ಥಿಕ, ಅಥವಾ ರಾಜಕೀಯವಾಗಲೀ ಇಡೀ ಸಮಾಜ ವ್ಯವಸ್ಥೆಯನ್ನು ಪ್ರಭಾವಗೊಳಿಸುವ ವ್ಯವಸ್ಥೆ, ಸಂಘಟನೆ ಅಥವಾ ಸಂಸ್ಥೆಯ ಹುಟ್ಟಿಗೆ ಖಂಡಿತವಾಗಿ ಸಮರ್ಥವಾಗಿರುವುದಿಲ್ಲ.[46] ರೈತನು ಹೆಚ್ಚುವರಿ ಉತ್ಪಾದನೆಯನ್ನು ಮಾಡದ ಹೊರತಾಗಿ ರೈತರ ತೆರಿಗೆಗಳ ಮೇಲೆ ಮೋಜು ಮಾಡುವ ರಾಜಕೀಯ ವ್ಯವಸ್ಥೆಯು ಅಸ್ತಿತ್ವಕ್ಕೆ ಬರುವುದಿಲ್ಲ.

ಇದರ ಜೊತೆಗೆ ಹಳ್ಳಿಗಳಿಂದ ನಗರಗಳಿಗೆ ಹೆಚ್ಚುವರಿಯ ವಲಸೆಯನ್ನು ನೋಡಿಕೊಳ್ಳುವ ಒಂದು ವ್ಯವಸ್ಥೆ ಅನುಪಸ್ಥಿತಿ ಮಿಗುತೆಯು ಒಂದೆಡೆಯಿಂದ ಇನ್ನೊಂದೆಡೆಗೆ ವರ್ಗಾವಣೆ ಯಾವುದು ಅಸಾಧ್ಯವಾಗುವುದು ಹಾಗೂ ಇದು ಆರ್ಥಿಕ ಸ್ಥಗಿತತೆ ಮತ್ತು ನಗರಗಳ ಅವನತಿಗೆ ಕಾರಣವಾಗುತ್ತದೆ. ಈ ರೀತಿಯಾಗಿ ನಗರ ಬೆಳವಣಿಗೆ ಹಾಗೂ ನಿರ್ವಹಣೆಯಲ್ಲಿ ಆರ್ಥಿಕ ಸಾಮಾಜಿಕ ಹಾಗೂ ರಾಜಕೀಯ ಅಂಶಗಳು ಬಹಳ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ.[47]

ಗ್ರಾಮೀಣ ವಸಾಹತುಗಳು ನಗರ ಕೇಂದ್ರಗಳಾಗಿ ಮಾರ್ಪಡು ಹೊಂದುವುದು ಒಂದೇ ಕಾಲದಲ್ಲಿ ಒಂದಕ್ಕಿಂತ ಹೆಚ್ಚು ಅಂಶಗಳು ತೊಡಗಿರುವ ಸಹಯೋಗದ ಪರಿಣಾಮವಾಗಿದೆ. ಆದ್ದರಿಂದ ಅವಶ್ಯಕವಾಗಿ ಆರ್ಥಿಕ ಅಂಶದ ಮೇಲೆ ಹೆಚ್ಚು ಒತ್ತನ್ನು ನೀಡಿ ನಗರೀಕರಣವನ್ನು ಉಂಟುಮಾಡುವ ಅಂಶಗಳ ಚರ್ಚೆಯು ಎಲ್ಲ ಶಕ್ಯ ಅಂಶಗಳಾದ ಸಾಮಾಜಿಕ, ರಾಜಕೀಯ, ಭೌಗೋಳಿಕ, ಧಾರ್ಮಿಕ ಹಾಗೂ ಇತರ ಅಂಶಗಳ ವಿಶ್ಲೇಷಣೆಯನ್ನು ಹೊಂದಬೇಕು. ಇದರ ಜೊತೆಗೆ ಪೂರ್ವದಲ್ಲಿ ನಗರ ಕೇಂದ್ರಗಳ ಹುಟ್ಟು ಯಾವುದೇ ಒಂದು ಗುಂಪಿನ ಕಾರಣಗಳಿಂದಾದುದಲ್ಲ. ಅವುಗಳು ವಿವಿಧ ಸನ್ನಿವೇಶಗಳಲ್ಲಿ ಉದ್ಭವಿಸಿದವು ಎಲ್ಲ ನಗರ ಕೇಂದ್ರಗಳಿಗೂ ಸಾಮಾನ್ಯವಾಗಿ ಬಹಳ ಮಹತ್ವವು ಹಾಗೂ ಪ್ರಮುಖವು ಆದ ಒಂದು ಅಂಶವೇನೆಂದರೆ ಮಿಗುತೆಯ ಅಸ್ತಿತ್ವವಾಗಿತ್ತು. ಆದರೂ ನಗರಗಳು ತಮ್ಮ ಅಸ್ತಿತ್ವಕ್ಕೆ ಅಗತ್ಯವಾದ ನೆಲೆಗಟ್ಟನ್ನು ಮಾರುಕಟ್ಟೆ, ರಾಜಕೀಯ ಚಟುವಟಿಕೆಗಳು ಧರ್ಮ ಇತ್ಯಾದಿಗಳಿಂದ ಪಡೆದವು. ನಗರ ಕೇಂದ್ರವೊಂದು ತನ್ನ ವೈಶಿಷ್ಟತೆಯನ್ನು ಅದರ ಪ್ರಬಲ ಅಸ್ತಿತ್ವದ ಅಂಶದಿಂದ ಪಡೆಯುತ್ತದೆ. ಇಂತಹ ಕೇಂದ್ರವು ಕೋಟೆಯೋ, ಆಡಳಿತ, ಕೇಂದ್ರವೂ ರಾಜಧಾನಿಯೋ, ವ್ಯಾಪಾರ, ಅಥವಾ ಧಾರ್ಮಿಕ ಕೇಂದ್ರವೋ ಆಗಿರಬಹುದು.

4.2 ಮಿಗುತೆ

ದೇಶೀಯ ಬರವಣಿಗೆಗಳು ಶಾಸನಗಳು ಹಾಗೂ ಸಮಕಾಲೀನ ದಾಖಲೆಗಳನ್ನು ಅಧ್ಯಯನ ಮಾಡುವುದರಿಂದ ಹೊಯ್ಸಳ ಕಾಲದಲ್ಲಿನ ನಗರೀಕರಣದ ಅಂಶಗಳ ಒಂದು ವಿಶ್ಲೇಷಣೆಯನ್ನು ಮಾಡಬಹುದು. ನಗರೀಕರಣದ ಮಹತ್ವವಾದ ಅಂಶವೆಂದು ಪರಿಗಣಿಸಲ್ಪಟ್ಟಿರುವ ಮಿಗುತೆಯು ಹೆಚ್ಚಿನ ಪ್ರಮಾಣದಲ್ಲಿ ಅಸ್ತಿತ್ವದಲ್ಲಿತ್ತು. ಇದು ನಗರಗಳ ಉದಯಕ್ಕೆ ಕಾರಣವಾಯಿತು. ಹಾಗೂ

ಅವುಗಳ ಅಭಿವೃದ್ಧಿಗೆ ಸಹಕಾರಿಯಾಯಿತು. ಹೊಯ್ಸಳ ಅರಸರು ದಕ್ಷಿಣ ಭಾರತದ ಇತಿಹಾಸದಲ್ಲಿ ಹಿಂದೆಂದೂ ಕಾಣದ ಸಂಪನ್ಮೂಲಗಳನ್ನು ಹೊಂದಿದ್ದರೆಂಬುದು ಶಂಕೆಗೆ ದೂರವಾದ ಮಾತಾಗಿದೆ.

ನಗರ ಸಮುದಾಯದ ಅಸ್ಥಿತ್ವವು ಹೆಚ್ಚುವರಿ ಆಹಾರ ಉತ್ಪಾದನೆಯ ಇರುವಿಕೆಯನ್ನು ಪೂರ್ವದಲ್ಲೇ ಊಹಿಸುತ್ತದೆ. ಕೃಷಿಕರು ನಗರದ ಅನುತ್ಪಾದಕ ಪ್ರಜೆಗಳ ನಿರ್ವಹಣೆಗಾಗಿ ಮಿಗುತೆಯನ್ನು ಉತ್ಪಾದಿಸಲು ಹೊರಟ ಕ್ಷಣದಲ್ಲೇ ನಗರಗಳು ತಲೆಯೆತ್ತಬಹುದು. ನಗರಗಳು ತಮ್ಮ ಎಲ್ಲ ಆಹಾರ ಪದಾರ್ಥಗಳನ್ನು ಉತ್ಪಾದಿಸುವುದಿಲ್ಲ. ಆದ್ದರಿಂದ ತಮ್ಮ ಅವಶ್ಯಕತೆಗಳಿಗೆ ಹಳ್ಳಿಗಳನ್ನು ಅವಲಂಬಿಸುತ್ತದೆ. ನಗರವಾಸಿಗಳು ಆರ್ಥಿಕ ಮಾರ್ಗಗಳಾದ ಕರಕುಶಲ ವಸ್ತು ತಯಾರಿಕೆ, ಕೈಗಾರಿಕೆ ಹಾಗೂ ವ್ಯಾಪಾರದಲ್ಲಿ ತಮ್ಮ ಸಮಯವನ್ನು ವ್ಯಯ ಮಾಡುತ್ತವೆ. ನಗರಗಳು ತಯಾರಿಸಿದ ಸರಕುಗಳಿಗೆ ಪ್ರತಿಯಾಗಿ ರೈತರಿಂದ ತಮ್ಮ ಆಹಾರವನ್ನು ಕೊಂಡುಕೊಳ್ಳುತ್ತವೆ. ಕೃಷಿ ಪದಾರ್ಥಗಳ ಮಿಗುತೆಯು ನಗರವನ್ನು ಸೇರುತ್ತವೆ. ಇದು ನಗರಗಳ ಹಿನ್ನಾಡಿನ ಸಂಬಂಧಕ್ಕೆ ಒಳಪಡಿಸುತ್ತದೆ.

ಭಟ್ಕಳದ ಬಳಿ ನಾನಾ ಬಗೆಯ ಸರಕುಗಳಾದ ಬಿಳಿ ಅಕ್ಕಿ, ಸಕ್ಕರೆ ಇತ್ಯಾದಿಗಳ ಬಾರೀ ವಹಿವಾಟು ಇತ್ತು. ಬಾರಕೂರ್ ಮಂಗಳೂರು ಬಳಿ ವ್ಯಾಪಾರಕ್ಕಾಗಿ ಸಾಕಷ್ಟು ಅಕ್ಕಿಯನ್ನು ತರಲಾಗುತ್ತಿತ್ತು. ಬೇಲೂರಿನ ಒಂದು ಶಾಸನದ ಪ್ರಕಾರ ಸಾಮ್ರಾಜ್ಯದ ಹಲವು ಭಾಗಗಳಲ್ಲಿದ್ದ ಬಹಳಷ್ಟು ನಗರಗಳು ವಿವಿಧ ನಮೂನೆಯ ಕೃಷಿ ಪದಾರ್ಥಗಳಾದ ಭತ್ತ, ರಾಗಿ, ಜೋಳ, ಬಾರ್ಲಿಸಾವೆ, ಗೋಧಿ, ಕಡಲೆ, ಎಳ್ಳು, ಅಗಸೆ, ಕುಸುಬೆ, ಹೆಸರುಕಾಳು, ಉದ್ದಿನಕಾಳು, ತೊಗರಿ, ಹುರುಳಿ, ಅಕ್ಕಿ, ಸಕ್ಕರೆ, ಎಣ್ಣೆ, ತುಪ್ಪ, ಉಪ್ಪು, ಬೆಲ್ಲ, ಅಡಿಕೆಕಾಯಿ, ವೀಳ್ಯದೆಲೆ, ಮೆಣಸು, ಅರಿಶಿನ, ಈರುಳ್ಳಿ, ಜೀರಿಗೆ, ಮೆಂತ್ಯ, ಸಾಸುವೆ ಮತ್ತು ಕಬ್ಬು ಇವುಗಳ ಸಂಗ್ರಹಣಾ ಹಾಗೂ ವಿತರಣಾ ಕೇಂದ್ರಗಳಾಗಿದ್ದವು.[48] ಹೊಯ್ಸಳ ಅರಸರು ಕೆಲವು ರೀತಿಯ ತೆರಿಗೆ ಹಾಗೂ ದಾನದತ್ತಿಗಳ ರೂಪದಲ್ಲಿ ಮಿಗುತೆಯನ್ನು ಯೋಗ್ಯವಾಗಿ ಬಳಸಿಕೊಳ್ಳುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ನಗರದ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಕೆಲವು ಕಂದಾಯಗಳನ್ನು ಬಳಸಿ ಕೊಳ್ಳಲಾಗುತ್ತಿತ್ತು. ಸಂತೆಗಳಲ್ಲಿ ಹಾಗೂ ರಾಜಧಾನಿಯ ಹೆಬ್ಬಾಗಿಲಿನ ಬಳಿ ಮತ್ತು ಠಾಣಾ ಬಳಿ ಸುಂಕವನ್ನು ವಿಧಿಸಲಾಗುತ್ತಿತ್ತು.[49] ಈ ರೀತಿಯಾಗಿ ಹೊಯ್ಸಳರ ಕಾಲದಲ್ಲಿ ಹೆಚ್ಚುವರಿ ಉತ್ಪಾದನೆಯು (ಮಿಗುತೆ) ಅಸ್ತಿತ್ವದಲ್ಲಿತ್ತು ಹಾಗೂ ಅದು ನಗರೀಕರಣದ ಪಾತ್ರದಲ್ಲಿ ಬಹಳ ಪ್ರಭಾವಿ ಅಂಶವಾಗಿತ್ತು.

4.4 ರಾಜಕೀಯ ಅಂಶ

4.4.1 ಅರಸರ ನೀತಿ

ನಗರೀಕರಣದ ಮತ್ತೊಂದು ಅಂಶವೆಂದರೆ ರಾಜಕೀಯ ಅಂಶ ಹೆಚ್ಚುವರಿ ಉತ್ಪಾದನೆಯು ಅದರ ನಿರ್ವಹಣೆಯ ಸಮಸ್ಯೆಯನ್ನು ತನ್ನೊಂದಿಗೆ ಒಯ್ಯುತ್ತದೆ. ಹೆಚ್ಚುವರಿ ಉತ್ಪಾದನೆಯ ಸೃಷ್ಟಿಯು ಆರ್ಥಿಕ ಅವಶ್ಯಕತೆಯೆಂದರೆ ಅದರ ಸಮರ್ಥ ನಿರ್ವಹಣೆಯು ರಾಜಕೀಯ ಪರಿಣಾಮವಾಗಿದೆ. ಸೋಬರ್ಗ್ ಈ ರೀತಿ ಹೇಳುತ್ತಾನೆ. "ರೈತರು ಯಾವಾಗಲೂ ಸ್ವಪ್ರೇರಿತ ಹೆಚ್ಚುವರಿ ಉತ್ಪಾದನೆಯನ್ನು ಮಾಡಿ ನಗರವಾಸಿಗಳಿಗೆ ಒದಗಿಸಲಿಲ್ಲ.[50] ಅವನ ಪ್ರಕಾರ ರೈತ ಸಮುದಾಯದಿಂದ ತೆರಿಗೆಯ ಮೂಲಕ ಆಹಾರ ಆರ್ಥಿಕತೆಯನ್ನು ಪಡೆಯುವ ಒಂದು ರಾಜಕೀಯ ಅಂಗವು ಏರ್ಪಾಡಾಗಬೇಕು. ಹಾಗೂ ಇದು ನಗರದ ಕೃಷಿಯೇತರರಿಗೆ ವಿಶೇಷವಾಗಿ ಅಧಿಕಾರದಲ್ಲಿರುವ ಮೇಲ್ವರ್ಗದವರಿಗೆ ದೊರಕುವಂತೆ ಮಾಡಬೆಕು.[51] ಈ ಅಭಿಪ್ರಾಯವು ಆರ್ಥಿಕ ಅಂಶದ ಮೇಲೆ ರಾಜಕೀಯ ಅಂಶವು ಹೊಂದಿರುವ ಪ್ರಾಮುಖ್ಯತೆಯನ್ನು ಹೊರತುಪಡಿಸುತ್ತದೆ. ಈ ದೃಷ್ಟಿಯನ್ನು ನಿರ್ಲಕ್ಷಿಸಿ ನಾವು ಅಧಿಕ ಉತ್ಪಾದನೆಯು ನಗರೀಕರಣದ ಪ್ರಮುಖ ಅಂಶವಾಗಿದೆ ಎಂಬುದರ ಮೇಲೆ ಹೆಚ್ಚು ಒತ್ತನ್ನು ನೀಡಬಹುದು. ಏಕೆಂದರೆ ಸಾಮಾಜಿಕ ಹಾಗೂ ರಾಜಕೀಯ ರಚನೆಗಳು ಈ ಹೆಚ್ಚುವರಿಯ ಪರಿಣಾಮವಾಗಿರುವುದಲ್ಲದೆ ನಗರೀಕರಣ ಅವಶ್ಯಕವಾಗ ಸಾಮಗ್ರಿಯಿಂದ ಪೋಷಣೆಯನ್ನು ಪಡೆದಿದೆ.[52] ಈ ಅಂಶವು ನಮ್ಮನ್ನು ನಗರೀಕರಣವನ್ನು ಪ್ರೋತ್ಸಾಹಿಸುವಲ್ಲಿ ರಾಜಕೀಯ ಅಂಶದ ಪಾತ್ರವನ್ನು ಚರ್ಚಿಸಲು ದಾರಿ ಮಾಡಿಕೊಡುತ್ತದೆ. ಹೊಯ್ಸಳ ಅರಸರು ಹೆಚ್ಚುವರಿ ಉತ್ಪಾದನೆಯ ಸಮರ್ಥ ನಿರ್ವಹಣೆ, ರಾಜಕೀಯ ಸ್ಥಿರತೆ ಹಾಗೂ ಸುವ್ಯವಸ್ಥೆಯ ಸ್ಥಾಪನೆ ಕೃಷಿ ಹಾಗೂ ಕೈಗಾರಿಕೆಯ ಪ್ರೋತ್ಸಾಹ, ವ್ಯಾಪಾರ ವಾಣಿಜ್ಯಕ್ಕೆ ಉತ್ತಮ ಮಹತ್ವ ನೀಡುವುದರ ಮುಖೇನ ನಗರ ಬೆಳವಣಿಗೆಗೆ ಸೂಕ್ತವಾದ ವಾತಾವರಣವನ್ನು ನಿರ್ಮಿಸಿದರು ಇದರ ಜೊತೆಗೆ ರಾಜರು ಮಂತ್ರಿಗಳು ಅಧಿಕಾರಿಗಳು ಕೆಲವೊಮ್ಮೆ ವರ್ತಕರು ಹಾಗೂ ಕೆಲವು ವ್ಯಕ್ತಿಗಳು ನಗರಗಳ ಸೃಷ್ಟಿ ಹಾಗೂ ನಿರ್ವಹಣೆಯಲ್ಲಿ ಆಸಕ್ತಿಯನ್ನು ತೋರಿದರು. ಹೊಯ್ಸಳ ಅರಸರ ರಾಜಕೀಯ ಮಾರ್ಗದರ್ಶನ ಹಾಗೂ ನೀತಿ ಮತ್ತು ಸಾಮ್ರಾಜ್ಯದಲ್ಲಿ ನೆಲೆಸಿದ್ದ ಶಾಂತಿಯಿಂದಾಗಿ ನಗರ ಕೇಂದ್ರಗಳ ಹುಟ್ಟು ಹಾಗೂ ಬೆಳವಣಿಗೆಗೆ ಸಹಕಾರಿಯಾಯಿತು. ಹೊಯ್ಸಳ ಅರಸರು ನಗರೀಕರಣವನ್ನು ಪ್ರೋತ್ಸಾಹಿಸುವಲ್ಲಿ ಸಕಾರಾತ್ಮಕ ಮಾರ್ಗದರ್ಶನ ನೀಡಿ ನಿರ್ದಿಷ್ಟ ನೀತಿಯನ್ನು ರೂಪಿಸಿದ ಮೊಘಲರಂತೆ ಯಾವುದೇ ನಿರ್ದಿಷ್ಟ ನೀತಿಯನ್ನು ಹೊಂದಿದ್ದಾಗಿ ಕಂಡು

ಬರುವುದಿಲ್ಲ.[53] ಆದರೂ ಸಾಮ್ರಾಜ್ಯ ನಗರ ಬೆಳವಣಿಗೆಗೆ ಅಗತ್ಯವಾದ ಸಾಮಾನ್ಯ ವಾತಾವರಣವು ನೆಲೆಸಿತ್ತು.

4.4.2 ಯುದ್ಧ

ನಗರ ಪರಿವರ್ತನೆಯಲ್ಲಿ ಸಹಾಯಕವಾಗುವ ಅಂಶದಲ್ಲಿ ಯುದ್ಧವು ಒಂದು ಎಂದು ಪರಿಗಣಿಸಲಾಗಿದೆ. ಈ ಪ್ರಕಾರವಾಗಿ ನಗರ ಕೇಂದ್ರಗಳ ಜನಮನದಲ್ಲಿ ಇದೊಂದು ಪ್ರಮುಖ ಪರಿಣಾಮಕಾರೀ ಪಾತ್ರವನ್ನು ವಹಿಸುತ್ತದೆ ಎಂದು ತಿಳಿಯಲಾಗಿದೆ. ಆದರೆ ಐತಿಹಾಸಿಕ ದೃಷ್ಟಿಕೋನದಿಂದ ನೋಡಿದಾಗ ಯುದ್ಧವು ನಿರ್ವಹಿಸಿದ ಪಾತ್ರವು ಅತ್ಯಲ್ಪ ಎಂದು ತೋರುತ್ತದೆ. ಆದರೂ ಪ್ರಾಚೀನ ಹಾಗೂ ಮಧ್ಯಕಾಲೀನ ಯುಗದಲ್ಲಿ ನಗರಗಳು, ಆಡಳಿತ ಕೇಂದ್ರಗಳು, ಪಟ್ಟಣಗಳು ಭದ್ರತಾ ದೃಷ್ಟಿಯಿಂದ ಸೇನಾವ್ಯೂಹಗಳನ್ನು ಬಹಳ ಯೋಜಿತವಾದ ರೀತಿಯಲ್ಲಿ ಹೊಂದಿದ್ದವು. ಒಂದು ಶಾಸನವು ಕೋಟೆಯ ಭಾಗಗಳಾಗಿ ಕಂದಕಗಳು ದಪ್ಪನೆಯ ಗೋಡೆಗಳು ಧ್ವಜಸ್ತಂಭಗಳು, ಪಗಾರಗಳು ಬುರುಜುಗಳನ್ನು ನೀಡುತ್ತಿವೆ.[54] ನಗರಗಳು ಸೇನಾಪಡೆಯ ಬಲವರ್ಧನೆಯ ಕೇಂದ್ರಗಳಾದವು. ಹಾಗೂ ಬಹಳ ಸಂಖ್ಯೆಯ ನಗರದ ಜನರು ಯೋಧರಾದರು. ಇದರಿಂದಾಗಿ ನಗರದ ಗಾತ್ರದಲ್ಲಿ ಮತ್ತು ಬೆಳವಣಿಗೆಯಲ್ಲಿ ತೀವ್ರವಾದ ಏರಿಕೆ ಕಂಡುಬಂದಿತು. ಆದರೆ ಈ ನಗರಗಳು ಕೂಡ ಶತ್ರು ಧಾಳಿಗೆ ತುತ್ತಾದವು. ರಾಜಧಾನಿಗಳು ಮುಖ್ಯಸ್ಥರ ಮುಖ್ಯ ನೆಲೆಗಳು ಹಾಗೂ ಕೋಟೆಗಳು ಯುದ್ಧಗಳಲ್ಲಿ ಸುಲಭದ ತುತ್ತಾಗುತ್ತಿದ್ದವು. ವಿಷ್ಣುವರ್ಧನನು ಅನೇಕ ಕೋಟೆಗಳ ಮೇಲೆ ಆಕ್ರಮಣ ಮಾಡಿ ಜಯಿಸಿದರೂ ದ್ವಾರಸಮುದ್ರವು ಶತ್ರುಗಳ ಆಕರ್ಷಕ ವಸ್ತುವಾಗಿತ್ತು ಹಾಗೂ ಇದನ್ನು ಅಂತಿಮವಾಗಿ ಮಲ್ಲಿಕಾಫರ್ ದಾಳಿ ಮಾಡಿದನು. ಹೀಗೆ ಬೆಳವಣಿಗೆಯ ಅಂಶವಾಗಿದ್ದ ಯುದ್ಧವು ನಾಶದ ಸಾಧನವಾಯಿತು.

ಕೃಷಿ, ಕೈಗಾರಿಕೆ, ವ್ಯಾಪಾರ ಹಾಗೂ ವಾಣಿಜ್ಯಕ್ಕೆ ಅರಸರು ನೀಡಿದ ರಾಜಕೀಯ ಸ್ಥಿರತೆ, ಶಾಂತಿ ಹಾಗೂ ಪ್ರೋತ್ಸಾಹ ಅವರು ಹೊಂದಿದ್ದ ಪ್ರಾರಂಭ ಹಾಗೂ ಪ್ರಚೋದನೆ ಅಂತಿಮವಾಗಿ ನಿಯಂತ್ರಿತ ಅರ್ಥದಲ್ಲಿ ಯುದ್ಧವು ಸೇರಿ ಒಗ್ಗೂಡಿದ ಅಂಶಗಳು ನಗರೀಕರಣಕ್ಕೆ ದಾರಿಯಾದವು.

4.4.3 ಧಾರ್ಮಿಕ ಅಂಶಗಳು

ಮಧ್ಯಕಾಲೀನ ಯುಗದಲ್ಲಿ ನಗರೀಕರಣವನ್ನು ಪ್ರೋತ್ಸಾಹಿಸುವಲ್ಲಿ ಧರ್ಮದ ಪಾತ್ರ ಪ್ರಮುಖವಾಗಿದೆ ಎಂದು ಹೇಳಬಹುದು. ಧರ್ಮವು ನಾಗರೀಕತೆಯನ್ನು ವಿಸ್ತರಿಸಲು ಪ್ರಮುಖ

ಅಂಶವಾಗಿತ್ತು ಆದ್ದರಿಂದ ಶ್ರೇಷ್ಠ ಸಂಪ್ರದಾಯವನ್ನು ಹರಡುವಲ್ಲಿ ಬಹಳ ಮಹತ್ವವಾದ ಪಾತ್ರವನ್ನು ವಹಿಸಿತ್ತು. ಮಧ್ಯಕಾಲೀನ ನಾಗರೀಕತೆಯನ್ನು ವಿಶ್ಲೇಷಿಸಲು ಧರ್ಮದ ಪಾತ್ರವನ್ನು ಸಮರ್ಪಕವಾಗಿ ಅರ್ಥ ಮಾಡಿಕೊಳ್ಳುವುದು ಅವಶ್ಯಕವಾಗಿದೆ. ನಗರೀಕರಣ ಪ್ರಕ್ರಿಯೆಯಲ್ಲಿ ಧರ್ಮದ ಪಾತ್ರವು ಶ್ರೇಷ್ಠವಾಗಿತ್ತು. ನಗರ ಕೇಂದ್ರಗಳ ಹುಟ್ಟು ಹಾಗೂ ಬೆಳವಣಿಗೆಯಲ್ಲಿ ಬಹಳ ಪ್ರಮುಖವಾದ ಅಂಶವಾಗಿತ್ತು. ದೇವಾಲಯಗಳು, ಮಠಗಳು, ಗುರುಕುಲಗಳಂತಹ ಧಾರ್ಮಿಕ ಕೇಂದ್ರಗಳು, ಹಳ್ಳಿಗಳು ಹಾಗೂ ನಗರಗಳೆರಡಲ್ಲೂ ಕಂಡುಬಂದಿದ್ದರು. ಹಲವು ಪ್ರಮುಖ ಧಾರ್ಮಿಕ ಸಂಸ್ಥೆಗಳು ನಗರಗಳಲ್ಲಿ ಕಂಡುಬಂದವು. ಹಾಗೂ ದೊಡ್ಡ ದೇವಾಲಯ ಕಟ್ಟಡಗಳು ಈ ನಗರಗಳಲ್ಲೇ ಕಂಡು ಬಂದವು. ಕೇಂದ್ರಸ್ಥಾನದಲ್ಲಿದ್ದ ದೇವಾಲಯಗಳು ಅಧಿದೇವತೆಗಳೊಂದಿಗೆ ನಗರಗಳು ಅಧೀನ ಧರ್ಮಕೇಂದ್ರಗಳನ್ನು ಹೊಂದಿದ್ದವು. ಇವುಗಳು ನಗರದ ನಿರ್ದಿಷ್ಟ ಸ್ಥಳಗಳಲ್ಲಿ ಸ್ಥಾಪಿತವಾಗಿದ್ದವು ಹೆಚ್ಚು ಪ್ರಶಂಸೆಯನ್ನು ಹೊಂದಿದ್ದ ದೇವಾಲಯದ ಸ್ಥಳವು ತಮ್ಮ ಸುತ್ತಲಿದ್ದ ಗ್ರಾಮೀಣ ಪ್ರದೇಶಕ್ಕಿಂತ ಭಿನ್ನವಾಗಿ ನಗರಕೇಂದ್ರವಾಗಿ ಬೆಳೆಯಿತು. ಐತಿಹಾಸಿಕ ಯುಗಗಳ ಎಲ್ಲಾ ನಗರಗಳಲ್ಲಿ ಸಾರ್ವತ್ರಿಕವಾಗಿ ದೇವಾಲಯಗಳು ಇರುತ್ತಿದ್ದವು. ದೇವಾಲಯಗಳು ನಗರದ ಅವಶ್ಯಕವಾದ ವಸ್ತುಗಳಾಗಿದ್ದವು. ದೇವಾಲಯಗಳು ನಗರೀಕರಣದಲ್ಲಿ ನಿರ್ವಹಿಸಿದ ಮಹತ್ವದ ಪಾತ್ರದಿಂದಾಗಿ "ದೇವಾಲಯ ನಗರೀಕರಣ" ಎಂಬ ಪದಪುಂಜವನ್ನು ಉಪಯೋಗಿಸುವುದು ಸೂಕ್ತವಾಗುತ್ತದೆ.

ಮಹಾಲಿಂಗಂರವರ ಪ್ರಕಾರ "ಸ್ಥಳೀಯ ಪ್ರದೇಶಗಳಲ್ಲಿ ಧಾರ್ಮಿಕ ಜೀವನದ ಕ್ರಿಯಾಶೀಲ ಕೇಂದ್ರವಾಗಿರುವುದರ ಜೊತೆಗೆ ದೇವಾಲಯವು ಒಂದು ಪ್ರಮುಖ ಸಾಮಾಜಿಕ ಸಂಸ್ಥೆಯಾಗಿ ನಗರ ಸ್ಥಾನೀಕರಣ, ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಂತಹ ಹಲವಾರು ಕ್ಷೇತ್ರಗಳಲ್ಲಿ ತನ್ನ ಪ್ರಮುಖ ಪಾತ್ರವನ್ನು ನಿರ್ವಹಿಸಿತು.[55]

ದೇವಾಲಯವು ಭೂಮಾಲೀಕನಾಗಿ ಉದ್ಯೋಗ ದಾತನಾಗಿ ಸರಕು ಮತ್ತು ಸೇವೆಗಳ ಬಳಕೆದಾರನಾಗಿ ಬ್ಯಾಂಕು, ಶಾಲೆ, ಆಸ್ಪತ್ರೆ, ನಾಟಕ, ಶಾಲೆಯಾಗಿ ಹಾಗೂ ಸಂಕಷ್ಟ ಪರಿಸ್ಥಿತಿಗಳಲ್ಲಿ ಆಶ್ರಯದಾತನಾಗಿ ಕಾರ್ಯ ನಿರ್ವಹಿಸುತ್ತಿತ್ತು. ಈ ದೇವಾಲಯಗಳ ಸುತ್ತ ಕೇಂದ್ರೀಕೃತವಾಗಿದ್ದ ಪ್ರಮುಖ ಚಟುವಟಿಕೆಗಳನ್ನು ಭೂಮಿ, ಬಂಗಾರ, ಮತ್ತು ಹಣದ ರೂಪದಲ್ಲಿ ಧಾರ್ಮಿಕ ಹಬ್ಬ ಹರಿದಿನಗಳು ಬ್ರಾಹ್ಮಣರಿಗೆ ಅನ್ನಸಂತರ್ಪಣೆ ಏರ್ಪಡಿಸುವುದಕ್ಕಾಗಿ ದೀಪಗಳನ್ನು ಉರಿಸಲು ದೇವಾಲಯ ಕಟ್ಟಡಗಳ ಪುನರ್ ನಿರ್ಮಾಣ ಹಾಗೂ ನವೀಕರಣಕ್ಕಾಗಿ ದೇವತೆಗಳಿಗೆ

ಆಭರಣಗಳನ್ನು ನೀಡುವುದಕ್ಕಾಗಿ ಧಾರ್ಮಿಕ ಗೋಷ್ಠಿಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳಂತವುಗಳಿಗೆ ಉಂಬಳಿಗಳನ್ನು ನೀಡಿದ್ದುದರ ಮೂಲಕವಾಗಿ ಪ್ರತಿಬಿಂಬಿಸಲಾಗಿದೆ.[56] ಈ ರೀತಿಯಾಗಿ ದೇವಾಲಯಗಳು ಸೂಜಿಗಲ್ಲಿನಂತೆ ತಮ್ಮ ಕಡೆಗೆ ಸೆಳೆದು ನಗರ ಬೆಳವಣಿಗೆಗೆ ಕಾರಣವಾದವು. ಕೆಲವೊಮ್ಮೆ ಒಂದು ನಗರವು ದೇವಾಲಯದ ಅಕ್ಕಪಕ್ಕದಲ್ಲಿ ತಲೆಯೆತ್ತುತ್ತಿತ್ತು. ಪ್ರಸಿದ್ಧ ದೇವಾಲಯವೊಂದು ಜನರನ್ನು ಆಕರ್ಷಿಸಿ ಯಾತ್ರಾ ಸ್ಥಳವಾಗುತ್ತಿತ್ತು ಹಾಗೂ ಪವಿತ್ರ ಧಾರ್ಮಿಕ ಭೌಗೋಳಿಕ ಪರಿಸರದ ಆಧಾರದ ಮೇಲೆ ನಗರಗಳು ಅಭಿವೃದ್ಧಿಯನ್ನು ಹೊಂದಿದ್ದವು. ಈ ರೀತಿಯಾಗಿ ಯಾತ್ರಾಸ್ಥಳವು ನಗರ ಕೇಂದ್ರವಾಗಿ ಬೆಳೆಯಿತು. ಗುಪ್ತನ ಪ್ರಕಾರ ದಕ್ಷಿಣ ಭಾರತದಲ್ಲಿ ಹೆಚ್ಚುಶ್ವಾವತವಾಗಿದ್ದ ನಗರ ವಾಸಸ್ಥಾನಗಳೆಂದರೆ ಯಾತ್ರಾ ಸ್ಥಳಗಳಾಗಿದ್ದವು. ಅವುಗಳನ್ನು ಸಾಂಸ್ಕೃತಿಕ ಜನಕ ನಗರಗಳೆಂದು ಪರಿಗಣಿಸಬಹುದು. ಇವುಗಳಲ್ಲಿನ ಜೀವನವು ಹಿನ್ನಾಡಿಗಿಂತ ಬಹುದೂರು ವಿಸ್ತರಿಸಿತ್ತು.[57] ಒಂದು ನಿರ್ದಿಷ್ಟ ಪಟ್ಟಣವು ಪ್ರಮುಖ್ಯತೆಯನ್ನು ಪಡೆಯಲು ಕಾರಣ ಅದರ ಪವಿತ್ರ ಭೌಗೋಳಿಕ ಪರಿಸರ ನಗರದಲ್ಲಿ ದೇವಾಲಯಗಳು ಹಾಗೂ ಮಠಗಳು ಅಪಾರವಾದ ಧನ ದಾನಾದಿಗಳನ್ನು ಪಡೆದವು. ಹೊಯ್ಸಳರ ಕಾಲದ ಶಿಲಾಶಾಸನಗಳು ನಗರ ಕೇಂದ್ರವಾಗಿ ಒಂದು ನಿರ್ದಿಷ್ಟ ಸ್ಥಳವು ಬೆಳೆಯುವಲ್ಲಿ ಧರ್ಮವು ವಹಿಸುತ್ತಿದ್ದ ಪಾತ್ರದ ಮೇಲೆ ಬೆಳಕನ್ನು ಚೆಲ್ಲುತ್ತದೆ. ಹೊಯ್ಸಳರ ರಾಜಧಾನಿಯು ಚನ್ನಕೇಶವ ದೇವರ ಕಪ್ಪೆ ಚನ್ನಿಗ ದೇವರ ಹಾಗೂ ಅನೇಕ ಅಧೀನ ದೇವರುಗಳ ಪೀಠವಾಗಿತ್ತು. ಸಾಮ್ರಾಜ್ಯದ ಬೆಳವಣಿಗೆಯೊಂದಿಗೆ ರಾಜಧಾನಿಯಲ್ಲಿನ ದೇವಾಲಯಗಳನ್ನು ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿನ ಮಹತ್ವವನ್ನು ಎತ್ತಿ ಹಿಡಿಯುವಂತೆ ಅಗಾದವಾಗಿ ವಿಸ್ತರಿಸಲಾಯಿತು.

ಇದು ಸಾಮ್ರಾಜ್ಯದ ಬೆಳವಣಿಗೆ ನಗರದ ವಿಸ್ತರಣೆ ಹಾಗೂ ದೇವಾಲಯಗಳ ಮಧ್ಯೆ ಇರುವ ಸಂಬಂಧವನ್ನು ತೋರಿಸುತ್ತದೆ. ಹೊಯ್ಸಳ ಸಾಮ್ರಾಜ್ಯವು ತನ್ನ ಕೀರ್ತಿಯ ಪರಾಕಾಷ್ಠತೆಯನ್ನು ತಲುಪಿದಾಗ ದ್ವಾರಸಮುದ್ರವು ಉನ್ನತ ಮಟ್ಟದಲ್ಲಿತ್ತು. ಇದೇ ಅವಧಿಯಲ್ಲಿ ಧಾರ್ಮಿಕ ಚಟುವಟಿಕೆಗಳು ಹಾಗೂ ದೇವಾಲಯ ನಿರ್ಮಾಣಗಳು ತ್ವರಿತವಾಗಿ ಸಾಗಿದ್ದವು. ವಿಷ್ಣುವರ್ಧನನು ದಾನದತ್ತಿಗಳನ್ನು ನೀಡಿ ಚನ್ನಕೇಶವ ದೇವಾಲಯವನ್ನು ನಿರ್ಮಿಸಿದನು. ಇದೇ ಕಾಲದಲ್ಲಿ ಅನೇಕ ಕಟ್ಟಡಗಳನ್ನು ನಿರ್ಮಿಸಲಾಯಿತು.

ಅಧ್ಯಾಯ ೫

೫.1 ನಗರ ಬೆಳವಣಿಗೆಯ ಲಕ್ಷಣ

10ನೇ ಶತಮಾನದಿಂದಲೂ ದಕ್ಷಿಣ ಭಾರತದಲ್ಲಿ ನಗರೀಕರಣ ಪ್ರಕ್ರಿಯೆಯ ಸ್ಪಷ್ಟ ಲಕ್ಷಣವು ಕಂಡುಬಂದಿತ್ತು. ಈ ಪ್ರಕ್ರಿಯೆಯು ನಗರ ಕೇಂದ್ರಗಳ ಹುಟ್ಟು ಹಾಗೂ ವಿಸ್ತರಣೆಯ ಮೂಲಕ ತನ್ನ ಅಭಿವ್ಯಕ್ತಿಯನ್ನು ಪ್ರಕಟಿಸಿತು. ನಗರ ಬೆಳವಣಿಗೆಯು ದ್ವಿಮುಖವಾಗಿತ್ತು. ಅವುಗಳೆಂದರೆ ಹೊಸ ನಗರಗಳ ಉದಯದಿಂದಾಗಿ ಕೇಂದ್ರಗಳ ಸಂಖ್ಯೆಯಲ್ಲಿ ಹೆಚ್ಚಳವಾದದ್ದು ಇನ್ನೊಂದೆಂದರೆ ಹಳೆಯ ಹಾಗೂ ಹೊಸ ನಗರಗಳ ಗಾತ್ರದಲ್ಲಿ ಬೆಳವಣಿಗೆಯಾದದ್ದು, ಇದು ಭೌತಿಕ, ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಧಾರ್ಮಿಕ ಅಂಶಗಳ ಪ್ರಭಾವದಿಂದ ಉಂಟಾಯಿತು. ನಗರ ಬೆಳವಣಿಗೆಯ ಇನ್ನೊಂದು ವೈಶಿಷ್ಟವೇನೆಂದರೆ ಹಲವು ಶತಮಾನಗಳ ಕಾಲ ಹಲವಾರು ನಗರಗಳು ಅಸ್ತಿತ್ವದಲ್ಲಿದ್ದುದಾಗಿತ್ತು. ಕೆಲವು ನಗರಗಳ ವಿಷಯದಲ್ಲಿ ಕೇವಲ ಶಾಸನಗಳಿಂದ ಅವುಗಳ ವಿಸ್ತರಣೆಯನ್ನು ಸ್ಪಷ್ಟವಾಗಿ ತಿಳಿಯಲು ಸಾಧ್ಯವಿಲ್ಲ. ಆದರೆ ಪ್ರಮುಖ ಸ್ಥಳಗಳಾಗಿ ಅವುಗಳ ಇರುವಿಕೆಯನ್ನು ದಾನದ ಶಾಸನಗಳಲ್ಲಿ ನಿರಂತರವಾಗಿ ಉಲ್ಲೇಖಿಸುವುದರ ಮೂಲಕ ತಿಳಿಸಲಾಗಿದೆ. ಅಂತಹ ಸಂದರ್ಭಗಳಲ್ಲಿ ಸಾಬೀತು ಮಾಡದ ಹೊರತು ಆ ಸ್ಥಳಗಳು ಅವನತಿಯ ಹಾದಿಯಲ್ಲಿರಲಿಲ್ಲ ಎಂಬುದನ್ನು ನಾವು ತಿಳಿಯಬಹುದು. ಆದ್ದರಿಂದ ಇದರಿಂದಲೂ ಕೂಡ ನಗರ ಬೆಳವಣಿಗೆಯಾಯಿತು ಎಂಬುದನ್ನು ನಾವು ಸಾಬೀತು ಮಾಡಬಹುದು.

ಈ ರೀತಿಯಾಗಿ ನಮ್ಮ ಅಧ್ಯಯನದ ಕಾಲದಲ್ಲಿ ನಗರ ಬೆಳವಣಿಗೆಯನ್ನು ಗುರುತಿಸಲು ಹೊಸ ನಗರಗಳ ಉದಯ, ಹಳೆಯ ಹಾಗೂ ಹೊಸ ನಗರಗಳ ವಿಸ್ತರಣೆ ಮೂರು ಲಕ್ಷಣಗಳನ್ನು ಪರಿಗಣಿಸಲಾಗಿದೆ.

೫.1.1 ದಕ್ಷಿಣ ಭಾರತದಲ್ಲಿ ನಗರ ಬೆಳವಣಿಗೆಗೆ ಅನುಕೂಲಕಾರಿಯಾದ ಸನ್ನಿವೇಶ

ಅಂತರ ರಾಷ್ಟ್ರೀಯ ಜಲವ್ಯಾಪಾರ ಮಾರ್ಗದಲ್ಲಿ ನೆಲೆಸಿದ್ದ ಭಾರತ ದ್ವೀಪ ಕಲ್ಪವು ನಗರ ಕೇಂದ್ರಗಳ ಹುಟ್ಟು ಹಾಗೂ ಬೆಳವಣಿಗೆಗೆ ಸಾಕಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟಿತು.[58] ಪೂರ್ವ ಹಾಗೂ ಪಶ್ಚಿಮ ತೀರಗಳೆರಡೂ ಹೊರ ಪ್ರಪಂಚದೊಂದಿಗೆ ಉತ್ತಮವಾದ ಸಂಪರ್ಕವನ್ನು ಹೊಂದಿದ್ದವು. ಆದ ಕಾರಣಗಳು ನಗರಗಳು ತೀರಗಳ ಮೇಲೆ ತಲೆಯೆತ್ತಿ ನಿಂತವು.[59]

ಒಳನಾಡು ವ್ಯಾಪಾರವು ಅಭಿವೃದ್ಧಿಗೊಂಡಂತೆಲ್ಲ ನಗರ ಕೇಂದ್ರಗಳು ವ್ಯಾಪಾರ ಮಾರ್ಗಗಳ ಉದ್ದಕ್ಕೂ ನಾಡಿನೊಳಗೆ ನಿರ್ಮಾಣವಾದವು ರಾಜಧಾನಿಗಳ ಹುಟ್ಟು ಹಾಗೂ ಬೆಳವಣಿಗೆಯಿಂದಾಗಿ ಇತರೆ ಕೇಂದ್ರಗಳು ಮುಖ್ಯ ಪಟ್ಟಣಗಳು ಹಾಗೂ ಆಡಳಿತ ಕಛೇರಿಗಳಾಗಿ ಹೊರಹೊಮ್ಮಿದವು. ನಾಗರೀಕತೆಯ ವಿಸ್ತರಣೆಯಾದಂತೆ ಹಾಗೂ ಧರ್ಮದ ಹರಡುವಿಕೆ ಹೆಚ್ಚಾದಂತೆಲ್ಲ ಅನೇಕ ನಗರಗಳು ದೇವಾಲಯಗಳು ಹಾಗೂ ಮಠಗಳ ಸುತ್ತ ಯಾತ್ರಾಸ್ಥಳಗಳಾಗಿ ಶೈಕ್ಷಣಿಕ ಕೇಂದ್ರಗಳಾಗಿ ಹಾಗೂ ಸಂಸ್ಕೃತಿಯನ್ನು ಪಸರಿಸುವ ಕೇಂದ್ರಗಳಾಗಿ ಬೆಳೆದವು.

ದಕ್ಷಿಣ ಭಾರತದಲ್ಲಿ ನಗರ ಪ್ರಕ್ರಿಯೆಯು ಸಾಮ್ರಾಜ್ಯಗಳು ಪ್ರವರ್ಧಮಾನಕ್ಕೆ ಬರುತ್ತಿದ್ದಂತೆಯೇ ಹೆಚ್ಚಿನ ಮಹತ್ವವನ್ನು ಪಡೆಯಿತು. 12ನೇ ಶತಮಾನದಿಂದ ಚೋಳ ಹಾಗೂ ಹೊಯ್ಸಳ ಸಾಮ್ರಾಜ್ಯದಲ್ಲಿ ವಾಣಿಜ್ಯ ಹಾಗೂ ವ್ಯಾಪಾರೀ ಲಕ್ಷಣಗಳನ್ನು ಹೊತ್ತ ನಗರ ಕೇಂದ್ರಗಳು ಬೆಳೆಯಲು ಪ್ರಾರಂಭವಾದವು. ದಕ್ಷಿಣ ಭಾರತದಲ್ಲಿ ವ್ಯಾಪಾರ ಹಾಗೂ ನಗರ ಜೀವನವು ಹೆಚ್ಚು ಪ್ರಮುಖವಾಯಿತು. ಸಾಕಷ್ಟು ಸಂಖ್ಯೆಯ ವರ್ತಕರು ಕುಶಲಕರ್ಮಿಗಳ ವಸಾಹತು ಪ್ರಾಮುಖ್ಯತೆಗೆ ಬಂದಿತು. ಈ ಮೂಲಕವಾಗಿ 12ನೇ ಶತಮಾನದಲ್ಲಿ ಹೊಯ್ಸಳ ಸಾಮ್ರಾಜ್ಯವು ಬೆಳೆಯುವ ವೇಳೆಗೆ ನಗರ ಸನ್ನಿವೇಶವು ಆಗಲೇ ನೆಲೆಸಿತ್ತು. ಸಾಮ್ರಾಜ್ಯದಲ್ಲಿ ನೆಲೆಸಿದ್ದ ಈ ಸನ್ನಿವೇಶವು ನಗರೀಕರಣ ಪ್ರಕ್ರಿಯೆಯ ಪ್ರಗತಿಗೆ ಸಾಕಷ್ಟು ಶ್ರಮಿಸಿತು. ಹೊಯ್ಸಳರ ಅರಸರ ಅಡಿಯಲ್ಲಿ ಹೆಚ್ಚಿದ ವಾಣಿಜ್ಯ, ರಾಜಕೀಯ, ಸುವ್ಯವಸ್ಥೆ ಹಾಗೂ ದ್ವೀಪ ಕಲ್ಪದಲ್ಲಿನ ಸ್ಥಿರತೆಯು ಮುಂದಿನ ಅಭಿವೃದ್ಧಿಗೆ ಪ್ರೋತ್ಸಾಹ ಅಂಶಗಳಾಗಿ ಪರಿಣಮಿಸಿತು.

೨.1.2 ನಗರಗಳ ಸ್ವರೂಪ ಹಾಗೂ ವರ್ಗೀಕರಣ

ನಗರ ಬೆಳವಣಿಗೆಯೊಂದಿಗೆ ಸಂಬಂಧವನ್ನು ಹೊಂದಿದ ಸಮಸ್ಯೆಯೆಂದರೆ ಪಟ್ಟಣಗಳ ವರ್ಗೀಕರಣ ಹಾಗೂ ಅವುಗಳ ಸ್ವರೂಪವನ್ನು ನಿರ್ಧರಿಸುವುದು ಪಟ್ಟಣಗಳು ಬೆಳೆಯುವಾಗಲೇ ತಮ್ಮ ವೈಶಿಷ್ಟ್ಯತೆಗಳನ್ನು ಸ್ವೀಕರಿಸಿ ಬೆಳೆಯುತ್ತವೆ. ಈ ಹಂತದಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸುವುದರ ಜೊತೆಗೆ ಅವುಗಳು ಹೆಚ್ಚು ಕಾರ್ಯಗಳನ್ನು ವಹಿಸಿಕೊಂಡು ನಿರ್ವಹಿಸುತ್ತವೆ. ಆದ್ದರಿಂದ ನಗರ ಬೆಳವಣಿಗೆಯ ಚರ್ಚೆಯ ಪಟ್ಟಣಗಳ ಸ್ವರೂಪ ಹಾಗೂ ಅವುಗಳ ವರ್ಗೀಕರಣ ಎರಡನ್ನು ನಿರ್ಧರಿಸುವ ಒಂದು ಪ್ರಯತ್ನವನ್ನು ಮಾಡುತ್ತದೆ.

ಹೊಯ್ಸಳ ಸಾಮ್ರಾಜ್ಯವು ಹಲವಾರು ನಮೂನೆಗಳ ವಿವಿಧ ಕಾರ್ಯಗಳನ್ನು ಹಾಗೂ ಪಾತ್ರಗಳನ್ನು ನಿರ್ವಹಿಸುತ್ತಿದ್ದ ಅನೇಕ ನಗರ ಕೇಂದ್ರಗಳಿಂದ ಕಂಗೊಳಿಸುತ್ತಿತ್ತು. ವಿವಿಧ ಕಾರ್ಯಗಳು ಪಟ್ಟಣಗಳ ಮುಖ್ಯ ವೈಶಿಷ್ಟ್ಯಗಳಾಗಿದ್ದವು. ಆದರೂ ಒಂದು ನಿರ್ದಿಷ್ಟ ಪಟ್ಟಣವು ಒಂದು ರೀತಿಯಾದ ವಿಶಿಷ್ಟ ಅಂಶವನ್ನು ಹೊಂದಿ ಬೇರೆಯಾದವುಗಳಿಗಿಂತ ಭಿನ್ನವಾಗಿ ತನ್ನದೇ ಆದ ಗುಣ ಅಥವಾ ರೂಪವನ್ನು ಪಡೆಯಬಹುದು. ಆದ್ದರಿಂದ ಅವುಗಳು ನಿರ್ವಹಿಸುವ ಹಾಗೂ ಪಾತ್ರಗಳ ಆಧಾರದ ಮೇಲೆ ಪಟ್ಟಣಗಳನ್ನು ಸಂತೆಪೇಟೆಗಳು, ರಾಜಕೀಯ ಆಡಳಿತ ಕೇಂದ್ರಗಳು, ಕೋಟೆಗಳು ಅಥವಾ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರಗಳು ಎಂದು ವರ್ಗೀಕರಿಸಬಹುದು. ಇವುಗಳಲ್ಲಿ ಕಡಿಮೆ ಪಾತ್ರಗಳನ್ನು ನಿರ್ವಹಿಸುತ್ತಿರುವ ಸ್ಥಳಗಳನ್ನು ಸಣ್ಣ ಪಟ್ಟಣಗಳೆಂದು ಹತ್ತು ಹಲವು ವಿವಿಧ ಕಾರ್ಯಗಳನ್ನು ನಿರ್ವಹಿಸುವ ಪಟ್ಟಣಗಳನ್ನು ದೊಡ್ಡ ಪಟ್ಟಣಗಳೆಂದ ವರ್ಗೀಕರಿಸ ಬಹುದು. ಇವುಗಳಲ್ಲಿ ಕಡಿಮೆ ಪಾತ್ರಗಳನ್ನು ನಿರ್ವಹಿಸುತ್ತಿರುವ ಸ್ಥಳಗಳನ್ನು ಸಣ್ಣ ಪಟ್ಟಣಗಳೆಂದು ಹತ್ತು ಹಲವು ವಿವಿಧ ಕಾರ್ಯಗಳನ್ನು ನಿರ್ವಹಿಸುವ ಪಟ್ಟಣಗಳನ್ನು ದೊಡ್ಡ ಪಟ್ಟಣಗಳೆಂದ ವರ್ಗೀಕರಿಸಬಹುದು. ಈ ನಗರ ಕೇಂದ್ರಗಳ ಕಾರ್ಯಕ್ಷೇತ್ರ ಹಾಗೂ ಪ್ರಭಾವವೆರಡು ಬದಲಾಗಿದ್ದವು. ದೊಡ್ಡ ಪಟ್ಟಣವು ವಿವಿಧ ಕಾರ್ಯಗಳನ್ನು ನಿರ್ವಹಿಸುತ್ತಿತ್ತು ಅದರ ರಾಜಕೀಯ ಆರ್ಥಿಕ ಸಂಪರ್ಕವು ಬಹಳ ವಿಶಾಲವಾಗಿತ್ತು. ಅದರ ಪ್ರಭಾವ ಬಹಳ ವಿಸ್ತಾರವಾದ ಕ್ಷೇತ್ರವನ್ನು ಆಕ್ರಮಿಸಿತ್ತು. ಇನ್ನೊಂದೆಡೆಯಲ್ಲಿ ಸಣ್ಣ ಪಟ್ಟಣಗಳ ಪ್ರಭಾವವು ಕೇವಲ ಹತ್ತಿರದ ಪ್ರದೇಶಕ್ಕೆ ಮಾತ್ರ ಸೀಮಿತವಾಗಿತ್ತು. ಇದರೊಂದಿಗೆ ನಗರವಾಸಿಗಳ ವೈವಿಧ್ಯಮಯ ಗುಣವು ಒಂದು ಪ್ರದೇಶದಿಂದ ಇನ್ನೊಂದಕ್ಕೆ ಬೇರೆ ಬೇರೆಯಾಗಿತ್ತು.

ಹೊಯ್ಸಳ ಸಾಮ್ರಾಜ್ಯದಲ್ಲಿ ಅಧ್ಯಯನ ಮಾಡುವ ಹಲವು ನಗರ ಕೇಂದ್ರಗಳಿಂದ ಎಲ್ಲಾ ಪಟ್ಟಣಗಳ ವರ್ಗೀಕರಣವು ಕಷ್ಟವಾಗುವುದು. ಏಕೆಂದರೆ ನಗರ ಕೇಂದ್ರಗಳು ನಿರ್ವಹಿಸುತ್ತಿದ್ದ ಕಾರ್ಯಗಳು ಹಾಗೂ ಪಾತ್ರಗಳು ವಿಭಿನ್ನವಾಗಿದ್ದವು. ಹಾಗೂ ಮಿಶ್ರಣದಿಂದ ಕೊಂಡಿದ್ದವು. ಪಟ್ಟಣಗಳು ಇತರೆ ಪಾತ್ರಗಳೊಂದಿಗೆ ಪ್ರಮುಖವಾದ ಪಾತ್ರವನ್ನು ನಿರ್ಧರಿಸುವಲ್ಲಿ ಲಭ್ಯವಿರುವ ಮಾಹಿತಿಯು ಸಹಾಯಕವಾಗುವುದಿಲ್ಲ. ಆದ್ದರಿಂದ ನಮ್ಮ ಅಧ್ಯಯನದಲ್ಲಿನ ಸಮಸ್ಯೆಗಳಲ್ಲಿ ಒಂದು ನಗರ ಕೇಂದ್ರಗಳ ಸಂಕೇತ ನಿರೂಪಣಾ ಶಾಸ್ತ್ರವಾಗಿದೆ. ಆರ್.ಜಿ.ಫಾಕ್ಸ್ ಪ್ರಕಾರ ಯಾವುದೇ ನಗರಗಳ ಸಂಕೇತ ನಿರೂಪಣ ಶಾಸ್ತ್ರವು ನಿರ್ದಿಷ್ಟ ನಗರಗಳು ಹಾಗೂ ಅವುಗಳ ಕಾಲ ಗಣನೆಯನ್ನು ಮಾಹಿತಿಯ ಆಧಾರವಾಗಿ ವ್ಯಾಪಕವಾಗಿ ಪರಿಶೀಲಿಸುವುದರ ಮೇಲೆ ಆಧಾರ

ವಾಗಿರುತ್ತದೆ. ಆದರೂ ಎಲ್ಲಾ ಸ್ಥಳಗಳ ನಗರ ಅನುಭವದ ಮೇಲೆ ಸಾಮಾನ್ಯವಾದ ದೃಷ್ಟಿಕೋನವನ್ನು ಹೊಂದುವ ಉದ್ದೇಶದಿಂದ ಅದು ವ್ಯಯಕ್ತಿಕ ನಗರ ವಿವರಣೆ ಅಥವಾ ನಗರ ವಿವರಣೆಗಳ ಒಂದು ಸಮೂಹವನ್ನು ಪ್ರತಿಯೊಂದು ಕಾಲ ಹಾಗೂ ಸ್ಥಳಗಳಿಗೆ ಬದಲಾಯಿಸುತ್ತದೆ.[60] ಆಧಾರಗಳ ಸ್ವರೂಪವು ಹೊಯ್ಸಳ ಸಾಮ್ರಾಜ್ಯದ ನಗರಗಳ ಒಂದು ನಿರ್ದಿಷ್ಟ ಸಂಕೇತ ನಿರೂಪಣಾ ಶಾಸ್ತ್ರದೆಡೆಗೆ ಪ್ರಯತ್ನ ಮಾಡುವುದನ್ನು ಹೆಚ್ಚು ಕ್ಲಿಷ್ಟವನ್ನಾಗಿರಿಸಿದೆ. ಒಂದು ರೀತಿಯಾದ ನಗರಗಳನ್ನು ಇನ್ನೊಂದು ರೀತಿಯಾದ ನಗರಗಳಿಂದ ಸ್ಪಷ್ಟವಾಗಿ ಪ್ರತ್ಯೇಕಿಸುವುದು ಅಷ್ಟೇನು ಸುಲಭದ ಮಾತಲ್ಲ, ಆದರೂ ಕೆಲವೇ ನಗರಗಳು ಉಳಿದವೆಲ್ಲಕ್ಕಿಂತಲೂ ಭಿನ್ನವಾಗಿ ತೋರುತ್ತದೆ. ಉದಾ. ದೇವಾಲಯ ಪಟ್ಟಣಗಳು ತಮ್ಮ ಬೆಳವಣಿಗೆಗೆ ಹಾಗೂ ಉಳಿವಿಗೆ ಧರ್ಮವನ್ನು ಪ್ರಮುಖ ಅಂಶವಾಗಿಟ್ಟುಕೊಂಡು ಬೆಳದವು. ಇದೇ ರೀತಿಯಾಗಿ ವ್ಯಾಪಾರ ಹಾಗೂ ವಾಣಿಜ್ಯ, ರಾಜಕೀಯ, ಆಡಳಿತ ಕೇಂದ್ರಗಳು ಮತ್ತು ಕೋಟೆಗಳು ರಾಜಕೀಯ ಹಾಗೂ ಸೇನಾ ಚಟುವಟಿಕೆಗಳನ್ನು ಪ್ರಮುಖವಾಗಿರಿಸಿಕೊಂಡು ಮಾರುಕಟ್ಟೆ ಪಟ್ಟಣಗಳು ಒಂದಕ್ಕಿಂತ ಇನ್ನೊಂದು ಭಿನ್ನವಾಗಿದ್ದವು. ಆದರೆ ಇಲ್ಲೂ ಕೂಡ ಇತರೆ ಕಾರ್ಯಗಳು ಹಾಗೂ ಪಾತ್ರಗಳನ್ನು ಹೊಂದಿದ್ದ ಪಟ್ಟಣಗಳನ್ನು ನಾವು ನೋಡುತ್ತೇವೆ. ಆದ್ದರಿಂದ ನಮ್ಮ ಅಧ್ಯಯನಕ್ಕೆ ದೊರೆಯುವ ಮಾಹಿತಿ ಹಾಗೂ ವಿಶ್ಲೇಷಣೆಯಿಂದ ಪ್ರತ್ಯೇಕವಾಗಿ ಮಾರುಕಟ್ಟೆ ಪಟ್ಟಣ, ರಾಜಕೀಯ ಅಥವಾ ಧಾರ್ಮಿಕ ಪಟ್ಟಣವೆಂದು ಗುರುತಿಸುವುದು ಕಷ್ಟವಾಗುತ್ತದೆ. ಆದರೂ ಕೆಲವು ಪಟ್ಟಣಗಳ ವಿಷಯದಲ್ಲಿ ಒಂದು ನಿರ್ದಿಷ್ಟ ವೈಶಿಷ್ಟ ಎಲ್ಲದಕ್ಕಿಂತಲೂ ವಿಭಿನ್ನ ಲಕ್ಷಣವನ್ನು ಹೊಂದಿರಬಹುದು ಹಾಗೂ ಅಂತಹ ಪಟ್ಟಣಗಳನ್ನು ಒಂದು ನಿರ್ದಿಷ್ಟ ಗುಂಪಿನಡಿಯಲ್ಲಿ ವರ್ಗೀಕರಿಸಬಹುದು.

ಒಂದು ನಗರದ ಬೆಳವಣಿಗೆಯನ್ನು ಶೋಧಿಸುವಲ್ಲಿ ಹಲವಾರು ಅಂಶಗಳು ತಮ್ಮ ಪಾತ್ರಗಳನ್ನು ನಿರ್ವಹಿಸುತ್ತಿರುವುದನ್ನು ಕಾಣಬಹುದು. ಕೆಲವು ಪಟ್ಟಣಗಳು ಒಂದಕ್ಕಿಂತ ಹೆಚ್ಚು ಪಾತ್ರವನ್ನು ನಿರ್ವಹಿಸಬಹುದು. ಉದಾಹರಣೆಗೆ ಒಂದು ದೇವಾಲಯವನ್ನು ಅಥವಾ ಸಂತೆಯನ್ನೋ ಸ್ಥಾಪಿಸಿದಂತಹ ಒಂದು ಪಟ್ಟಣದಲ್ಲಿ ಅದು ಒಂದು ಮುಖ್ಯ ಪಟ್ಟಣ ಆಗಬಹುದು ಅಥವಾ ಕಾಲಾನಂತರದಲ್ಲಿ ಅಲ್ಲಿ ಒಂದು ಕೋಟೆಯನ್ನು ನಿರ್ಮಿಸಬಹುದು. ಇವೆಲ್ಲದರ ಜೊತೆಗೆ ಮೂಲ ದೇವಾಲಯವು ಶ್ರೇಷ್ಟಸ್ಥಾನವನ್ನು ಆಕ್ರಮಿಸಿ ಯಾತ್ರಿಗಳನ್ನು ಆಕರ್ಷಿಸುತ್ತಾ ಪಟ್ಟಣವಾಗಿ ಮುಂದುವರೆಯಬಹುದು.

ಕೆಲವು ಸಂದರ್ಭಗಳಲ್ಲಿ ಒಂದು ನಿರ್ದಿಷ್ಟ ಪಟ್ಟಣವು ತನ್ನ ಮೂಲ ಲಕ್ಷಣವನ್ನು ಕಳೆದು ಕೊಳ್ಳಬಹುದು ಹಾಗೂ ಪರ್ಯಾಯ ಸನ್ನಿವೇಶದಲ್ಲಿ ಇನ್ನೊಂದು ರೀತಿಯಾದ ಪಟ್ಟಣವಾಗಿ ಮುಂದುವರೆಯಬಹುದು. ಆದರೆ ಹೆಚ್ಚಿನ ಸನ್ನಿವೇಶಗಳಲ್ಲಿ ಈ ಬದಲಾವಣೆಗಳನ್ನು ಸ್ಪಷ್ಟ ಪದಗಳಲ್ಲಿ ವಿವರಿಸುವುದು ಕಷ್ಟವಾಗುತ್ತದೆ. ಏಕೆಂದರೆ ಲಭ್ಯವಿರುವ ದಾಖಲೆಗಳು ವಿವಿಧ ಕಾಲಗಳ ಪಟ್ಟಗಳು ನಿರಂತರವಾಗಿ ನಿರೂಪಣೆಯನ್ನು ಕೊಡುವಲ್ಲಿ ಸಹಕಾರಿಯಾಗಿಲ್ಲ.

ಪಟ್ಟಣಗಳ ನಿರೂಪಣಾ ಶಾಸ್ತ್ರ ಅವುಗಳ ಬೆಳವಣಿಗೆಯ ವಿಧಾನಗಳು ಅಸ್ಪಷ್ಟವಾಗಿ ಉಳಿಯುತ್ತದೆ. ಹಾಗೂ ಅವುಗಳ ಮೇಲಿನ ಅಭಿಪ್ರಾಯಗಳು ಮಾತ್ರ ಸಾಧ್ಯವಾಗಬಹುದು. ಆದ್ದರಿಂದ ಪಟ್ಟಣಗಳ ಬೆಳವಣಿಗೆಯ ಅಧ್ಯಯನದ ನಮ್ಮ ಈ ಪ್ರಯತ್ನದಲ್ಲಿ ಪಟ್ಟಣಗಳ ವರ್ಗೀಕರಣ ಹಾಗೂ ಇಲ್ಲಿ ನೀಡಿರುವ ಪಟ್ಟಣಗಳ ವಿಧಗಳು, ಅಸ್ಪಷ್ಟವಾಗಿವೆ. ಈ ಸಂಬಂಧದಲ್ಲಿ ಥೇಂಬರ್ ಈ ರೀತಿ ಹೇಳುತ್ತಾನೆ. "ನಿಜವಾದ ನಗರಗಳು ಹೆಚ್ಚು ಕಡಿಮೆ ಯಾವಾಗಲೂ ಮಿಶ್ರ ವಿಧಗಳನ್ನು ಪ್ರತಿನಿಧಿಸುತ್ತವೆ ಎಂದು ಹೇಳುವುದು ಅನಾವಶ್ಯಕವಾಗುತ್ತದೆ" ಎಂದಿದ್ದಾನೆ.

೩.1.3 ಪಟ್ಟಣಗಳ ಹುಟ್ಟು ಹಾಗೂ ಬೆಳವಣಿಗೆ

ಹೊಯ್ಸಳ ಅರಸರು ಬಹಳಷ್ಟು ಅಗ್ರಹಾರಗಳನ್ನು ಸ್ಥಾಪಿಸಿದ್ದರು ಮತ್ತು ಅಗ್ರಹಾರಗಳಿಗೆ ಉದಾರವಾದ ದಾನ ದತ್ತಿಗಳನ್ನು ನೀಡುವುದರ ಮೂಲಕ ಅನೇಕ ಗ್ರಾಮಗಳನ್ನು ಪುರಗಳಾಗಿ ಪರಿವರ್ತಿಸಿದರು. ಪುರಗಳು ಹಾಗೂ ಪೇಟೆಗಳ ಸ್ಥಾಪನೆಗಳ ಬಗ್ಗೆ ಅನೇಕ ಉದಾಹರಣೆಗಳಿವೆ. ಬ್ರಾಹ್ಮಣರು ಧಾರ್ಮಿಕ ನಾಯಕರು, ಶಿವಶರಣರು, ಕುಶಲಕರ್ಮಿಗಳು, ವರ್ತಕರು ಹಾಗೂ ಸಂಘದ ನಾಯಕರುಗಳು ಇವುಗಳಲ್ಲಿ ನೆಲೆಸಲು ಕೆಲವು ವಿನಾಯಿತಿಗಳನ್ನು ನೀಡಲಾಗಿತ್ತು. ಆಗ ಕೆರೆಗಳನ್ನು ನಿರ್ಮಿಸಲಾಯಿತು, ಅರಣ್ಯಗಳನ್ನು ಕಡಿದು ಹಾಕಲಾಯಿತು, ಕೃಷಿ ಚಟುವಟಿಕೆಗಳನ್ನು ಪ್ರೋತ್ಸಾಹಿಸ ಲಾಯಿತು. ದೇವಾಲಯಗಳು ಹಾಗೂ ಮಠಗಳನ್ನು ನಿರ್ಮಿಸಲಾಯಿತು ಮತ್ತು ದೇವತಾ ಮೂರ್ತಿ ಗಳನ್ನು ಪ್ರತಿಷ್ಠಾಪಿಸಲಾಯಿತು. ವಿವಿಧ ಧರ್ಮದ ಪಂಗಡಗಳ ಹಾಗೂ ಮಠಗಳ ನಾಯಕರುಗಳಿಗೆ ದಾನವನ್ನು ನೀಡಲಾಯಿತು. ಹಾಗೂ ಚಿತ್ರಗಳನ್ನು ನಿರ್ಮಿಸಲಾಯಿತು. ಈ ಕಾಲದ ಶಾಸನಗಳು ಈ ಚಟುವಟಿಕೆಗಳ ಫಲದಿಂದಾಗಿ ಕೆಲವು ಸ್ಥಳಗಳು ಅವುಗಳು ಇದ್ದ ಗ್ರಾಮೀಣ ಪರಿಸರದಲ್ಲೂ ಪ್ರಾಮುಖ್ಯತೆಯನ್ನು ವಹಿಸಿದ್ದವು. ಹಾಗೂ ಅವುಗಳ ಬೆಳವಣಿಗೆಗೆ ಪ್ರೋತ್ಸಾಹವನ್ನು ನೀಡಿದವು. ಇಂತಹ ಸನ್ನಿವೇಶಗಳಲ್ಲಿ ಬ್ರಾಹ್ಮಣರು ಮತ್ತು ದೇವಾಲಯಗಳು ಬೆಳವಣಿಗೆ ಹಾಗೂ

ಬದಲಾವಣೆಯ ಅಗ್ರಸೇರರಾಗಿ ಪ್ರಾಮುಖ್ಯತೆಯನ್ನು ಹೊಂದಿದ ದೊಡ್ಡ ಸ್ಥಳಗಳಾಗಿದ್ದವು. ಈ ಎಲ್ಲಾ ಪುರಗಳು ಈ ಪದದ ಸಂಪೂರ್ಣ ಅರ್ಥದಲ್ಲಿ ನಗರ ಕೇಂದ್ರಗಳಾಗಿರಲಿಲ್ಲ ಎಂಬುದು ಸತ್ಯವಾದ ಮಾತಾಗಿದೆ. ಆದರೆ ಕಾಲಾನಂತರದಲ್ಲಿ ಕೆಲವು ಸ್ಥಳಗಳಿಗೆ ಹೆಚ್ಚಿನ ಕಾರ್ಯಗಳನ್ನು ವಹಿಸಲಾಯಿತು. ಹಾಗೂ ಈ ಕಾರಣದಿಂದಾಗಿ ಅವುಗಳು ನಗರ ಕೇಂದ್ರಗಳಾಗಿ ಬೆಳೆದವು. ಅವುಗಳ ವ್ಯಾಪಾರ ಮಾರ್ಗದಲ್ಲಿ ನೆಲೆಸಿದ ಹೊರತು ಅಥವಾ ಈ ಸ್ಥಳಗಳಲ್ಲಿ ಒಂದು ದೊಡ್ಡ ಮಾರುಕಟ್ಟೆಯ ಕಾರ್ಯ ನಿರ್ವಹಿಸಿದ ಹೊರತು ಅಥವಾ ದೊಡ್ಡ ದೇವಾಲಯ ದೇವತೆಯ ಮೂರ್ತಿ ಮಠಗಳು ನಿರ್ಮಾಣವಾಗದೇ ಅಥವಾ ಕೆಲವು ಆಡಳಿತ ಜವಾಬ್ದಾರಿಗಳನ್ನು ಹೊರಿಸಿದ ಉಪಕಛೇರಿಯ ಮುಖ್ಯ ನೆಲೆಗಳಾಗದೇ ಈ ಪುರಗಳು ಕೇವಲ ಸಣ್ಣ ಗಾತ್ರದವುಗಳಾಗಿ ಉಳಿದವು ಅಥವಾ ಕಾಲ ಕಳೆದಂತೆ ಆರ್ಥಿಕ ಅವನತಿ ಹಾಗೂ ರಾಜಕೀಯ ಅಸ್ಥಿರತೆಗಳು ತಲೆದೋರಿದ ಪರಿಣಾಮವಾಗಿ ಮರೆಯಾದವು.

ಹೊಯ್ಸಳರ ಕಾಲದಲ್ಲಿ ಅನೇಕ ಪುರಗಳು ಪಟ್ಟಣಗಳಾಗಿ ಬೆಳವಣಿಗೆ ಹೊಂದಿದ ಉದಾಹರಣೆಗಳಿವೆ. ಇದರಿಂದಾಗಿ ಪಟ್ಟಣಗಳ ಬೆಳವಣಿಗೆಯಲ್ಲಿ ಹೆಚ್ಚಳವಾಯಿತು. ಮಂಡ್ಯ ಜಿಲ್ಲೆಯ ಕ್ರಿ.ಶ. 12 ಮತ್ತು 15ನೇ ಶತಮಾನದವರೆಗಿನ ದೊಡ್ಡ ಸಂಖ್ಯೆಯ ಶಾಸನಗಳು ಗ್ರಾಮಗಳು ನಗರ ನೆಲೆಗಳಾಗಿ ಪರಿವರ್ತನೆ ಹೊಂದಿದ ಹಾಗೂ ಭೂ ಒಡೆತನ ಮತ್ತು ಇತರ ಆಸ್ತಿಗಳಾಗಿ ಒಡೆತನದ ಮೇಲೆ ಅನೇಕ ಷರತ್ತುಗಳನ್ನು ಹಾಕಿದುದರ ಉಲ್ಲೇಖವನ್ನು ನೀಡುತ್ತವೆ. ಈ ಕಾಲದಲ್ಲಿ ಆರ್ಥಿಕ ಅಭ್ಯುದಯವು ನೆಲೆಸಿದ್ದರಿಂದ ವ್ಯಾಪಾರವು ಬೆಳವಣಿಗೆಯಾಯಿತು. ವ್ಯಾಪಾರವನ್ನು ಪ್ರೋತ್ಸಾಹಿಸುವ ಉದದೇಶದಿಂದಾಗಿ ಹಲವು ಹೊಸ ಸಂತೆಗಳನ್ನು ಸ್ಥಾಪಿಸಲಾಯಿತು. ಇದರಿಂದಾಗಿ ಹಳ್ಳಿಗಳು ಪಟ್ಟಣಗಳಾಗಿ ಹಾಗೂ ಅನೇಕ ಸೌಕರ್ಯಗಳನ್ನು ಹೊಂದಿ ಬೆಳೆಯಲು ಸಹಾಯಕವಾಯಿತು. ಅಂತಹ ಪಟ್ಟಣಗಳನ್ನು ನೋಡಿಕೊಳ್ಳುವುದಕ್ಕಾಗಿ ಹೊಸ ನಿಯಂತ್ರಣಗಳನ್ನು ಹೇರಲಾಯಿತು.[61]

ಕ್ರಿ.ಶ. 1328 ರ ಯಳಂದೂರಿನ ಒಂದು ಶಾಸನವು ತಿಳಿಸುವಂತೆ ಉಪೇಂದ್ರ ಪಟ್ಟಣ ಅಥವಾ ಮದ್ದೂರನ್ನು ಹೊಯ್ಸಳ ವೀರ ಬಲ್ಲಾಳನ ಕಾಲದಲ್ಲಿ ನಿರ್ಮಿಸಲಾಗಿತ್ತು. ಈ ಪಟ್ಟಣವು ವರ್ತಕರು, ಕುಶಲಕರ್ಮಿಗಳು ಹಾಗೂ ಇತರೆ ಸಾಮಾಜಿಕ ಗುಂಪಿನ ಜೊತೆ ಸಂಪರ್ಕವನ್ನು ಹೊಂದಿದ್ದರಿಂದ ಆರ್ಥಿಕ ಪ್ರಾಮುಖ್ಯತೆಯನ್ನು ಹೊಂದಿತ್ತು. ಇದೇ ಸ್ಥಳದ ಇನ್ನೊಂದು ಶಾಸನದ

ಪ್ರಕಾರ ಉಪೇಂದ್ರಪುರದ ಮಹಾಜನರು ಒಬ್ಬ ಕುಶಲಕರ್ಮಿಗೆ ಅವನ ಕಾರ್ಯ ಕುಶಲತೆಯನ್ನು ಮೆಚ್ಚಿ ದಾನ ಮಾಡಿದ್ದರು.[62] ಒಂದು ಶಾಸನದ ಪ್ರಕಾರ ಈ ಪಟ್ಟಣವು ಕಾಲಾ ನಂತರದಲ್ಲಿ ಬೆಳೆಯುತ್ತದೆ ಎಂಬುದನ್ನು ಕಾಣುತ್ತೇವೆ. ಆ ಪಟ್ಟಣದ ಮಹಾಜನರು, ಶೆಟ್ಟರು, ವರ್ತಕರು ಹಾಗೂ ಗೌಡಜನಗಳು ದಾನ ನೀಡುವುದರಲ್ಲಿ ಭಾಗಿಯಾಗಿದ್ದರು. ಈ ದಾನಗಳನ್ನು ಮದ್ದೂರಿನ ದೇಶೀನಾಥ ದೇವರಿಗೆ ನೀಡಲಾಗಿತ್ತು.[63]

ನಂತರ ಇದೇ ಸ್ಥಳದಲ್ಲಿ ದೇವಾಲಯಗಳನ್ನು ನವೀಕರಿಸಲಾಯಿತು. ಹಾಗೂ ದಾನಗಳನ್ನು ನೀಡಲಾಯಿತು. ಪಟ್ಟಣದ ಸ್ಥಾಪನೆ ಹಾಗೂ ಅದರ ಬೆಳವಣಿಗೆಯ ಇನ್ನೊಂದು ಉದಾಹರಣೆಯು ಕೊಳ್ಳೆಗಾಲದ ಶಾಸನಗಳ ಒಂದು ಸರಣಿಯಿಂದ ತಿಳಿದು ಬರುತ್ತದೆ. ಈ ಪಟ್ಟಣವು ಮಧ್ಯಕಾಲೀನ ಯುಗದ ಪಟ್ಟಣದ ಅನೇಕ ವೈಶಿಷ್ಟ್ಯತೆಗಳಾದ ದೇವಾಲಯಗಳು ಹಾಗೂ ಮಾರುಕಟ್ಟೆಗಳು ಮತ್ತು ಸಾಮಾಜಿಕವಾಗಿ ವಿವಿಧ ಗುಂಪುಗಳಾದ ವರ್ತಕರು ಕುಶಲಕರ್ಮಿಗಳು, ಬ್ರಾಹ್ಮಣರಂತಹ ಅನೇಕ ಲಕ್ಷಣಗಳನ್ನು ಹೊಂದಿತ್ತು. ಹಲವಾರು ಪ್ರಮುಖ ಕಾರ್ಯಗಳನ್ನು ನಿರ್ವಹಿಸುತ್ತಿದ್ದ ಕಾರಣ ಇದೊಂದು ಪ್ರಮುಖ ಪಟ್ಟಣವಾಗಿತ್ತು.

ಆರ್ಥಿಕ ಪ್ರಾಮುಖ್ಯತೆಯನ್ನು ಹೊಂದಿದ್ದ ಪ್ರಬಲ ಕೇಂದ್ರಗಳು ವೈವಿಧ್ಯಮಯ ಗುಣಲಕ್ಷಣಗಳು ಹಾಗೂ ಪ್ರಾಬಲ್ಯದೊಂದಿಗೆ ನಗರ ಕೇಂದ್ರಗಳಾಗಿ ಬೆಳವಣಿಗೆಯನ್ನು ಹೊಂದಿದ್ದವು. ವ್ಯಾಪಾರ, ವಾಣಿಜ್ಯ ಹಾಗೂ ಇತರ ಆರ್ಥಿಕ ಚಟುವಟಿಕೆಗಳು ಈ ಪಟ್ಟಣಗಳ ಪ್ರಮುಖ ಅಂಗವಾಗಿದ್ದವು. ಅವುಗಳನ್ನು ವ್ಯಾಪಾರ ಮಾರ್ಗಗಳ ಮೇಲೆ ಸಾರಿಗೆ ಸಂಪರ್ಕ ಹಾಗೂ ಸಾಧನಗಳು ಸುಲಭವಾಗಿ ಸಿಗುವ ಸ್ಥಳಗಳಲ್ಲಿ ಸ್ಥಾಪಿಸಲಾಗುತ್ತಿತ್ತು. ಇಂತಹ ಪಟ್ಟಣಗಳು ಮಧ್ಯಕಾಲೀನ ಪಟ್ಟಣವಾದ ಅನೇಕ ಆಸ್ತಿಗಳನ್ನು ಹಾಗೂ ವೈವಿಧ್ಯಮಯ ಜನರ ಗುಂಪುಗಳಾದ ವರ್ತಕರು ಹಾಗೂ ಕುಶಲಕರ್ಮಿಗಳನ್ನು ಹೊಂದಿದ್ದವು. ಈ ಸ್ವರೂಪದ ಪಟ್ಟಣಗಳು ಹೆಚ್ಚು ಹೆಚ್ಚು ಕಾರ್ಯಗಳನ್ನು ನಿರ್ವಹಿಸಿದವು. ಹಾಗೂ ವಿವಿಧ ಬಗೆಯ ಪಾತ್ರಗಳನ್ನು ನಿರ್ವಹಿಸಿದವು. ಅವುಗಳ ಪ್ರಭಾವವು ಸ್ಥಳೀಯ ಪ್ರದೇಶದ ಸುತ್ತಳತೆಯಿಂದ ಬಹುದೂರ ವಿಸ್ತರಿಸಿತ್ತು.

ಹೊಯ್ಸಳರ ಕಾಲದಲ್ಲಿ ವೇಲಾಪುರಿ ಅಥವಾ ಬೇಲೂರು ಬಹಳ ಪ್ರಾಮುಖ್ಯತೆಯನ್ನು ಹೊಂದಿದ್ದ ನಗರವಾಗಿತ್ತು. ಹೊಯ್ಸಳರ ಅವನತಿಯ ನಂತರವು ಪ್ರಖ್ಯಾತ ಚನ್ನಕೇಶವ

ದೇವಾಲಯವು ವಿಜಯನಗರ ಅರಸರಿಂದ ಹಲವಾರು ಕೊಡುಗೆಗಳನ್ನು ಸ್ವೀಕರಿಸಿತು. ಆದ್ದರಿಂದ ಬೇಲೂರು ಅವನತಿಯನ್ನು ಹೊಂದಲಿಲ್ಲ. ಇದು ಚನ್ನಕೇಶವ ದೇವಾಲಯದ ಪೀಠವಾಗಿತ್ತು. ಚನ್ನಕೇಶವ ದೇವರ ಶ್ರೇಷ್ಠತೆಯನ್ನು ಬೇಲೂರು ಕೇಶವ ಮಹಾತ್ಮೆಯಲ್ಲಿ ವಿವರಿಸಲಾಗಿದೆ.[64] ವಿಜಯನಗರದ ಅರಸರ ಆಳ್ವಿಕೆಯ ಕಾಲದಲ್ಲಿ ಈ ದೇವಾಲಯದ ಜೀರ್ಣೋದ್ಧಾರ ನಡೆಯಿತು ಮತ್ತು ಎಲ್ಲ ವಿಧವಾದ ಆಚರಣೆಗಳನ್ನು ಪುನರ್ ಸ್ಥಾಪಿಸಿ ದಾನವನ್ನು ನೀಡಲಾಯಿತು.[65]

ಆಗ ಕೆಲವು ವರ್ತಕರು ತೆರಿಗೆಗಳನ್ನು ನೀಡಿದರು. ಈ ಪಟ್ಟಣವು ದಕ್ಷಿಣ ವಾರಣಾಸಿ ಎಂಬ ಹೆಸರನ್ನು ಉಳಿಸಿಕೊಂಡಿತು. ಬೇಲೂರಿನ ಧಾರ್ಮಿಕ ಪ್ರಾಮುಖ್ಯತೆಯೊಂದಿಗೆ ಆರ್ಥಿಕ ಹಾಗೂ ರಾಜಕೀಯ ಪ್ರಾಮುಖ್ಯತೆಯನ್ನು ಗಮನಕ್ಕೆ ತೆಗೆದುಕೊಳ್ಳಬಹುದು.[66] ಒಂದು ಶಾಸನದ ಪ್ರಕಾರ ಬೇಲೂರು ನಗರವು ಪಟ್ಟಣಸ್ವಾಮಿಯನ್ನು ಹೊಂದಿತ್ತು.[67]

೨.1.4 ನಗರ ಕೇಂದ್ರಗಳ ಗಾತ್ರ ಹಂಚಿಕೆ ಹಾಗೂ ರಚನೆ

ಹಿಂದಿನ ಅಧ್ಯಾಯದಲ್ಲಿ ಹಲವು ಶತಮಾನಗಳ ಕಾಲ ಸಾಮ್ರಾಜ್ಯದ ವಿವಿಧ ಪ್ರದೇಶಗಳಲ್ಲಿ ವಿವಿಧ ಸ್ವರೂಪದ ನಗರ ಕೇಂದ್ರಗಳ ಹುಟ್ಟು, ವಿಸ್ತರಣೆ ಹಾಗೂ ನಿರ್ವಹಣೆಯಲ್ಲಿ ಪ್ರತಿಬಿಂಬ ಗೊಂಡಿರುವಂತೆ ನಗರ ಬೆಳವಣಿಗೆಯಿತ್ತು ಎಂಬುದನ್ನು ವಿವರಿಸಲಾಗಿದೆ. ಈ ರೀತಿಯಾದ ಬೆಳವಣಿಗೆಯ ವಿಧಾನವು ಏಕಮತವಾಗಿರಲಿಲ್ಲ. ಇದು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹಾಗೂ ಒಂದು ನಗರಕೇಂದ್ರದಿಂದ ಇನ್ನೊಂದು ಕೇಂದ್ರಕ್ಕೆ ವ್ಯತ್ಯಾಸವನ್ನು ಹೊಂದಿತ್ತು. ಈ ಭಿನ್ನತೆಯನ್ನು ರೂಪ ಹಾಗೂ ಗಾತ್ರಗಳೆರಡರಲ್ಲಿ ಕಾಣಬಹುದಾಗಿತ್ತು. ಆದರೆ ಪಟ್ಟಣಗಳ ವರ್ಗೀಕರಣದಲ್ಲಿ ಬಹಳಷ್ಟು ಕ್ಲಿಷ್ಟತೆಗಳಿವೆ. ಏಕೆಂದರೆ ಹೆಚ್ಚಿನ ಪಟ್ಟಣಗಳು ನಾನಾ ಬಗೆಯ ಮಿಶ್ರ ಗುಣಗಳನ್ನು ಹೊಂದಿದ್ದವು. ಆದರೂ ಕೆಲವು ಪಟ್ಟಣಗಳು ಇನ್ನಿತರ ಪಟ್ಟಣಗಳಿಗಿಂತ ಪ್ರತ್ಯೇಕವಾದ ಕೆಲವು ವೈಶಿಷ್ಟತೆಗಳನ್ನು ಹೊಂದಿದ್ದವು, ಇವು ಅವುಗಳು ನಿರ್ವಹಿಸುತ್ತಿದ್ದ ಕಾರ್ಯಗಳಲ್ಲಿ ಸ್ಪಷ್ಟವಾಗಿತ್ತು. ಈಗಿನ ಪ್ರಸ್ತುತ ಅಧ್ಯಯನದಲ್ಲಿ ಪಟ್ಟಣಗಳ ಗಾತ್ರ ಹಾಗೂ ಅವುಗಳ ಹಂಚಿಕೆಯ ವಿಧಾನವನ್ನು ನಿರ್ಧರಿಸಲು ಒಂದು ಪ್ರಯತ್ನವನ್ನು ಮಾಡಲಾಗಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ವಿವಿಧ ಗಾತ್ರಗಳ ಪಟ್ಟಣಗಳನ್ನು ಜೋಡಿಸುವುದರ ಒಂದು ವಿಶ್ಲೇಷಣೆ ಅಥವಾ ನಗರ ರಚನೆಯ ಒಂದು ವಿಶ್ಲೇಷಣೆಯಾಗಿದೆ. ನಗರ ರಚನೆಯು ವಿವಿಧ ಗಾತ್ರಗಳ ಹಲವು ಶತಮಾನಗಳನ್ನು ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ಹರಡಿದ್ದ ಪಟ್ಟಣಗಳ ಒಂದು ಜೋಡಣೆ

ಹಾಗೂ ಹಂಚಿಕೆ ಎಂದು ಹೇಳಬಹುದು. ಈ ನಗರ ರಚನೆಯು ಇನ್ನೊಂದು ವೈಶಿಷ್ಟತೆಯನ್ನು ಹೊಂದಿತ್ತು. ಅದೇನೆಂದರೆ ದೇವಾಲಯಗಳು, ಅರಮನೆಗಳು, ಕಟ್ಟಡಗಳು ಹಾಗೂ ಅವುಗಳಲಿದ್ದ ಗೋಡೆಗಳನ್ನು ಹೊಂದಿದ್ದ ಪಟ್ಟಣಗಳು ತಮ್ಮೊಳಗೆ ಒಂದು ರೀತಿಯಾದ ರಚನೆಯನ್ನು ಹೊಂದಿದ್ದವು. ಈ ರೀತಿಯಾದ ರಚನೆಯು ಹಲವು ಶತಮಾನಗಳ ಕಾಲ ಆದ ಅಭಿವೃದ್ಧಿಯ ಫಲವಾಗಿತ್ತು.

ಹೊಯ್ಸಳರ ಸಾಮ್ರಾಜ್ಯದಲ್ಲಿ ಬರುವ ಹಲವಾರು ಬಗೆಯ ನಗರ ಕೇಂದ್ರಗಳ ಅಧ್ಯಯನದ ಆಧಾರದ ಮೇಲೆ ಇದಕ್ಕೆ ಸಂಬಂಧಿಸಿದಂತೆ ಒಂದು ಅಭಿಪ್ರಾಯಕ್ಕೆ ಬರಬಹುದು. ಇಂತಹ ಅಧ್ಯಯನವು ಶಾಸನಗಳು ಹಾಗೂ ಸಾಹಿತ್ಯದಲ್ಲಿ ದೊರೆಯುವ ಕೆಲವು ಅಲ್ಲಿ ಇಲ್ಲಿ ಸಿಕ್ಕುವ ಉಲ್ಲೇಖಗಳು ಹಾಗೂ ವಿವರಣೆಗಳು ಆಧಾರವಾಗಿದೆ.

ಹೊಯ್ಸಳರ ಸಾಮ್ರಾಜ್ಯದಲ್ಲಿ ನಗರ ಕೇಂದ್ರಗಳು ವ್ಯವಸ್ಥಿತವಾಗಿದ್ದವು. ಅವುಗಳು ನಿರ್ವಹಿಸಿದ ಕಾರ್ಯ ಹಾಗೂ ಪಾತ್ರದ ದೃಷ್ಟಿಯಲ್ಲಿ ಮೂಡಿದ ಒಂದು ಸೂಕ್ಷ್ಮ ಪರಿಶೀಲನೆಯಿಂದ ಸಾಮ್ರಾಜ್ಯದಲ್ಲಿ ವಿವಿಧ ಪಟ್ಟಣಗಳನ್ನು ಒಂದು ನಿರ್ದಿಷ್ಟ ವಿಧಾನದಲ್ಲಿ ಜೋಡಿಸಿ ಹಂಚಲಾಗಿತ್ತೆಂದು ತಿಳಿದು ಬರುತ್ತದೆ. ಗುಣಾತ್ಮಕ ಹಾಗೂ ಮಾಹಿತಿಯ ಆಧಾರದ ಮೇಲೆ ಒಂದು ನಿರ್ದಿಷ್ಟ ಪಟ್ಟಣಕ್ಕೆ ಸಂಬಂಧಿಸಿದಂತೆ ಒಂದು ಅಭಿಪ್ರಾಯಕ್ಕೆ ಬರಬಹುದು. ಒಂದು ಪಟ್ಟಣವು ನಿರ್ವಹಿಸಿದ ಪಾತ್ರ ಹಾಗೂ ಕಾರ್ಯಗಳ ವಿಶ್ಲೇಷಣೆಯ ಆಧಾರದ ಮೇಲೆ ಮೂಡಿದ ಅಭಿಪ್ರಾಯ ಗುಣಾತ್ಮಕ ಹಾಗೂ ಅಮೂರ್ತವಾಗಿದೆ. ಪಟ್ಟಣಗಳ ವರ್ಗೀಕರಣವನ್ನು ಅವುಗಳು ನಿರ್ವಹಿಸುವ ಕಾರ್ಯಗಳು ಹಾಗೂ ಅವುಗಳ ಕಾರ್ಯಾಚರಣೆಯ ಸಾಂಧ್ರತೆಯ ಆಧಾರದ ಮೇಲೆ ಅವುಗಳ ಗಾತ್ರದ ಪ್ರಕಾರವಾಗಿ ಮಾಡಬಹುದು. ಇದರ ಜೊತೆಗೆ ಕಾಲಕಳೆದಂತೆ ಈ ಸ್ಥಳಗಳ ಮೇಲೆ ನಗರೀಕರಣದ ಹೇರಿಕೆಯಾಧಾರದ ಮೇಲೆ ಪಟ್ಟಣಗಳ ಗಾತ್ರದಲ್ಲಿ ಭಿನ್ನತೆಗಳಿದ್ದವು. ಏಕೆಂದರೆ ನಗರೀಕರಣದ ವಿವಿಧ ಅಂಶಗಳ ಹಿಂತೆಗೆತ ಅಥವಾ ಪ್ರಭಾವವಾಗಿದೆ. ಈಗಿನ ಅಧ್ಯಯನವು ಒಂದು ವಿಧದ ರಚನಾಕ್ರಮವಿದ್ದುದನ್ನು ತೋರಿಸುತ್ತದೆ. ಹಾಗೂ ಈ ವಿಧಾನದಲ್ಲಿ ವಿವಿಧ ಗಾತ್ರಗಳ ನಗರ ಕೇಂದ್ರಗಳು ವಿವಿಧ ಹಂತಗಳಲ್ಲಿ ನೆಲೆಸಿದ್ದವು. ಈ ಸಂಬಂಧವಾಗಿ ಎರಡು ಕುತೂಹಲಕಾರಿಯಾದ ಅಧ್ಯಯನಗಳನ್ನು ಮಾಡಬಹುದು. ರವೀಂದ್ರಕುಮಾರ್‌ರವರು ವಸಾಹತು ಭಾರತದಲ್ಲಿನ ನಗರ ಸಮಾಜದ ಬದಲಾಗುತ್ತಿರುವ ರಚನೆಯನ್ನು ಅಧ್ಯಯನ ಮಾಡುತ್ತಾರೆ. ಇಂತಹ ಅಧ್ಯಯನವನ್ನು

ಮಾಡುವಾಗ ವಸಾಹತು ಪೂರ್ವ ಭಾರತೀಯ ನಗರ ರಚನೆಯತ್ತ ದೃಷ್ಟಿಯನ್ನು ಹರಿಸುತ್ತಾರೆ. ಅವರು ಹೇಳುವಂತೆ ವಸಾಹತು ಪೂರ್ವ ಭಾರತದಲ್ಲಿ ನಕ್ಷೆ ಬರೆಯುವನೊಬ್ಬನು ಭಾರತದ ವಿವಿಧ ಪ್ರದೇಶಗಳಲ್ಲಿ ನೆಲೆಸಿದ್ದ ಇಪ್ಪತ್ತು ಅಥವಾ ಅದಕ್ಕಿಂತ ಮಿಗಿಲಾದ ನಗರಗಳನ್ನು ಊಹಿಸುತ್ತಿದ್ದ. ಅದೇ ನಕ್ಷೆ ಬರೆಯುವವನು ವಿವರವಾಗಿ ಪರಿಶೀಲಿಸುವ ಪ್ರದೇಶಗಳು ಮೇಲೆ ತಿಳಿಸಿದವುಗಳಾಗಿದ್ದರೆ ಅವನು ಆ ಪ್ರದೇಶದಲ್ಲಿ ಅವನತಿಯ ಹಂತದಲ್ಲಿದ್ದ ಪಟ್ಟಣಗಳನ್ನು ಊಹಿಸುತ್ತಿದ್ದನು. ದೊಡ್ಡ ನಗರಗಳು ಉಪಖಂಡದ ಎಲ್ಲೆಡೆ ಸಮತಲವಾಗಿ ವಿಸ್ತರಿಸಿದ್ದವು ಹಾಗೂ ಅವನತಿಯ ಗುಂಪಿನಲ್ಲಿದ್ದ ಪಟ್ಟಣಗಳು ಮತ್ತು ಪಟ್ಟಣನೆಲೆಗಳು ಈ ದೊಡ್ಡ ಪಟ್ಟಣಗಳೊಂದಿಗೆ ಸಂಪರ್ಕವನ್ನು ಹೊಂದಿದ್ದವು. ನಗರ ರಚನೆಯ ಅತೀ ಸಣ್ಣ ಶಾಖೆಯು ಕಸಬಾಗಿತ್ತು. ಇದು ಇಪ್ಪತ್ತು ಹಳ್ಳಿಗಳನ್ನೊಳಗೊಂಡು ಗ್ರಾಮೀಣ ಪ್ರದೇಶದ ಆಡಳಿತ, ರಾಜಕೀಯ ಹಾಗೂ ಆರ್ಥಿಕ ಭವಿಷ್ಯವನ್ನು ನಿರ್ಧರಿಸುತ್ತಿತ್ತು.

ನಗರ ರಚನೆಯ ಲಂಬಾಂತರ ಕೋನದಲ್ಲಿ ಕಸಬಾವು ಅತ್ಯಂತ ಕೆಳ ಶ್ರೇಣಿಯಲ್ಲಿ ನೆಲೆಸಿತ್ತು. ಕಸಬಾಕ್ಕಿಂತ ಗಾತ್ರದಲ್ಲಿ ಹೆಚ್ಚು ಹಾಗೂ ರಚನೆಯಲ್ಲಿ ಸಂಕೀರ್ಣವಾಗಿದ್ದ ಒಂದೆರಡು ನಗರ ಗುಂಪುಗಳು ಕಸಬಾ ಹಾಗೂ ದೊಡ್ಡ ನಗರದ ಮಧ್ಯೆ ಪ್ರವೇಶ ಮಾಡಿದವು. ಈ ದೊಡ್ಡ ನಗರದ ರಚನೆಯು ಸಮತಲ ಕೋನಗಳ ಭಾಗವಾಗಿತ್ತು. ದೊಡ್ಡ ನಗರಗಳು ನಗರ ಶ್ರೇಣಿಯ ತುತ್ತ ತುದಿಯಲ್ಲಿದ್ದವು ಮಧ್ಯಮ ಗಾತ್ರದ ಪಟ್ಟಣಗಳು ಮಧ್ಯಭಾಗದಲ್ಲಿ ಹಾಗೂ ಕಸಬು ಕೆಳಮಟ್ಟ ದಲ್ಲಿದ್ದವು. ಶೃಂಗ ಸ್ಥಾನದಲ್ಲಿದ್ದ ನಗರ ಹಾಗೂ ಅದು ನೆಲೆಸಿದ್ದ ನಗರ ಪಿರಮಿಡ್ಡಿನ ವಿಶಿಷ್ಟ ಲಕ್ಷಣಗಳು ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿದ್ದವು. ಹಾಗೂ ಇವುಗಳ ಮಿಶ್ರ ಗುಣವು ಆ ಪ್ರದೇಶದ ಆರ್ಥಿಕ ರಚನೆ ಹಾಗೂ ಸಾಮಾಜಿಕ ಸಂಘಟನೆಯ ಮೇಲೆ ಆಧಾರವಾಗಿತ್ತು. ವಿದ್ವಾಂಸರು ನಗರ ಸಮಾಜದ ಗರ್ಭದಲ್ಲಿ ಕಂಡುಬರುವ ಸಮತಲ ವಿಸ್ತೀರ್ಣಗಳ ಪಟ್ಟಣಗಳ ಸರಪಳಿ, ವೈವಿಧ್ಯಮಯ ಪಾತ್ರಗಳು ಹಾಗೂ ಸಂಕೀರ್ಣ ರಚನೆಯೆಡೆಗೆ ಗಮನವನ್ನು ಹರಿಸುತ್ತಾರೆ.[68]

ಮತ್ತೊಬ್ಬ ವಿದ್ವಾಂಸರಾದ ಕೆ.ಎನ್.ಸಿಂಗ್‌ರವರು ಇದಕ್ಕೆ ಸಂಬಂಧಿಸಿದಂತೆ ಬೇರೆ ರೀತಿಯ ಒಂದು ಅಧ್ಯಾಯವನ್ನು ಮಾಡಿದ್ದಾರೆ. ಉತ್ತರ ಪ್ರದೇಶದ ಮಧ್ಯಕಾಲೀನ ಪಟ್ಟಣ ಹಾಗೂ ಗ್ರಾಮೀಣ ವಸಾಹತುವಿನ ಪ್ರಾದೇಶಿಕ ಅಧ್ಯಯನವನ್ನು ಮಾಡುತ್ತ ಕೆಲವು ಸಲಹೆಗಳನ್ನು ಮುಂದಿಡುತ್ತಾರೆ. ಅವರು ಹೇಳುವಂತೆ ಮಧ್ಯಕಾಲೀನ ಯುಗದಲ್ಲಿ ಪ್ರಬಲ ವಂಶದ ಬಂಧುತ್ವದ

'ಚಿದಾನಂದ' ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕಾರ್ಯ ಚಟುವಟಿಕೆಯ ಆಧಾರದ ಮೇಲೆ ಪ್ರತಿಯೊಂದು ಪ್ರದೇಶದಲ್ಲೂ ಮೂರು ಹಂತದ ವಿಂಗಡಣೆಯು ಏರ್ಪಟ್ಟಿತ್ತು. ಆಕ್ರಮಿತ ಪ್ರದೇಶಗಳು ಪರಗಣವಾದವು ಇದನ್ನು ತಪ್ಪುಗಳು ಎಂಬ ದ್ವಿತೀಯ ವರ್ಗವಾಗಿ ವಿಂಗಡಿಸಲಾಯಿತು. ಹಾಗೂ ತಪ್ಪುಗಳನ್ನು ಗೌನ್ ಅಥವಾ ಗ್ರಾಮ ಕೇಂದ್ರಗಳಾಗಿ ಪುನಃ ಸಣ್ಣಪಟ್ಟಣ ಪ್ರದೇಶಗಳಾಗಿ ವಿಂಗಡಿಸಲಾಯಿತು. ಈ ಭೂಪ್ರದೇಶಗಳ ವಿಂಗಡನೆಗೆ ಸರಿ ಹೊಂದುವಂತೆ ಮೂರು ಮೂಲ ವಸಾಹತು ನೆಲೆಗಳು ನಿರ್ಮಾಣವಾದವು ಪರಗಣ ಹಾಗೂ ತಪ್ಪು ಮುಖ್ಯ ನೆಲೆಗಳು ಅರೆನಗರ ವಸಾಹತುಗಳಾಗಿ ಬೆಳೆದವು ಗೌನ್ ಮೂಲ ಗ್ರಾಮೀಣ ವಸಾಹತು ಕೇಂದ್ರಗಳಾದವು.[69]

130022

ಈ ರೀತಿಯಾಗಿ ಸಣ್ಣ ಗಾತ್ರದ ನಗರ ಪ್ರದೇಶಗಳು ಒಂದು ಸೀಮಿತವಾದ ಮಾದರಿಯಲ್ಲಿ ತಮ್ಮ ಪಾತ್ರಗಳನ್ನು ನಿರ್ವಹಿಸುತ್ತಿದ್ದವು ಆದರೂ ಅವುಗಳ ಸಂಖ್ಯೆ ಬಹಳಷ್ಟಿತ್ತು. ಅವುಗಳ ಕಾರ್ಯಕ್ಷೇತ್ರವು ಹತ್ತಿರದ ಪ್ರದೇಶಗಳಿಗಷ್ಟೇ ಸೀಮಿತವಾಗಿತ್ತು.

ಅಧ್ಯಾಯ 6

6.1 ಮಧ್ಯಮ ಶ್ರೇಣಿಯ ಪಟ್ಟಣಗಳು

ಈ ಪಟ್ಟಣಗಳು ಮಧ್ಯಕಾಲೀನ ಪಟ್ಟಣದ ಹೆಚ್ಚಿನ ಅಂಶಗಳನ್ನು ಹೊಂದಿದ್ದವು ಇವುಗಳ ಕಾರ್ಯಕ್ಷೇತ್ರ ಹಾಗೂ ಪ್ರಭಾವವು ಸ್ಥಳೀಯ ಪ್ರದೇಶದಾಚೆ ವಿಸ್ತರಿಸಿತ್ತು. ಅವುಗಳು ನಿರ್ವಹಿಸುತ್ತಿದ್ದ ವಿವಿಧ ಕಾರ್ಯಗಳೊಂದಿಗೆ ಅಂದರೆ ಆರ್ಥಿಕ, ರಾಜಕೀಯ, ಧಾರ್ಮಿಕ ಕಾರ್ಯಗಳೊಂದಿಗೆ ಕೆಲವು ದೊಡ್ಡ ಪಾತ್ರಗಳು ಸೇರಿದ್ದವು. ನಗರ ಕೇಂದ್ರಗಳ ನಿಯಮಿತ ಪಾತ್ರಕ್ಕಿಂತ ಈ ಪಟ್ಟಣಗಳು ಬಹಳ ಪ್ರಾಮುಖ್ಯತೆಯನ್ನು ಪಡೆದಿದ್ದವು. ಆದರೆ ಸಂಖ್ಯೆಯಲ್ಲಿ ಇವುಗಳು ವಿರಳವಾಗಿದ್ದವು.

ಉದಾಹರಣೆಗೆ ತಲಕಾಡು ನಗರ ಬಹಳ ತ್ವರಿತವಾಗಿ ಬೆಳೆಯಿತು. ಏಕೆಂದರೆ ತಲಕಾಡು ಪುರಸಭಾ ಆಡಳಿತ ದೃಷ್ಟಿಯಿಂದ ಒಂದು ಪ್ರಮುಖ ಸ್ಥಳವಾಗಿತ್ತು.[70] ತಲಕಾಡಿನಲ್ಲಿ ದೇವಾಲಯಗಳು ಮತ್ತು ಮಾರುಕಟ್ಟೆಗಳಿದ್ದವು. ಇದರಿಂದಾಗಿ ತಲಕಾಡು ಜಡವಾಗಿ ಉಳಿಯದೇ ಬೆಳವಣಿಗೆ ಹಾಗೂ ವಿಸ್ತರಣೆ ಲಕ್ಷಣವನ್ನು ತೋರಿಸಿತು. ಇದಲ್ಲದೆ ಹೊಯ್ಸಳರ ರಾಜಧಾನಿಯಾಗಿದ್ದ ದೋರಸಮುದ್ರವು ತನ್ನ ಪ್ರಾಮುಖ್ಯತೆಯನ್ನು ಉಳಿಸಿಕೊಂಡಿತ್ತು. ಈ ಸ್ಥಳದಲ್ಲಿ ಜಾತ್ರೆಯು ನಡೆಯುತ್ತಿತ್ತು.[71] ಬೇಲೂರು ಚನ್ನಕೇಶವ ದೇವರ ವಾಸಸ್ಥಾನವಾಗಿತ್ತು.[72] ಅರಸೀಕೆರೆಯ ಪ್ರಾರಂಭದ ಕಾಲದಿಂದಲ್ಲೂ ಮನ್ನಣೆಯನ್ನು ಗಳಿಸಿದ್ದ ಪಟ್ಟಣವಾಗಿತ್ತು ಹಾಗೂ ಈ ಕಾಲದಲ್ಲಿ ಆರ್ಥಿಕ ಪ್ರಾಮುಖ್ಯತೆಯನ್ನು ಹೊಂದಿದ ಸ್ಥಳವಾಗಿ ಉಳಿಯಿತು.[73]

ಈ ರೀತಿಯಾಗಿ ಮೇಲೆ ತಿಳಿಸಿದ ಪಟ್ಟಣಗಳು ಸಾಮ್ರಾಜ್ಯದ ಹಲವು ಭಾಗಗಳಲ್ಲಿ ತಲೆಯೆತ್ತಿ ಹೆಚ್ಚು ಪ್ರಾಮುಖ್ಯತೆಯುಳ್ಳ ನಗರ ಕೇಂದ್ರವಾಗಿದ್ದವು.

ಬೇಲೂರು ನಗರದ ಸುಂದರ ರಮಣೀಯ ವಿವರಣೆಯು ಅಬ್ದುಲ್ ರಜಾಕನ ಒಂದು ದೀರ್ಘ ವರ್ಣನೆಯಲ್ಲಿ ಕಂಡು ಬರುತ್ತದೆ. ಅವನು ಈ ರೀತಿ ವಿವರಿಸುತ್ತಾನೆ. "ಬೇಲೂರೆಂಬ ಪಟ್ಟಣವನ್ನು ನಾನು ತಲುಪಿದೆ, ಅದರ ಮನೆಗಳು ಅರಮನೆಯಂತೆ ಇದ್ದವು ಅದರಲ್ಲಿ ಮೂರ್ತಿಗಳ ಒಂದು ದೇವಾಲಯವಿದೆ. ಇದು ಎಷ್ಟು ವೈಭವವಾಗಿದೆಯೆಂದರೆ ಹಲವು ಪರಸ್ಥಳಗಳು ದೂರದಿಂದಲ್ಲೂ ಇದು ಕಾಣುತ್ತದೆ. ಇಂತಹ ಕಟ್ಟಡವನ್ನು ವಿವರಿಸಲು ಉತ್ಪ್ರೇಕ್ಷೆಯ ಶಂಕೆಗೊಳಗಾಗದೆ ಸಾಧ್ಯವಾಗುವುದಿಲ್ಲ". ಆ ಪಟ್ಟಣದ ರಚನಾ ದೃಶ್ಯವನ್ನು ಇದೇ ಪ್ರವಾಸಿಗನ

ಬರವಣಿಗೆಗಳ ಆಧಾರದ ಮೇಲೆ ಕಲ್ಪಿಸಬಹುದು. ಪಟ್ಟಣದ ಮಧ್ಯಭಾಗದಲ್ಲಿ ತೆರೆದ ಜಾಗವಿತ್ತು ಹಾಗೂ ಉದ್ಯಾನವನವಿತ್ತು. ಅಲ್ಲಿ ಮರದ ಎಲೆಗಳಂತೆ ಎಲ್ಲಾ ವಿಧದ ಗುಲಾಬಿಗಳು ಇದ್ದವು. ತೊರೆಗಳ ಅಂಚುಗಳಲ್ಲಿ ಹೆಚ್ಚು ಸೈಪ್ರೆಸ್ ಮರಗಳು ತಲೆಯೆತ್ತಿ ನಿಂತಿದ್ದವು. ಅವುಗಳ ಗೋಪುರಾಕಾರದ ನೆತ್ತಿಯು ನೀರಿನಲ್ಲಿ ಪ್ರತಿಬಿಂಬವಾಗುತ್ತದೆ. ಬಾಳೆಯ ಮರಗಳು ಅವುಗಳ ಚಿಗುರುಗಳನ್ನು ಹೊಂದಿದ ರೆಂಬೆಗಳನ್ನು ಹೊರ ಚಾಚುತ್ತಿವೆ. ಇದು ಯಾವ ರೀತಿ ಕಾಣುವುದೆಂದರೆ ಸ್ವರ್ಗವೇ ಈ ಸೌಂದರ್ಯ ರಾಶಿಗೆ ಮನಸೋತು ಆನಂದ ಆವೇಶಗಳಿಂದ ಈ ಸ್ಥಳವನ್ನು ಬಗ್ಗಿ ನೋಡುತ್ತಿರುವುದೇನೋ ಎಂಬಂತೆ ಕಾಣುತ್ತದೆ. ಈ ಹುಲ್ಲುಹಾಸಿನ ಇಡೀ ಭೂಮಿ ಈ ಆನಂದಮಯ ಬೀಡಿನ ಸುತ್ತಮುತ್ತಲಿನ ಜಾಗವನ್ನೆಲ್ಲಾ ನಯವಾದ ಕಲ್ಲುಗಳಿಂದ ಜೋಡಿಸಿ ದಾರಿ ಮಾಡಲಾಗಿದೆ. ಇವುಗಳನ್ನು ಎಷ್ಟು ಸೊಗಸಾಗಿ ಜೋಡಿಸಲಾಗಿದೆಯೆಂದರೆ ಇವುಗಳೆಲ್ಲ ಕಲ್ಲುಗಳ ಒಂದೇ ಚಪ್ಪಡಿ ಕಲ್ಲೇನೋ ಎನ್ನುವಂತೆ ಕಾಣುತ್ತದೆ. ಹಾಗೂ ಆಕಾಶದ ಒಂದು ತುಣಕನ್ನು ಭೂಮಿಗೆ ತರಲಾಗಿದೆಯೇನೋ ಎಂಬಂತೆ ಕಾಣುತ್ತದೆ. ವೇದಿಕೆಯ ಮಧ್ಯಭಾಗದಲ್ಲಿ ನೀಲಿಕಲ್ಲುಗಳಿಂದ ನಿರ್ಮಿಸಲಾಗಿದ್ದ ಕಪೋಲವನ್ನು ಹೊಂದಿದ್ದ ಒಂದು ಕಟ್ಟಡವು ಕಾಣಿಸುತ್ತದೆ. ಹಾಗೂ ಇದು ಒಂದು ಹಂತದಲ್ಲಿ ಕೊನೆಗೊಳ್ಳುತ್ತದೆ. ಕಲ್ಲಿನ ಪ್ರಕಾರಗಳು ಮೂರು ಸಾಲಿನ ಚಿತ್ರಗಳನ್ನು ಹೊಂದಿದೆ. ಈ ಗುಮ್ಮಟದ ಬಗ್ಗೆ ಏನು ಹೇಳುವುದು ಇದು ತನ್ನ ಅಮೋಘ ಕೆತ್ತನೆಯಿಂದ ಸ್ವರ್ಗದ ರುಚಿಯನ್ನು ಇಡೀ ಪ್ರಪಂಚಕ್ಕೆ ಉಣಬಡಿಸಿದೆ. ಅದರ ವರ್ತುಲಾಕಾರದ ಕಮಾನುಗಳು ವೈಭವಯುತವಾಗಿದ್ದು ಹೊಸ ಚಂದಿರನನ್ನು ಹೋಲುತ್ತಿತ್ತು. ಅದರ ವಿಸ್ತಾರವನ್ನು ಆಕಾಶವೂ ಚಾಚಿತ್ತು ಇದು ಎಷ್ಟರ ಮಟ್ಟಿಗೆ ಒಂದು ಕಲ್ಪನಾ ಚಿತ್ರವಾಗಿತ್ತೆಂದರೆ ಕೇವಲ ಒಂದು ತಿಂಗಳ ಅವಧಿಯಲ್ಲಿ ಎಲ್ಲವನ್ನು ರೇಷ್ಮೆ ವಸ್ತ್ರದ ಮೇಲೆ ಚಿತ್ರಿಸುವುದು ಅಸಾಧ್ಯವಾದ ಮಾತು, ಕಟ್ಟಡದ ಬುಡದಿಂದ ಹಿಡಿದು ನೆತ್ತಿಯವರೆಗೂ ಚಿತ್ರಗಳಿಲ್ಲದ ಒಂದು ಹಸ್ತದಗಲ ಜಾಗವನ್ನು ನಾವು ಕಾಣೆವು, ಈ ದೇವಾಲಯವು ನಾಲ್ಕು ಜಗಲಿಯ ರಚನೆಯನ್ನು ಹೊಂದಿತ್ತು. ಈ ರಚನೆಯು ಉದ್ದದಲ್ಲಿ ಮೂವತ್ತು ಗೇಜ್ ಅಗಲದಲ್ಲಿ ಇಪ್ಪತ್ತು ಎತ್ತರದಲ್ಲಿ ಐವತ್ತು ಗೇಜ್ ಇತ್ತು. ಅದರ ಶಿರವು ಆಕಾಶದತ್ತ ಚಾಚುತ್ತಿರುವುದರಿಂದ ಮೊದಲು ಕಲ್ಲುಗಳಿಲ್ಲದ ಕಮಾನು ಈಗ ಹೊಂದಿರುವಂತೆ ಕಾಣಿಸುತ್ತದೆ. ಮಳೆಗಾಳಿಗೆ ಎದೆಯೊಡ್ಡಿ ನಿಂತ ಈ ಕಲ್ಲುಗಳಿಂದಾಗಿ ಆ ಗುಮ್ಮಟದ ಬಂಗಾರವು ಮಿಶ್ರಲೋಹಕ್ಕೆ ತಿರುಗಿದೆ. ಸಣ್ಣ ಹಾಗೂ ದೊಡ್ಡ ಕಟ್ಟಡಗಳೆಲ್ಲವು ಶ್ರೇಷ್ಠ ಚಿತ್ರಕಲೆ ಹಾಗೂ ವಾಸ್ತುಶಿಲ್ಪದಿಂದ ತುಂಬಿ ಹೋಗಿವೆ.[74]

6.2 ನಗರ ಆಡಳಿತ

ನಗರ ಅಧ್ಯಯನಗಳ ಒಂದು ಪ್ರಮುಖ ವೈಶಿಷ್ಟವು ನಗರ ಆಡಳಿತ ಅಥವಾ ಪಟ್ಟಣಗಳು ಹಾಗೂ ನಗರಗಳ ನಿರ್ವಹಣೆಯನ್ನು ಗಮನಿಸುವುದಾಗಿದೆ. ಪಟ್ಟಣಗಳು ಭಿನ್ನವಾದ ವಸಾಹತು ಗಳಾಗಿದ್ದರಿಂದ ಅವುಗಳಿಗೆ ಪ್ರತ್ಯೇಕವಾದ ಆಡಳಿತ ನಿರ್ವಹಣೆಯ ಅವಶ್ಯಕತೆಯಿತ್ತು. ಪಟ್ಟಣದ ಸಂಯೋಜನೆ ಅದರ ಅಧಿಕಾರ ಕಾರ್ಯಗಳು ಹಾಗೂ ಅಧಿಕಾರಿಗಳು ಮತ್ತು ಅವರ ಚಟುವಟಿಕೆಗಳ ಒಂದು ಅಧ್ಯಯನವು ಆ ಕಾಲದ ನಗರಕೇಂದ್ರಗಳು ಉತ್ತಮ ಆಡಳಿತ ನಿರ್ವಹಣೆ ಯನ್ನು ಹೊಂದಿದ್ದವು ಎಂಬ ಅಂಶವನ್ನು ಹೊರತು ಪಡಿಸುತ್ತದೆ. ಈ ವಿಷಯದಲ್ಲಿ ಪ್ರಾಚೀನ ರೂಢಿಗಳು ಹಾಗೂ ಆಚರಣೆಗಳ ಪರಿಣಾಮವು ಸಾಕಷ್ಟಿತ್ತು. ಹಿಂದಿನ ಶತಮಾನಗಳಿಂದ ನಡೆದುಕೊಂಡು ಬಂದಿದ್ದ ಆಡಳಿತ ವಿಧಾನವನ್ನು ಮಧ್ಯಕಾಲೀನ ಸನ್ನಿವೇಶಗಳಿಗೆ ಸೂಕ್ತವಾಗುವಂತೆ ವಿಸ್ತರಿಸಲಾಯಿತು ಅಥವಾ ಅಳವಡಿಸಿಕೊಳ್ಳಲಾಯಿತು. ಆದರೂ ಪೌರಾಡಳಿತ ವಿಷಯಗಳಲ್ಲಿ ಸ್ಥಳೀಯ ಶಕ್ತಿಯು ಹೆಚ್ಚಿನ ಪ್ರಾಬಲ್ಯವನ್ನು ಹೊಂದಿತ್ತು. ಹೊಯ್ಸಳರ ಅಂತ್ಯ ಭಾಗದಲ್ಲಿ ಸೈನಿಕ ವರ್ಗದವರ ಪ್ರಾಬಲ್ಯವು ಹೆಚ್ಚಾಯಿತು ಹಾಗೂ ಅವರು ಪಟ್ಟಣಗಳು ಹೊಂದಿದ್ದ ಸ್ವಾತಂತ್ರ್ಯವನ್ನು ಸ್ವಲ್ಪ ಪಟ್ಟಿಗೆ ಹರಣ ಮಾಡಿದರು. ನಾಯಕರು ರಾಜಕೀಯ ದೃಶ್ಯದಲ್ಲಿ ಕಾಣಿಸಿಕೊಳ್ಳಲು ಪ್ರಾರಂಭಿಸಿದರು. ಪಟ್ಟಣಗಳು ಹಾಗೂ ಕೋಟೆಗಳನ್ನು ತಮ್ಮ ಚಟುವಟಿಕೆಗಳ ಕೇಂದ್ರಗಳನ್ನಾಗಿ ಮಾಡಿಕೊಂಡು ಬಹುಶಃ ಅವರ ಆಡಳಿತದ ಮೇಲೆ ಪ್ರಾಬಲ್ಯವನ್ನು ಹೊಂದಿದ್ದರು. ಪಟ್ಟಣಗಳ ಆಡಳಿತವನ್ನು ಅಧ್ಯಯನ ಮಾಡುವಾಗ ಪಟ್ಟಣ ಸಭೆಗಳು ನಿರ್ವಹಿಸಿದ ಪಾತ್ರ ಅವುಗಳು ಚಲಾಯಿಸಿದ ಅಧಿಕಾರ ಹಾಗೂ ಕಾರ್ಯಗಳು ಮತ್ತು ಪಟ್ಟಣಗಳ ಅಧಿಕಾರಗಳ ಚಟುವಟಿಕೆ ಗಳನ್ನು ಅಧ್ಯಯನ ಮಾಡಬೇಕು. ನಮ್ಮ ಅಧ್ಯಯನದ ಆಧಾರಗಳು ಪಟ್ಟಣಗಳ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ಅಂಗಗಳು ಹಾಗೂ ಅಧಿಕಾರಿಗಳು ಹಾಗೂ ಆ ಕಾಲದ ಪೌರ ಸಂಘಟನೆಯ ಬಗ್ಗೆ ಒಂದು ಪರಿಚಯವನ್ನು ನೀಡುತ್ತದೆ.

6.3 ಪಟ್ಟಣ ಸಭೆ

ಸಾಮಾನ್ಯವಾಗಿ ಪಟ್ಟಣಗಳು ತಮ್ಮದೇ ಆದ ಸಭೆಗಳನ್ನು ಹೊಂದಿದ್ದವು ಹಾಗೂ ಈ ಸಭೆಗಳು ಪ್ರತಿನಿಧಿಗಳು ಅಥವಾ ಸದಸ್ಯರುಗಳಿಂದ ಕಾರ್ಯ ನಿರ್ವಹಿಸುತ್ತಿದ್ದವು. 'ನಗರ' ಎಂಬ ಪದವು 'ಪಟ್ಟಣಸಭೆ'ಯನ್ನು ಸೂಚಿಸಲು ಬಳಸಲ್ಪಡುತ್ತಿತ್ತು. ಪಟ್ಟಣ ಸಭೆಯನ್ನು ಸೂಚಿಸುತ್ತಿದ್ದ ಇತರ ಪದಗಳೆಂದರೆ ನಕರ, ನಕಾರ, ನಗರ ಸಮೂಹ ಅಥವಾ ಕೇವಲ ಸಮೂಹಗಳಾಗಿದ್ದವು.

ಪಟ್ಟಣ ಸಭೆಯ ಸ್ವರೂಪ ಅಧಿಕಾರ ಹಾಗೂ ಕಾರ್ಯಗಳನ್ನು ತಿಳಿಯಲು ಬಹಳ ಪ್ರಮುಖವಾದ ಕೃತಿಯೆಂದರೆ ತೆಲುಗಿನ ಸಮಕಾಲೀನ ಕೃತಿಯಾದ 'ವೈಶ್ಯಪುರಾಣಮು' ಪ್ರಮುಖ ವಾಗಿದೆ. ಈ ಕೃತಿಯು ಪ್ರದೇಶಕ್ಕೆ ಸಂಬಂಧಿಸಿದ್ದರು. ನಮ್ಮ ಅಧ್ಯಯನಕ್ಕೆ ಸಂಬಂಧಿಸಿದ ಅವಧಿಯಲ್ಲಿದ್ದ ನಗರ ಸಂಘಟನೆಗಳ ಸ್ವರೂಪ ಅಧಿಕಾರ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ಒಂದು ಪರಿಚಯವನ್ನು ನೀಡುತ್ತದೆ ಹಾಗೂ ಪಟ್ಟಣದ ಬಗ್ಗೆ ಒಂದು ಅಭಿಪ್ರಾಯವನ್ನು ಹೊಂದಲು ಸಹಾಯಕವಾಗಿದೆ.

6.3.1 ಮಧ್ಯಕಾಲೀನ ಕರ್ನಾಟಕದಲ್ಲಿ ಪಟ್ಟಣ ಸಭೆ

ಕರ್ನಾಟಕದಲ್ಲಿ ದೊರಕಿರುವ ಹಲವಾರು ಶಾಸನಗಳಿಂದ ಪೌರ ಕಾರ್ಯಗಳನ್ನು ನಿರ್ವಹಿಸುತ್ತಿದ್ದ ಸಭೆಗಳಿದ್ದವೆಂಬ ಅಂಶವು ಬೆಳಕಿಗೆ ಬರುತ್ತದೆ. ಇಲ್ಲಿ ನಗರವೆಂಬ ಪದವು ಪಟ್ಟಣಸಭೆ ಎಂಬ ಅರ್ಥವನ್ನು ನೀಡುತ್ತದೆ. ಕ್ರಿ.ಶ. 10 ರಿಂದ 14ನೇ ಶತಮಾನಗಳ ನಡುವೆ ತಲಕಾಡು ನಾಲ್ಕು ಪಟ್ಟಣಸ್ವಾಮಿಗಳನ್ನು ಹೊಂದಿತ್ತು ಹಾಗೂ 25 ಸದಸ್ಯರು ಬಹುಶಃ ಅದರ ಸಮಿತಿಯಲ್ಲಿದ್ದರು. ಹಾಗೂ ಮಹಾನಗರವು ಅವರ ಆಸಕ್ತಿಯನ್ನು ಪರಿಗಣಿಸಿ ಗೌಡ ಪ್ರಜೆಗಳು ಸಭೆಯನ್ನು ಸೇರುವಂತೆ ಮಾಡಿತು. ಹಾಗೂ ಏಳು ಪುರಗಳು ಮತ್ತು ಪಂಚಮಠಗಳನ್ನು ಹೊಂದಿದ್ದ ಇಡೀ ತಲಕಾಡು ನಗರಕ್ಕೆ ಸ್ಥಾನಪತಿಯು ಅಧಿಕಾರಿಯಾಗಿದ್ದನು ಸ್ಥಾನಪತಿಯೋರ್ವನು ಪಟ್ಟಣದ ಆಡಳಿತವನ್ನು ವಹಿಸಿಕೊಳ್ಳುತ್ತಿದ್ದುದು ಕಂಡು ಬರುತ್ತದೆ. ಬಳ್ಳಿಗಾವೆಯು ಐದು ಮಠಗಳು ಹಾಗೂ ಮೂರು ಔಷಧದಂಗಡಿಗಳೊಂದಿಗೆ ಏಳು ಬ್ರಹ್ಮಪುರಿಗಳನ್ನು ಹೊಂದಿತ್ತು". ತಳೂರನು ಪಟ್ಟಣಗಳ ಪೌರ ಸಂಘಟನೆಗಳಲ್ಲಿ ಪ್ರಮುಖ ಸದಸ್ಯನಾಗಿದ್ದನು. ದೋರಸಮುದ್ರವನ್ನು ಅನೇಕ ವಿಭಾಗಗಳನ್ನಾಗಿ ವಿಂಗಡಿಸಲಾಗಿತ್ತು. ಪ್ರತಿಯೊಂದು ವಿಭಾಗವು ಅನೇಕ ಬೀದಿಗಳನ್ನು ಹೊಂದಿದ್ದವು. ಪ್ರತಿಯೊಂದು ವಿಭಾಗಕ್ಕೂ ಒಂದು ದೊಣ್ಣೆಯೊಂದಗಿದ್ದ ತಳಾರಿಯನ್ನು ನೇಮಕ ಮಾಡಲಾಗಿತ್ತು. ಪ್ರತಿ ಪಟ್ಟಣದ ಹಾಗೂ ನಗರದ ಶಾಂತಿಯನ್ನು ಕಾಪಾಡಲು ಒಂದು ಗುಂಪು ತಳವಾರರನ್ನು ನೇಮಿಸಲಾಗುತ್ತಿತ್ತು. ಹಾಗೂ ಇದರಲ್ಲಿ ಒಬ್ಬ ನುರಿತ ನಾಯಕನಿರುತ್ತಿದ್ದನು. ಇದರ ಜೊತೆಗೆ "ನಗರಕರನತ್ತೂರ್" ನಗರ ಮಧ್ಯಸ್ಥ ಎಂಬುದು ನಗರದ ಕೆಲವು ಅಧಿಕಾರಿಗಳ ಹೆಸರುಗಳಾಗಿದ್ದವು ಪಟ್ಟಣ ಸಭೆಯ ಸದಸ್ಯರಲ್ಲಿ ಏಕತೆಯ ಒಂದು ದೃಢವಾದ ನಂಬಿಕೆಯು ಬೇರೂರಿತ್ತು.

ಪಟ್ಟಣ ಸಭೆಯು ಒಂದು ಪ್ರತಿನಿಧಿ ಅಂಗವಾಗಿದ್ದು ಸ್ಥಳೀಯ ಜನರ ಆಸಕ್ತಿಯನ್ನು ಕಾಪಾಡುತ್ತಿತ್ತು. ರಾಜ್ಯದ ಉನ್ನತ ಅಧಿಕಾರವನ್ನು ಹೊಂದಿದ್ದ ಕೆಲವು ಅಧಿಕಾರಿಗಳು ಕೂಡ ಈ ಸಭೆಗಳ ಹಕ್ಕುಗಳ ಬಗ್ಗೆ ಮಧ್ಯೆ ಪ್ರವೇಶಿಸುತ್ತಿರಲಿಲ್ಲ. ತೆರಿಗೆಯನ್ನು ಕೊಡುವುದಾಗಲಿ ಅಥವಾ ದಾನವನ್ನು ನೀಡುವುದಾಗಲಿ ಒಪ್ಪಿಗೆಯ ಮೇಲೆ ಮಾತ್ರ ನಡೆಯಬೇಕಿತ್ತು.

ಮೇಲಿನ ಅಧ್ಯಯನದಿಂದ ನಾವು ಊಹಿಸಬೇಕಾದ ವಿಷಯವೇನೆಂದರೆ ನಗರ ಸಭೆಯು ನಗರ ಅಥವಾ ಆ ಸ್ಥಳದ ಹಲವು ಬಗೆಯ ವ್ಯಾಪಾರಿ ಸಂಘಗಳು ಕೆಲವು ಸಂದರ್ಭಗಳಲ್ಲಿ ಪರಜೆ ಗೌಂಡರು, ಪುರಗಳು ಹಾಗೂ ಬ್ರಹ್ಮಪುರಿಗಳು, ಮಠಗಳು ಕಾರ್ಯಕಾರಿ ಸಮಿತಿ ಹಾಗೂ ಅಧಿಕಾರಿಗಳನ್ನು ಹೊಂದಿತ್ತು.

6.4 ಪಟ್ಟಣಸ್ವಾಮಿ

ನಗರ ಆಡಳಿತದ ಒಂದು ಅಧ್ಯಯನವು ಪೌರ ಸಂಘಟನೆ, ಪಟ್ಟಣಸಭೆ, ಸಮಿತಿ ಹಾಗೂ ಅದರ ಸದಸ್ಯರು, ಅಧಿಕಾರಿಗಳು ಅವರ ಅಧಿಕಾರ ಹಾಗೂ ಕರ್ತವ್ಯಗಳ ಸಮೀಕ್ಷೆಯ ಜೊತೆಗೆ ಪಟ್ಟಣದ ಅತ್ಯಂತ ಪ್ರಮುಖ ಅಧಿಕಾರಿಯಾಗಿದ್ದ ಪಟ್ಟಣಸ್ವಾಮಿಯ ಬಗ್ಗೆ ಒಂದು ತುಣುಕು ಅಧ್ಯಯನವನ್ನು ಹೊಂದಿದೆ. ಪಟ್ಟಣಸ್ವಾಮಿಯು ಶೆಟ್ಟಿ, ಪಟ್ಟಣಸ್ವಾಮಿ, ವಡ್ಡವ್ಯವಹಾರಿ ಪೃಥ್ವಿಶೆಟ್ಟಿ ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತಿದ್ದನು. ಇವನು ಸಭೆಯ ಮುಖ್ಯಸ್ಥನಾಗಿದ್ದನು. ಇವನು ಪಟ್ಟಣದ ಪಾಲಕನಾಗಿದ್ದು ಹಲವಾರು ಜವಾಬ್ದಾರಿಗಳ ನಿರ್ವಹಣೆಯನ್ನು ಹೊತ್ತಿದ್ದನು. ಪಟ್ಟಣ ಸ್ವಾಮಿಯು ಗೌರವಾನ್ವಿತನಾಗಿದ್ದು ಹಾಗೂ ಹಲವಾರು ವಿಶೇಷ ಹಕ್ಕುಗಳು ಮತ್ತು ಗೌರವಗಳಿಗೆ ಪಾತ್ರನಾಗಿದ್ದನು. ಪಟ್ಟಣಸ್ವಾಮಿ ಹುದ್ದೆಯು ಅಸ್ಥಿತ್ವಕ್ಕೆ ಬಂದು ಪಟ್ಟಣಗಳ ಬೆಳವಣಿಗೆಯೊಂದಿಗೆ ಪ್ರಾಮುಖ್ಯತೆಯನ್ನು ಪಡೆಯಿತು. ಮೊದಲು ಹಳ್ಳಿಗಳನ್ನು ಪಟ್ಟಣಗಳಾಗಿ ಪರಿವರ್ತಿಸಲಾಗುತ್ತಿತ್ತು. ಪಟ್ಟಣಗಳು ಅನೇಕ ಗ್ರಾಮೀಣ ವೈಶಿಷ್ಟತೆಗಳನ್ನು ಉಳಿಸಿಕೊಂಡಿದ್ದವು. ಹಾಗೂ ಹಳೆಯ ಸಂಸ್ಥೆಗಳನ್ನು ಹೊಂದಿದ್ದವು. ಉದಾಹರಣೆಗೆ ಪಟ್ಟಣದ ಕಾರ್ಯನಿರ್ವಾಹಕನನ್ನು ಗೌಂಡ ಎಂದು ಕರೆಯಲಾಗುತ್ತಿತ್ತು. ಈ ಪದವು ಗ್ರಾಮದ ಮುಖ್ಯಸ್ಥನ ಪದವಿಯನ್ನು ಅರ್ಥೈಸುತ್ತದೆ. ಆದರೆ ಪಟ್ಟಣಗಳು ಪ್ರಬಲವಾಗಿ ಬೆಳೆಯುತ್ತಾ ಹೋದಂತೆಲ್ಲ ಕೆಲವು ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ಸಂಸ್ಥೆಗಳು ಕ್ರಮೇಣವಾಗಿ ಅಸ್ಥಿತ್ವಕ್ಕೆ ಬಂದವು.[75]

ವರ್ತಕ ಸಂಘದ ರಚನೆ ಹಾಗೂ ಬೆಳವಣಿಗೆಯು ಈ ವಿಧವಾದ ಒಂದು ಬೆಳವಣಿಗೆಯಾಗಿತ್ತು. ವರ್ತಕ ಸಂಘಗಳು ಆರ್ಥಿಕವಾಗಿ ಶಕ್ತಿವಂತ ಸಂಸ್ಥೆಗಳಾಗಿ ರಾಜಕೀಯ ಪ್ರಾಬಲ್ಯವನ್ನು ಮೆರೆದವು. ಅವುಗಳು ವಿಶೇಷ ಹಕ್ಕುಗಳನ್ನು ಹೊಂದಿದ್ದವು. ಹಾಗೂ ರಾಜಕೀಯ ವಿಷಯಗಳಲ್ಲೂ ಸಹಕಾರವನ್ನು ನೀಡುತ್ತಿದ್ದವು. ಪಟ್ಟಣದ ಆಳ್ವಿಕೆಯನ್ನು ನಡೆಸಲು ಪ್ರಾಮಾಣಿಕ ಹಾಗೂ ಸಮರ್ಥ ನಾಯಕರು ಬೇಕಾಗಿದ್ದರಿಂದ ವರ್ತಕ ಸಂಘದ ನಾಯಕರುಗಳಿಗೆ ಪಟ್ಟಣ ಆಡಳಿತದ ಚುಕ್ಕಾಣಿಯನ್ನು ನೀಡಲಾಯಿತು. ಈ ರೀತಿಯಾಗಿ ವರ್ತಕ ಸಂಘದ ಮುಖ್ಯಸ್ಥನು ಪೌರಪಾಲಕನಾದನು. ಪಟ್ಟಣ ಹುದ್ದೆಯನ್ನು ವರ್ತಕ ಸಂಘದ ವರ್ತಕ ಅಥವಾ ನಾಯಕನಿಗೆ ನೀಡಲಾಗುತ್ತಿತ್ತು.

6.4.1 ಹುದ್ದೆಯ ನೇಮಕ

ಪಟ್ಟಣಸ್ವಾಮಿ ಹುದ್ದೆಯು ವಂಶ ಪಾರಂಪರ್ಯವಾಗಿತ್ತು ಹಾಗೂ ಐಚ್ಛಿಕವಾಗಿಯೂ ಇತ್ತು. ಸಮಾನ್ಯವಾಗಿ ಪದ್ಧತಿಯೆಂದರೆ ಈ ಹುದ್ದೆಯನ್ನು ಸಮಾಜದ ಹಿರಿಯ ವರ್ತಕರು ಹಾಗೂ ನಾಯಕರು ಒಬ್ಬ ಯೋಗ್ಯ ವ್ಯಕ್ತಿಗೆ ನೀಡುತ್ತಿದ್ದರು. ಕೆಲವೊಮ್ಮೆ ಸರ್ಕಾರಿ ಅಧಿಕಾರಿಯು ಪಟ್ಟಣದ ಒಬ್ಬ ಪ್ರಮುಖ ವರ್ತಕನಿಗೆ ಈ ಪದವಿಯನ್ನು ನೀಡುತ್ತಿದ್ದನು. ಈ ಪದವಿಯನ್ನು ಊರಿನ ಜನತೆ ಅಥವಾ ಪ್ರತಿನಿಧಿಗಳು ಕೂಡ ನೀಡಬಹುದಾಗಿತ್ತು.

ಪಟ್ಟಣಸ್ವಾಮಿಯನ್ನು ನೇಮಕ ಮಾಡುವಾಗ ಜನಪ್ರಿಯ ಅಭಿಪ್ರಾಯವನ್ನು ಪರಿಗಣಿಸಲಾಗುತ್ತಿತ್ತು. ನಾಡಿನ ಸಮಸ್ತಗೌಡ ಪ್ರಜೆಗಳು, ನಾನಾ ದೇಶಿಗಳು ಮತ್ತು 18 ಜಾತಿಯವರು ಭಾಗವಹಿಸುತ್ತಿದ್ದರೆಂದು ತಿಳಿದು ಬರುತ್ತದೆ. ಆನೇಕಲ್‌ನ ಒಂದು ಶಾಸನವು ಹಿರಿಸನಾಡು ಪ್ರಭು ಹಾಗೂ ಐವತ್ತಾರು ಸೀಮೆಗಳ ಪ್ರತಿನಿಧಿಗಳು ಸೇರಿದಂತೆ ಹಲವಾರು ಪಟ್ಟಣಸ್ವಾಮಿ ಹುದ್ದೆಯನ್ನು ದಂಡೀಶೆಟ್ಟಿ ಹಾಗೂ ತಿರುಮಲ ಶೆಟ್ಟಿಗೆ ನೀಡಿದರು ಎಂದು ದಾಖಲಿಸುತ್ತದೆ.

6.4.2 ಭತ್ಯೆ

ಪಟ್ಟಣಸ್ವಾಮಿಗಳು ನೀಡುತ್ತಿದ್ದ ಸೇವೆಗಾಗಿ ಸರಿಯಾದ ಪರಿಹಾರ ದೊರೆಯುತ್ತಿತ್ತು. ಅವರಿಗೆ ಮಾನ್ಯ ಎಂಬ ಭೂಮಿಯನ್ನು ನೀಡಲಾಗುತ್ತಿತ್ತು. ಇದು ಅವರ ಆದಾಯದ ಪ್ರಧಾನ ಮೂಲವು ಆಗಿತ್ತು ತೆರಿಗೆಗಳಿಂದ ಅವರನ್ನು ಮುಕ್ತಿಗೊಳಿಸಲಾಗಿತ್ತು. ಸಂತೆಯ ಖರ್ಚಿಗೆಂದು

ಸಂಗ್ರಹಿಸಲಾಗುತ್ತಿದ್ದ ಒಂದು ಸಣ್ಣ ಪ್ರಮಾಣದ ತೆರಿಗೆಯು ಕೂಡ ಅವರ ಆದಾಯದ ಇನ್ನೊಂದು ಮೂಲವಾಗಿತ್ತು. ಅವರಿಗೆ ಹಲವು ಬಗೆಯ ದಾನದತ್ತಿಗಳನ್ನು ನೀಡಲಾಗುತ್ತಿತ್ತು. ಅಧಿಕಾರ ಹಾಗೂ ದಾನದತ್ತಿಗಳ ಜೊತೆಗೆ ಪಟ್ಟಣಸ್ವಾಮಿಯನ್ನು ಅನೇಕ ಬಿರುದು ಬಾವಲಿಗಳಿಂದ ಗೌರವಿಸಲಾಗುತ್ತಿತ್ತು.

6.4.3 ಹೊಯ್ಸಳರ ರಾಜ್ಯಾಡಳಿತದಲ್ಲಿ ಪಟ್ಟಣಸ್ವಾಮಿಯ ಸ್ಥಾನ ಮತ್ತು ಕಾರ್ಯಗಳು

ಮಧ್ಯಕಾಲೀನ ಕರ್ನಾಟಕದಲ್ಲಿ ಹಲವು ಪಟ್ಟಣಗಳು ಇದ್ದವು. ಪ್ರಮುಖ ಪಟ್ಟಣಗಳಲ್ಲಿ (ವ್ಯಾಪಾರ ಕೇಂದ್ರ) ಸಮಾನ್ಯವಾಗಿ ಪಟ್ಟಣಸ್ವಾಮಿ ಅಥವಾ ಪಟ್ಟಣಶೆಟ್ಟಿ ಇರುತ್ತಿದ್ದನು. ಪಟ್ಟಣಸ್ವಾಮಿಯು ಪಟ್ಟಣದ ಮುಖ್ಯ ಅಧಿಕಾರಿ ಇವನು ಆ ಸ್ಥಳದ ಶ್ರೀಮಂತ ವರ್ತಕ ಮತ್ತು ಪಟ್ಟಣದ ಮಹಾಪೌರನಾಗಿದ್ದನು. ಅಲ್ಲದೆ ಇವನು ಸ್ಥಳೀಯ ವರ್ತಕ ಸಂಘಕ್ಕೆ ಅಧ್ಯಕ್ಷನೂ ಆಗಿದ್ದನು. ಪಟ್ಟಣಸ್ವಾಮಿಯು ಪಟ್ಟಣದಲ್ಲಿ ನಡೆಯುವ ಸಂತೆಗಳನ್ನು ಮತ್ತು ಇತರ ವಾಣಿಜ್ಯ ಚಟುವಟಿಕೆಗಳನ್ನು ನೋಡಿಕೊಳ್ಳುತ್ತಿದ್ದನು. ಇವನು ಪಟ್ಟಣ ಸಭೆಯ ಪ್ರಮುಖ ಸದಸ್ಯನಾಗಿದ್ದನು.

ನಾವು ಹೊಯ್ಸಳರ ಕಾಲದ ಕೆಲವು ಶಾಸನಗಳಿಂದ ಪಟ್ಟಣಸ್ವಾಮಿಯ ಪಾತ್ರವನ್ನು ತಿಳಿಯಬಹುದಾಗಿದೆ. ಪಟ್ಟಣ ಸ್ಥಾಪನೆ ಮತ್ತು ಅದರ ಆಡಳಿತದಲ್ಲಿ ಅವನ ಪಾತ್ರ ಬಹಳ ಮುಖ್ಯ ಅವನು ದೇವಸ್ಥಾನಗಳನ್ನು ನಿರ್ಮಿಸುವ ಜಾತ್ರೆ ಮತ್ತು ಸಂತೆಗಳನ್ನು ನಡೆಸುವ ಕಾರ್ಯವನ್ನು ನೋಡಿಕೊಳ್ಳುತ್ತಿದ್ದನು. ಹೊಯ್ಸಳರ ಕಾಲದಲ್ಲಿ ಪಟ್ಟಣಸ್ವಾಮಿಯ ಸ್ಥಾನ, ಕಾರ್ಯ ಮತ್ತು ಇತರ ಪಾತ್ರಗಳನ್ನು ಕುರಿತು ಅಧ್ಯಯನ ಮಾಡಲು ಇಲ್ಲಿ ಪ್ರಯತ್ನ ಪಡಲಾಗಿದೆ.

ಸಾಮಾನ್ಯವಾಗಿ ಒಂದು ಪಟ್ಟಣಕ್ಕೆ ಒಬ್ಬ ಪಟ್ಟಣಸ್ವಾಮಿ ಇರುತ್ತಿದ್ದನು. ಆದರೆ ಪಟ್ಟಣ ದೊಡ್ಡದಾಗಿದ್ದರೆ ಒಬ್ಬರಿಗಿಂತ ಹೆಚ್ಚು ಪಟ್ಟಣಸ್ವಾಮಿಗಳು ಇರುತ್ತಿದ್ದರು. ಅಂದರೆ ಪಟ್ಟಣಸ್ವಾಮಿಗಳ ಸಂಖ್ಯೆಯು ಆ ಪಟ್ಟಣದ ವಿಸ್ತಾರವನ್ನು ಅವಲಂಬಿಸಿತ್ತು. ಕ್ರಿ.ಶ. 1142 ರ ಶಾಸನದ ಪ್ರಕಾರ ಹಳೇ ಬೀಡಿನಲ್ಲಿ ಇಬ್ಬರು ಪಟ್ಟಣಸ್ವಾಮಿಗಳಿದ್ದರು ಎಂದು ತಿಳಿದು ಬರುತ್ತದೆ. ಅವರು ಹೊಯ್ಸಳಶೆಟ್ಟಿ ಮತ್ತು ಗಮಿಶೆಟ್ಟಿಗಳಾಗಿದ್ದರು.[76]

ಪಟ್ಟಣಕ್ಕೆ ಹಿರಿಯ ವರ್ತಕ ಮತ್ತು ಶ್ರೀಮಂತನಾದ ಪಟ್ಟಣಸ್ವಾಮಿಗೆ ಆಡಳಿತಕ್ಕೋಸ್ಕರ ಕಛೇರಿ ವ್ಯವಸ್ಥೆಯನ್ನು ಮಾಡಿಕೊಡಲಾಗಿತ್ತು. ಮಲಪರಾಜನು ಇಂತಹ ಕೆಲವೇ ಜನ ಶೆಟ್ಟಿಗಳಿಗೆ ಒಂದು ಕಛೇರಿಯನ್ನು ಕೊಡಮಾಡಿದನು ಎಂದು ಕ್ರಿ.ಶ. 1205 ರ ಶಾಸನದಲ್ಲಿ ತಿಳಿಸಲಾಗಿದೆ.[77] ಪಟ್ಟಣಸ್ವಾಮಿಯು, ಸರ್ಕಾರ ಜನಸಾಮಾನ್ಯರ ಮತ್ತು ವರ್ತಕರಿಂದ ವಿಶ್ವಾಸವನ್ನು ಗಳಿಸಿ ಕೊಂಡಿದ್ದರು. ಈ ಕೆಳಕಂಡ ಉದಾಹರಣೆಯಿಂದ ಸರ್ಕಾರದೊಂದಿಗೆ ಇದ್ದ ಅವನ ಸಂಬಂಧವು ತಿಳಿದು ಬರುತ್ತದೆ. ಕ್ರಿ.ಶ. 1125 ರ ಮಾಹಿತಿಯ ಪ್ರಕಾರ (ಹೊಸ ಹೊಳಲು ಗ್ರಾಮ ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ) ಪಟ್ಟಣಸ್ವಾಮಿ ಹೊಯ್ಸಳ ಶೆಟ್ಟಿಯನ್ನು ನೋಳಭಿಶೆಟ್ಟಿಯೆಂತಲೂ ಸಹ ಕರೆಯಲಾಗುತ್ತಿತ್ತು. ಇವನು ರಾಜ ವಿಷ್ಣುವರ್ಧನನ ಅಧೀನದಲ್ಲಿ ವಾಸಿಸುತ್ತಿದ್ದನು.[78] ಕ್ರಿ.ಶ. 1178ರ ಮತ್ತೊಂದು ದಾಖಲೆಯ ಪ್ರಕಾರ ಪಟ್ಟಣ ಗ್ರಾಮ ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ ಪಟ್ಟಣ ಸ್ವಾಮಿ ಸೋವಿಶೆಟ್ಟಿಯು ರಾಜ ಸಾವಂತ ನರಸಿಂಗರಾಯ ನಾಯಕನ ಕೈ ಕೆಳಗೆ ಕೆಲಸ ಮಾಡುತ್ತಿದ್ದನೆಂದು ವಿವರಿಸಲಾಗಿದೆ.[79] ಕ್ರಿ.ಶ. 1195ರ ಶ್ರವಣಬೆಳಗೊಳದ ಇನ್ನೊಂದು ದಾಖಲೆಯ ಪ್ರಕಾರ ನಾಗದೇವನು ರಾಜ ಎರಡನೇ ವೀರಬಲ್ಲಾಳನ[80] ಆಳ್ವಿಕೆಯಲ್ಲಿ ಪಟ್ಟಣಸ್ವಾಮಿಯಾಗಿದ್ದನು. ಕ್ರಿ.ಶ. 1218 ರ ಕುಂಡವಡಗ್ರಾಮ, ದಾವಣಗೆರೆ ತಾಲ್ಲೂಕು ಶಾಸನದ ಪ್ರಕಾರ ಪ್ರತೀ ಬುಧವಾರ ಸಂತೆಗಳನ್ನು ಕಟ್ಟಲು ಪಟ್ಟಣಸ್ವಾಮಿ ಸಂಗಶೆಟ್ಟಿಯು ರಾಣಿ ಅಭಿನವ ಕೇತನದೇವಿಯಿಂದ ನಿರ್ದೇಶನವನ್ನು ಪಡೆದುಕೊಂಡಿದ್ದನು.[81] ಪಟ್ಟಣಸ್ವಾಮಿಯು ರಾಣಿಯ ಆದೇಶವನ್ನು ಮನ್ನಿಸಿ ಈ ಕಾರ್ಯವನ್ನು ಯಶಸ್ವಿಗೊಳಿಸಿದ್ದನು.

ಪಟ್ಟಣಸ್ವಾಮಿಯು ಅನೇಕ ಕಾರ್ಯಗಳನ್ನು ನಿರ್ವಹಿಸಿದ್ದನು. ಸಂತೆಗಳನ್ನು ಕಟ್ಟುವುದು ಮತ್ತು ಅವುಗಳನ್ನು ನಿಯೋಜಿಸುವುದು ಮತ್ತು ಸಂಯೋಜಿಸುವುದು ಹಾಗೂ ಪಟ್ಟಣಕ್ಕೆ ಹಿರಿಯನಾಗಿ ತೀರ್ಮಾನಗಳನ್ನು ಕೈಗೊಳ್ಳುವುದು ಇವೇ ಅವನ ಪ್ರಧಾನ ಕರ್ತವ್ಯಗಳಾಗಿದ್ದವು. ಅವನು ಪಟ್ಟಣದ ಸಾಮಾಜಿಕ, ಆರ್ಥಿಕ ಚಟುವಟಿಕೆಗಳ ನಾಯಕತ್ವ ವಹಿಸುತ್ತಿದ್ದನು. ಕೆಲವು ವೇಳೆ ಪಟ್ಟಣಸ್ವಾಮಿಯು ಪಟ್ಟಣದ ಸ್ಥಾಪಕನೂ ಆಗಿದ್ದನು. ಉದಾಹರಣೆಗೆ ಕ್ರಿ.ಶ. 1328 ರ ಶಾಸನದಿಂದ (ಮದ್ದೂರು ಗ್ರಾಮ, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ) ಪಟ್ಟಣವನ್ನು ಕಟ್ಟುವುದಕ್ಕೋಸ್ಕರ ಉಪ್ಪೇಂದ್ರಪುರ ಮಹಾಜನರಿಂದ ಆರು ಬಾಡಿಗೆ ರಹಿತ ಮನೆಗಳನ್ನು ಉಚಿತವಾಗಿ ಪಟ್ಟಣಸ್ವಾಮಿಗೆ ಕೊಡಮಾಡಲಾಗಿತ್ತು.[82] ಪಟ್ಟಣಸ್ವಾಮಿಯು ಬಹಳ ಆಸಕ್ತಿ ವಹಿಸಿ ಸಂತೆಗಳನ್ನು ಕಟ್ಟುತ್ತಿದ್ದನು. ಕ್ರಿ.ಶ. 1278ರ ನಂಜನಗೂಡು ಹೋಬಳಿ ಉಪ್ಪಿನಹಳ್ಳಿ

ದಾಖಲೆಯಿಂದ ಸಂಕಶೆಟ್ಟಿಯೆಂಬ ಪಟ್ಟಣಸ್ವಮಿಯು ಮನಾಲಿ ಎಂಬಲ್ಲಿ ಸಂತೆಗಳನ್ನು ಕಟ್ಟುತ್ತಿದ್ದನು ಎಂದು ತಿಳಿದು ಬರುತ್ತದೆ. ಪಟ್ಟಣಸ್ವಾಮಿಯು ಹಿರಿಯನಾಡಿನ ಮಹಾಪ್ರಭು ಮತ್ತು ದಂಡನಾಯಕ ಮಾಚಣ್ಣರ ಜೊತೆಗೂಡಿ ಸಂತೆಗಳನ್ನು ಕಟ್ಟುತ್ತಿದ್ದನು.[83] ಕ್ರಿ.ಶ. 1332ರ ಬೆಂಗಳೂರು ತಾಲ್ಲೂಕಿನ ಇನ್ನೊಂದು ಶಾಸನದ ದಾಖಲೆಯ ಪ್ರಕಾರ ಚಿಕ್ಕಹುಂಡಿ[84] ಎಂಬಲ್ಲಿ ಮುಕ್ತಿಶೆಟ್ಟಿ ಎಂಬ ಪಟ್ಟಣ ಸ್ವಾಮಿಯಿಂದ ಸಂತೆ ನಿಯೋಜಿಸಲ್ಪಡುತ್ತಿತ್ತು ಎಂದು ತಿಳಿದು ಬರುತ್ತದೆ.[85] 12ನೇ ಶತಮಾನದ ಪ್ರಕಾರ ಶ್ರವಣಬೆಳಗೊಳದಲ್ಲಿ ಮೊಸಳೆಯ ಸಂತೆ ಎಂಬಲ್ಲಿ ನೇಮಿಶೆಟ್ಟಿ ಎಂಬುವವನು ಪಟ್ಟಣ ಸ್ವಾಮಿಯಾಗಿದ್ದನು. ಯಾವ ಸ್ಥಳದಲ್ಲಿ ಸಂತೆ ಜರುಗುತ್ತದೋ ಅಲ್ಲಿಗೆ ಪಟ್ಟಣಸ್ವಾಮಿಯನ್ನು ಕರೆಸಿಕೊಳ್ಳಲಾಗುತ್ತಿತ್ತು.[86] ವಸ್ತುಗಳನ್ನು ಮಾರುವ ಮತ್ತು ಕೊಳ್ಳುವ ವ್ಯವಹಾರದಲ್ಲಿ ವಿಧಿಸಿದ ಕೆಲವು ತೆರಿಗೆಗಳನ್ನು ವರ್ತಕರಿಂದ ಸಂಗ್ರಹಿಸಿ ಅವುಗಳನ್ನು ಸಂತೆಗಳನ್ನು ಕಟ್ಟಲು ಉಪಯೋಗಿಸಿ ಕೊಳ್ಳಲಾಗುತ್ತಿತ್ತು. ಪಟ್ಟಣದಲ್ಲಿ ಪಟ್ಟಣಸ್ವಾಮಿಯು ಸಂತೆಗಳ ಕಟ್ಟುವ ಕಾರ್ಯ ನಿರ್ವಹಿಸುತ್ತಿದ್ದರು ಎಂದು ಈ ಮೇಲಿನ ದಾಖಲೆಗಳಿಂದ ತಿಳಿದು ಬರುತ್ತದೆ. ಹೀಗೆ ಅಂದಿನ ದಿನಗಳಲ್ಲಿ ನೀರಿನ ಟ್ಯಾಂಕು ಮತ್ತು ದೇವಸ್ಥಾನಗಳು ನಿರ್ಮಾಣಗೊಂಡಿರುವುದಕ್ಕೆ ಆರು ಪಟ್ಟಣಸ್ವಾಮಿಯು ಮಾಡಿದ ಜನಪರ ಕಲಸ ಕಾರ್ಯಗಳಿಂದ ಎಂದು ಹೇಳಬಹುದಾಗಿದೆ. ಪಟ್ಟಣದಲ್ಲಿ ಕಟ್ಟುವ ಸಂತೆಗಳು ವ್ಯಾಪಾರ ಕೇಂದ್ರಗಳು ಬೆಳೆಯಲು ತುಂಬಾ ಮಹತ್ವವಾದ ಕೊಡುಗೆಯನ್ನು ನೀಡಿದೆ. ಹಾಗೂ ಆಂತರಿಕ ವ್ಯವಹಾರಕ್ಕೆ ಅದರ ಅಭಿವೃದ್ಧಿಗೆ ತುಂಬಾ ಸಹಾಯಕಾರಿಯಾಗಿತ್ತು.

ಪಟ್ಟಣಸ್ವಾಮಿಗೆ ಸಂತೆಗಳನ್ನು ಕಟ್ಟಲು ತಗಲುವ ವೆಚ್ಚಗಳಿಗೆ ರೈತರು, ವರ್ತಕರು ಮತ್ತು ಇತರ ವ್ಯಕ್ತಿಗಳು ಒಟ್ಟಾಗಿ ಸೇರಿ ಭೂಮಿ ಮತ್ತು ತೆರಿಗೆಗಳನ್ನು ಕೊಡುತ್ತಿದ್ದರು.[87] ಭೂ ಅನುದಾನ ಅಥವಾ ಮಾನ್ಯ ಪಟ್ಟಣಸ್ವಾಮಿಗೆ ಆದಾಯದ ಪ್ರಮುಖ ಮೂಲವಾಗಿತ್ತು. ಸಂತೆಗಳನ್ನು ನಡೆಸಲು ಸಣ್ಣ ಸಣ್ಣ ತೆರಿಗೆಗಳಿಂದ ಸಂಗ್ರಹಿಸಿದ ಆದಾಯವನ್ನು ಬಳಸಿಕೊಳ್ಳಲಾಗುತ್ತಿತ್ತು. ಇದು ಪಟ್ಟಣ ಸ್ವಾಮಿಗೆ ಮತ್ತೊಂದು ರೀತಿಯ ಆದಾಯವಾಗಿರುತ್ತದೆ. ಪಟ್ಟಣಸ್ವಾಮಿಯು ಅನೇಕ ಕೊಡುಗೆ ಮತ್ತು ಅನುದಾನಗಳನ್ನು ನೀಡುತ್ತಿದ್ದನು. ಈ ಕೆಳಕಂಡ ದಾಖಲೆಗಳಿಂದ ಹೊಯ್ಸಳರ ಕಾಲದಲ್ಲಿ ಅನುದಾನ ಹೇಗಿತ್ತು ಎಂದು ನಾವು ಊಹಿಸಿಕೊಳ್ಳಬಹುದಾಗಿದೆ. ಬೆಂಗಳೂರು ಜಿಲ್ಲೆಯ ಕನಕಪುರ ತಾಲ್ಲೂಕಿನ ಕ್ರಿ.ಶ. 1316ರ ಶಾಸನದಿಂದ ತಿಳಿದು ಬರುವುದೇನೆಂದರೆ ಮಾಚಯ್ಯ ನಾಯಕ ಮತ್ತು ಹೊನ್ನಳ್ಳಿಗೆ ನಾಡು ರೈತರು ಸೇರಿ ಕೂಡಿಗೆ ಎಂಬ ಭೂಪ್ರದೇಶವನ್ನು ಚೊಕ್ಕಶೆಟ್ಟಿ ಎಂಬ ಪಟ್ಟಣಸ್ವಾಮಿಗೆ ಅನುದಾನವಾಗಿ ನೀಡಲಾಗುತ್ತಿತ್ತು. ಚೊಕ್ಕ ನಾಡುವಿನ ಗಲಿಹಾಲು ಎಂಬಲ್ಲಿ

ಸಂತೆಗಳನ್ನು ಸಂಯೋಜಿಸಲಾಗುತ್ತಿತ್ತು.[88] ಕ್ರಿ.ಶ. 1332 ರ ದಾಖಲೆಯ ಪ್ರಕಾರ ಬೆಂಗಳೂರು ತಾಲ್ಲೂಕಿನ ಒಬ್ಬ ಮುಕ್ತಿಶೆಟ್ಟಿ ಎಂಬ ಪಟ್ಟಣಸ್ವಾಮಿ ಇದ್ದನು. ಇವನಿಗೆ ಸಂತೆಗಳನ್ನು ಚಿಕ್ಕಹುಂಡಿ ಎಂಬಲ್ಲಿ ಕಟ್ಟಲು ಕೋಡಗಿ ಎಂಬ ಭೂಪ್ರದೇಶ ಸುಂಕದ ಕಟ್ಟೆಗಳು ಮತ್ತು ಇತರ ತೆರಿಗೆಗಳನ್ನು ನೀಡಲಾಗಿದ್ದಿತು.[89] ತಲಕಾಡಿನ ನಾಗರತ್ತರ್ ಎಂಬುವವನಿಂದ ಕನ್ನಡೈ ಎಂಬ ಪಟ್ಟಣಸ್ವಾಮಿಗೆ ಋಷಿ ಭೂಮಿಯನ್ನು ಕೊಡಮಾಡಲಾಗಿತ್ತು ಎಂದು ಕ್ರಿ.ಶ. ನೇ ಹದಿಮೂರು ಮತ್ತು ಹದಿನಾಲ್ಕನೇ ಶತಮಾನದ ತಿ.ನಗಸೀಪುರ ತಾಲ್ಲೂಕಿನ ಬೆಟ್ಟಹಳ್ಳಿ ಎಂಬಲ್ಲಿ ಮೂರನೇ ಬಲ್ಲಾಳನು ಕಾಲದಲ್ಲಿ ಉಲ್ಲೇಖಗೊಂಡಿತು ಎಂದು ಮತ್ತೊಂದು ಅಂಶದಿಂದ ತಿಳಿದುಬರುತ್ತದೆ.[90] ಮುಂದೆ ಕ್ರಿ.ಶ. 1253ರ (ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ) ಕುಂಬಾರ ಮತ್ತು ದೇವಗೆರೆಗಳಲ್ಲಿ ಭೂಮಿಯನ್ನು ದೇವಮಾನ್ಯವಾಗಿ ಗುಂಡಗೆರೆಯ ಪಟ್ಟಣಸ್ವಾಮಿಗಳಾದ ತಿವಾದಿಶೆಟ್ಟಿ, ಬುಕಿಶೆಟ್ಟಿ ಮತ್ತು ಕೆಟಿಶೆಟ್ಟಿ ಇವರುಗಳು ಪಡೆದುಕೊಂಡಿದ್ದರು. ಈ ಭೂ ಅನುದಾನವನ್ನು ಕಳಲೇಶ್ವರ ದೇವಾಲಯಕ್ಕೆ ಬಳಸಿ ಕೊಳ್ಳಲಾಗಿತ್ತು. ದೇವಾಲಯದ ಪರವಾಗಿ ಪಟ್ಟಣಸ್ವಾಮಿಯು ಅನುದಾನವನ್ನು ಸ್ವೀಕರಿಸುತ್ತಿದ್ದನು.[91] ಅಲ್ಲದೆ ಪಟ್ಟಣಸ್ವಾಮಿಗಳು ಭೂದೇಣಿಗೆಗಳು ಮನೆಗಳನ್ನು, ನಿವೇಶನಗಳನ್ನು ಕೆಲವು ವೇಳೆ ಎತ್ತಿನ ಗಾಡಿಗಳನ್ನು "ಕೊಡುಗೆ" ರೂಪದಲ್ಲಿ ಪಡೆದುಕೊಂಡಿದ್ದನು. ಉದಾಹರಣಗೆ ಕ್ರಿ.ಶ. 1328ರ ಮೈಸೂರು ಜಿಲ್ಲೆ ಯಳಂದೂರು ತಾಲ್ಲೂಕು ಶಾಸನದ ದಾಖಲೆಗಳ ಪ್ರಕಾರ ದೊಡ್ಡ ಅಳತೆ ಗಳನ್ನೊಳಗೊಂಡ ಆರು ಮನೆಗಳನ್ನು (12 ಕ್ಯೂಬಿಟ್ಸ್ 30 ಕ್ಯೂಬಿಟ್ಸ್) ಮಾನ್ಯದ ರೂಪದಲ್ಲಿ ಪಟ್ಟಣಸ್ವಾಮಿಗೆ ಕೊಡಲಾಗಿತ್ತು.[92] ಕ್ರಿ.ಶ. 1331 ರ ಇನ್ನೊಂದು ಶಾಸನದ ದಾಖಲೆಗಳ ಪ್ರಕಾರ ಗುಬ್ಬಿ ತಾಲ್ಲೂಕಿನಲ್ಲಿ ವೀರಬಲ್ಲಾಳ ತ್ರೈಲೋಕ್ಯ ಪಟ್ಟಣಸ್ವಾಮಿ ಕಾಳಿಶೆಟ್ಟಿಯ ಮಗ ಸಿಂಗಶೆಟ್ಟಿಯು ಸಂಪಿಗೆ ಎಂಬ ನಿವೇಶನವನ್ನು ಕೊಡುಗೆ ರೂಪದಲ್ಲಿ ಕೊಟ್ಟಿದ್ದರು.

ಈ ನಿವೇಶನಕ್ಕೆ ಯಾವುದೇ ತೆರಿಗೆ ಇರಲಿಲ್ಲ. ತೆರಿಗೆ ರಿಯಾಯಿತಿ ಇದ್ದಿತು.93 ಎತ್ತಿನ ಗಾಡಿಗಳ ಕೊಡುಗೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಶಿವಮೊಗ್ಗ ತಾಲ್ಲೂಕಿನ 1203ರ ಶಾಸನದ ದಾಖಲೆಗಳ ಪ್ರಕಾರ ಪಟ್ಟಣಸ್ವಾಮಿ ಶೆಟ್ಟಿಯು ಒಟ್ಟು 100 ಎತ್ತಿನ ಗಾಡಿಗಳನ್ನು ಹೊಂದಿದ್ದನು. 20 ಎತ್ತಿನ ಗಾಡಿಗಳನ್ನು ಚಿಕ್ಕೇಶ್ವರ ದೇವಾಲಯಕ್ಕೆ ಕೊಟ್ಟಿದ್ದನು.[94] ಸಾಮಾನ್ಯವಾಗಿ ಪಟ್ಟಣಸ್ವಾಮಿಯು ಆ ಪಟ್ಟಣಕ್ಕೆ ಶ್ರೀಮಂತ ವರ್ತಕನಾಗಿದ್ದನೆಂದು ಇದರಿಂದ ತಿಳಿದು ಬರುತ್ತದೆ. ಹಾಗೂ ಇದಕ್ಕಾಗಿ ಅವನು ಯಾವುದೇ ಅಪೇಕ್ಷೆಯನ್ನು ಬಯಸುತ್ತಿರಲಿಲ್ಲ. ಇದಕ್ಕಾಗಿ ಅವನನ್ನು ಗೌರವಿಸಲಾಗುತ್ತಿತ್ತು.

ರಾಜ್ಯದ ಇತರ ಅಧಿಕಾರಿಗಳ ವರ್ಗದಲ್ಲಿ ಪಟ್ಟಣಸ್ವಾಮಿಯು ಸೇವಾ ಕಾರ್ಯಗಳಿಗಾಗಿ ಬಹಳ ಹೆಸರುವಾಸಿಯಾಗಿದ್ದನು. ದೇವಾಲಯಗಳ ನಿರ್ಮಾಣದಲ್ಲಿ ಉದಾರ ದೇಣಿಗೆಗಳ ನಿರ್ಮಾಣದಲ್ಲಿ ಉದಾರ ದೇಣಿಗೆಗಳಲ್ಲಿ ಅವನು ಪ್ರಾಮುಖ್ಯತೆ ಪಡೆದುಕೊಂಡಿದ್ದನು. ಈ ಕೆಳಕಂಡ ನಿದರ್ಶನಗಳಿಂದ ನಾವು ತಿಳಿದುಕೊಳ್ಳಬಹುದಾಗಿದೆ.

ಶ್ರವಣ ಬೆಳಗೊಳದಲ್ಲಿ ಕ್ರಿ.ಶ. 1195ರ ಶಾಸನದ ಪ್ರಕಾರ ರಾಜ ಎರಡನೆಯ ಬಲ್ಲಾಳನ ಪಟ್ಟಣಸ್ವಾಮಿ ನಾಗದೇವನು ಜೈನಗುರು ನಯಕೀರ್ತಿಯ ಸ್ಮರಣಾರ್ಥವಾಗಿ ನಾಗರ ಜಿನಾಲಯವನ್ನು ಕಟ್ಟಿಸಿದ್ದನು. ಹಾಗೂ ಶಿಲನ್ಯಾಸ ಮಾಡಿಸಿದ್ದನು ಮತ್ತು ಶ್ರವಣಬೆಳಗೊಳದಲ್ಲಿ ಕಾಮತ ಪಾರ್ಶ್ವ ಬಸ್ತಿಯ ಮುಂಭಾಗದಲ್ಲಿ ನೃತ್ಯ ಸಭೆಯನ್ನು ಸಹ ಸ್ಥಾಪಿಸಿದ್ದನು.[95] ಮಂಡ್ಯಜಿಲ್ಲೆ ನಾಗಮಂಗಲ ತಾಲ್ಲೋಕಿನಲ್ಲಿ ಹಟ್ಟನ ಗ್ರಾಮದಲ್ಲಿ ಕ್ರಿ.ಶ. 1178 ಇನ್ನೊಂದು ಶಾಸನದ ಪ್ರಕಾರ ರಾಜ ಸಾವಂತ ನರಸಿಂಗನಾಯಕನ ಅಧೀನದಲ್ಲಿದ್ದ ಸೋವಿಶೆಟ್ಟಿ ಎಂಬ ಪಟ್ಟಣಸ್ವಾಮಿಯು ಮೂರು ನೀರಿನ ತೊಂಬೆಗಳನ್ನು ಹಾಗೂ ಪಾರ್ಶ್ವಜಿನಾಲಯವನ್ನು ನಿರ್ಮಿಸಿದ್ದನು.[96] ಕಡೂರು ತಾಲ್ಲೂಕಿನ ಸೋಮನಹಳ್ಳಿಯಲ್ಲಿ ಅಭಿನವ ಸೋಮೇಶ್ವರ ದೇವರನ್ನು ನಿರ್ಮಿಸಿದ್ದನು.[97] ಗುಬ್ಬಿ ತಾಲ್ಲೋಕಿನಲ್ಲಿ ಕ್ರಿ.ಶ. 1238ರ ಮತ್ತೊಂದು ಶಾಸನದ ಪ್ರಕಾರ ನಿಟ್ಟೂರಿನ ಪಟ್ಟಣಸ್ವಾಮಿಯು ಸಂಪಿಗೆಯ ಮಲ್ಲಿಕಾರ್ಜುನ ದೇವರಿಗಾಗಿ ಹಿರಿಯ ಕೆರೆಯಲ್ಲಿ ಬಹುದೊಡ್ಡ ಟ್ಯಾಂಕನ್ನು ಕಟ್ಟಿಸಿದ್ದನು.[98]

ತಿಪಟೂರು ತಾಲ್ಲೋಕಿನಲ್ಲಿ ಕಿ.ಶ. 1214ರ ಇನ್ನೊಂದು ಶಾಸನದಲ್ಲಿ ಪಟ್ಟಣಸ್ವಾಮಿ ಮಹದೇವಶೆಟ್ಟಿಯು ಚನ್ನಕೇಶವ ದೇವರಿಗಾಗಿ ಸಂತೆಗಳಿಂದ ಸಂಗ್ರಹಿಸಿದ ಸುಂಕಗಳನ್ನು ದೇಣಿಗೆಯ ರೂಪದಲ್ಲಿ ನೀಡಿದ್ದನು.[99] ಮತ್ತೊಂದು ಕ್ರಿ.ಶ. 1198ರ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೋಕಿನ ಉದ್ರಿ ಎಂಬಲ್ಲಿ ದಾಖಲೆಯ ಪ್ರಕಾರ ಶಾಂತಿನಾಥ ದೇವಾಲಯಕ್ಕೆ ದೊಡ್ಡಸೌಟು ಮತ್ತು ದೀಪ ಬೆಳಗುವುದಕ್ಕಾಗಿ ಎಣ್ಣೆಯನ್ನು ದೇಣಿಗೆಯಾಗಿ ನೀಡಿದ್ದನು.[100] ಮುಂದೆ ಅರಸೀಕೆರೆ ತಾಲ್ಲೋಕಿನಲ್ಲಿ ಕ್ರಿ.ಶ. 1220ರ ಶಾಸನದ ಪ್ರಕಾರ ಕಳ್ಳಿಶೆಟ್ಟಿ ಎಂಬ ಪಟ್ಟಣಸ್ವಾಮಿಯು ಶಾಂತಿನಾಥ ದೇವರ ಪೂಜೆಗಾಗಿ ಒಂದು ಮಳಿಗೆ ಹಾಗೂ ಎರಡು ಗದ್ಯಾಣಗಳನ್ನು ಒದಗಿಸಿದ್ದನು.[101] ಮತ್ತೊಂದು ದಾಖಲೆ ಕ್ರಿ.ಶ. 1273ರ ಅದೇ ತಾಲ್ಲೋಕಿನಲ್ಲಿ ಬೇಲೂರು ತಾಲ್ಲೋಕಿನ ಹೊರಗಡೆಯಿಂದ ಬರುವ ಬಡಬ್ರಾಹ್ಮಣರ ಬೋಜನಕ್ಕಾಗಿ ನಗದನ್ನು ಶಂಕರನೆಂಬ ಪಟ್ಟಣಸ್ವಾಮಿಯು ದೇಣಿಗೆಯ ರೂಪದಲ್ಲಿ ನೀಡಿದ್ದನು.

ಈ ಮೇಲೆ ತಿಳಿಸಿದ ಹಲವು ಬಗೆಯ ಸೇವಾ ಕಾರ್ಯಗಳನ್ನು ಮಾಡಿದ್ದೇ ಅಲ್ಲದೆ ಪಟ್ಟಣದ ಪಟ್ಟಣಸ್ವಾಮಿಗಳು ಗ್ರಾಮಕ್ಕೆ ಹೊರಗಡೆಯಿಂದ ಬರುವ ಶತ್ರುಗಳನ್ನು ತಡೆಯುವುದರಲ್ಲೂ ಸಹ ಬಹಳ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಉದಾಹರಣೆಗೆ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಅಗ್ರಹಾರ ಬಾಚಹಳ್ಳಿ ಎಂಬ ದಾಖಲೆಗಳ ಪ್ರಕಾರ ಬಾಚಹಳ್ಳಿ ಆಕ್ರಮಣ ಕಾರ್ಯದಲ್ಲಿ ಮಲೇಯಾ ಎಂಬ ಒಬ್ಬ ಪಟ್ಟಣಸ್ವಾಮಿಯು ಕಣ್ಣಾಯ ಎಂಬ ಶತ್ರುವಿನ ವಿರುದ್ಧ ಹೋರಾಡಿ ಮಡಿದಿದ್ದನು. ಮುಂದೆ ಪಟ್ಟಣಸ್ವಾಮಿಯು ದೇಣಿಗೆಗಳಿಗೆ ಒಪ್ಪಿಗೆಗಳನ್ನು ನೀಡುತ್ತಿದ್ದನು. ಉದಾಹರಣೆಗೆ ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲ್ಲೋಕಿನ ಮೂಗೂರು ಎಂಬಲ್ಲಿ ಕ್ರಿ.ಶ. 1277ರ ದಾಖಲೆಯ ಪ್ರಕಾರ ಪಟ್ಟಣಸ್ವಾಮಿ ದಾಸಶೆಟ್ಟಿ ಎಂಬುವವನು ದೇಣಿಗೆಗಳನ್ನು ಮಾನ್ಯ ಮಾಡುತ್ತಿದ್ದನು. ಮೂಗೂರು ಗ್ರಾಮವು ಪಟ್ಟಣವಾಗಿ ಮಾರ್ಪಡುವುದನ್ನು ಮಾನ್ಯ ಮಾಡಿದ್ದನು.

ಈ ರೀತಿಯಾಗಿ ಹೊಯ್ಸಳ ಕಾಲದಲ್ಲಿ ಪಟ್ಟಣಸ್ವಾಮಿಯ ಪಟ್ಟಣದ ಆಡಳಿತ ಮತ್ತು ಆರ್ಥಿಕತೆಯಲ್ಲಿ ಮುಖ್ಯಪಾತ್ರ ವಹಿಸಿದ್ದನೆಂದು ಮೇಲಿನ ವಿಶ್ಲೇಷಣೆಯ ಅಂಶಗಳಿಂದ ತಿಳಿದು ಬರುತ್ತದೆ. ಪಟ್ಟಣದ ಸ್ಥಳೀಯ ವರ್ತಕ ಸಂಘಕ್ಕೆ ನಾಯಕನಾಗಿದ್ದನು. ಅವನು ಪಟ್ಟಣದಲ್ಲಿ ಸಂತೆಗಳನ್ನು ಸಂಯೋಜಿಸಿ ತ್ವರಿತಗತಿಯಲ್ಲಿ ವಾಣಿಜ್ಯ ವ್ಯಾಪಾರಗಳು ಅಭಿವೃದ್ಧಿ ಹೊಂದಲು ಪ್ರಮುಖ ಪಾತ್ರವಹಿಸಿದ್ದನು. ಸಾರ್ವಜನಿಕರ ಯೋಗಕ್ಷೇಮ ನೋಡಿಕೊಳ್ಳುವುದರಲ್ಲಿ ಪಟ್ಟಣಸ್ವಾಮಿ ಒಬ್ಬ ಪ್ರಮುಖ ವ್ಯಕ್ತಿಯಾಗಿದ್ದನು. ದತ್ತಿ ಸಂಸ್ಥೆಗಳ ಸ್ಥಾಪನಾಕಾರ್ಯ ವ್ಯಾಪಾರ ವಹಿವಾಟು ರಸ್ತೆ ನಿರ್ಮಾಣ ಹಾಗೂ ಇತರ ಸಾರ್ವಜನಿಕರಿಗೆ ಅತ್ಯಗತ್ಯ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದನು.

6.4.4 ವ್ಯಾಪಾರಿ ಸಂಘಗಳು

ಮಧ್ಯಕಾಲೀನ ಆರ್ಥಿಕ ಜೀವನದ ಇನ್ನೊಂದು ಪ್ರಮುಖ ವೈಶಿಷ್ಟತೆಯೇನೆಂದರೆ ಕುಶಲ ಕರ್ಮಿಗಳು ಹಾಗೂ ವರ್ತಕರಿಬ್ಬರನ್ನು ಹೊಂದಿದ ವ್ಯಾಪಾರಿ ಸಂಘಗಳ ಅಸ್ತಿತ್ವವಾಗಿತ್ತು. "ಭಾರತೀಯ ಕಲೆ ಹಾಗೂ ಚತುರತೆಗಳು ಈ ಜನಗಳ ಅನಿಯಮಿತ ಸಂಘಟನೆ ನಿಪುಣತೆಯ ಆಧಾರದ ಮೇಲೆ ನಿಂತಿದ್ದವು" ಎಂಬುದು ಎ.ಎನ್.ಬೋಸ್ ರವರ ಅಭಿಪ್ರಾಯವಾಗಿದೆ.[102] ಸಂಪತ್ತಿನ ಉತ್ಪಾದನೆಗೆ ಸಂಘಟನೆ ಸಂಯೋಜನೆ ಹಾಗೂ ವಾಣಿಜ್ಯವನ್ನು ನಿಯಂತ್ರಿಸುವ ನಿಯಮಗಳ ಅವಶ್ಯಕತೆಯಿದೆ.[103]

ಸ್ಥಳೀಯ ಅಂಗಗಳನ್ನು ಉಲ್ಲೇಖಿಸುವಾಗ ಅದಕ್ಕೆ ಸಂಬಂಧಿಸಿದ ಸಂಘಟನೆಗಳನ್ನು ಕುರಿತು ಸಂಸ್ಕೃತ ಕೃತಿಗಳು ಅನೇಕ ಶಬ್ಧಗಳನ್ನು ಉಪಯೋಗಿಸಿದವು. ಸಾಮಾನ್ಯವಾಗಿ ಶ್ರೇಣಿ ಹಾಗೂ ಪುಗ ಎಂಬ ಪದಗಳನ್ನು ಕೈಗಾರಿಕಾ ಹಾಗೂ ವಾಣಿಜ್ಯ ಸಂಘಟನೆಗಳಿಗಾಗಿ ಉಪಯೋಗಿಸಲಾಗುತ್ತಿತ್ತು.

6.3.೮ ವ್ಯಾಪಾರಿ ಸಂಘಗಳ ಪ್ರಾಮುಖ್ಯತೆ

ಮಧ್ಯಕಾಲೀನ ಯುಗದ ಆರ್ಥಿಕ ಜೀವನದಲ್ಲಿ ವ್ಯಾಪಾರಿ ಸಂಘಗಳ ಪ್ರಾಮುಖ್ಯತೆ ಹಾಗೂ ನಗರ ಆರ್ಥಿಕ ಚಟುವಟಿಕೆಗಳಲ್ಲಿ ಅವುಗಳ ಮಹತ್ವವನ್ನು ಅತಿಶಯ ಮಾಡಲು ಸಾಧ್ಯವಿಲ್ಲ. ಅಪ್ಪಾ ದೊರೈ ಹೇಳುವಂತೆ ಮಧ್ಯಕಾಲೀನ ಪಟ್ಟಣದ ಆರ್ಥಿಕ ಸಂಘಟನೆಯು ಈ ವ್ಯಾಪಾರಿ ಸಂಘದ ಸುತ್ತ ಕೇಂದ್ರೀಕೃತಗೊಂಡಿತ್ತು.[104]

ಗಿಡೆನ್ ಸ್ಟೋಬರ್ಗ್‌ನ ಪ್ರಕಾರ "ವರ್ತಕ ಸಂಘಗಳು ಪಟ್ಟಣಗಳು ಹಾಗೂ ನಗರಗಳ ವಿಶಿಷ್ಟ ಭಾಗಗಳಾಗಿವೆ. ಹಾಗೂ ಗ್ರಾಮಗಳಲ್ಲಿ" ಹಾಗೂ ಕೇವಲ ಪಟ್ಟಣ ಮತ್ತು ನಗರಗಳಲ್ಲಿ ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಪೂರ್ಣಾವಧಿ ಪರಿಣಿತರು ಕಂಡುಬರುತ್ತಿದ್ದರು. ಸಾಮಾನ್ಯವಾಗಿ ಎರಡು ರೀತಿಯ ವರ್ತಕ ಸಂಘಗಳಿರುತ್ತಿದ್ದವು. ಅವುಗಳೆಂದರೆ ಕುಶಲಕರ್ಮಿಗಳ ಸಂಘ ಹಾಗೂ ವರ್ತಕ ಸಂಘ ಇವೆರಡರಲ್ಲಿ ಎರಡನೆಯದು ವ್ಯವಸ್ಥಿತ ಸಂಘಟನೆಯನ್ನು ಹೊಂದಿ ಬಹಳ ಬಲಿಷ್ಠವಾಗಿತ್ತು. ಆದರೆ ಮೊದಲನೆಯದು ಕೇವಲ ಒಂದು ಸ್ಥಳೀಯ ಸಂಘಟನೆ ಮಾತ್ರ ಆಗಿತ್ತು. ಈ ವ್ಯಾಪಾರಿ ಸಂಘಗಳ ವಿಶಿಷ್ಟತೆಗಳೇನೆಂದರೆ ಒಂದೇ ರೀತಿಯಾದ ಕಸುಬು ಹಾಗೂ ಸ್ವತಂತ್ರ ಸದಸ್ಯತ್ವವಾಗಿದ್ದವು. ಸಾಮಾನ್ಯವಾದ ಪದ್ಧತಿಯ ಪ್ರಕಾರ ಹೆಚ್ಚಿನ ಸಂಖ್ಯೆಯ ಸದಸ್ಯರು ಒಂದೇ ಜಾತಿ ಅಥವಾ ಜಾತಿಗಳಿಗೆ ಸೇರಿದವರಾಗಿರುತ್ತಾರೆ. ಕಸುಬಿನ ಪರಿಣತೆ, ವ್ಯಾಪಾರದ ಪ್ರಮಾಣದಲ್ಲಿನ ಏರಿಕೆಗಳು ವ್ಯಾಪಾರಿ ಸಂಘಟನೆಗಳ ನಿರ್ಮಾಣ ಹಾಗೂ ಬೆಳವಣಿಗೆಯ ಆರ್ಥಿಕ ಕಾರಣಗಳಾಗಿರಬೇಕು. ಕೈಗಾರಿಕೆಗಳ ವ್ಯಾಪಾರ ಹಾಗೂ ವಾಣಿಜ್ಯದ ವಿಸ್ತರಣೆಯಿಂದಾಗಿ ವ್ಯಾಪಾರೀ ಸಂಘಗಳು ಹಲವಾರು ಕಾರ್ಯಗಳನ್ನು ಕೈಗೆತ್ತಿಕೊಂಡವು. ಅವುಗಳ ಅಧಿಕಾರವನ್ನು ಹೆಚ್ಚಿಸಲಾಯಿತು ಹಾಗೂ ಪುರಾತನ ಮತ್ತು ಮಧ್ಯಕಾಲೀನ ಯುಗದ ನ್ಯಾಯಮೂರ್ತಿಗಳು ಇದನ್ನು ಮಾನ್ಯತೆ ಮಾಡಿದರು. ಸ್ಮೃತಿ ಬರಹಗಾರರು ವ್ಯಾಪಾರಿ ಸಂಘಗಳ ನಿಯಮಗಳಿಗೆ ಒಂದು ಕಾನೂನುಬದ್ಧ ಅಧಿಕಾರವನ್ನು ನೀಡಿದರು.[105] ಆಳ್ವಿಕೆಗಾರರು ವ್ಯಾಪಾರಿ ಸಂಘಗಳ ಅಧಿಕಾರ ಮತ್ತು ಹಕ್ಕುಗಳನ್ನು ಮಾನ್ಯತೆ ಮಾಡಿದ್ದರು ಹಾಗೂ ಅವುಗಳ ಕಾರ್ಯ ಚಟುವಟಿಕೆಗಳಲ್ಲಿ ಅಥವಾ ಅವುಗಳ ಬಗ್ಗೆಯಾಗಲೀ ಮಧ್ಯಪ್ರವೇಶ ಮಾಡುತ್ತಿರಲಿಲ್ಲ.

6.4.6 ವೃತ್ತಿ ಸಂಘಗಳು

ದಕ್ಷಿಣ ಭಾರತದಲ್ಲಿ ಕಾರ್ಯೋನ್ಮುಖವಾಗಿದ್ದ ಹಲವಾರು ವೃತ್ತಿ ಸಂಘಗಳಿದ್ದವು. ಒಂದು ಶಾಸನವು ದಾಖಲಿಸುವಂತೆ ಹದಿನೆಂಟು ಪಟ್ಟಣಗಳಿದ್ದವು. ಅವುಗಳೆಂದರೆ ವ್ಯವಹಾರಿಕಗಳು, ಪಂಚಾಲರು, (ಐದು ಬಗೆಯ ಆಚಾರಿಗಳು), ಕುಂಬಾರರು, ನೇಯ್ಗೆಯವರು, ವಸ್ತ್ರಬೇಧಿಕರು, (ಬಟ್ಟೆಗೆ ಬಣ್ಣ ಹಾಕುವವರು) ತಿಳಘಟ್ಟಕರು (ಎಣ್ಣೆ ತಯಾರಕರು) ಕುರಾಂತಕರು, ವಸ್ತ್ರ ರಕ್ಷಕರು, ದೇವಾಂಗರು, ಗೋರಕ್ಷಕರು (ಗೊಲ್ಲರು) ಕಿರಾತಕರು (ಬೇಟೆಗಾರರು) ರಜಕರು (ಅಗಸರು) ಹಾಗೂ ಕ್ಷೌರಿಗಳು.[106] ವೃತ್ತಿಸಂಘವು ವೃತ್ತಿಪರ ಸಂಘಟನೆಯಾಗಿದ್ದು ಜಾತಿ ಹಾಗೂ ವಂಶವು ಪ್ರಮುಖ ವಾಗಿದ್ದವು. ಒಂದು ನಿರ್ದಿಷ್ಟ ವೃತ್ತಿಗೆ ಅಂಟಿಕೊಳ್ಳುವುದು ಒಂದು ನಿರ್ಣಾಯಕ ಅಂಶವಾದರೂ ಒಬ್ಬ ವ್ಯಕ್ತಿಯ ಆಯ್ಕೆಯು ಹೆಚ್ಚಾಗಿ ಆತನ ಜಾತಿಯನ್ನು ಅವಲಂಬಿಸಿತ್ತು. ಮಿತಾಕ್ಷರದ ಪ್ರಕಾರ ಶ್ರೇಣಿಯು ಜನರ ಒಂದು ಗುಂಪಾಗಿದ್ದು ಒಂದು ಜಾತಿಯ ಕಸುಬಿನಿಂದ ಅದು ಅಸ್ತಿತ್ವಕ್ಕೆ ಬರುತ್ತದೆ. ಪುಗವು ಒಂದು ಸ್ಥಳದಲ್ಲಿ ನೆಲೆಸಿದ್ದ ವಿವಿಧ ಜಾತಿ ಹಾಗೂ ವೃತ್ತಿಗಳ ಜನರ ಒಂದು ಸಂಘವಾಗಿತ್ತು.

ಕುಶಲಕರ್ಮಿಗಳ ಸಂಘವನ್ನು ಕರ್ನಾಟಕದ ಶಾಸನಗಳಲ್ಲಿ ಹಲವಾರು ರೀತಿಯಲ್ಲಿ ಉಲ್ಲೇಖಿಸಲಾಗಿದೆ. ಘಟಪಣದಿಯ ಪ್ರಕಾರ ಕೆಲವು ಶಾಸನಗಳಲ್ಲಿ ಶ್ರೇಣಿ ಎಂಬ ಪದವು ಈ ರೀತಿಯಾದ ಸಂಘವನ್ನು ಸೂಚಿಸಲು ಅಳವಡಿಸಲಾಗಿದೆ. ಕರ್ನಾಟಕದ ಶಾಸನಗಳಲ್ಲಿ ಕುಶಲಕರ್ಮಿ ಗಳ ಸಂಘಗಳಿಗೆ ಉಪಯೋಗಿಸಲಾದ ಬಹುಶಃ ಅತೀ ಜನಪ್ರಿಯವಾದ ಪದವೆಂದರೆ ಕೊಟ್ಟಳಿ. ಈ ಸಂಘಗಳನ್ನು ಹಿಟ್ಟುಗಳೆಂದು ಕರೆಯಲಾಗುತ್ತಿತ್ತು. ಕೆಲವೊಮ್ಮೆ ಸಮುದಾಯ ಬಕ್ಕಲು, ನಖರ ಎಂಬುವುಗಳನ್ನು ಬಳಸಲಾಗುತಿತ್ತು. ಈ ಸಂಘಗಳನ್ನು ಅವುಗಳ ಸದಸ್ಯರ ವೃತ್ತಿಗಳನ್ನು ಆಧರಿಸಿ ಉಲ್ಲೇಖಿಸುತ್ತಿದ್ದರು ಎಂಬುದು ತಿಳಿದಿರಲಿಲ್ಲ. ಉದಾಹರಣೆಗೆ ಎಣ್ಣೆ ಗಿರಣಿ ಮಾಲೀಕರ ಕುಟುಂಬಗಳ ಸಂಘಗಳು ಆಗಾಗ ತೆಲಿಗರು ಅಥವಾ ತೆರಿಗಾರಿ ವಟ್ಟೊಕ್ಕಲು ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದವು. ಪ್ರತೀ ವೃತ್ತಿಪರ ಜಾತಿಯು ತನ್ನದೇ ಆದ ಸಂಘವನ್ನು ಹೊಂದಿತ್ತು ತಮ್ಮ ವೃತ್ತಿಗಳ ಹೆಸರುಗಳನ್ನು ಕೊಟ್ಟಳಿ ಅಂದರೆ ಸಂಘವೆಂದು ಎಂಬ ಹೆಚ್ಚುವರಿ ಹೆಸರಿನಿಂದ ಕುಶಲ ಕರ್ಮಿಗಳ ಸಂಘವು ಹೆಸರಿಸಿಕೊಳ್ಳುತ್ತಿತ್ತು.[107]

ಬಹಳ ಹಿಂದಿನಿಂದಲೂ ಈ ಕುಶಲಕರ್ಮಿಗಳ ವರ್ಗಗಳು ಒಂದು ಸಾಂಸ್ಥಿಕ ಅಂಗವಾಗಿದ್ದು ಹಾಗೂ ಸಾಮಾನ್ಯ ವಿಷಯಗಳಲ್ಲಿ ಇತರೆ ವೃತ್ತಿಪರ ಗುಂಪುಗಳು ಹಾಗೂ ವ್ಯಾಪಾರಿ ಸಂಘಗಳೊಂದಿಗೆ ಸಹಕರಿಸಿರುವುದಾಗಿ ಕಂಡು ಬರುತ್ತದೆ. ಈ ಸಂದರ್ಭಗಳಿಗಾಗಿಯೇ ಪ್ರತ್ಯೇಕ ಸ್ಥಳಗಳನ್ನು ಕಾಯ್ದಿರಿಸಲಾಗುತ್ತಿತ್ತು ಎಂಬ ಅಂಶದಿಂದ ಇವುಗಳಿಗಿದ್ದ ಮಹತ್ವವನ್ನು ನಾವು ತಿಳಿಯಬಹುದು. ಸಂಘದ ಸದಸ್ಯರು ನಗರ ಪ್ರದೇಶಗಳ ಒಂದು ನಿರ್ದಿಷ್ಟ ಸ್ಥಳದಲ್ಲಿ ವಾಸಿಸುತ್ತಿದ್ದರು. ಹಾಗೂ ದೇವಾಲಯ ಅಥವಾ ಸಂತೆಯಂತಹ ಸಾಮಾನ್ಯ ಜನಸೇರುವ ಸ್ಥಳಗಳಲ್ಲಿ ಭೇಟಿಯಾಗುತ್ತಿದ್ದರು ಹಾಗೂ ಅವರ ವ್ಯಾಪಾರವನ್ನು ನಡೆಸುತ್ತಿದ್ದರು. ಆಗಿಂದಾಗ್ಗೆ ಸಂಘಗಳು ಸಾಕಷ್ಟು ವಿಶೇಷ ಹಕ್ಕುಗಳನ್ನು ಹೊಂದುತ್ತಿದ್ದವು. ಕೆಲವು ಪ್ರದೇಶದ ಸಂಘಗಳು ಬೇರೆ ಪ್ರದೇಶದ ಸಂಘಗಳ ಮೇಲೆ ಪ್ರಭಾವವನ್ನು ಹೊಂದಿದ್ದವು. ಇವರು ಕೇವಲ ವಿಶೇಷ ಹಕ್ಕುಬಾಧ್ಯತೆಗಳನ್ನು ಹೊಂದುವ ಅಂಗವಾಗಿರದೆ ದಾನ ಮಾಡುವ ಅಂಗವು ಕೂಡ ಆಗಿದ್ದವು. ಸಂಘಗಳು ತಮ್ಮದೇ ಆದ ನಿಯಮಾವಳಿಗಳನ್ನು ಹೊಂದಿದ್ದವು. ಇವುಗಳನ್ನು ಸದಸ್ಯರು ಪಾಲಿಸುತ್ತಿದ್ದರು. ಯಾವುದೇ ಸದಸ್ಯನು ಅವುಗಳನ್ನು ಉಲ್ಲಂಘಿಸಿದ ಪಕ್ಷದಲ್ಲಿ ಅಂತಹ ತಪ್ಪಿತಸ್ತನಿಗೆ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು. ಸಂಘಗಳನ್ನು ಸ್ಥಾಪಿಸುವಲ್ಲಿ ಸಮುದಾಯದ ಆಸಕ್ತಿಯು ಹೆಚ್ಚಿನ ಪಾಲನ್ನು ಹೊಂದಿತ್ತು. ಈ ಸಂಘಗಳ ಸದಸ್ಯರು ತಮ್ಮ ಕಸುಬಿನ ಹಿತಾಸಕ್ತಿಗಳನ್ನು ಕಾಪಾಡುತ್ತಿದ್ದರು. ಈ ಸಂಘಟನೆಗಳು ಹಲವು ವಿಶೇಷ ಹಕ್ಕುಗಳನ್ನು ಹೊಂದಿದ್ದವು. ಹಾಗೂ ರಾಜಕೀಯ ವಿಷಯಗಳಲ್ಲಿ ಸಹಾಯ ಮಾಡುತ್ತಿದ್ದವು. ಹಾಗೂ ಇವುಗಳಿಗೆ ಸ್ವಲ್ಪ ಮಟ್ಟಿನ ರಾಜಕೀಯ ಅಧಿಕಾರವು ಇತ್ತು. ಆಗಿಂದಾಗ್ಗೆ ಅರಸರಿಂದ ಸವಲತ್ತುಗಳನ್ನು ಪಡೆಯುತ್ತಿದ್ದರು ಈ ಸಂಘದ ಸಂಘಟನೆಗಳ ಪಾತ್ರ ಅಧಿಕಾರ ಹಾಗೂ ಕಾರ್ಯಗಳು ಅವರಿಗಿದ್ದ ವಿಶೇಷ ಹಕ್ಕುಬಾಧ್ಯತೆಗಳು ಸಮಕಾಲೀನ ಸಾಮಾಜಿಕ ಆರ್ಥಿಕ ಜೀವನ ಹಾಗೂ ಸನ್ನಿವೇಶದಲ್ಲಿ ಅದರ ಪಾತ್ರವನ್ನು ಆ ಕಾಲದ ಕೆಲವು ಪ್ರಮುಖ ವೃತ್ತಿ ಸಂಘಗಳನ್ನು ಅಧ್ಯಯನ ಮಾಡುವ ಮುಖಾಂತರ ಉದಾಹರಿಸಬಹುದು.

6.4.7 ಪಾಂಚಾಲರು

ಅನೇಕ ವೃತ್ತಿ ಸಂಘಗಳಲ್ಲಿ ಪಾಂಚಾಲರು, ಅಥವಾ ವೀರ ಪಾಂಚಾಲರು ಅತ್ಯಂತ ಪ್ರಮುಖರೆಂದು ತಿಳಿದು ಬರುತ್ತದೆ. ಈ ಸಂಘವು ಪಂಚಲಂವರು, ಪಂಚನಂವರು ಹಾಗೂ ಪಾಂಚಾಲರು ಎಂದು ಹೆಸರಾಗಿತ್ತು. ಪಾಂಚಾಲ ಸಂಘವು, ಕಮ್ಮಾರರು, ಅಕ್ಕಸಾಲಿಗರು, ಕಂಚುಗಾರರು, ಬಡಗಿಗಳು ಹಾಗೂ ಕಲ್ಲು ಕಟ್ಟಿಡ ನಿರ್ಮಾಪಕರನ್ನು ಹೊಂದಿತ್ತು. ತಮಿಳು ಪದ

'ಪಂಚಾಲತ್ತರ್' ಎಂದರೆ ಐದು ಕುಶಲಕರ್ಮಿಗಳೆಂಬ ಅರ್ಥ ಬರುತ್ತದೆ. ವೀರ ಪಾಂಚಾಲರು ಸರ್ಕಾರದ ತೆರಿಗೆಯಿಂದ ವಿಮುಕ್ತರಾಗಿದ್ದರು.

6.4.8 ವರ್ತಕ ಸಂಘಗಳ ಪ್ರಾಮುಖ್ಯತೆ

ಅಧಿಕಾರ ಹಾಗೂ ಪ್ರಾಬಲ್ಯದ ವಿಷಯದಲ್ಲಿ ಬಹುಶಃ ವೃತ್ತಿ ಸಂಘಕ್ಕಿಂತ ವ್ಯಾಪಾರಿ ಸಂಘವು ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿತ್ತು. ಇದು ಅವಶಯಕವಾಗಿ ವರ್ತಕರ ಸಂಘವಾಗಿ ದೇಶದ ವಾಣಿಜ್ಯ ಜೀವನದಲ್ಲಿ ದೊಡ್ಡ ಪಾತ್ರವನ್ನು ನಿರ್ವಹಿಸಿತು ಕಸುಬಿನಲ್ಲಿ ಸಾಮರಸ್ಯತೆ ಸಮರೂಪವಾದ ಹಿತಾಸಕ್ತಿ ಸ್ಥಳೀಯ ಪ್ರದೇಶದಲ್ಲಿ ವಸತಿ ಹಾಗೂ ಹಲವು ಧಾರ್ಮಿಕ ಪಂಥಗಳ ಸದಸ್ಯತ್ವ ಇವುಗಳೆಲ್ಲವೂ ವರ್ತಕ ಸಂಘಗಳನ್ನು ರೂಪಿಸುವುದರಲ್ಲಿ ನಿರ್ಣಾಯಕ ಅಂಶಗಳಾಗಿದ್ದವು. ಅನೇಕ ಮಾರುಕಟ್ಟೆ ಪಟ್ಟಣಗಳಿದ್ದವು. ಇಂತಹವುಗಳಲ್ಲಿನ ವರ್ತಕರೊಂದಿಗೆ ರಾಜನು ಹೆಚ್ಚು ತಲೆ ಹಾಕುತ್ತಿರಲಿಲ್ಲ. ಆದರೆ ಥೇಂಬರ್‌ನ ಅಭಿಪ್ರಾಯದ ಪ್ರಕಾರ ಸ್ವತಂತ್ರ ಕಾನೂನುಗಳನ್ನು ಹೊಂದಿದ ವ್ಯಾಪಾರ ವಾಣಿಜ್ಯ ಸಂಬಂಧಗಳ ಪ್ರಾಬಲ್ಯತೆಯು ಎಲ್ಲೂ ಕಂಡುಬರಲಿಲ್ಲ.[108]

ನಗರ ಸಕಾರವು ಈ ಸಂಘಗಳನ್ನು ಸುತ್ತುವರೆದಿತ್ತು. ನಗರದ ಮುಖ್ಯಸ್ಥ ಅಥವಾ ನಗರ ಪಾಲಕನು ಸಾಮಾನ್ಯವಾಗಿ ಒಬ್ಬ ಪ್ರಮುಖ ನಾಯಕ ಅಥವಾ ಮುಕ್ಯಸ್ಥ ಇಲ್ಲವೇ ಆ ಸಂಘದ ಮುಖ್ಯಸ್ಥನಾಗಿರುತ್ತಿದ್ದನು. ಪಟ್ಟಣಸ್ವಾಮಿಯ ಪಾತ್ರ ಹಾಗೂ ಕಾರ್ಯಗಳ ಅಧ್ಯಯನವು ಆಡಳಿತ ಹಾಗೂ ಆರ್ಥಿಕ ಚಟುವಟಿಕೆಗಳ ವಿಷಯದಲ್ಲಿ ವರ್ತಕ ಸಂಘಗಳು ಹಾಗೂ ಪಟ್ಟಣಗಳ ನಡುವೆ ನಿಕಟ ಸಂಬಂಧವನ್ನು ತೋರಿಸುತ್ತದೆ. ನಮ್ಮ ಅಧ್ಯಯನ ಕಾಲದಲ್ಲಿ ವರ್ತಕ ಸಂಘಗಳು ಹೊಂದಿದ್ದ ಅಧಿಕಾರ ಹಾಗೂ ಕಾರ್ಯಗಳು ವಿಶೇಷ ಹಕ್ಕುಗಳು ಮತ್ತು ಪ್ರಾಬಲ್ಯವನ್ನು ಹಲವಾರು ಉದಾಹರಣೆಗಳನ್ನು ನೀಡುವುದರ ಮೂಲಕ ಸ್ಪಷ್ಟಪಡಿಸಬಹುದು.

6.4.9 ಐಯ್ಯಾವೊಳೆ

ದಕ್ಷಿಣ ಭಾರತದ ಜನ ಜೀವನದಲ್ಲಿ "ಐಯ್ಯಾವೊಳೆ" ಎಂಬ ವ್ಯಾಪಾರ ಶ್ರೇಣಿಯು ಪ್ರಮುಖ ಪಾತ್ರ ವಹಿಸಿದ್ದಿತು. ಕ್ರಿ.ಶ. 8ನೇ ಶತಮಾನದಿಂದ 17ನೇ ಶತಮಾನದವರೆಗಿನ ಭಾರತದ ಶಾಸನಗಳು ಈ ಶ್ರೇಣಿ ವಿವರಗಳನ್ನು ತಿಳಿಸುತ್ತವೆ.[109] ಅವರು ತಮ್ಮ ಚೀಲಗಳಲ್ಲಿ ಬೆಲೆಯುಳ್ಳ

ಸರಕುಗಳನ್ನು ಹೊಂದಿ ಎಲ್ಲ ರಾಷ್ಟ್ರಗಳು, ಗ್ರಾಮಗಳು, ನಗರಗಳು ಮತ್ತು ಪಟ್ಟಣಗಳನ್ನು ಸುತ್ತಾಡುತ್ತಿದ್ದ ವರ್ತಕರಾಗಿದ್ದರು.

ಈ ಶ್ರೇಣಿಗೆ ಒಂದು ನಿರ್ದಿಷ್ಟ ವ್ಯವಸ್ಥೆ ಮತ್ತು ಚರಿತ್ರೆ ಇದ್ದಿತು. ಸಾಮಾನ್ಯವಾಗಿ ರಾಜ ಅಥವಾ ಅವನ ಸರ್ಕಾರ ಅವರಲ್ಲಿ ಮನಸ್ತಾಪ ಅಥವಾ ಜಗಳಗಳಿಂದ ಸರ್ಕಾರದ ಪ್ರವೇಶ ಅವಶ್ಯಕವಾಗಿರದಿದ್ದರೆ ಅವುಗಳ ಕೆಲಸದಲ್ಲಿ ಪ್ರವೇಶಿಸುತ್ತಿರಲಿಲ್ಲ. ಐಯ್ಯಾವೊಳೆ ತನ್ನದೇ ಆದ ನಿಯಮಗಳನ್ನು ಹೊಂದಿದ್ದಿತು. ಅವರು ವೀರ ಬಳಂಜ ಮತದ ರಕ್ಷಣೆ ಮಾಡುವವರೆಂದು ಹೇಳುತ್ತಿದ್ದರು. ಅದರ ಸದಸ್ಯರು ಭಗವತಿ ದೇವತೆಯ ಆರಾಧಕರಾಗಿದ್ದರು. ಆ ಶ್ರೇಣಿಯಲ್ಲಿ "ಸಾವಿರ ಜಿಲ್ಲೆಗಳ" ಮೂವತ್ತೆರಡು ಉಚ್ಛ್ರಾಯ ಸ್ಥಿತಿಯಲ್ಲಿದ್ದ ತೀರ ಪ್ರದೇಶದ ನಗರಗಳು ಹದಿನೆಂಟು ಪಟ್ಟಣಗಳು ಮತ್ತು ಅರವತ್ತನಾಲ್ಕು ವ್ಯಾಪಾರ ಸಭೆಗಳು ಇವೆ ಮುಂತಾದ ವಿಭಾಗಗಳಿದ್ದವು. ಅದರ ಸದಸ್ಯರು ಅನೇಕ ರಾಷ್ಟ್ರಗಳನ್ನು ಸುತ್ತಿ ಭೂಜಲಮಾರ್ಗಗಳಿಂದ ಆ ರಾಷ್ಟ್ರಗಳಿಗೂ ಹೋಗಿದ್ದರೆಂದು ಹೇಳುತ್ತಿದ್ದರು.[110] ಶಿಕಾರಿಪುರದ ಒಂದು ಶಾಸನವು[111] ಈ ವರ್ತಕರ ಉದ್ದವಾದ ಪ್ರಶಂಸೆಯನ್ನು ಕೊಡುತ್ತದೆ ಅವರು ಬಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೋಕಿನ ಐಹೊಳೆಯಲ್ಲಿ ಕೇಂದ್ರ ಕಛೇರಿ ಹೊಂದಿದ್ದರು. ಕೋಲಾರದ ಒಂದು ಶಾಸನವು ಅವರು ತಮ್ಮನ್ನು "ಐಯ್ಯಾವೊಳೆ ಪುರ ಪರಮೇಶ್ವರಿ"ಯ ಮಕ್ಕಲ್ ಮತ್ತು ಭಾಗವತಿಯ ಮಕ್ಕಲ್" ಎಂದು ಹೇಳಿಕೊಳ್ಳುತ್ತಿದ್ದರೆಂದು ತಿಳಿಸುತ್ತದೆ.[112]

ಅವರು ಕೂಡ "ಪಟ್ಟಣಸ್ವಾಮಿ" ಎಂಬ ನಾಯಕನನ್ನು ಹೊಂದಿದ್ದರೆಂದು ಕಾಣುತ್ತದೆ. ಈ ಶ್ರೇಣಿಯ ಸಂವಿಧಾನವನ್ನು ತಿಳಿಯಲಾಗುವುದಿಲ್ಲ ಆದರೆ "ಸ್ವಾಮಿಗಳು" ಯಾವಾಗಲೂ ಅದು ಐನೂರು ಸದಸ್ಯರುಗಳನ್ನೊಳಗೊಂಡ ಕಾರ್ಯ ನಿರ್ವಾಹಕ ಸಮಿತಿಯಾಗಿದ್ದಿತ್ತು. ಆ ಶ್ರೇಣಿಯು ತನ್ನಲ್ಲಿ ಗವರರು ಗತ್ರಿಗದು, ಶೆಟ್ಟಿಗಳು ಶೆಟ್ಟಿಗುಟ್ಟರು, ಅಂಕಕರರು, ಶೆಟ್ಟಿಪುತ್ರರು, ಬೀರವಣಿಗರು ನಾನಾ ದೇಶಿಗಳು, ನಾಡು, ನಗರ ಮತ್ತು ಇತರರನ್ನೊಳಗೊಂಡಿದ್ದಿತು.[113] ಚಂದ್ರಶೇಖರ ಶಾಸ್ತ್ರಿಯವರ ಪ್ರಕಾರ ಐಯ್ಯಾವೊಳೆ ವರ್ತಕ ಶ್ರೇಣಿಗಳ ಒಂದು ಸಮಗ್ರ ಸಂಘವಾಗಿರಬಹುದು.

6.4.10 ವೀರಬಣಜಿಗರು

ಕರ್ನಾಟಕ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಹೊಯ್ಸಳರ ಕಾಲದಲ್ಲಿ ವೀರಬಣಜಿಗರು ವಿಶೇಷ ಪ್ರಭಾವವನ್ನು ಹೊಂದಿದ್ದರು. ಬಲ್ಲಿಗ್ರಾಮ ಅವರ ಭದ್ರವಾದ ಒಂದು ನೆಲೆಯಾಗಿತ್ತು. ಇವರು ತಮ್ಮ ಹಕ್ಕುಗಳನ್ನು ಮತ್ತು ಬಿರುದುಗಳನ್ನು ಆತ್ಮಾಭಿಮಾನದಿಂದ ರಕ್ಷಿಸಿಕೊಳ್ಳುತ್ತಿದ್ದರು. ಕ್ರಿ.ಶ. 1182ರ ಒಂದು ಶಾಸನದಲ್ಲಿ 114 ಅವರು ತಮ್ಮ ವಿಚಾರವಾಗಿ ಪ್ರಶಂಸನಾ ಪದಗಳನ್ನು ಉಪಯೋಗಿಸಿದ್ದಾರೆ.

ವೀರ ಬಣಜಿಗರು ಬಹಳ ಪ್ರಸಿದ್ಧವಾದ ವರ್ತಕರ ಗುಂಪಾಗಿದ್ದರು.115 ಸಲಿಕೆಯ ಬಲ್ಲಾಳುಗಳು ಉದ್ಯಮಿ ಸಂಘದ ಸದಸ್ಯರಾಗಿದ್ದರೆಂದು ಕಂಡುಬರುತ್ತದೆ. ಈ ಸಂಘದ ಸದಸ್ಯರಿಗೆ ಸಲಿಕೆಯ ಸಂಪರ್ಕವಿತ್ತು. ಇವರು ಪ್ರಮುಖ ನಾಗರೀಕರಾಗಿದ್ದರೆಂದು ತಿಳಿದುಬರುತ್ತದೆ. ಈ ರೀತಿಯಾಗಿ ವ್ಯಾಪಾರಿ ಸಂಘಗಳು ಹೊಯ್ಸಳರ ಕಾಲದಲ್ಲಿ ವಿಶೇಷವಾಗಿ ವ್ಯಾಪಾರ ಕೇಂದ್ರಗಳಲ್ಲಿ ಪ್ರಬಲ ಶಕ್ತಿಗಳಾಗಿದ್ದವೆಂದು ತಿಳಿದು ಬರುತ್ತದೆ. ಅವರ ಆರ್ಥಿಕ ಸ್ಥಿತಿಯು ವ್ಯಾಪಾರಿಗಳಿಗೆ ಸಮಾಜದಲ್ಲಿ ಒಂದು ಸ್ಥಾನವನ್ನು ಕಲ್ಪಿಸಿಕೊಟ್ಟಿತ್ತು. ಅವರು ಪಟ್ಟಣ ಆಡಳಿತ ವಿಷಯಗಳಲ್ಲಿ ಸ್ಥಳೀಯವಾಗಿ ಪ್ರಬಲರಾಗಿದ್ದರು ಹಾಗೂ ನಗರ ಆರ್ಥಿಕ ಚಟುವಟಿಕೆಗಳಲ್ಲಿ ಶಕ್ತಿವಂತರಾಗಿದ್ದರು.

ಈ ಸಂಘಗಳ ಆಂತರಿಕ ಸಂಘಟನೆಯು ಒಂದು ನಿರ್ದಿಷ್ಟ ವಿಧಾನವನ್ನು ಅನುಸರಿಸಿತ್ತು. ಇದನ್ನು ಒಬ್ಬ ಹಿರಿಯ ನಾಯಕನು ನಿರ್ವಹಿಸುತ್ತಿದ್ದನು. ಹಾಗೂ ಅವನ ಹುದ್ದೆಯು ವಂಶ ಪಾರಂಪರ್ಯವಾಗಿತ್ತು. ಈ ಸಂಘದ ನಾಯಕನನ್ನು ಹಿರಿಯ ಸದಸ್ಯರ ಒಂದು ಸಮಿತಿಯು ಬೆಂಬಲಿಸುತ್ತಿತ್ತು. ಪ್ರತೀ ಸಂಘವು ತನ್ನದೇ ಆದ ಚಿಹ್ನೆ ಹಾಗೂ ರಾಜಲಾಂಛನವನ್ನು ಹೊಂದಿತ್ತು. ವ್ಯಾಪಾರಿ ಸಂಘಗಳು ಹಂಚಿಕೆಯ ವಿಷಯಕ್ಕೆ ಸಂಬಂಧಿಸಿದಂತೆ ಪ್ರಬಲರಾಗಿದ್ದರೆ ವೃತ್ತಿ ಸಂಘಗಳು ಉತ್ಪಾದನಾ ವಿಷಯಗಳಲ್ಲಿ ಅಧಿಪತ್ಯವನ್ನು ಹೊಂದಿದ್ದವು. ಆರ್ಥಿಕ ಜೀವನದಲ್ಲಿ ವಿಶೇಷವಾಗಿ ನಗರಕ್ಕೆ ಸಂಬಂಧಪಟ್ಟಂತೆ ವೃತ್ತಿ ಹಾಗೂ ವರ್ತಕ ಸಂಘಗಳು ನಿರ್ವಹಿಸಿದ ಪಾತ್ರ ಅವುಗಳು ಹೊಂದಿದ್ದ ಅಧಿಕಾರ ಹಾಗೂ ಪ್ರಾಬಲ್ಯತೆಗಳು ಬಹಳ ಪ್ರಮುಖವಾಗಿದೆ.

6.4.11 ನಗರ ಸಮಾಜದ ಸ್ವರೂಪ

ವೈವಿಧ್ಯಮಯ ಸಾಮಾಜಿಕ ಲಕ್ಷಣಗಳನ್ನು ಹೊಂದಿರುವ ನಗರದ ಸ್ವರೂಪವು ಸಂಕೀರ್ಣವಾಗಿದೆ. ವೈವಿಧ್ಯತೆಯೇ ಅದರ ಗುಣವಾಗಿದೆ. ಅದರ ಸಾಮಾಜಿಕ ಸಂಯೋಜನೆ

ವೈವಿಧ್ಯತೆಯೇ ಅದರ ಗುಣವಾಗಿದೆ. ಅದರ ಸಾಮಾಜಿಕ ಸಂಯೋಜನೆಯು ನಾನಾ ಬಗೆಯ ಗುಂಪುಗಳು, ಜಾತಿಗಳು ಹಾಗೂ ವರ್ಗಗಳಿಂದ ರಚಿತವಾದುದಾಗಿದೆ. ಇದರ ಜೊತೆಗೆ ಗ್ರಾಮೀಣ ಸಮಾಜಕ್ಕೆ ಹೋಲಿಸಿದ್ದಲ್ಲಿ ನಗರ ಸಮಾಜವು ಹೆಚ್ಚು ಕ್ಲಿಷ್ಟವಾಗಿಲ್ಲ. ಆದ್ದರಿಂದ ನಗರ ಸಮಾಜವು ಪ್ರಗತಿಶೀಲವಾಗಿದೆ. ನಗರಗಳು ಹೊರಗಿನವರಿಗೆ ಮುಕ್ತವಾಗಿದೆ. ಥಾಕೂರ್‌ರವರ ಪ್ರಕಾರ ನಗರದ ಸಾಮಾಜಿಕ ವ್ಯವಸ್ಥೆಯು ಬಂಧುತ್ವಕ್ಕಿಂತ ಮಿಗಿಲಾಗಿ ವಸತಿಯ ಮೇಲೆ ಆಧಾರವಾಗಿದೆ ಹಾಗೂ ನಗರ ವಾಸಿಗಳು ಹಲವಾರು ಗುಂಪುಗಳಿಗೆ ಸೇರಿದವರಾಗಿದ್ದಾರೆ.[116] ನಗರ ಸನ್ನಿವೇಶದಲ್ಲಿ ಜಾತಿಯಲ್ಲಿನ ಕಠಿಣತೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಸಾಮಾಜಿಕ ಶ್ರೇಣಿಗೆ ಸಂಬಂಧಿಸಿದಂತೆ ಸಾಂಪ್ರದಾಯಿಕ ಆಲೋಚನೆಗಳು ನಗರದ ವಾತಾವರಣದಲ್ಲಿ ತಮ್ಮ ಬೇರುಗಳನ್ನು ಕಳೆದುಕೊಳ್ಳುತ್ತವೆ.

6.4.12 ಗುಂಪುಗಳು

ಹೊಯ್ಸಳರ ಕಾಲದ ನಗರ ಸಮಾಜದ ಅಧ್ಯಯನ ಹಾಗೂ ಒಂದು ನಿರ್ದಿಷ್ಟ ಪಟ್ಟಣ ಅಥವಾ ಪಟ್ಟಣಗಳಲ್ಲಿನ ಸಾಮಾಜಿಕ ಸಂಯೋಜನೆಯ ವಿಶ್ಲೇಷಣೆಯಿಂದ ನಮಗೆ ತಿಳಿದುಬರುವ ಅಂಶವೇನೆಂದರೆ ನಗರ ಸಮಾಜವು ಸಂಕೀರ್ಣವಾದುದ್ದು ಹಾಗೂ ವೈವಿಧ್ಯಮಯವಾದುದ್ದು ನಗರೀಕರಣ ಪ್ರಕ್ರಿಯೆಯು ಸ್ವಲ್ಪ ಮಟ್ಟಿನ ಸರಳತೆ ಹಾಗೂ ಬದಲಾವಣೆಯನ್ನು ನಗರ ಸಮಾಜದಲ್ಲಿ ತರುವ ಮೂಲಕ ಪಟ್ಟಣಗಳ ಸಮಾಜ ಹಾಗೂ ಸಂಸ್ಕೃತಿಯ ಮೇಲೆ ತನ್ನ ಪ್ರಭಾವ ಬೀರುವಂತೆ ಮಾಡಿತು. ಸಮಕಾಲೀನ ನಗರ ಸಮಾಜವು ಮೇಲ್ವರ್ಗ ಹಾಗೂ ಮೇಲ್ವರ್ಗೇತರ ವಿಂಗಡನೆಯನ್ನು ಹೊಂದಿತ್ತು. ಅವುಗಳಲ್ಲಿ ಆಡಳಿತ ವರ್ಗ ರಾಜ, ದೊರೆಗಳು, ಮಂತ್ರಿಗಳು ಉನ್ನತ ಆಡಳಿತ ಹಾಗೂ ಸೇನಾ ಅಧಿಕಾರಿಗಳು, ಶ್ರೀಮಂತ ವರ್ತಕರು, ಶ್ರೇಷ್ಠ ಪುರೋಹಿತರು ಹಾಗೂ ಕೆಳ ಆಡಳಿತ ಮತ್ತು ಸೇನಾ ಸಿಬ್ಬಂದಿ ವೃತ್ತಿಪರರೆಂದರೆ ಲೆಕ್ಕಿಗರು, ಲೇಖಕರು, ಬೋಧಕರು, ವರ್ತಕರು, ಕುಶಲಕರ್ಮಿಗಳು ಹಾಗೂ ಶಿಲ್ಪಿಗಳು, ಸಾರ್ವಜನಿಕ ಮನೋರಂಜಕರು, ಹಾಡುಗಾರರು, ನರ್ತಕರು, ಕಲಾವಿದರು, ಸಂಗೀತಗಾರರು ಹಾಗೂ ಇತರ ತೃತೀಯ ಗುಂಪಿನವರೆಂದರೆ ಹೂವು ಮಾರುವವರು, ಕ್ಷೌರಿಕರು, ಅಗಸರು ಹಾಗೂ ಮನೆಗೆಲಸದ ಆಳುಗಳು ಹಾಗೂ ಈ ಗುಂಪಿನಲ್ಲಿ ವಿವಿಧ ಧಾರ್ಮಿಕ ಗಉಂಪಿನವರು ಇದ್ದರು.

6.4.13 ಮೇಲ್ವರ್ಗಗಳು ಹಾಗೂ ಮೇಲ್ವರ್ಗೇತರರು

ನಗರಗಳಲ್ಲಿ ಹೆಚ್ಚು ಪ್ರಭಾವೀ ಗುಂಪೆಂದರೆ ಉನ್ನತ ವರ್ಗವಾಗಿತ್ತು. ಈ ವರ್ಗವು ಅಗಾಧವಾದ ಸಾಮಾಜಿಕ ಪ್ರಾಬಲ್ಯವನ್ನು ಹೊಂದಿತ್ತು. ಸ್ಜೋಬರ್ಗ್ ಹೇಳುವಂತೆ ನಗರದಲ್ಲಿ ಒಂದು ಸಣ್ಣ ಮೇಲ್ವರ್ಗವು ರಾಜಕೀಯ ಪ್ರದೇಶಗಳಲ್ಲಿ ಹಾಗೂ ಶೈಕ್ಷಣಿಕ ವ್ಯವಸ್ಥೆಗಳಲ್ಲಿ ಪ್ರಮುಖ ಸ್ಥಾನವನ್ನು ಹೊಂದಿತ್ತು ಹಾಗೂ ಹೆಚ್ಚು ಕಡಿಮೆ ಒಂದು ರೀತಿಯ ನಿರಂಕುಶ ನಿಯಂತ್ರಣವನ್ನು ಹೊಂದಿತು.[117]

ಈ ಉನ್ನತ ವರ್ಗವು ರಾಜ, ಮಂತ್ರಿಗಳು, ರಾಜ್ಯಪಾಲರು, ಆಡಳಿತದ ಸಮೂಹ, ಬುದ್ಧಿಜೀವಿಗಳು, ಉನ್ನತ ಪುರೋಹಿತರು ಸೇನೆಯ ಮುಖ್ಯಸ್ಥರು ಶ್ರೀಮಂತ ವರ್ತಕರು ಹಾಗೂ ಇತರರಾಗಿದ್ದರು.[118] ಉನ್ನತ ವರ್ಗವು ತನ್ನ ಅಧೀನದಲ್ಲಿ ಭೌತಿಕ ಸಂಸ್ಕೃತಿ ಹಾಗೂ ಸಂಪನ್ಮೂಲ ಗಳನ್ನು ರಾಜಕೀಯ ಪ್ರಾಬಲ್ಯ ಮತ್ತು ಪವಿತ್ರ ಸಂಪ್ರದಾಯವನ್ನು ಹೊಂದಿತ್ತು. ಅದು ರಾಜಕೀಯ ಧಾರ್ಮಿಕ ಮತ್ತು ಆರ್ಥಿಕ ಶಕ್ತಿಗಳನ್ನು ತನಗೆ ಬೇಕಾದಂತೆ ಬಳಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿತ್ತು. ಈ ವರ್ಗದ ಕೆಳಗೆ ಇದ್ದ ನಗರ ಕೇಂದ್ರದ ಜನಸಂಖ್ಯೆಯು ಅಪಾರ ಸಂಖ್ಯೆಯ ಮೇಲ್ವರ್ಗೇತರ ಗುಂಪುಗಳಾಗಿದ್ದರು. ವರ್ತಕರು ಅಪಾರ ಸಂಖ್ಯೆಯ ಮೇಲ್ವರ್ಗೇತರ ಗುಂಪುಗಳಾಗಿದ್ದವು. ವರ್ತಕರು ಹಾಗೂ ಕಸುಬುದಾರರು ಉತ್ಪಾದನ ಮತ್ತು ಹಂಚಿಕೆಯ ವರ್ಗಗಳು, ಸೇವಾಸಿಬ್ಬಂದಿ ಹಾಗೂ ಕೆಳಗುಂಪುಗಳನ್ನು ಮೇಲ್ವರ್ಗೇತರರು ಎಂದು ಪರಿಗಣಿಸಲಾಗಿತ್ತು. ಶಿಲಾಶಾಸನ ಹಾಗೂ ಸಾಹಿತ್ಯಿಕ ಆಧಾರಗಳು ಹೊಯ್ಸಳರ ಕಾಲದ ಅನೇಕ ನಗರಕೇಂದ್ರಗಳು ಉನ್ನತವರ್ಗ ಹಾಗೂ ಮೇಲ್ವರ್ಗೇತರ ಸಾಮಾಜಿಕ ಗುಂಪುಗಳನ್ನು ಹೊಂದಿದ್ದವು.

ನಗರ ಸಮಾಜದ ಇನ್ನೊಂದು ಕುತೂಹಲಕಾರಿಯಾದ ಅಂಶವೇನೆಂದರೆ ನಗರ ಸಮಾಜವು ಕೆಲ ವ್ಯಕ್ತಿಗಳ ಗುಂಪುಗಳ ಸಂಯೋಜನೆಯಾಗಿರದೇ ಹಲವಾರು ಜಾತಿ, ಮತ, ವರ್ಗಗಳ ರಚನೆಯಾಗಿತ್ತು ಹಾಗೂ ಗುಂಪಿನ ಜೀವನ ಆ ಕಾಲದ ವೈಶಿಷ್ಟ್ಯವಾಗಿತ್ತು. ವ್ಯಕ್ತಿಗಳು ಕೆಲವು ಗುಂಪುಗಳು ಅಥವಾ ಸಂಘ ಇಲ್ಲವೇ ಜಾತಿಗಳಿಗೆ ಸೇರದ ಹೊರತು ಸಮಾಜದಲ್ಲಿ ಯಾವುದೇ ಸ್ಥಾನವನ್ನು ಹೊಂದಿರಲಿಲ್ಲ. ಸಮಕಾಲೀನ ನಗರ ಸನ್ನಿವೇಶದ ಸಾಮಾಜಿಕ, ಆರ್ಥಿಕ, ಜೀವನದಲ್ಲಿ ಗುಂಪು ಸಂಘಟನೆಯು ಅತ್ಯಂತ ಪ್ರಮುಖ ಅಂಶವಾಗಿತ್ತು. ದಾನದತ್ತಿಗಳನ್ನು ಕೊಡುವುದರ ಜೊತೆಗೆ ಗುಂಪು ಚಟುವಟಿಕೆಯು ಸಂತೆಗಳನ್ನು ನಡೆಸುವುದು, ಹಳ್ಳಿಗಳನ್ನು ಪಟ್ಟಣಗಳಾಗಿ

ಪರಿವರ್ತಿಸುವುದು. ಹೊಸ ಪಟ್ಟಣಗಳನ್ನು ನಿರ್ಮಿಸುವುದು ಇತ್ಯಾದಿ ಚಟುವಟಿಕೆಗಳಿಂದ ಗುಂಪು ಚಟುವಟಿಕೆಯು ಗಮನ ಸೆಳೆದಿತ್ತು.

ಇಂತಹ ಚಟುವಟಿಕೆಗಳಲ್ಲಿ ಸ್ಥಳೀಯ ಅಂಗಗಳು ವೃತ್ತಿ ಸಂಘಟನೆಗಳು ಹಾಗೂ ಇತರ ಗುಂಪುಗಳು ಪಾಲ್ಗೊಳ್ಳುತ್ತಿದ್ದವು. ನಗರ ಚಟುವಟಿಕೆಗಳಲ್ಲಿ ವ್ಯಯಕ್ತಿಕ ಪಾಲ್ಗೊಳ್ಳುವಿಕೆಗೇನು ಕೊರತೆಯಿರಲಿಲ್ಲ ಎಂಬುದು ನಿಜ. ಆದರೆ ಅಂತಹ ಸಂದರ್ಭಗಳಲ್ಲಿ ವ್ಯಕ್ತಿಗಳು ಹೆಚ್ಚಾಗಿ ಆಡಳಿತ ವರ್ಗಕ್ಕೆ ಸೇರಿದವರಾಗಿರುತ್ತಿದ್ದರು. ಅಥವಾ ಶ್ರೀಮಂತ ವರ್ತಕರಾಗಿರುತ್ತಿದ್ದರು. ಅಥವಾ ಉನ್ನತ ವರ್ಗಕ್ಕೆ ಸೇರಿದ ಧಾರ್ಮಿಕ ವ್ಯಕ್ತಿಗಳಾಗಿದ್ದರು. ಅವರು ಸೇರಿದ್ದ ಒಂದು ಗುಂಪನ್ನು ಅವರು ಪ್ರತಿನಿಧಿಸುತ್ತಿದ್ದರು. ಇದರ ಜೊತೆಗೆ ಸಾಮಾಜಿಕ ಗುಂಪುಗಳು ತಮ್ಮ ಸಾಮಾಜಿಕ ಸ್ಥಾನಮಾನ ಗಳನ್ನು ಸುಧಾರಿಸಿಕೊಳ್ಳುವ ದೃಷ್ಟಿಯಿಂದ ಒಂದನ್ನೊಂದು ಪೈಪೋಟಿ ನಡೆಸುತ್ತಿದ್ದವು. ಇದು ನಗರದ ಲಕ್ಷಣವನ್ನು ಸೂಚಿಸುತ್ತಿತ್ತು. ನಗರೀಕರಣದ ಒತ್ತಡಕ್ಕೆ ಮಣಿದು ಈ ಬದಲಾವಣೆಗಳು ಮಾರ್ಪಟ್ಟವು.

6.4.14 ಪಟ್ಟಣದಲ್ಲಿನ ಜೀವನ

ಎ. ಹಬ್ಬಗಳು

ಪಟ್ಟಣಗಳಲ್ಲಿನ ಜೀವನವು ಹಲವು ವಿಧಗಳಲ್ಲಿ ಹಳ್ಳಿಗಿಂತ ಭಿನ್ನವಾಗಿತ್ತು. ಹಬ್ಬಗಳು, ಆಟಗಳು ಮನೋರಂಜನೆಗಳು ಪಟ್ಟಣದ ಜನರ ಬೇಸರ, ಆಲಸ್ಯ ಹಾಗೂ ಒಂದೇ ವಿಧವಾದ ದುಡಿಮೆಯಿಂದ ದೂರವಾಗಿದ್ದವು. ಹಬ್ಬಗಳು ಸ್ವರೂಪದಲ್ಲಿ ಧಾರ್ಮಿಕವಾಗಿದ್ದರು ರಾಜಕೀಯ ಹಾಗೂ ಸಾಮಾಜಿಕ ಪ್ರಾಮುಖ್ಯತೆಯನ್ನು ಹೊಂದಿದ್ದವು. ಇವುಗಳು ಜನಜೀವನದ ಮೇಲೆ ಅಗಾಧವಾದ ಪರಿಣಾಮವನ್ನು ಬೀರಿದ್ದವು. ಸಮಕಾಲೀನ ಮೂಲಗಳು ವಿಶೇಷವಾಗಿ ಹಾಗೂ ನಗರಗಳಲ್ಲಿ ಜರುಗುತ್ತಿದ್ದ ಹಬ್ಬಗಳ ಬಗ್ಗೆ ಒಂದು ಸಂಪೂರ್ಣ ಚಿತ್ರಣವನ್ನು ನೀಡುತ್ತವೆ.

ಹೊಯ್ಸಳರ ಕಾಲದಲ್ಲಿ ಆಚರಿಸಲಾಗುತ್ತಿದ್ದ ಹಬ್ಬಗಳಲ್ಲಿ ಶಿವರಾತ್ರಿ, ದೀಪಾವಳಿ, ಸಂಕ್ರಮಣ, ಕಾರ್ತಿಕ ಹಬ್ಬಗಳು ಪ್ರಮುಖವಾಗಿದ್ದವು. ಸಾಮ್ರಾಜ್ಯದಲ್ಲಿ ಜನತೆ ಕುಸ್ತಿ, ಜೂಜಾಟ (ಪಗಡೆ ದಾಳ) ಸಂಗೀತ ಮತ್ತು ನೃತ್ಯ ಬೇಟೆಯಾಡುವುದು, ಈಜುವುದು, ನಾಟಕವನ್ನು ಮನೋರಂಜನೆಗಾಗಿ ಆಡುತ್ತಿದ್ದರು ಮತ್ತು ರಂಗಭೂಮಿ ನಾಟಕಗಳನ್ನು ಆಡುತ್ತಿದ್ದರು. ಇವರ

ಶಾಸನಗಳ ಪ್ರಕಾರ ಆಗಿನ ಕಾಲದ ದೇವಸ್ಥಾನಗಳಲ್ಲಿ ಹಾಡುಗಾರರು, ನೃತ್ಯ ಕಲೆಗಾರ್ತಿಯರು, ನೃತ್ಯಗಾರರು ಇದ್ದರು. ಕಲೆಗೆ ದೊರೆಗಳು ಮತ್ತು ಗಣ್ಯವ್ಯಕ್ತಿಗಳು ಪ್ರೋತ್ಸಾಹ ನೀಡುತ್ತಿದ್ದರು. ಮದ್ದಳೆ, ತಾಳ ಮುಂತಾದ ರೀತಿಯ ಸಂಗೀತ ವಾದ್ಯಗಳ ವಿಷಯ ಸಮಕಾಲೀನ ಸಾಹಿತ್ಯದಲ್ಲಿ ಕಂಡುಬಂದಿದೆ. ಸಂಗೀತವನ್ನು ವಿಶೇಷಚವಾಗಿ ಅಭ್ಯಾಸ ಮಾಡಿ ಮೆಚ್ಚಿಕೊಳ್ಳುತ್ತಿದ್ದರೆಂದು ತೋರುತ್ತದೆ. ರಾಣಿ ಶಾಂತಲಾದೇವಿ ಸಂಗೀತ ಮತ್ತು ನೃತ್ಯಗಳಲ್ಲಿ ಪ್ರವೀಣೆಯಾಗಿದ್ದಳು.

ಈ ರೀತಿಯಾಗಿ ಹಬ್ಬಗಳು ಲಲಿತಕಲೆಗಳಲ್ಲಿನ ಆಟಗಳು ಹಾಗೂ ಇತರ ಪ್ರದರ್ಶನಗಳು ಜನಜೀವನದ ಅವಿಭಾಜ್ಯ ಅಂಗವಾಗಿದ್ದು ಅತ್ಯಂತ ಮಹತ್ವವಾದ ಸಾಮಾಜಿಕ ಪ್ರಾಮುಖ್ಯತೆಯನ್ನು ಹೊಂದಿದ್ದವು. ಪಟ್ಟಣಗಳಲ್ಲಿನ ಜೀವನವು ಹಳ್ಳಿಯ ಜೀವನಕ್ಕಿಂತ ಭಿನ್ನವಾಗಿತ್ತು ಎಂದು ಹೇಳಬಹುದು.

ಅಧ್ಯಾಯ ಮೂರರಿಂದ ಅಧ್ಯಾಯ ಆರರವರಗಿನ ಅಡಿಟಿಪ್ಪಣಿಗಳು

1. ಲೂಯಿಸ್ ಮುನ್ ಪೋರ್ಡ್ – ಚರಿತ್ರೆಯಲ್ಲಿ ಇತಿಹಾಸ ಲಂಡನ್ 1961 ಪು. 4
2. ಲೂಯಿಸ್ ಮುನ್ ಪೋರ್ಡ್ – ಅದೇ ಲಂಡನ್ 1961 ಪು. 5
3. ಹಾಸರ್, ಪಿ.ಎಂ – ಅರ್ಬನೈಜೇಷನ್ ಆನ್ ಓವರ್ ವ್ಯೂ ಮತ್ತು ರೋನಾಲ್ಡ ಜೋನ್ಸ್, ಎಸ್ಸೇಸ್ ಆನ್ ವರ್ಲ್ಡ್ ಅರ್ಬನೇಜೇಷನ್ ಲಂಡನ್ 1975 ಪು.49
4. ಥಾಕೂರ್ ವಿ.ಕೆ–ಅರ್ಬನೈಜೇಷನ್ ಇನ್ ಏನ್ಸಿಯಂಟ್ ಇಂಡಿಯಾ ದೆಹಲಿ 1981 ಪು.30
5. ಹೆನ್ರಿಪಿರಿನ್ – ಮಿಡಿವಲ್ ಸಿಟೀಸ್ 1925 ಪು.10
6. ಗಿಡನ್ ಸ್ಟೆಬರ್ಗ್ – ದ ಪ್ರಿ ಇಂಡಸ್ಟ್ರಿಯಲ್ ಸಿಟಿ, ನ್ಯೂಯಾರ್ಕ್ 1969 ಪು.32
7. ಐಡನ್ ಸೌದಾಲ್ ಮತ್ತು ಪಾಕ್ಸ್ ಆರ್.ಜಿ.–ಅರ್ಬನ್ ಆಂದ್ರೋಪಾಲಜಿ ನ್ಯೂಯಾರ್ಕ್ 1973 ಪು.12
8. ಸ್ಟ್ಯಾನ್ಲಿ ಕೆ. ಶುಲ್ಸ್ – ಆನ್ ಅಪ್ರೋಚ್ ಟು ಥಿಯರಿ ಅಪ್ ಅರ್ಬನೈಜೇಷನ್ ಸ್ಟಡೀಸ್ ಇನ್ ಅರ್ಬನ್ ಹಿಸ್ಟರಿ ಅಮೃತಸರ ಪು.80
9. ಮಿಶ್ರ ಎಸ್.ಸಿ – ಅರ್ಬನ್ ಹಿಸ್ಟರಿ ಇನ್ ಇಂಡಿಯಾ ಪಾಸಿ ಬಲಿಟೀಸ್ ಅಂಡ್ ಪರ್ ಸ್ಪೆಕ್ಟೀವ್ಸ್ ಆಕೇಶನಲ್ ಪೇಪರ್ ಸೀರಿಸ್ (U, H, A, i)
10. ಮಿಶ್ರ ಎಸ್.ಸಿ. – ಅದೇ 1982 ಪು.87
11. ಮಿಶ್ರ ಎಸ್.ಸಿ. – ಅದೇ 1982 ಪು.88
12. ದತ್.ಬಿ.ಬಿ. – ಟೌನ್ ಪ್ಲಾನಿಂಗ್ ಇನ್ ಏನ್ಸಿಯಂಟ್ ಇಂಡಿಯಾ ಚಿತ್ತಗಾಂಗ್ 1924 ಪು.50
13. ಸ್ಟುವರ್ಟ್ ಪಿಗಟ್ – ಸಮ್ ಏನ್ಸಿಯಂಟ್ ಸಿಟೀಸ್ ಆಫ್ ಇಂಡಿಯಾ ಆಕ್ಸ್‌ಫರ್ಡ್ 1928 ಪು.58
14. ಪಾರಸ್ಟೆ. ಇ.ಡಿಬ್ಲ್ಯು – ಸಿಟೀಸ್ ಆಫ್ ಇಂಡಿಯಾ ನ್ಯೂಡೆಲ್ಲಿ 1977 ಪು.43
15. ಪೂರಿ. ಬಿ.ಎನ್ – ಸಿಟೀಸ್ ಆಫ್ ಎನ್ಸಿಯಂಟ್ ಇಂಡಿಯಾ ಮೀರತ್ 1966 ಪು.36
16. ಅಮಿತಾರಾಯ್ – ವಿಲೇಜ್ ಟೌನ್ ಅಂಡ್ ಸೆಕ್ಯೂಲರ್ ಬಿಲ್ಡಿಂಗ್ ಇನ್ ಏನ್ಸಿಯಂಟ್ ಇಂಡಿಯಾ ಕ್ರಿ.ಪೂ. ಸುಮಾರು 150 ಕ್ರಿ.ಶ. ಸುಮಾರು 350 ಕಲ್ಕತ್ತ ಪು.88
17. ಘರಿಯೇ ಜಿ. – ಎನ್ ಸಿಟೀಸ್ ಅಂಡ್ ಸಿವಿಲೈಜೇಷನ್ ಬಾಂಬೆ 1962 ಪು.60

18. ಘೋಷ್ ಎ. – ದಿ ಸಿಟಿ ಇನ್ ಅರ್ಲಿ ಹಿಸ್ಟರಿಕಲ್ ಇಂಡಿಯಾ ಶಿಮ್ಲಾ 1963 ಪು.80

19. ಥಾಕೂರ್ ವಿ.ಕೆ. – ಅದೇ ದೆಹಲಿ 1981 ಪು.32

20. ಅಪ್ಪಾದೊರೈ ಎ. – ಏಕನಾಮಿಕ್ ಕಂಡೀಷನ್ ಇನ್ ಏನ್ಸಿಯಂಟ್ ಇಂಡಿಯಾ (ಕ್ರಿ.ಶ. 1000–1300) ಮದ್ರಾಸ್ 1936 ಮತ್ತು ದೀಪಕ್ ರಂಜನ್ ದಾಸ್ ದ ಏಕನಾಮಿಕ್ ಹಿಸ್ಟರಿ ಆಫ್ ಡೆಕ್ಕನ್ ಪು.100

21. ಬರ್ಟನ್ ಸ್ಟೈನ್ – ದ ಸ್ಟೇಟ್ ಅಂಡ್ ದಿ ಅಗ್ರೇರಿಯನ್ ಆರ್ಡರ್ ಇನ್ ಸೌತ್ ಇಂಡಿಯಾ ದೆಹಲಿ 1976 ಪು.33

22. ಟೆಲ್‌ಬಾಯ್ ವ್ಹೀಲರ್ – ಮದ್ರಾಸ್ ಇನ್ ದ ಓಲ್ಡ್ ಟೈಮ್ಸ್ ಮದ್ರಾಸ್ 1891 ಪು.40

23. ಶ್ರೀನಿವಾಸಚಾರ್ ಸಿ.ಆರ್. – ಕಂಚೀಪುರಂ ಥ್ರೂ ದಿ ಏಜಸ್ ದೆಹಲಿ 1979 ಪು.83

24. ತಿರುಮಲೈ ಆರ್. – ಸ್ಟಡೀಸ್ ಇನ್ ಏನ್ಸಿಯಂಟ್ ಟೌನ್‌ಷಿಪ್ ಆಫ್ ಪುಡುಕೊಟೈ, ಮದ್ರಾಸ್ 1981 ಪು.51

25. ದತ್ತ್. ಬಿ.ಬಿ – ಟೌನ್ ಪ್ಲಾನಿಂಗ್ ಇನ್ ಏನ್ಸಿಯಂಟ್ ಇಂಡಿಯಾ ಪು.285

26. ನಕ್ವಿ. ಹೆಚ್.ಕೆ. – ಅರ್ಬನ್ ಗ್ರೋತ್ ಇನ್ ದ ಪಂಜಾಬ್ ಪು.61

27. ಸಿಂಗ್ ಕೆ.ಎನ್. ದ ಟೆಂಟೋರಿಯಲ್ ಟೇಸಿಸ್ ಆಫ್ ಮಿಡೀವಲ್ ಟೌನ್ ಅಂಡ್ ವಿಲೇಜ್ ಇನ್ ಈಸ್ಟನ್ ಉತ್ತರ ಪ್ರದೇಶ್ ಸಂ. 58 1968 ಪು.203

28. ಡಂಕನ್ – ಕಮ್ಯೂನಿಟಿ ಸ್ಟೇಜ್ ಅಂಡ್ ದ ರೂರಲ್ ಅರ್ಬನ್ ಕಂಟಿನಮ್ ಪು.35

29. ಡೇವಿಡ್ ಪ್ರಕಾಕ್ – ಸೋಶಿಯಾಲಾಜೀಸ್ ಅರ್ಬನ್ ಅಂಡ್ ರೂರಲ್ ಪು.18

30. ಮಿಶ್ರ ಎಸ್.ಸಿ. – ಅದೇ ಪು.90

31. ಮಿಶ್ರ ಎಸ್.ಸಿ. –ಸಮ್ ಆ್ಯಸ್ಪೆಕ್ಟ್ಸ್ ಆಫ್ ದಿ ಸೆಲ್ಸ್ ಅಂಡ್ ಮಿನಿ ಸ್ಟರಿಂಗ್ ಇನ್‌ಸ್ಟಿಟ್ಯೂಷನ್ ಮಿಡೀವಲ್ ಇಂಡಿಯನ್ ಟೌನ್ ಪು.83

32. ಮಿಶ್ರ ಎಸ್.ಸಿ. – ಅದೇ 84

33. ಆಚಾರ್ಯ ವಿ.ಕೆ – ಮಾನಸಾರ. ಸಂ.6 ಪು. 102

34. ರಾವ್ ಎಮ್.ಎ 0 ಥಿಯೋರೆಟಿಕಲ್ ಪ್ರಾಬ್ಲಮ್ ಇನ್ ಡೆಕ್ಕನ್ ಅರ್ಬನ್ ಸೋಶಿಯಾಲಜಿ ಪು.16

35. ಜೈನ್ ಕೆ.ಸಿ. – ಏನ್ಸಿಯಂಟ್ ಸಿಟೀಸ್ ಅಂಡ್ ಟೌನ್ಸ್ ಆಫ್ ರಾಜಾಸ್ಥಾನ್ ದೆಹಲಿ 1972 ಪು. 78 79

36. ಮದ್ವಾಚಾರ್ಯ – ಪರಿಸರ ಮಾಧವ ಕಲ್ಕತ್ತ 1890 ಪು. 265

37. ವಿಜ್ಞಾನೇಶ್ವರ – ಮಿತಾಕ್ಷರ ಸಂಹಿತೆ ಪು.167

38. ವಿಜ್ಞಾನೇಶ್ವರ – ಅದೇ ಪು.169

39. ಆಚಾರ್ಯ ಪಿ.ಕೆ. – ಮನಸಾರ ಸಂ. 6 ಪು. 102 103

40. ಅಪ್ಪಾದೊರೈ ಎ – ಅದೇ ಪು.102

41. ಘರಿಯೇ ಜಿ.ಎಸ್. – ಸಿಟೀಸ್ ಅಂಡ್ ಸಿವಿಲೈಜೇಷನ್ ಬಾಂಬೆ 1962 ಪು.4

42. ಅಪ್ಪಾದೊರೈ ಎ – ಅದೇ ಪು.56

43. ಥಾಕೂರ್ ವಿ.ಕೆ. – ಅದೇ ಪು.46

44. ಥಾಕೂರ್ ವಿ.ಕೆ – ಅದೇ ಪು.48

45. ಸ್ಜೋಬರ್ಗ್ ಪ್ರೀ – ಇಚಿಡಸ್ಟ್ರಿಯಲ್ ಸಿಟಿ ಪು.31

46. ಥಾಕೂರ್ ವಿ.ಕೆ – ಅದೇ ಪು.47

47. ಥಾಕೂರ್ ವಿ.ಕೆ – ಅದೇ ಪು.48

48. ECV, BI 75

49. ಮೇಜರ್ ಇಂಡಿಯಾ – ಇನ್ ದ ಫೀಟೀನ್ ಸೆಂಚುರಿ ಪು.23

50. ಸ್ಜೋಬರ್ಗ್ – ಅದೇ ಪು.31

51. ಸ್ಜೋಬರ್ಗ್ – ಅದೇ ಪು.34

52. ಥಾಕೂರ್ ವಿ.ಕೆ – ಪು.50

53. ನಕ್ವಿ ಹೆಚ್.ಕೆ. – ಅರ್ಬನೈಜೇಷನ್ ಅಂಡ್ ಅರ್ಬನ್ ಅಂಡರ್ ದ ಗ್ರೇಟ್ ಮೋಘಲ್ ಪು.161

54. EC, Vol XI Cd 2

55. ಮಹಾಲಿಂಗಂ ಟಿ.ವಿ. – ಸೌತ್ ಇಂಡಿಯನ್ ಪಾಲಿಟಿ ಮದ್ರಾಸ್ 1967 ಪು 372

56. ಚಂಪಕ ಲಕ್ಷ್ಮಿ – ಅರ್ಬನ್ ಪ್ರೋಸಸ್ ಇನ್ ಅರ್ಲಿಮಿಡೀವಲ್ ತಮಿಳ್‌ನಾಡು ಆಕೇಶನಲ್ ಪೇಪರ್ ಸೀರೀಸ್ ವಿ.ಹೆಚ್.ವಿ. 1982 ಪುಟ 10

57. ನಾರಾಯಣಗುಪ್ತ – ಟೌನ್ಸ್ ಅಂಡ್ ಟ್ಯಾಂಕ್ ಟೆಂಪಲ್ಸ್ ಸಮ್ ಆ್ಯಸ್ಪೆಕ್ಟ್ಸ್ ಆಫ್ ಅರ್ಬನಿಸಂ ಇನ್ ಸೌತ್ ಇಂಡಿಯಾ ಏಯ್‌ಟೀಂತ್ ಅಂಡ್ ನೈನ್‌ಟೀಂತ್ ಸೆಂಚುರೀಸ್ 1983 ಪು.30

58. ನೀಲಕಂಠಶಾಸ್ತ್ರಿ ಕೆ.ಎ – ದಕ್ಷಿಣ ಭಾರತದ ಇತಿಹಾಸ ಪು 35–36

59. ಸಾಲೆತೊರೆ. ಬಿ.ಎ – ಕರ್ನಾಟಕಸ್ ಟ್ರಾಸ್ ಓಶಿಯಾನಿಕ್ ಕಾಂಟ್ರ್ಯಾಕ್ಸ್ ಧಾರವಾಡ 1956 ಪು.18

60. ಫಾಕ್ಸ್ ಆರ್.ಜಿ. – ಅರ್ಬನ್ ಆಂಥ್ರೋಪಾಲಜಿ ಪು.22–23

61. EC NII (R) PC x VI

62. EC NII VI 61

63. EC IV (R) Y.A1

64. M.A.R. 1939 ಪು.101-102

65. ECV BI 52

66. ರೈಸ್. ಬಿ.ಎಲ್ – ಮೈಸೂರು ಅಂಡ್ ಕೂರ್ಗ್ ಫ್ರಮ್ ಇನ್‌ಸ್ಕ್ರಿಪ್ಷನ್ ಲಂಡನ್ 1909 ಪು.155

67. E C V B U 233, 78.4

68. ರವೀಂದ್ರಕುಮಾರ – ಚೇಂಜಿಂಗ್ ಸ್ಟ್ರಕ್ಚರ್ ಆಫ್ ಅರ್ಬನ್ ಸೋಸೈಟಿ ಇನ್ ಕಾಲೋನಿಯಲ್ ಇಂಡಿಯಾ ದಿ ಇಂಡಿಯನ್ ಹಿಸ್ಟಾರಿಕಲ್ ರಿವ್ಯೂ ಸಂ 5 1979 ಪು 200

69. ಕಾಶಿ, ಎನ್.ಸಿಂಗ್ – ದ ಟೆರಿಟೋರಿಯಲ್ ಬೇಸಿಸ್ ಆಫ್ ಮೀಡೀವಲ್ ಟೌನಂ ಅಂಡ್ ವಿಲೇಜ್ ಸೆಟ್ಲುಮೆಂಟ್ ಇನ್ ಇಸ್ಟ್ರನ್ ಉತ್ತರ ಪ್ರದೇಶ್ ಸಂ. 58 1968 ಪು.203

70. E.C Ch VP 171

71. E.C VBI 75

72. E.C. Ch III P.105

73. SIIVII -298-299 ಶೆಟ್ಟರ್ ಎಸ್ – ಅರಸೀಕೆರೆ ಅಂಡರ್ ದ ಹೊಯ್ಸಳಾಸ್ ಜರ್ನಲ್ ಆಫ್ ಕರ್ನಾಟಕ ಯೂನಿವರ್ಸಿಟಿ ಸಂ. 7 1963

74. ಮೇಜರ್ – ಇಚಿಡಿಯಾ ಇನ್ ದ ಪಿಟೀನ್ ಸೆಂಚುರಿ ಪು. 20–22

75. ಶ್ರೀನಿವಾಸ್ ಎಂ.ವಿ. – ದಿ ಎವಲೂಶನ್ ಆಫ್ ದಿ ಆಫೀಸ್ ಆಫ್ ದ ಪಟ್ಟಣಸ್ವಾಮಿ ಇನ್ ದಿ ಮಿಡೀವಲ್ ಕರ್ನಾಟಕ ಧಾರವಾಡ, ಶಾಸನ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧ

76. E.C. Vol X V B L 332 ಪು.86

77. ದೀಕ್ಷಿತ್ ಜಿ.ಎಸ್. – ಮಧ್ಯಕಾಲೀನ ಕರ್ನಾಟಕದಲ್ಲಿ ಸ್ಥಳೀಯ ಸರ್ಕಾರ ಪು.30

78. ಓಲ್ಡ್ ಎ.ಕೆ. ಸಂ. ಹೊಸಹೊಳಲು ಕೆ.ಆರ್.ಪೇಟೆ ತಾ. ನಂ. 3 ಪು.118

79. ಎ.ಕ.ಸಂ. VII ಹಟ್ಟಣ ನಾಗಮಂಗಲ ತಾ. ಪು.118

80. ಎ.ಕ.ಸಂ. 211 SB. INS. No.457 ಪು 278

81. ಎ.ಕ.ಸಂ. XI ದಾವಣಗೆರೆ ತಾ. ಪು 173

82. ಎ.ಕ.ಸಂ. IV ಮದ್ದೂರು ಗ್ರಾಮ, ಯಳಂದೂರು ತಾ. ಚಾಮರಾಜನಗರ ಜಿಲ್ಲೆ ಪು.744

83. ಎ.ಕ.ಸಂ. III ಉಪ್ಪಿನ ಹಳ್ಳಿ ನಂಜನಗೂಡು ತಾ.ಪು. 406

84. ಎ.ಕ.ಸಂ. IX ಪು 13

85. ಎ.ಕ.ಸಂ. XI ಪು 173

86. ಎ.ಕ.ಸಂ. ಪು. 168

87. ಎ.ಕ.ಸಂ. IX ಪು 31

88. ಎ.ಕ.ಸಂ. IX ಪು 13

89. ಎ.ಕ.ಸಂ. V ಪು 472

90. ಎ.ಕ.ಸಂ. VII ಪು 360

91. ಎ.ಕ.ಸಂ. IV ಪು 744

92. ಎ.ಕ.ಸಂ. XII ಪು 69

93. ಎ.ಕ.ಸಂ. I ಪು 34

94. ಎ.ಕ.ಸಂ. II ಪು 278

95. ಎ.ಕ.ಸಂ. VII ಪು 118

96. ಎ.ಕ.ಸಂ. VI ಪು 59

97. ಎ.ಕ.ಸಂ. XII ಪು 23

98. ಎ.ಕ.ಸಂ. XII ಪು 48

99. ಎ.ಕ.ಸಂ. V ಪು 325

100. ಎ.ಕ.ಸಂ. V ಪು 100

101. ಬೋಸ್ ಎ.ಎನ್ – ಅರ್ಲಿ ಇಂಡಸ್ಟ್ರಿಯಲ್ ಆರ್ಗನೈಜೇಷನ್ ಇನ್ ನಾರ್ತ್ ಇಂಡಿಯಾ ಪು.167

102. ಬೋಸ್ ಎ.ಎನ್ – ಅದೇ ಪು 169

103. ಅಪ್ಪಾದೊರೈ ಎ. – ಏಕನಾಮಿಕ್ ಕಂಡೀಷನ್ ಪು.357

104. ಬೋಸ್ ಎ,ಎನ್ – ಅದೇ ಪು 172

105. ಎ.ಆರ್.ಎಸ್.ಐ.ಇ. 1918 ಪ್ಯಾರಾ 84 85 E.I. X X ಪು 90

106. ಘಟಪಣನದಿ ಎಸ್.ಜಿ. – ಗಿಲ್ಡ್ ಅಫ್ ಆರ್ಟಿಸಾನ್ ಇನ್ ಮಿಡೀವಲ್ ಕರ್ನಾಟಕ ಸಂ.6 ಪು.195

107. ಥೇಂಬರ್ – ಅದೇ ಪು.80

108. ARSIE 1918 Copper Plate 18

109. E C I No. 4 E C V A K – 13

110. E C X, K I, 170

111. E C VII, SK, 94, 1094 A.D

112. ಚಂದ್ರಶೇಖರ ಶಾಸ್ತ್ರಿ – ಹೊಯ್ಸಳ ಕಾಲದ ಆರ್ಥಿಕ ಇತಿಹಾಸ ಪು.223

113. E C V BI – 75

114. SII VII - 185

115. ಥಾಕೂರ್ ವಿ.ಕೆ – ಅದೇ ಪು.140

116. ಸ್ಟೋಬರ್ಗ್ – ಅದೇ ಪು.11

ಅಧ್ಯಾಯ 7
ಹಳೇಬೀಡು

7.1 ಪ್ರಾಕೃತಿಕ ಸನ್ನಿವೇಶಗಳು ಮತ್ತು ಐತಿಹಾಸಿಕ ಹಿನ್ನಲೆ

ಹಾಸನ ಜಿಲ್ಲೆಯು ಕರ್ನಾಟಕದ ನೈರುತ್ಯ ಭಾಗದಲ್ಲಿದ್ದು ದೋರಸಮುದ್ರವು ಈಗಿನ ಬೇಲೂರು ತಾಲ್ಲೋಕಿನ ಹಳೇಬೀಡು ಗ್ರಾಮವಾಗಿದ್ದು ಹೋಬಳಿ ಕೇಂದ್ರವಾಗಿ ಇತಿಹಾಸ ಪ್ರಸಿದ್ಧ ಸ್ಥಳವಾಗಿದೆ. ಇದು ಬೇಲೂರಿನಿಂದ ಪೂರ್ವಕ್ಕೆ ಹದಿನಾರು ಕಿ.ಮೀ. ದೂರದಲ್ಲಿದೆ.

ಪ್ರಾಕೃತಿಕ ದೃಷ್ಟಿಯಿಂದ ನೋಡಿದರೆ ಹಾಸನ ಜಿಲ್ಲೆಯ ಭಾಗಗಳು ದಕ್ಷಿಣದ ಮಲೆನಾಡು ಹಾಗೂ ಮೈದಾನ ಪ್ರದೇಶಗಳಲ್ಲಿ ಹಂಚಿಹೋಗಿರುವುದನ್ನು ಕಾಣುತ್ತೇವೆ. ಮಲೆನಾಡಿನ ಭಾಗವು ನಿತ್ಯಹರಿದ್ವರ್ಣ ಕಾಡುಗಳಿಂದ ಕೂಡಿದ ಪರ್ವತ ಪ್ರದೇಶವಾಗಿದೆ. ಹೊಯ್ಸಳರ ಪ್ರಾರಂಭಿಕ ನೆಲೆಯಾದ ಸೊಸೆವೂರು ಇದೇ ಭಾಗದಲ್ಲಿದ್ದು, ನಂತರ ಮೈದಾನ ಪ್ರದೇಶಕ್ಕೆ ತಮ್ಮ ರಾಜಧಾನಿಯನ್ನು ಸ್ಥಳಾಂತರಿಸಿದರು. ಈ ಜಿಲ್ಲೆಯಲ್ಲಿ ಹರಿಯುವ ಪ್ರಮುಖ ನದಿಗಳೆಂದರೆ ಕಾವೇರಿ, ಯಗಚಿ ಮತ್ತು ಹೇಮಾವತಿ ಇವುಗಳ ಜೊತೆಗೆ ವಟಹೊಳೆ, ಕೆಂಡಹೊಳೆ, ಗಿರಿಹಳ್ಳಗಳು ಪ್ರಮುಖ ಜಲಧಾರೆಗಳಾಗಿವೆ.

ಹೊಯ್ಸಳ ಅರಸರು ತಮ್ಮ ಪ್ರಾರಂಭಿಕ ನೆಲೆ ಸೊಸೆವೂರನ್ನು ಬಿಟ್ಟು ಯಗಚಿ ನದಿ ದಂಡೆಯ ಮೇಲಿದ್ದ ಬೇಲೂರನ್ನು ಹಾಗೂ ಸ್ವಲ್ಪ ದೂರದಲ್ಲಿರುವ ದೋರಸಮುದ್ರವನ್ನು ತಮ್ಮ ರಾಜಧಾನಿಗಳನ್ನಾಗಿ ಮಾಡಿಕೊಂಡರು.[1] ಯಗಚಿ ನದಿಯನ್ನು 'ಬದ್ರಿ' ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ. ಯಗಚಿ ಹಾಗೂ ಇತರ ನದಿಗಳು ಹರಿಯುವುದರಿಂದ ಇಂದು ಹಾಸನ ಜಿಲ್ಲೆಯಲ್ಲಿ, ಅಸಂಖ್ಯಾತ ಕೆರೆಕಟ್ಟೆಗಳು ನಿರ್ಮಾಣವಾದವು. ಈ ರೀತಿಯಾಗಿ ಹರಿಯುವ ನದಿಗಳ ದಡಗಳಲ್ಲಿ ಇಲ್ಲವೇ ಕೆರೆಕೊಳ್ಳಗಳ ದಡದ ಮೇಲಾಗಲಿ ಹಲವು ಗ್ರಾಮ ಪಟ್ಟಣಗಳು ರಾಷ್ಟ್ರಕೂಟರ ಇಲ್ಲವೇ ಹೊಯ್ಸಳರ ಕಾಲದಲ್ಲಿ ನಿರ್ಮಾಣವಾಗಿರಬೇಕು.

ಹಳೇಬೀಡು ಈಗ ಸಾಮಾನ್ಯ ಹಳ್ಳಿಯಾಗಿದ್ದರೂ ಇದು ಲೋಕ ಪ್ರಸಿದ್ಧವಾದ ಕಲಾಕ್ಷೇತ್ರವಾಗಿ ಉಳಿದು ಬಂದಿದೆ. ಇದು ಮಲೆನಾಡಿನ ಅಂಚಿನಲ್ಲಿದ್ದು ಮಲೆನಾಡಿಗೂ ಮತ್ತು ಬಯಲು ಸೀಮೆಗೂ ಸಂಬಂಧವನ್ನು ಕಲ್ಪಿಸುವ ಆಯಕಟ್ಟಿನ ಸ್ಥಳದಲ್ಲಿದ್ದು ಸುತ್ತಲು ಬೆಟ್ಟಗುಡ್ಡ

ಗಳಿಂದಾವರಿಸಿ ನಡುವೆ ವಿಶಾಲವಾದ ಕಣಿವೆಯಿರುವ ಈ ಸ್ಥಳದಲ್ಲಿ ಹತ್ತನೇ ಶತಮಾನದಲ್ಲಿಯೇ ಒಂದು ಸಣ್ಣ ಊರು ಹುಟ್ಟಿಕೊಂಡಿದ್ದಿರಬೇಕು. ಇಲ್ಲಿ ಆಗ ನಿರ್ಮಿಸಿದ ದೊಡ್ಡ ಕೆರೆಯಿಂದ ಇದಕ್ಕೆ ದೋರಸಮುದ್ರವೆಂಬ ಹೆಸರು ಬಂದಿತು. ಈ ದೋರಸಮುದ್ರವನ್ನು ನಿರ್ಮಿಸಿದ್ದು ಯಾವಾಗ ಎನ್ನುವುರು ನಿರ್ದಿಷ್ಟವಾಗಿ ಕಂಡುಬಂದಿಲ್ಲ. ರಾಷ್ಟ್ರಕೂಟರ ಚಕ್ರವರ್ತಿ ಧ್ರುವ ಗಂಗವಾಡಿಯನ್ನು ಗೆದ್ದಾಗ ಈ ಕೆರೆ ನಿರ್ಮಾಣವಾಗಿ ಧ್ರುವ ದೊರೆ ಎಂಬ ಹೆಸರಿನಿಂದ ಇದಕ್ಕೆ ದೋರಸಮುದ್ರವೆಂಬ ಹೆಸರು ಬಂದಿತೆಂಬ ಅಭಿಪ್ರಾಯವಿದೆ. ಆದರೆ ಅಷ್ಟು ವರ್ಷಗಳ ಹಿಂದೆಯೇ ಇಲ್ಲಿ ಊರು ಹುಟ್ಟಿಕೊಂಡಿದ್ದುದಕ್ಕೆ ಯಾವ ಆಧಾರವಿಲ್ಲ. ಹತ್ತನೇ ಶತಮಾನದಲ್ಲಿ ಈ ಪ್ರಾಂತ್ಯ ಗಂಗರ ಭೂತುಗನ ಆಳ್ವಿಕೆಗೆ ಒಳಪಟ್ಟು ಅವನ ಅಕ್ಕ ಪಾಂಬಬ್ಬೆ ಮತ್ತು ಭಾವನಾದ ದೋರ ಇಲ್ಲಿ ವಾಸಿಸಿದ್ದಂತೆ ಶಾಸನಗಳಿಂದ ತಿಳಿದು ಬರುವುದರಿಂದ ಕ್ರಿ.ಶ. 950ಕ್ಕೆ ಮುಂಚೆ ಈ ದೋರ ಇಲ್ಲಿ ಕೆರೆಯನ್ನು ಕಟ್ಟಿಸಿ ತನ್ನ ಹೆಸರಿನಲ್ಲಿ ದೋರ ಸಮುದ್ರವೆಂಬ ಊರನ್ನು ನಿರ್ಮಿಸಿ ಅಲ್ಲಿಂದ ರಾಜ್ಯಭಾರ ಮಾಡಿರುವುದು ಸಂಭವನೀಯ, ಆಗ ಇದು ಜೈನ ಯತಿಗಳ ಆಸ್ಥಾನವು ಆಗಿತ್ತು. ಇಲ್ಲಿನ ಅತ್ಯಂತ ಪ್ರಾಚೀನ ಶಾಸನವು ಈ ಕಾಲಕ್ಕೆ ಸೇರಿದುದಾಗಿದ್ದು ಪಂಬಬ್ಬೆಯ ಗುರುಗಳ ಪರಂಪರೆಗೆ ಸೇರಿದ ಯತಿಯೊಬ್ಬರ ನಿಷಿಧಿಯಾಗಿದೆ. ಈ ಊರಿಗೆ ಕ್ರಿ.ಶ. 950ರ ವೇಳೆಗಾಗಲೇ ದ್ವಾರಾವತಿ ಎಂಬ ಹೆಸರು ಬಂದಿದ್ದುದಾಗಿ ಮತ್ತೊಂದು ಶಾಸನದಿಂದ ನಿರ್ಧರಿಸಬಹುದು.

ಕದಂಬರ ಶಾಸನಗಳಲ್ಲಿ ಕಂಡುಬರುವ ತ್ರಿಪರ್ವತವೇ ಹಳೇಬೀಡಾಗಿರಬೇಕೆಂಬ ವಿದ್ವಾಂಸರಾದ ಮೊರೇ ಸರ್‌ರವರ ಅಭಿಪ್ರಾಯಕ್ಕೆ ಇಲ್ಲಿ ಯಾವ ಆಧಾರವಿಲ್ಲ.

ಸೊಸೆವೂರಿನಲ್ಲಿದ್ದ ಹೊಯ್ಸಳರು ಚಾಲುಕ್ಯರ ಸಾಮಂತರಾಗಿ ರಾಜ್ಯವನ್ನು ವಿಸ್ತರಿಸುತ್ತ ಬಂದಂತೆ ಮಲೆನಾಡಿನಿಂದ ಬಯಲುಸೀಮೆಯ ಕಡೆಗೆ ತಮ್ಮ ನೆಲೆ ಬೀಡನ್ನು ಬದಲಾಯಿಸಲು ಹವಣಿಸಿದಾಗ ವಿನಯಾದಿತ್ಯನಿಗೆ ದೋರಸಮುದ್ರ ಒಂದು ಆಯಾಕಟ್ಟಿನ ನೆಲೆಯಾಗಿ ಕಂಡುದುದರಲ್ಲಿ ಆಶ್ಚರ್ಯವಿಲ್ಲ. ಆತ ಕ್ರಿ.ಶ. 1064ರಲ್ಲಿ ಕೆರೆಗೆ ತುಂಬನ್ನಿಕ್ಕಿಸಿ ಊರನ್ನು ಅಭಿವೃದ್ಧಿ ಪಡಿಸಿದನು. ಮುಂದೆ ಇದು ಹೆಚ್ಚು ವಿಸ್ತಾರವಾಗಿ ಬೆಳೆದಂತೆ ಕೆರೆಯನ್ನು ವಿಸ್ತರಿಸಿ ಮತ್ತೊಂದು ತುಂಬನ್ನು ಕ್ರಿ.ಶ. 1092 ರಲ್ಲಿ ವಿನಯಾದಿತ್ಯನು ನಿರ್ಮಿಸಿದಂತೆ ಕಂಡುಬರುತ್ತದೆ. ಒಂದನೇ ಬಲ್ಲಾಳನು ಬೇಲೂರನ್ನು ವಿಷ್ಣುವರ್ಧನನು ವಿಷ್ಣು ಸಮುದ್ರವನ್ನು ನೆಲೆವೀಡುಗಳಾಗಿ ಕಟ್ಟಿಸಿದರು. ಈ ದೋರಸಮುದ್ರ ಅಥವಾ ದ್ವಾರವತೀ ಪುರವೇ ಹೊಯ್ಸಳ ವಂಶದ ಮುಖ್ಯ ನೆಲೆವೀಡಾಗಿ ಮುಂದುವರಿಯಿತು.

7.2 ದೋರಸಮುದ್ರದ ಸ್ಥಾಪನೆಯ ಕಾಲ

ಇಂದಿನ ಹಾಸನ ಜಿಲ್ಲೆಯ ಬೇಲೂರು ತಾಲ್ಲೋಕಿನ ಹೋಬಳಿ ಕೇಂದ್ರವಾಗಿರುವ ಹಳೇಬೀಡು ಆಗಿನ ದೋರಸಮುದ್ರವಾಗಿತ್ತು. ಇದು ದ್ವಾರಸಮುದ್ರ, ದ್ವಾರವತಿಪುರ ಮುಂತಾದ ಹೆಸರುಗಳಿಂದ ಕರೆಯಲ್ಪಟ್ಟಿದೆ.

ಇತಿಹಾಸಕಾರರು ದೋರಸಮುದ್ರವು ರಾಜಧಾನಿಯಾಗುವುದಕ್ಕಿಂದ ಮೊದಲು ಒಂದು ಗ್ರಾಮ ನೆಲೆಯಾಗಿತ್ತು. ಮುಂದೆ ಇದಕ್ಕೆ ರಾಜಧಾನಿಯ ಹೊಸ ರೂಪವನ್ನು ನೀಡಿ ಆಡಳಿತ ಕೇಂದ್ರವಾಗಿ ಮಾರ್ಪಡಿಸಲಾಯಿತು ಎಂದು ಅಭಿಪ್ರಾಯವನ್ನು ಪಡುತ್ತಾರೆ.[2] ಎರೆಯಂಗನು ಕ್ರಿ.ಶ. 1074 ರಲ್ಲಿ ಮಾಳವರ ಧಾರಾನಗರಕ್ಕೆ ದಾಳಿಯಿಟ್ಟು ಲೂಟಿ ಮಾಡಿದನು. ಇದರ ಸೇಡನ್ನು ತೀರಿಸಿಕೊಳ್ಳಲು ಪಾರಮಾರ ಜಗದ್ದೇವನು ಕ್ರಿ.ಶ. 1093 ರಲ್ಲಿ ರಾಜಧಾನಿ ದೋರಸಮುದ್ರದ ಮೇಲೆ ದಾಳಿ ಮಾಡಿದ ಬಗ್ಗೆ ಆಧಾರದಿಂದ ತಿಳಿದು ಬರುತ್ತದೆ.[3]

ದೋರಸಮುದ್ರವನ್ನು ಇದರಿಂದ ರಾಜಧಾನಿಯನ್ನಾಗಿ ಕ್ರಿ.ಶ. 1074 ರಿಂದ ಕ್ರಿ.ಶ. 1093 ಮಧ್ಯಭಾಗದಲ್ಲಿ ಮಾಡಿಕೊಂಡಿರಬಹುದೆಂದು ತಿಳಿದು ಬರುತ್ತದೆ. ಅಲ್ಲದೆ ಕ್ರಿ.ಶ. 1062 ರ ಹಳೇಬೀಡಿನ ಶಾಸನವು ವಿನಯಾದಿತ್ಯನು ದೋರಸಮುದ್ರದ ಕಡೆಗೆ ಜಲದ್ವಾರಗಳನ್ನು ನಿರ್ಮಿಸಿದುದರ ಬಗ್ಗೆ ತಿಳಿಸುತ್ತದೆ.[4]

ಅದರಂತೆ ಶ್ರವಣ ಬೆಳಗೊಳದ ಶಾಸನವು ವಿನಯಾದಿತ್ಯನು ತನ್ನ ರಾಜಧಾನಿಯಾಗಿದ್ದ ಬೇಲೂರಿನ ಜೊತೆಗೆ ಗ್ರಾಮವಾಗಿದ್ದ ದೋರಸಮುದ್ರದಲ್ಲಿ ಹೊಸ ಕಟ್ಟಡಗಳನ್ನು ನಿರ್ಮಿಸಿದ್ದಲ್ಲದೇ ಅದಕ್ಕೆ ನಗರದ ಸ್ವರೂಪವನ್ನು ನೀಡಿದ್ದಾಗಿ ತಿಳಿಸುತ್ತದೆ. ಜೊತೆಗೆ ತನ್ನ ತಂದೆಯ ಸಹಕಾರ ಮತ್ತು ಪ್ರೋತ್ಸಾಹವನ್ನು ಪಡೆದ ಎರೆಯಂಗ ತಾನು ಮಾಳ್ವ ಹಾಗೂ ಕಳಿಂಗ ಯುದ್ಧಗಳಿಂದ ಪಡೆದ ಕಪ್ಪ ಕಾಣಿಕೆಗಳನ್ನು ತನ್ನ ರಾಜಧಾನಿಯ ನಿರ್ಮಾಣ ಕಾರ್ಯದಲ್ಲಿ ಬಳಸಿಕೊಂಡನೆಂದು ಅಭಿಪ್ರಾಯ ಪಡಲಾಗಿದೆ.

7.3 ದ್ವಾರಸಮುದ್ರದ ಮೂಲ

ದ್ವಾರಸಮುದ್ರ ಅಥವಾ ದೋರಸಮುದ್ರ ಎಂಬುದು ಹೊಯ್ಸಳರ ರಾಜಧಾನಿ ಹೆಸರು. ಇದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಹೊಯ್ಸಳರು ಉತ್ತರದ ಯಾದವ ವಂಶೀಯರೆಂದು ಭಾವಿಸುವುದಾದರೆ ಅವರು ಮೊದಲು ಘಟ್ಟಗಳಲ್ಲಿ ನೆಲೆಸಿ ಕ್ರಮೇಣ ದಕ್ಷಿಣಾಭಿಮುಖವಾಗಿ

ಹೊರಟು ಬಂದು ಈ ನಗರವನ್ನು ಸ್ಥಾಪಿಸಿರಬೇಕೆಂದಾಗ ಅಥವಾ ಉತ್ತರದಲ್ಲಿ ಮೂಲಸ್ಥಾನವಾಗಿದ್ದ ದ್ವಾರಕೆಯ ಹೆಸರನ್ನು ಈ ಪಟ್ಟಣಕ್ಕೂ ಕೊಟ್ಟಿರಬಹುದೆಂದು ಊಹಿಸಬಹುದು. ದೋರಸಮುದ್ರದ ವಿಷಯವನ್ನು ಯಾವ ಶಾಸನವು ಪ್ರಸ್ತಾಪಿಸಿಲ್ಲ. ವಿದ್ವಾಂಸರು ದೋರಸಮುದ್ರ ಬೇರೆ, ದ್ವಾರಸಮುದ್ರ ಬೇರೆ ಎಂದು ವಾದಿಸುತ್ತಾರೆ. ರಾಷ್ಟ್ರಕೂಟ ದೊರೆಯಾದ ದೋರಪ್ಪ, ಧ್ರುವ, ದೋರ ಎಂಬವರ ನಾಮಾಂಕಿತದಲ್ಲಿ ಒಂದು ನಗರವು ಅಲ್ಲಿ ಸ್ಥಾಪಿತವಾಗಿದ್ದಿರಬಹುದೆಂಬ ಊಹೆಯೊಂದಿದೆ. ರಾಷ್ಟ್ರಕೂಟರು ಕ್ರಿ.ಶ. 950ರ ಕಾಲಕ್ಕೆ ದಕ್ಷಿಣಾ ಪಥವನ್ನೆಲ್ಲ ತಮ್ಮ ಹಿಡಿತದಲ್ಲಿಟ್ಟು ಕೊಂಡಿದ್ದರು. ಕ್ರಿ.ಶ. 810 ರ ಶಾಸನದಂತೆ ಹೊಯ್ಸಳರು ರಾಷ್ಟ್ರಕೂಟರ ಆದಿರಾಜತೆಯನ್ನು ಒಪ್ಪಿಕೊಂಡಿದ್ದರು. ರಾಷ್ಟ್ರಕೂಟ ಮಾಡಲಿಕನು ಹೊಯ್ಸಳರ ಮೇಲೆ ರಾಷ್ಟ್ರಕೂಟ ಪ್ರಭುತ್ವವನ್ನು ಸ್ಥಾಪಿಸಿ ಅಲ್ಲಿ ನಾನಾ ನಗರಗಳನ್ನು ಕಟ್ಟಿಸಿ ಅಂತ್ಯದಲ್ಲಿ ದೋರಸಮುದ್ರ ನಗರವನ್ನು ನಿರ್ಮಿಸಿ ತನ್ನ ಪ್ರಭುವಾದ ದೋರನ ಹೆಸರನ್ನು ಚಿರಸ್ಥಾಯಿಗೊಳಿಸಿದ್ದರೆ ಅದು ಅಸಂಭವವೇನು ಅಲ್ಲ. ಉತ್ತರದಿಂದ ಒಂದು ಹಳೆಯ ಬೀಡಿನಲ್ಲಿ ನೆಲೆಸಿದಾಗ ಹೊಯ್ಸಳ ದೋರನು ಆ ನಗರವನ್ನು ದ್ವಾರವತಿ ಎಂದು ಕರೆದಿರಬಹುದು.[5] 'ದೋರಸಮುದ್ರ' ಎಂಬ ಹಳೆಯ ಹೆಸರೇ ದ್ವಾರಸಮುದ್ರವೆಂದು ರೂಪಾಂತರ ಹೊಂದಿರಬಹುದು. 'ದ್ವಾರ' ಎಂಬ ಪದವು 'ದೋರ' ಎಂಬುದರ ತದ್ಭವ ಮೂಲವಾಗಿರಬೇಕು. ಒಟ್ಟಿನಲ್ಲಿ ನಾವು ಬಿಡಿಸಬೇಕಾದ ಒಗಟೆಂದರೆ ದ್ವಾರಸಮುದ್ರದ ನಿಜವಾದ ಸ್ಥಾಪಕ ರಾಷ್ಟ್ರಕೂಟ ದೋರನೇ ಅಥವಾ ಹೊಯ್ಸಳರ ದೋರನೇ ಎಂಬುದಾಗಿದೆ.

ಕ್ರಿ.ಶ. 950ರ ನೊಳಂಬರಸನಾದ ಅಣ್ಣಿಗನ ಶಾಸನವೊಂದರಲ್ಲಿ 'ಹೊಯ್ಸಳ' ಎಂಬ ಹೆಸರನ್ನು ಉಲ್ಲೇಖಿಸಲಾಗಿದೆ. ಆದರೆ ಅದು ರಾಷ್ಟ್ರಕೂಟರ ಸಾಮಂತನಾಗಿದ್ದ ಹೊಯ್ಸಳ ಮುರುಗನೆಂಬುವನಿಗೆ ಸಂಬಂಧಪಟ್ಟಿದ್ದು ತಲಕಾಡಿನ ಕಲೆಯೂರಿನಲ್ಲಿ ಸಿಕ್ಕಿದ ಶಾಸನದಲ್ಲಿ (ಕ್ರಿ.ಶ. 1006) ಹೊಯ್ಸಳನೆಂಬುವನು ಒಂದನೇ ರಾಜರಾಜ ಚೋಳನ ಸೇನಾನಿಯಾದ ಇಂದ ಅಪ್ರಮೇಯನಿಂದ ಸೋಲಿಸಲ್ಪಟ್ಟನೆಂಬುದಾಗಿ ನಿರೂಪಿಸಿಲಾಗಿದೆ. ಇದರಿಂದ ಕ್ರಿ.ಶ. 950 ರ ಕಾಲಕ್ಕೆ ದೋರಮುದ್ರವು ಹೊಯ್ಸಳರ ರಾಜಧಾನಿಯಾಗಿತ್ತೆಂದು ವ್ಯಕ್ತವಾಗುತ್ತದೆ. ವಿನಯಾದಿತ್ಯನ ಕಾಲದಲ್ಲಿ ಹೊಯ್ಸಳರು ದ್ವಾರಾವತೀ ಪುರವರಾಧೀಶ್ವರ' ಎಂಬ ಬಿರುದನ್ನು ಧರಿಸಿದ್ದಂತೆ ಕಂಡು ಬರುತ್ತದೆ. ಮತ್ತಿನ ಶಾಸನಗಳಲ್ಲಿ ಕಂಡುಬರುವ ಶಶಕಪುರದ ವಾಸಂತಿಕಾ ದೇವಿಲಬ್ದವರ ಪ್ರಸಾದ" ಎನ್ನುವ ಬಿರುದಿಗಿಂತ ಇದು ಹಿಂದಿನದು. ಒಟ್ಟಿನಲ್ಲಿ ಹೇಳುವುದಾದರೆ ದ್ವಾರಸಮುದ್ರವು ಮೊದಲಿನಿಂದಲೂ ಹೊಯ್ಸಳರ ರಾಜಧಾನಿಯಾಗಿತ್ತು.

7.4 ರಾಜಧಾನಿಯ ಸ್ಥಳಾಂತರ

ಕ್ರಿ.ಶ. 1000 ದಿಂದ ಕ್ರಿ.ಶ. 1046 ರವರೆಗಿನ ಹೊಯ್ಸಳ ಇತಿಹಾಸವು ಅಸ್ಪಷ್ಟವಾಗಿದೆ. ಸಳ ಎಂಬುವವನೇ ಸೊಸೆವೂರನ್ನು ತನ್ನ ನೆಲೆಯನ್ನಾಗಿ ಮಾಡಿಕೊಂಡು ರಾಜ್ಯ ವಿಸ್ತರಣಾ ಕಾರ್ಯದಲ್ಲಿ ತೊಡಗಿರಬಹುದೆಂದು ಹೇಳಲಾಗುತ್ತಿದೆ. ಮುಂದೆ ಈತನ ಮಗ ನೃಪಕಾಮನು ಅಧಿಕಾರಕ್ಕೆ ಬಂದು ಮಲೆನಾಡು ಪ್ರದೇಶಗಳ ಮೇಲೆ ದಾಳಿಯನ್ನು ಮಾಡಿ ಚೋಳರ ಸಾಮಂತರಾಗಿದ್ದ ಕೊಂಗ್ವಾಳರನ್ನು ಸೋಲಿಸಿದನು. ಆದರೆ ಚೋಳರು ತಲಕಾಡನ್ನು ವಶಪಡಿಸಿಕೊಂಡ ಮೇಲೆ ಹೊಯ್ಸಳರ ರಾಜ್ಯ ವಿಸ್ತರಣೆಗೆ ಪೆಟ್ಟು ಬಿದ್ದಂತಾಯಿತು. ಕೇವಲ ಸೊಸೆವೂರು ಎಂಬ ನೆಲೆಯನ್ನು ಪ್ರಮುಖ ಕೇಂದ್ರ ವಾಗಿಟ್ಟುಕೊಂಡು ರಾಜ್ಯ ವಿಸ್ತರಣೆಗೆ ಮಾಡುವುದು ಅಸಾಧ್ಯದ ಮಾತಾಗಿತ್ತು.

ಹೊಯ್ಸಳರು ತಮ್ಮ ಮೂಲ ನೆಲೆಯಾಗಿದ್ದ ಸೊಸೆವೂರನ್ನು ಬಿಟ್ಟು ಘಟ್ಟ ಪ್ರದೇಶದಲ್ಲಿದ್ದ ನೆಲೆಯಿಂದ ಮೈದಾನ ಪ್ರದೇಶದಲ್ಲಿ ನೆಲೆಯನ್ನು ಸ್ಥಾಪಿಸುವುದು ಅತ್ಯವಶ್ಯಕವಾಗಿತ್ತು. ಈ ರಾಜಧಾನಿ ನೆಲೆಯ ಬದಲಾವಣೆ ಕೇವಲ ರಾಜಕೀಯ ಉದ್ದೇಶಗಳಿಗೆ ಸೀಮಿತವಾಗಿರದೇ ಇತರ ಉದ್ದೇಶಗಳನ್ನು ಸಹ ಒಳಗೊಂಡಿತ್ತು. ಈ ಒಂದು ಬದಲಾವಣೆಯ ಸಂಭಾವ್ಯ ಕಾರಣಗಳನ್ನು ತಿಳಿಸುವುದು ಅವಶ್ಯಕವೆನಿಸುತ್ತದೆ. ಸೊಸೆವೂರಿನಿಂದ ಬೇಲೂರಿಗೆ ರಾಜಧಾನಿಯನ್ನು ಸ್ಥಳಾಂತರಿಸುವಲ್ಲಿ ವಿನಯಾದಿತ್ಯನು ಪ್ರಮುಖ ಪಾತ್ರ ವಹಿಸಿದನು.

ಹೊಯ್ಸಳರ ಪ್ರಾರಂಭಿಕ ಅರಸರು ರಾಜಕೀಯ ಮತ್ತು ಆರ್ಥಿಕ ಉದ್ದೇಶಗಳಿಗಾಗಿ ತಮ್ಮ ರಾಜಧಾನಿಯನ್ನು ಸೊಸೆವೂರಿನಿಂದ ಬೇಲೂರಿಗೆ ವರ್ಗಾಯಿಸಿದ್ದು ನಂತರ ಬೇಲೂರು ಶಾಶ್ವತ ರಾಜಧಾನಿಯಾಗಿ ಉಳಿಯಲಿಲ್ಲ. ಮತ್ತೆ ರಾಜಧಾನಿ ಬೇಲೂರಿನಿಂದ ದೋರಸಮುದ್ರಕ್ಕೆ ಸ್ಥಳಾಂತರ ಗೊಂಡಿತು.

ನಗರದ ರಚನೆ

ಪ್ರಾರಂಭದಲ್ಲಿ ಗ್ರಾಮ ನೆಲೆಯಾಗಿದ್ದ ದೋರಸಮುದ್ರವು ವಿನಯಾದಿತ್ಯ ಎರೆಯಂಗನ ಪ್ರೋತ್ಸಾಹದಿಂದ ದೊರೆತು ನಗರದ ಲಕ್ಷಣಗಳನ್ನು ಪಡೆಯಿತು. ಮುಂದೆ ವಿಷ್ಣುವರ್ಧನ ಎರಡನೇ ಬಲ್ಲಾಳ, ಮೂರನೇ ಬಲ್ಲಾಳನ ಆಳ್ವಿಕೆಯ ಕಾಲದಲ್ಲಿ ಹನ್ನೊಂದನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಮಹಾನಗರವಾಗಿ ವೈಭವಯುತವಾಗಿ ಮೆರೆಯಿತು. ಈ ನಗರವು ಕೋಟೆ ಅರಮನೆ

ದೇವಾಲಯ ದಾರಿ ಹೆದ್ದಾರಿ, ನೀರಿನ ಪೂರೈಕೆ ಮುಂತಾದ ಅವಶ್ಯಕ ಸೌಲಭ್ಯಗಳನ್ನು ಪಡೆದುಕೊಂಡು ಮುಂದೆ ಸುಮಾರು 200 ವರ್ಷಗಳ ಕಾಲ ದೋರಸಮುದ್ರವು ಹೊಯ್ಸಳರ ರಾಜಧಾನಿಯಾಗಿ ಮೆರೆಯಿತು.

7.5.1 ಕೋಟೆ

ವಿಶಾಲವಾದ ಪ್ರದೇಶವನ್ನು ಸುತ್ತುವರೆದ ಕೋಟೆಯು ಈಗಿನ ಹಳೇಬೀಡನ್ನೊಳಗೊಂಡ ಉತ್ತರಕ್ಕೆ ಬಿದರ ಕರೆಯವರೆಗೂ ಪೂರ್ವಕ್ಕೆ ದೋರಸಮುದ್ರ ಕೆರೆಯವರೆಗೂ ದಕ್ಷಿಣಕ್ಕೆ ಬೆಣ್ಣೆಗುಡ್ಡದಿಂದ ಸುಮಾರು 100 ಮೀ ದೂರದವರೆಗೆ ಮತ್ತು ಪಶ್ಚಿಮಕ್ಕೆ ಬೆಣ್ಣೆಗುಡ್ಡದಿಂದ ಸುಮಾರು 600 ಮೀ ದೂರದವರೆಗೆ ಸಾಗುತ್ತದೆ. ಈ ಕೋಟೆಯೊಳಗೆ ಹೊಯ್ಸಳೇಶ್ವರ ಮತ್ತು ಇತರ ದೇವಾಲಯಗಳು ಮತ್ತು ಅರಮನೆಯನ್ನು ಸುತ್ತುವರೆದ ಒಳಕೋಟೆ ಇವೆ. ಒಳಕೋಟೆಯು ಆಯತಾಕಾರದಲ್ಲಿದೆ. ಶಿಥಿಲಾವಸ್ಥೆಯಲ್ಲಿರುವ ಈ ಕೋಟೆಯ ಎತ್ತರ ಕೆಲವಡೆ ಮೂರು ಮೀ ಇವೆ. ದುಂಡಗಿನ ದೊಡ್ಡ ಕರಿಕಲ್ಲುಗಳಿಂದ ಕೋಟೆಯನ್ನು ಕಟ್ಟಲಾಗಿದೆ.

ಅನಿಯಮಿತಾಕಾರದ ಕೆಲವು ಕಲ್ಲುಗಳನ್ನು ಹಾಗೆಯೇ ಉಪಯೋಗಿಸಿದರೆ ಕೆಲವು ಕಲ್ಲುಗಳ 1.2.3 ಅಥವಾ 4 ಬದಿಗಳನ್ನು ಸಪಟಾಗಿ ಕೆತ್ತಿ ಉಪಯೋಗಿಸಲಾಗಿದೆ. ಇಲ್ಲಿ ಯಾವುದೇ ಗಾರೆಯನ್ನು ಉಪಯೋಗಿಸಿಲ್ಲ. ಒಳಗಿರುವ ಅರಮನೆಯ ವಿವರಗಳನ್ನು ತಿಳಿಯಲು ಇಲ್ಲಿ ಉತ್ಖನನ ನಡೆಯಬೇಕಾಗಿದೆ.

ಹೊರಕೋಟೆಯನ್ನು ಸಹ ಒಳಕೋಟೆಯಂತೆಯೇ ಕಟ್ಟಲಾಗಿದೆ. ಆದರೆ ಇದು ಹೆಚ್ಚು ದಪ್ಪ ಮತ್ತು ಎತ್ತರವಾಗಿದೆ. ಇದರ ಕಲ್ಲುಗಳು ಸಹ ದೊಡ್ಡ ಗಾತ್ರದವು. ಕೋಟೆಯ ಹೊರಭಾಗವನ್ನು ದೊಡ್ಡ ಕಲ್ಲುಗಳಿಂದ ಕಟ್ಟಿ ಒಳಭಾಗವನ್ನು ಮಣ್ಣಿನ ಇಳಿವೋರೆಯಿಂದ ರಚಿಸಲಾಗಿದೆ. ಕೋಟೆಯ ಹೊರಗೆ ಆಳವಾದ ಕಂದಕ ಮತ್ತು ಮತ್ತೊಂದು ಗೋಡೆ ಇದೆ. ಕೋಟೆಯು ಶಿಥಿಲಾವಸ್ಥೆಯಲ್ಲಿ ಇರುವುದರಿಂದ ಮೇಲಿನಿಂದ ಬಿದ್ದ ಕಲ್ಲುಗಳು ಮತ್ತು ಅಲ್ಲಲ್ಲಿ ಬೆಳೆದ ಗಿಡ ಗಂಟೆಗಳು ಕೋಟೆಯ ಹೊರಮೈಯನ್ನು ಮುಚ್ಚಿರುವುದರಿಂದ ಕೋಟೆಯು ಕಾಣಿಸುವುದಿಲ್ಲ. ಆದರೂ ಕೆಲವು ಕಡೆ ಇದರ ಎತ್ತರ ಎಂಟು ಮೀಟರ್‌ಗಳಿವೆ. ಈ ಕೋಟೆಯ ರಚನೆಯ ಭದ್ರತೆಯನ್ನು ಹೆಚ್ಚಿಸಲು ಸುಮಾರು ಪ್ರತಿ 100 ಮೀಟರ್‌ಗೆ ಒಂದರಂತೆ ಚೌಕಾಕಾರದಲ್ಲಿ, ಮುಂದೆ ಚಾಚಿಕೊಂಡಿರುವ ಕೊತ್ತಳಗಳನ್ನು

ನಿರ್ಮಿಸಲಾಗಿದೆ. ಕೋಟೆಯನ್ನು ಮುತ್ತಿದ ಸೈನ್ಯದ ಎದುರು ನಿಂತು ಹೋರಾಡಲು ಸಹ ಈ ಕೊತ್ತಳಗಳು ಅತ್ಯವಶ್ಯಕ.

ಈ ಕೋಟೆಗೆ ನಾಲ್ಕು ಬಾಗಿಲುಗಳಿವೆ. ಹೊಯ್ಸಳೇಶ್ವರ ದೇವಾಲಯದ ಹತ್ತಿರವಿರುವ ಪೂರ್ವ ಬಾಗಿಲಿನಿಂದ ಹೊರಬರುವ ದಾರಿಯು ದೋರಸಮುದ್ರದ ಕೆರೆಯ ಏರಿಯ ಮೇಲೆ ಹೋಗುತ್ತದೆ. ದಕ್ಷಿಣಕ್ಕಿರುವ ಬಾಗಿಲು ಹುಲಿಕೆರೆ ಮತ್ತು ಹಗರೆ ಗ್ರಾಮಗಳ ಕಡೆಗಿದೆ. ನೈರುತ್ಯ ದಿಕ್ಕಿನಲ್ಲಿರುವ ಬಾಗಿಲು ಕಟ್ಟೆಸೋಮನಹಳ್ಳಿ ಕೆರೆಯ ಏರಿಯ ಮೇಲೆ ಹೋಗುವ ದಾರಿಯಲ್ಲಿದೆ. ಹಿಂದೆ ಇದು ಬೇಲೂರಿಗೆ ಹೋಗುವ ಹೆದ್ದಾರಿಯಾಗಿತ್ತು.[6] ಬಾಗಿಲುಗಳ ರಚನೆಯು ಸಹ ಶಿಷ್ಟವಾಗಿದೆ. ದೂರದಿಂದ ನೋಡುವ ವೈರಿಗೆ ಕೊತ್ತಳ ಮತ್ತು ಬಾಗಿಲುಗಳ ವ್ಯತ್ಯಾಸ ತಿಳಿಯುವುದಿಲ್ಲ. ಕೊತ್ತಳಗಳಂತೆ ಮುಂದೆ ಬಾಚಿಕೊಂಡಿರುವ ಭಾಗದಲ್ಲಿ ಅಳವಡಿಸಿದ ಬಾಗಿಲಿನ ದ್ವಾರವು ನೇರವಾಗಿರದೆ ಪಕ್ಕದಲ್ಲಿದೆ. ಅಲ್ಲದೆ ಪ್ರವೇಶವು ಅಂಕುಡೊಂಕಾಗಿರುವುದರಿಂದ ವೈರಿಯ ಪ್ರವೇಶ ಕಷ್ಟಕರವಾಗುವುದಲ್ಲದೆ ಮೇಲೆ ನಿಂತ ರಕ್ಷಕರು ಎಸೆಯುವ ಆಯುಧಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಪಶ್ಚಿಮ ದಿಕ್ಕಿಗಿರುವ ಬಾಗಿಲಿನೊಳಗೆ ಪ್ರವೇಶವು ಪಶ್ಚಿಮಕ್ಕಿರದೆ ಉತ್ತರಕ್ಕಿದೆ. ಇಲ್ಲಿಂದ ಪ್ರವೇಶ ಮಾಡಿದವರು ಅನುಕ್ರಮವಾಗಿ ದಕ್ಷಿಣ, ಪೂರ್ವ, ಉತ್ತರ ಮತ್ತು ಪೂರ್ವ ದಿಕ್ಕಿಗೆಸಾಗಿ ಕೋಟೆಯೊಳಗೆ ಹೋಗಬೇಕಾಗುತ್ತದೆ.

7.5.2 ಅರಮನೆ

ಹೊಯ್ಸಳ ಅರಸರು ಕೋಟೆಯ ಮಧ್ಯ ಭಾಗದಲ್ಲಿ ಅರಮನೆಯನ್ನು ನಿರ್ಮಿಸಿದ್ದರು. ಇದರ ಮತ್ತೊಂದು ವಿಶೇಷತೆಯೆಂದರೆ ಅರಸರು ತಮ್ಮ ಅರಮನೆಯ ಸುತ್ತಲು ಕೋಟೆ ಗೋಡೆಯನ್ನು ನಿರ್ಮಿಸಿದ್ದು ಈಗ ಅರಮನೆಯು ಸಂಪೂರ್ಣವಾಗಿ ನಾಶವಾಗಿದ್ದು ಅರಮನೆಯ ಕುರುಹುಗಳನ್ನು ಉತ್ಖನನಗಳ ಮೂಲಕ ಕಂಡುಹಿಡಿಯಬೇಕಾಗಿದೆ. ಇದರ ನಿರ್ಮಾಣಕ್ಕೆ ಕಲ್ಲು, ಗಾರೆ ಇಲ್ಲವೆ ಇಟ್ಟಿಗೆಗಳನ್ನು ಬಳಸಿರಬಹುದೆಂದು ಅಭಿಪ್ರಾಯ ಪಡಲಾಗಿದೆ. ಅರಮನೆಯ ಪೂರ್ವಕ್ಕೆ ಜೈನ ಬಸದಿಗಳು ಹಾಗೂ ಕೇದಾರೇಶ್ವರ ದೇವಾಲಯ ಮತ್ತು ಉತ್ತರದಲ್ಲಿ ನಗರೇಶ್ವರ ಹಾಗೂ ಹೊಯ್ಸಳೇಶ್ವರ ದೇವಾಲಯಗಳು ಕಂಡು ಬರುತ್ತದೆ.

7.5.3 ಹೆದ್ದಾರಿಗಳು

ಹೊಯ್ಸಳ ಅರಸರು ಪ್ರಮುಖ ನಗರ, ಗ್ರಾಮಗಳ ನಿರ್ಮಾಣ ಹಾಗೂ ಪುನರುಜ್ಜೀವನ ಕಾರ್ಯವನ್ನು ಕೈಗೊಂಡರು. ರಾಜ್ಯದ ಪ್ರಮುಖ ಕೇಂದ್ರಗಳ ಸಂಪರ್ಕವು ಮೂಲ ರಾಜಧಾನಿಯಾಗಿದ್ದ ದೋರಸಮುದ್ರದೊಡನೆ ಇತ್ತೆಂದು ಹೇಳಬಹುದು. ಬೇಲೂರಿನಿಂದ ಹದಿನಾರು ಕಿ.ಮೀ. ದೂರದಲ್ಲಿರುವ ದೋರಸಮುದ್ರವು ಬಾಣಾವರ, ಅರಸೀಕೆರೆ, ಹಾಸನ, ಚನ್ನರಾಯ ಪಟ್ಟಣಗಳೊಡನೆ ಸಂಪರ್ಕವನ್ನು ಹೊಂದಿತೆಂದು ಹೇಳಬಹುದು. ಬೇಲೂರಿನಿಂದ ದ್ವಾರಸಮುದ್ರಕ್ಕೆ ಕಾಲುವೆಯ ಸಂಪರ್ಕವನ್ನು ಮಾಡುವುದರ ಜೊತೆಗೆ ಹೊಸಮಾರ್ಗಗಳನ್ನು ಆಗ ನಿರ್ಮಾಣ ಮಾಡಲಾಯಿತು. ಈ ಮಾರ್ಗಗಳು ವ್ಯಾಪಾರಸಂಪರ್ಕ ಹಾಗೂ ಸೈನಿಕ ಕಾರ್ಯಾಚರಣೆಗಳಿಗಾಗಿ ಅನುಕೂಲಕರವಾಗಿದ್ದವು ಎಂದು ಹೇಳಲಾಗುತ್ತಿದೆ.[7]

7.5.4 ನೀರಿನ ಪೂರೈಕೆ

ವಿನಯಾದಿತ್ಯ ಮತ್ತು ಎರೆಯಂಗರು ತಮ್ಮ ರಾಜಧಾನಿ ಬೇಲೂರು ಮತ್ತು ದೋರಸಮುದ್ರ ಗಳನ್ನು ನಿರ್ಮಾಣ ಮಾಡುವುದರ ಜೊತೆಗೆ ಅವಶ್ಯಕವಾದ ನೀರಿನ ಪೂರೈಕೆಯ ವ್ಯವಸ್ಥೆಗೆ ತಮ್ಮ ಗಮನವನ್ನು ನೀಡಿದ್ದರು. ಆ ಕಾಲದಲ್ಲಿ ಯಗಚಿ ನದಿಯು ನೀರಿನ ಮೂಲವಾಗಿತ್ತು. ಎರೆಯಂಗನು ಬೇಲೂರಿನ ಯಗಚಿ ನದಿಯಿಂದ ದೋರಸಮುದ್ರದವರೆಗೆ ಕಾಲುವೆಯನ್ನು ನಿರ್ಮಿಸಿದ್ದನು. ದೋರಸಮುದ್ರದ ಕೆರೆಯ ನೀರನ್ನು ದಿನನಿತ್ಯದ ಬಳಕೆಗೆ ಹಾಗೂ ವ್ಯವಸಾಯಕ್ಕೆ ಉಪಯೋಗಿಸ ಲಾಗುತ್ತಿತ್ತು. ಯಗಚಿ ನದಿಯ ಕಾಲುವೆಯ ಜೊತೆಗೆ ಬೊಮ್ಮನಹಳ್ಳಿ, ರಣಘಟ್ಟ ಹಳ್ಳಗಳು ದೋರಸಮುದ್ರದ ಕೆರೆಗೆ ನೀರಿನ ಪೂರೈಕೆಯನ್ನು ಮಾಡುತ್ತಿದ್ದವು.[8]

7.5.5 ಸಾಮಾಜಿಕ ಸಂರಚನೆ

ಹೊಯ್ಸಳ ರಾಜಧಾನಿ ದೋರಸಮುದ್ರದ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಅಂಶಗಳನ್ನು ಅಧ್ಯಯನ ಮಾಡುವಲ್ಲಿ ಶಾಸನಾಧಾರಗಳು ಪ್ರಮುಖ ಪಾತ್ರ ವಹಿಸಿದೆ. ಇದರ ಜೊತೆಗೆ ಸಾಹಿತ್ಯ ಹಾಗೂ ಕಲೆಗಳು ಸಹ ಈ ಮೆಲಿನ ಅಂಶಗಳ ಮೇಲೆ ಬೆಳಕು ಚೆಲ್ಲುತ್ತವೆ. ಸಾಮಾಜಿಕ ಸಂರಚನೆಯಲ್ಲಿ ವಿವಿಧ ಜನವರ್ಗಗಳು ವೃತ್ತಿಪರ ವರ್ಗಗಳು ವಿವಿಧ ಜನವರ್ಗಗಳು ಅವುಗಳ ಪರಸ್ಪರ ಸಂಬಂಧ, ಸಾಮಾಜಿಕ ಶ್ರೇಣೀಕರಣ ಹಾಗೂ ಸಾಮಾಜಿಕ ಸಂಸ್ಥೆಗಳು, ಸಾರ್ವಜನಿಕ ಸಹಕಾರ ಸಾಂಘಿಕ ಚಟುವಟಿಕೆಗಳ ಅಧ್ಯಯನ ಪ್ರಮುಖವಾಗಿದೆ.

7.6 ಆಡಳಿತ ವರ್ಗಗಳು

ನಮ್ಮ ಅಧ್ಯಯನದ ಕೇಂದ್ರವಾಗಿರುವ ದೋರಸಮುದ್ರದ ಶಾಸನಗಳಲ್ಲಿ ಉಲ್ಲೇಖವಾಗಿರುವ ಹಾಗೂ ಧಾನಧರ್ಮಗಳಿಗೆ, ಸಂಘಗಳಿಗೆ, ಸಂಬಂಧಿಸಿದ ವಿಷಯಗಳನ್ನು ತಿಳಿಸುವಾಗ ನಾವು ಆಡಳಿತ ವರ್ಗದಲ್ಲಿ ಪ್ರಮುಖವಾಗಿ ಕಂಡುಬರುವ ಮಹಾಪ್ರಧಾನರು, ಭಂಡಾರಿಗಳು, ಸೇನಾಭೋವ, ಹೆಗ್ಗಡೆಯರು ಮುಂತಾದವರ ಚಟುವಟಿಕೆ ಹಾಗೂ ಪಾತ್ರದ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದೆ. ಸಮಾಜದಲ್ಲಿ ಇವರು ಪ್ರತಿಷ್ಠಿತರಾಗಿದ್ದು ಸಮಾಜದ ಸರ್ವಾಂಗೀಣ ಪ್ರಗತಿಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದ್ದರು.

ಹಲವು ಶಾಸನಗಳಲ್ಲಿ ಉಲ್ಲೇಖಿತವಾಗಿರುವ "ದುಷ್ಟ ನಿಗ್ರಹ ಶಿಷ್ಟ ಪರಿಪಾಲನೆ" ಎಂಬ ಅಂಶವು ರಾಜ ಮತ್ತು ಆಡಳಿತ ವರ್ಗದವರಿಗೆ ಸಂಬಂಧಿಸಿದ್ದಾಗಿದೆ. ಅಂದರೆ ಅನ್ಯಾಯವನ್ನು ತುಳಿದು ಹಾಕಿ ಒಳ್ಳೆಯದನ್ನು ರಕ್ಷಿಸುವುದು, ಇದರರ್ಥವಾದರು ಇವೆರಡು ಸಮರ್ಪಕವಾಗಿ ನೆರವೇರಬೇಕಾದರೆ ಈ ಸಾಮಾಜಿಕ ಜವಾಬ್ದಾರಿಯು ಸಂಪೂರ್ಣವಾಗಿ ಆಡಳಿತ ವರ್ಗದ ಮೇಲೆ ಅವಲಂಬಿತವಾಗಿತ್ತು.

7.6.1 ಮಹಾಪ್ರಧಾನರು

ಅರಸನು ರಾಜ್ಯದ ಒಡೆಯನಾಗಿದ್ದು ರಾಜಧಾನಿ ದೋರಸಮುದ್ರದ ಆಡಳಿತದಲ್ಲಿ ಉನ್ನತ ಅಧಿಕಾರಿಗಳಾಗಿ ಅವನ ಸಹಾಯಕ್ಕೆ ಮಹಾಪ್ರಧಾನರಿದ್ದರು. ಕೆಲವೊಮ್ಮೆ ಶಾಸನಗಳಲ್ಲಿ ಮಹಾ ಪ್ರಧಾನ ದಂಡನಾಯಕ ಎಂಬ ಉಲ್ಲೇಖಗಳು ಕಂಡುಬಂದಿವೆ. ಅರಸನ ನಂತರ ಬರುವ ಉನ್ನತ ಸ್ಥಾನವನ್ನು ಮಹಾಪ್ರಧಾನರೇ ವಹಿಸಿಕೊಂಡಿದ್ದರು.

ದೋರಸಮುದ್ರದ ಹೊಯ್ಸಳೇಶ್ವರ ದೇವಾಲಯದ ಗಣೇಶ ವಿಗ್ರಹ ಸಮೀಪದ ಒಂದು ಶಾಸನವು ಮಹಾಪ್ರಧಾನ ಅಮ್ಮನ ವಗ್ಗಡೆ ದಾನ ನೀಡಿದ್ದನ್ನು[9] ಒಳಗೋಡೆಯ ಶಾಸನವು ಮಹಾಪ್ರಧಾನ ಬಮ್ಮಣ್ಣನು ಪಂಚಿಕೇಶ್ವರ ದೇವಾಲಯಕ್ಕೆ ದಾನ ನೀಡಿದ್ದನ್ನು[10] ಬೆಣ್ಣೆಗುಡ್ಡದ ಉತ್ತರ ಭಾಗದ ಶಾಸನವು ಮಹಾಪ್ರಧಾನ ಸೋಮಯ್ಯನು ಪಾರ್ಶ್ವನಾಥ ಬಸದಿಗೆ ದಾನ ನೀಡಿದ್ದನ್ನು[11] ಮತ್ತು ಬಿದರ ಕೆರೆಯ ದಂಡೆಯ ಮೇಲಿನ ಶಾಸನವು ನಾಲ್ಕು ಜನ ಮಹಾಪ್ರಧಾನರನ್ನು ಉಲ್ಲೇಖಿಸುತ್ತದೆ.[12]

ಈ ಮೇಲಿನ ಶಾಸನಗಳನ್ನು ಅಧ್ಯಯನ ಮಾಡಲಾಗಿ ಎಲ್ಲ ಮಹಾಪ್ರಧಾನರು ಸಮಾಜದ ಉನ್ನತ ಸ್ಥಾನದಲ್ಲಿದ್ದು ತಮ್ಮ ಅಂತಸ್ತನ್ನು ಕಾಪಾಡಿಕೊಂಡಿದ್ದರ ಜೊತೆಗೆ ದೇವರಲ್ಲಿ ನಂಬಿಕೆ ಶ್ರದ್ಧೆಗಳನ್ನು ಹೊಂದಿದ್ದರೆಂದು ತಿಳಿದು ಬರುತ್ತದೆ.

7.6.2 ಭಂಡಾರಿಗಳು

ಮಹಾಪ್ರಧಾನರ ನಂತರ ಆಡಳಿತ ವರ್ಗದಲ್ಲಿ ಪ್ರಮುಖವಾಗಿ ಕಂಡು ಬರುವವರು ಭಂಡಾರಿಗಳು ಇವರ ಪ್ರಮುಖ ಕಾರ್ಯವೆಂದರೆ ದಾನದತ್ತಿಗಳನ್ನು ನೀಡಿದ್ದನ್ನು ಸಂಗ್ರಹಿಸುವುದು. ಇವರನ್ನು ಖಜಾಂಚಿ ಎಂಬುದಾಗಿ ಕರೆಯುವುದು ಸೂಕ್ತವೆನಿಸುತ್ತದೆ. ಇವರು ಸರ್ಕಾರ ಮತ್ತು ದೇವಾಲಯ ಎರಡರಲ್ಲೂ ತಮ್ಮ ಸೇವೆಯನ್ನು ಸಲ್ಲಿಸಬೇಕಾಗಿತ್ತು. ಇದರ ಜೊತೆಗೆ ದಾನದ ಮೊತ್ತ, ಬಡ್ಡಿ ಸಾಲಗಳ ಬಗೆಗೆ ದಾಖಲೆಗಳನ್ನು ಇಡಬೇಕಾಗಿತ್ತು.

ಹೊಯ್ಸಳೇಶ್ವರ ದೇವಾಲಯದ ದಕ್ಷಿಣ ಬಾಗಿಲಿನ ಶಾಸನವು ಭಂಡಾರಿ ಪೊನ್ನಯ್ಯನು ದಾನ ನೀಡಿದ ಬಗೆಗೆ ದಾಖಲು ಮಾಡಿಕೊಂಡಿದ್ದನ್ನು ಉಲ್ಲೇಖಿಸುತ್ತವೆ.[13] ಇಲ್ಲಿ ಭಂಡಾರಿಗಳು ಆದಾಯದ ಒಂದು ಭಾಗವನ್ನು ರಾಜ್ಯದ ಕೋಶಕ್ಕೂ ಮತ್ತು ಇನ್ನೊಂದು ಭಾಗವನ್ನು ಸಿಬ್ಬಂದಿ ವರ್ಗಕ್ಕೆ ನೀಡುತ್ತಿದ್ದರು. ಅದರಂತೆ ಬಿದರಕೆರೆಯ ಶಾಸನವು ಭಂಡಾರಿ ಅದಿಯಣ್ಣನು ದಾನವಾಗಿ ಬಂದ ಭೂಮಿಯನ್ನು ದಾಖಲಿಸಿ ಕೊಂಡಿದ್ದನ್ನು ತಿಳಿಸುತ್ತದೆ.[14]

7.6.3 ಸೇನುಬೋವ

ಸೇನುಬೋವನು ರಾಜ, ರಾಣಿಯರ ಇಲ್ಲವೆ ದಂಡನಾಯಕರ ಕೈಕೆಳಗಿದ್ದು ಅವರ ಸಹಾಯಕರಾಗಿ ಕಾರ್ಯ ನಿರ್ವಹಿಸಬೇಕಾಗಿತ್ತು. ಇವರು ರಾಜ ರಾಣಿಯರ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಇವರಿಗೆ ಸಮಾಜದಲ್ಲಿ ವಿಶೇಷ ಸ್ಥಾನಮಾನವಿತ್ತು. ಹೊಯ್ಸಳೇಶ್ವರ ದೇವಾಲಯದ ಗೋಡೆಯ ಶಾಸನವು ಸೇನುಬೋವ ರಾಮಯ್ಯನು ರಾಣಿ ಕೇತಲದೇವಿ ಪರವಾಗಿ ಹೊಯ್ಸಳೇಶ್ವರ ಮತ್ತು ಪಂಚಿಕೇಶ್ವರ ದೇವರುಗಳಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.[15] ಅದರಂತೆ ವಸ್ತುಸಂಗ್ರಹಾಲಯದ ಶಾಸನವು ಸೇನುಬೋವ ಬಾಚಣ್ಣನ ಬಗ್ಗೆ ಉಲ್ಲೇಖಿಸುತ್ತದೆ.

7.6.4 ಹೆಗ್ಗಡೆಯರು

ಹೆಗ್ಗಡೆ ಎಂಬುದು ಒಂದು ಅಧಿಕಾರ ಸೂಚಕ ಪದವಾಗಿದೆ. ಇವರನ್ನು ಪರ್ಗಡೆ, ಶ್ರೀಕರಣಿಕ ಎಂದು ಸಹ ಕರೆಯಲಾಗಿದೆ. ಹೆಗ್ಗಡೆ ಒಂದು ಪ್ರಾಂತದ ಮುಖ್ಯಾಧಿಕಾರಿಯ ನಂತರದ ಪದವಿ ಪಡೆದವನು ಎಂಬ ಚಂದ್ರಶೇಖರಶಾಸ್ತ್ರಿಗಳ ಅಭಿಪ್ರಾಯವನ್ನು ಒಪ್ಪುವುದು ಕಷ್ಟ.[16] ಶ್ರೀಕರಣ ಎಂಬುದು ಲೆಕ್ಕ ಪತ್ರಗಳನ್ನಿಡುವ ಮುಖ್ಯಾಧಿಕಾರಿಯನ್ನು ಸೂಚಿಸಿದ್ದಲ್ಲಿ ಶ್ರೀಕರಣ ಹೆಗ್ಗಡೆ ಎಂಬುದು ಅಂತಹ ಅಧಿಕಾರಿಗಳ ಮುಖ್ಯಸ್ಥನನ್ನು ಸೂಚಿಸುತ್ತದೆ. ರಾಜ್ಯದ ಮೇರೆಗಳ ಪ್ರದೇಶಗಳಲ್ಲಿರುವ ಹೆಗ್ಗಡೆಗಳು ಶತ್ರು ರಾಜ್ಯದೊಳಗೆ ದಾಳಿ ಇಡುವುದು ಹೆಗ್ಗಡೆಗಳ ಕರ್ತವ್ಯಗಳಲ್ಲಿ ಒಂದಾಗಿತ್ತು ಎಂಬುದು ಸರಿಯಲ್ಲ. ಸುಂಕ ವಿಧಿಸುವುದರಲ್ಲಿ ಮತ್ತು ಅದನ್ನು ಮನ್ನಾ ಮಾಡುವುದರಲ್ಲಿ ಅರಸ ಅಥವಾ ಪ್ರಾಂತ್ಯಾಧಿಕಾರಿಗಳ ಆಜ್ಞೆಯನ್ನು ಈತನು ಪಾಲಿಸಬೇಕಾಗಿತ್ತು ಎನ್ನುವ ಅವರ ಮಾತು ಸರಿಯಲ್ಲವೆನಿಸುತ್ತದೆ. ಒಂದು ಸಾವಿರ ಗ್ರಾಮಗಳ ಒಂದೊಂದು ಪ್ರದೇಶಕ್ಕೂ (ಜಿಲ್ಲೆಗೂ) ಒಬ್ಬೊಬ್ಬ ಶ್ರೀಕರಣ ಅಥವಾ ಶ್ರೀಕರಣ ಹೆಗ್ಗಡೆ ಇರುತ್ತಿದ್ದನೆಂಬ ಅವರ ಹೇಳಿಕೆಗೆ ಅವರೇ ನೀಡಿರುವ ಶಾಸನಾಧಾರಗಳು ಅಂತಹ ಯಾವುದೇ ಸೂಚನೆಯನ್ನು ಕೊಡುವುದಿಲ್ಲ.[17]

ಈ ಆಡಳಿತ ವರ್ಗದ ಪ್ರತಿನಿಧಿಗಳು ದೇವಾಲಯಗಳಿಗೆ ದಾನದತ್ತಿಗಳನ್ನು ಹಾಗೂ ಅದನ್ನು ನಿಭಾಯಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ದೋರಸಮುದ್ರದ ಶಾಸನಗಳು ಪ್ರಮುಖವಾಗಿ ಮಹಾಪ್ರಧಾನರ, ಭಂಡಾರಿಗಳ, ಸೇನುಬೋವರ ಹಾಗೂ ಹೆಗ್ಗಡೆಯವರನ್ನು ಕುರಿತು ಉಲ್ಲೇಖಿಸುತ್ತದೆ. ಈ ಆಡಳಿತ ವರ್ಗವು ಸಮಾಜದ ಉನ್ನತ ಸ್ಥಾನವನ್ನು ಪಡೆದಿದ್ದು ಇತರ ವರ್ಗದವರೊಡನೆ ಸಾಮರಸ್ಯವನ್ನುಹೊಂದುವುದು ಸಹ ಅವಶ್ಯಕವಾಗಿತ್ತು.

7.7 ವೃತ್ತಿಪರ ವರ್ಗಗಳು

ದೋರಸಮುದ್ರ ಪಟ್ಟಣದ ಜನಸಮುದಾಯವನ್ನು ಸ್ಥೂಲವಾಗಿ ಆಡಳಿತ ವರ್ಗ ಮತ್ತು ವೃತ್ತಿಪರ ವರ್ಗಗಳಾಗಿ ವಿಂಗಡಿಸಬಹುದಾಗಿದೆ. ಈಗಾಗಲೇ ತಿಳಿದಿರುವಂತೆ ಆಡಳಿತ ವರ್ಗವು ಮಹಾಪ್ರಧಾನರ, ಭಂಡಾರಿಗಳು, ಸೇನುಭೋವರು, ಹೆಗ್ಗಡೆಯರು ಹಾಗೂ ಇನ್ನಿತರ ಅಧಿಕಾರಿಗಳ–ನ್ನೊಳಗೊಂಡಿತ್ತು. ವೃತ್ತಿಪರ ವರ್ಗಗಳು ವಿವಿಧ ವೃತ್ತಿಗಳನ್ನಾಶ್ರಯಿಸಿದ ರೂವಾರಿಗಳು (ವಿಶ್ವಕರ್ಮಿಗಳು), ವೊಡ್ಡರು, ಮಾಲೆಗಾರರು, ಕೋಲಕಾರರು, ಸ್ಥಾನಿಕರು, ಅರ್ಚಕರು (ದೇವಾಲಯ ಸಿಬ್ಬಂದಿ ಮಾವುತರು, ತೆಲ್ಲಿಗರು, ಸೂಳಾಯಿತರು, ಅವುಜಿಗರು, ಮಣಿಗಾರರು (ಪಾತ್ರದವರು)

ಬಾಣಸದವರು (ಅಡಿಗೆ ಮಾಡುವವರು) ಕಬ್ಬಿಗರು, (ಬೇಟೆಯಾಡುವವರು (ಅಂಗರಕ್ಷಕರು), ಗರುಡರು ಮತ್ತು ಚಿಪ್ಪಿಗರು ಮೊದಲಾದ ಸಾಮಾನ್ಯ ಜನರನ್ನು ಒಳಗೊಂಡಿದ್ದವು.

ಹೊಯ್ಸಳರ ಕಾಲಕ್ಕೆ ಸೇರಿದ ಅರಕಲಗೂಡಿನ ಶಾಸನವೊಂದರಲ್ಲಿ ಶೆಟ್ಟಿಯರು, ದೇವಾಲಯದ ಅರ್ಚಕರು ಮತ್ತು ಹದಿನೆಂಟು ಜಾತಿಯವರೆಲ್ಲರೂ ಸೇರಿ ಮಾರಗೌಡ ಎಂಬುವನನ್ನು ನಾಡ ಹೆಗ್ಗಡೆಯನ್ನಾಗಿ ನೇಮಕ ಮಾಡಿದ ಪ್ರಸ್ತಾಪವು ಕಂಡು ಬರುತ್ತದೆ. ಇದರಿಂದ ಸಮಾಜದಲ್ಲಿ ಅನೇಕ ಜಾತಿಗಳು, ಉಪಪಂಗಡಗಳು ಇದ್ದುದ್ದು ತಿಳಿದು ಬರುತ್ತದೆ. ಅದರಂತೆ ಹದಿನೆಂಟು ಜಾತಿಗಳೆಂದರೆ ವೃತ್ತಿಪರ ಸಮುದಾಯಗಳೆಂದು ಗುರ್ತಿಸಲಾಗಿದೆ.

ಅ. ರೂವಾರಿಗಳು

ಒಂದು ವಸ್ತುವಿಗೆ ರೂಪವನ್ನು ನೀಡುವವನೇ ರೂವಾರಿ ಅಥವಾ ರೂಪಕಾರ. ಇವರನ್ನು ಪಾಂಚಾಲರೆಂದು ಸಹ ಕರೆಯುವ ರೂಢಿಯಿತ್ತು. ಹೊಯ್ಸಳೇಶ್ವರ ದೇವಾಲಯದ ತೋರಣ ದಲ್ಲಿರುವ ಶಾಸನದಲ್ಲಿ ಕೇದಾರೋಜ, ಕಾಳಿದಾಸ ಶಿಲ್ಪಿಗಳನ್ನು ಮತ್ತು ಮಂಟಪದ ಶಾಸನವು ದಾವೋಜಿ, ಕರಿಕ, ಮಾದಸಿ, ಕಂಕ ಎಂಬ ಶಿಲ್ಪಿಗಲನ್ನು ಮತ್ತು ದೇವಾಲಯದ ಸುತ್ತಲೂ ಪಟ್ಟಿಗಳ ಮೇಲೆ ಸುಮಾರು ಎಪ್ಪತ್ತರಿಂದ ಎಂಭತ್ತು ಹೆಸರುಗಳು ಕಂಡುಬಂದಿದ್ದು ಅವು ದಾಸೋಜ, ಕೇರಣ, ಓಡಿಮ, ರೇವಜ್ಜ, ಓಬಜ ಎಂಬುದಾಗಿ ಉಲ್ಲೇಖಿತವಾಗಿದೆ.[19]

ಸಾಮಾಜಿಕ ಸ್ಥಾನಮಾನದಲ್ಲಿ ಬಡಿಗಗಳು, ಅಕ್ಕಸಾಲಿಗರು, ಕಮ್ಮಾರರು, ಕಂಚುಗಾರರು ಅತ್ಯಂತ ಬೇಡಿಕೆ ಉಳ್ಳವರಾಗಿದ್ದರು. ರೂವಾರಿಗಳಲ್ಲಿ ಶಿಲ್ಪಿಗಳು ಮಹತ್ವದ ಸ್ಥಾನವನ್ನು ಹೊಂದಿದ್ದರು. ದೇವಾಲಯಗಳ ನಿರ್ಮಾಣ ಮಾಡುವುದರ ಜೊತೆಗೆ ಶಾಸನಗಳ ರಚನೆ, ವೀರರ ಸ್ಮಾರಕಗಳ ರಚನೆ, ಜೈನರ ನಿಧಿಗಳ ರಚನೆ ಮಾಡುವುದು ಇದರ ದಿನನಿತ್ಯದ ಕೆಲಸವಾಗಿತ್ತು.

ಶಿಲ್ಪಿಗಳು ಕೇವಲ ಉಳಿ ಹಾಗೂ ಅಳತೆ ಪಟ್ಟಿಗಳನ್ನು ಹಿಡಿದಿದ್ದಲ್ಲದೇ ಅದೇ ವೇಳೆಗೆ ಖಡ್ಗ ಹಾಗೂ ಬಿಲ್ಲುಗಳನ್ನು ಹಿಡಿಯುತ್ತಿದ್ದರೆಂದು ಉಲ್ಲೇಖಗಳಿವೆ. ಒಂದು ವರ್ಗವು ರಾಜ್ಯದ ಆಡಳಿತ ಹಾಗೂ ಸೈನಿಕ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿತ್ತು. ರಾಜಧಾನಿ ಪಟ್ಟಣದ ಹತ್ತಿರದ ನೆವೋಜ, ಮರೋಜರ ವೀರಗಲ್ಲು ಶಾಸನಗಳು ಉತ್ತಮ ಉದಾಹರಣೆಗಳಾಗಿವೆ.[20]

ಬಿ.ವೊಡ್ಡರು

ವೊಡ್ಡರಿಗ ಹಾಗೂ ಪಾಂಚಾಲರಲ್ಲಿ ಬರುವ ಕಲ್ಲುಕುಟಿಗರ ಕಾರ್ಯಚಟುವಟಿಕೆಗಳಲ್ಲಿ ಭಿನ್ನತೆ ಇದೆ. ಪಾಂಚಾಲರು ಸ್ಮಾರಕ, ಮೂರ್ತಿಗಳನ್ನು ರಚಿಸಿದರೆ, ವೊಡ್ಡರು ಮನೆಗಳಿಗೆ ಬೇಕಾದ ಬೀಸುವ ಕಲ್ಲು, ಒಳ್ಳುಗಳ ರಚನೆ ಮಾಡುವರು. ಹೊಯ್ಸಳೇಶ್ವರ ದೇವಾಲಯದ ಒಳಗೋಡೆಯ ಶಾಸನ ವೊಡ್ಡರ ಮಾದಯ್ಯನಾಯನ ಹೆಸರನ್ನು, ಅದೇ ಸ್ಥಳದ ಮತ್ತೊಂದು ಶಾಸನವು ವೃತ್ತಿಯ ಆದಾಯವನ್ನು ದೇವಸ್ಥಾನಕ್ಕೆ ಗೌರಯ್ಯನು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ.[21]

ಸಿ.ಮಾಲೆಗಾರರು

ಇವರುಗಳು ದೇವರ ಪೂಜೆಗಾಗಿ, ಮೂರ್ತಿಗಳಿಗೆ ತಕ್ಕಂತೆ ಹೂಗಳನ್ನು ಪೋಣಿಸುವುದು, ದೇವಾಲಯಗಳಿಗೆ ಸಭೆ ಸಮಾರಂಭಗಳಿಗಾಗಿ ಮಾಲೆಗಳನ್ನು ಕಟ್ಟುವುದು ಇವರ ದಿನನಿತ್ಯದ ಕಾರ್ಯವಾಗಿತ್ತು. ಕೇದಾರೇಶ್ವರ ದೇವಾಲಯದ ಶಾಸನವು ಮಾಲೆ ಕಟ್ಟುವುದರ ಓಣಿಯ ಬೀದಿ ಮತ್ತು ಮಾಲೆಗಾರ ಬಿಟ್ಟಯ್ಯ, ಭೀಮಯ್ಯರ ಹೆಸರುಗಳನ್ನು ತಿಳಿಸುತ್ತದೆ.[22] ಈ ಅಂಶದಿಂದ ದೋರಸಮುದ್ರದಲ್ಲಿ ಮಾಲೆಗಾರರ ಒಂದು ಬೃಹತ್ತ ಸಮುದಾಯವಿತ್ತೆಂದು ತಿಳಿದು ಬರುತ್ತದೆ.

ಡಿ.ಕೋಲಕಾರರು

ದೇವಾಲಯ ಇಲ್ಲವೆ ಅರಮನೆಗಳನ್ನು ಕಾಯುವುದು, ವೀಕ್ಷಿಸುವುದು ಇವರ ವೃತ್ತಿಯಾಗಿತ್ತು. ಹೊಯ್ಸಳೇಶ್ವರ ದೇವಾಲಯದ ಒಳಗೋಡೆಯ ಶಾಸನವು ಕೋಲುಕಾರ ದಾಸಯ್ಯ, ತಮ್ಮನಾಗಿದ್ದ ಅಯ್ಯಪ್ಪದೇವ ಇವರು ಸಾಲಕ್ಕೆ ಪ್ರತಿಯಾಗಿ ಬಡ್ಡಿಯನ್ನು ನೀಡಬೇಕಾದ ಮಾಹಿತಿಯನ್ನು ತಿಳಿಸುತ್ತದೆ.[23]

ಇ.ಸ್ಥಾನಿಕರು

ದೇವಾಲಯದ ಭೂಮಿ ಹಾಗೂ ಇನ್ನಿತರ ಆಸ್ತಿಪಾಸ್ತಿಗಳನ್ನು ನಿರ್ವಹಣೆ ಮಾಡುವವರೇ ಸ್ಥಾನಿಕರು. ರಂಗನಾಥ ದೇವಾಲಯದ ತೊರೆಯ ಶಾಸನವು ದೋರಸಮುದ್ರದ ಒಂದು ನೂರ ಇಪ್ಪತ್ತು ಸ್ಥಾನಿಕರ ಸಂಖ್ಯೆಯನ್ನು ತಿಳಿಸುತ್ತದೆ. ಅವರುಗಳಲ್ಲಿ ಭರತಜಿ, ಮಾದಜಿ ಹಾಗೂ ಶಿವಾದೇವ ಎಂಬ ಸ್ಥಾನಿಕರ ಹೆಸರುಗಳು ಮಾತ್ರ ಉಲ್ಲೇಖ ಕಂಡು ಬರುತ್ತದೆ.[24]

7.8 ದೇವಾಲಯದ ಸಿಬ್ಬಂದಿ

ದೋರಸಮುದ್ರವು ಅನೇಕ ದೇವಾಲಯಗಳ ತಾಣವಾಗಿದ್ದು, ಪ್ರತಿಯೊಂದು ದೇವಾಲಯಗಳ ಮೂರ್ತಿಪೂಜೆ, ಮಂತ್ರಪಠಣ ಮತ್ತಿತರ ಕಾರ್ಯಗಳ ನಿರ್ವಹಣೆಗೆ ಸಿಬ್ಬಂದಿ ವರ್ಗ ಅವಶ್ಯಕವಾಗಿತ್ತು. ಇದು ದೇವಾಲಯದ ದಿನನಿತ್ಯದ ಚಟುವಟಿಕೆಗಳನ್ನು ಪೂರೈಸುತ್ತಿತ್ತು.

ಹೊಯ್ಸಳೇಶ್ವರ ದೇವಾಲಯದ ಒಳಗೋಡೆಯ ಶಾಸನವು ದೇವಾಲಯದ ಆದಾಯವನ್ನು ಸಿಬ್ಬಂದಿಗಳಾದ ಆಚಾರ್ಯ ರಾಮಣ್ಣ, ತರ್ಕಶಾಸ್ತ್ರ ಪಂಡಿತ ಮಧುಸೂಧನ ಭಟ್ಟ, ತಾಂಬುಲಿಗ ನಾರಾಯಣದೇವ, ಪೂಜಾರಿ ಪೆರುಮಾಳದೇವ ಪುರಾಣಪಠಣಗಾರ ಶ್ರೀರಂಗಭಟ್ಟ, ಪರಿಚಾರಕ ಸೋಮಣ್ಣ, ಮೂರ್ತಿ ಅಲಂಕಾರಿಕ ಅಪ್ಪಣ್ಣ, ಅಡಿಗೆಕಾರ ಶ್ರೀರಾಮದೇವ, ಅಂಗರಕ್ಷಕ ಜೋಗಯ್ಯ, ಬಂಡಿಕಾರ ಮರುಭೋದ, ದೀವಟಿಗ ದೇವಣ್ಣ ಎಂಬುದಾಗಿ ಪ್ರತಿಯೊಬ್ಬ ಸಿಬ್ಬಂದಿ ಹೆಸರುಗಳನ್ನು ಮತ್ತು ಕೆಲಸ ಕಾರ್ಯಗಳನ್ನು ತಿಳಿಸುತ್ತದೆ.[25] ಈ ದೇವಾಲಯವು ಸಿಬ್ಬಂದಿ ವರ್ಗವನ್ನು ಒಳಗೊಂಡಿದಂತೆ ಇನ್ನಿತರ ದೇವಾಲಯಗಳು ಸಹ ತಮ್ಮದೇ ಸಿಬ್ಬಂದಿ ವರ್ಗವನ್ನು ಹೊಂದಿದ್ದವೆಂದು ತಿಳಿದು ಬರುತ್ತದೆ.

ಮಾವುತರು

ಆನೆ ಸವಾರಿ, ಅವುಗಳ ಉಸ್ತುವಾರಿ ಹಾಗೂ ನಿಯಂತ್ರಣದ ಹೊಣೆ ಹೊತ್ತವರೆಂದರೆ ಮಾವುತರು. ಇವುಗಳನ್ನು ನಡೆಸುತ್ತಿದ್ದ ಮಾವುತ ಒಂದು ವೃತ್ತಿಪರವಾಗಿಯೇ ಪರಿಣಮಿಸಿಬಿಟ್ಟಿದ್ದರು. ಸಂಗ್ರಹಾಲಯದ ವೀರಗಲ್ಲು ಶಾಸನವು ಮಾವುತ ಮುಕುಂದ್ಯೆಯ್ಯನ ಕುರಿತಾಗಿ ತಿಳಿಸುತ್ತದೆ.

ಬೆಣ್ಣೆಗುಡ್ಡದ ಮತ್ತೊಂದು ಶಾಸನವು ಮಾವುತ ರಾಮಯ್ಯನು ಅಜಿಪರಟ್ಟೆ ಎಂಬ ಆನೆಯು ಮದ ಬಂದು ಬೀದಿಯಲ್ಲಿ ಸಿಕ್ಕ ಜನರನ್ನು ತುಳಿದುಕೊಂಡು ಓಡತೊಡಗಿದ ಸಮಯದಲ್ಲಿ ಈತನು ತನ್ನ ಪ್ರಾಣವನ್ನು ನೀಡಿ ಅದನ್ನು ನಿಯಂತ್ರಣಕ್ಕೆ ತಂದನೆಂದು ಹೇಳುತ್ತದೆ.[26] ಈ ರೀತಿಯಾಗಿ ಮಾವುತ ವೃತ್ತಿ ಸಮುದಾಯವೊಂದು ರಾಜಧಾನಿಯಲ್ಲಿ ಇತ್ತೆಂದು ತಿಳಿದು ಬರುತ್ತದೆ.

ಬಿ. ಸುಳಾಯಿತರು

ಈ ಪದಕ್ಕೆ ಸುದ್ದಿಯನ್ನು ಒಯ್ಯುವವ, ಮುಟ್ಟಿಸುವವ, ಇಲ್ಲವೆ ಸುದ್ದ ಮುಟ್ಟಿಸುವ ವೃತ್ತಿಯನ್ನು ಕೈಗೊಂಡವನು ಎಂಬರ್ಥಗಳು ಇವೆ.[27] ಹೊಯ್ಸಳೇಶ್ವರ ದೇವಾಲಯದ ಬಾಗಿಲು ಶಾಸನವು ಬೆನಕರ ದೇವರ ಸುಳಾಯಿತನಾಗಿದ್ದ ದೇವಪ್ಪನನ್ನು ಮತ್ತು ಹೊಯ್ಸಳೇಶ್ವರ ದೇವರ ಸುದ್ದಿ ಪ್ರಸಾರಕ ಮಾದೇವನನ್ನು ಕುರಿತಾಗಿ ತಿಳಿಸುತ್ತದೆ.[28] ಸುಳಾಯಿತರು ಆಯಾ ದೇವಾಲಯಗಳ ಕಾಲದಿಂದ ಕಾಲಕ್ಕೆ ಜರುಗುತ್ತಿದ್ದ ಆಚರಣೆಯ ಕಾರ್ಯಕ್ರಮಗಳ ವಿವರಗಳನ್ನು ತಿಳಿಯಪಡಿಸುವುದು ಇವರ ಕಾರ್ಯವಾಗಿದ್ದಂತೆ ತೋರುತ್ತದೆ.

ಸಿ. ತೆಲ್ಲಗರು

ಗಾಣದಿಂದ ಎಣ್ಣೆಯನ್ನು ಉತ್ಪಾದಿಸುವುದು ಜೊತೆಗೆ ಅದರ ವ್ಯಾಪಾರವನ್ನು ಮಾಡುವುದು ಇವರ ವೃತ್ತಿಯಾಗಿತ್ತು. ಭೂತೇಶ್ವರ ಗುಡಿಯ ಶಾಸನವು, ಗೌಂಡ ಎಂಬ ಗಾಣಿಗರ ಕುಟುಂಬದ, ದೇವಗೌಂಡ, ಬಮ್ಮಗೌಂಡ ಎಂಬುವವರ ಜೊತೆಗೆ ಸುಮಾರು ಒಂದು ಸಾವಿರ ಕುಟುಂಬಗಳು ಒಟ್ಟುಗೂಡಿ ಪ್ರತಿಯೊಬ್ಬರ ಗಾಣದಿಂದ ಒಂದೊಂದು ಸೋಲಿಗೆ ಎಣ್ಣೆಯನ್ನು ದಾನ ಮಾಡಿದರೆಂದು ತಿಳಿಸುತ್ತದೆ.[29] ಪಾರ್ಶ್ವನಾಥ ಬಸದಿಯ ಶಾಸನವು ಗಾಣಿಗರ ಓಣಿಯನ್ನು ಕುರಿತಾಗಿ ಹೇಳುತ್ತದೆ. ಈ ಎರಡು ಶಾಸನಗಳಿಂದ ಗಾಣಿಗರು ಗಣನೀಯ ಸಂಖ್ಯೆಯಲ್ಲಿ ವೃತ್ತಿಪರ ವರ್ಗದವರಾಗಿದ್ದರೆಂದು ತೋರುತ್ತದೆ.

ಡಿ. ತಾಂಬೂಲಗರು

ವೀಳ್ಯದೆಲೆಗಳನ್ನು ಬೆಳೆಯುವುದು ಮತ್ತು ಮಾರಾಟ ಮಾಡುವವರನ್ನು ತಾಂಬೂಲಿಗರೆನ್ನುತ್ತಿದ್ದರು. ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಇವು ಪ್ರಮುಖ ಪಾತ್ರ ವಹಿಸಿದೆ. ಪಾರ್ಶ್ವನಾಥ ಬಸದಿಯ ಶಾಸನವು ಬನವಾಸಿ ಹಾಗೂ ದೋರಸಮುದ್ರ ನಗರಗಳ ತಾಂಬೂಲಿಗರನ್ನು ಕುರಿತಾಗಿ ಹೇಳುತ್ತವೆ. ಮುಂದೆ ಇದು ಪಾರ್ಶ್ವನಾಥ ದೇವರ ಆರಾಧನೆಗಾಗಿ ಒಂದೊಂದು ಬಂಡಿಗಳಿಂದ ಒಂದು ನೂರು ವೀಳ್ಯದೆಲೆಗಳನ್ನು ದಾನ ಮಾಡಿದರೆಂದು ತಿಳಿಸುತ್ತದೆ.[30]

ಇ. ಆವುಜಿಗರು

ಆವುಜಿಗರನ್ನು ಒಂದು ತರಹದ ಸಂಗೀತದ ಸಾಧನವನ್ನು ನುಡಿಸುವವ ಇಲ್ಲವೆ ಬಾರಿಸುವವ ಎಂದು ಕರೆಯಲಾಗಿದೆ. ಇವರು ಹಬ್ಬ ಉತ್ಸವಗಳಲ್ಲಿ, ಮದುವೆ ಸಮಾರಂಭಗಳಲ್ಲಿ

ಸಂಗೀತವನ್ನು ನುಡಿಸುವುದು ಸಾಂಪ್ರದಾಯಿಕವಾಗಿದೆ. ಅದರಂತೆ ಆವುಜಿಕ ವೃತ್ತಿ ಸಮುದಾಯವು ದೋರಸಮುದ್ರದಲ್ಲಿ ವಾಸವಾಗಿತ್ತೆಂದು ಹೇಳಬಹುದು. ದೋರಸಮುದ್ರದ ಹೊಯ್ಸಳೇಶ್ವರ ದೇವಾಲಯದ ಒಳಗೋಡೆಯ ಶಾಸನ ಆವುಜಿಗ ಬೊಮ್ಮಯ್ಯ ಅವನ ಮಗ ಮಾಯಣ್ಣರ ಮತ್ತು ಹೊಯ್ಸಳೇಶ್ವರ ದೇವಾಲಯದ ಶಾಸನವು ಆವುಜಿಗ ಮಯಿಲಯಿನ ಮತ್ತು ಮಗಳು ಮಲ್ಲವ್ವೆಯರ ಕುರಿತಾಗಿ ತಿಳಿಸುತ್ತದೆ.[31]

ಎಫ್.ಮಣಿಗಾರರು

ಮಣಿಗಾರರು ಎಂಬ ಪದವು ನಮನ, ನೃತ್ಯ, ಕುಣಿ ಎಂಬರ್ಥಗಳನ್ನು ನೀಡುತ್ತದೆ. ಇವರು ನೃತ್ಯವನ್ನು ತಮ್ಮ ವೃತ್ತಿಯನ್ನಾಗಿಸಿಕೊಂಡವರು, ರಾಜನ ಅರಮನೆಯಲ್ಲಾಗಲಿ, ದೇವಾಲಯ ಗಳಲ್ಲಾಗಲಿ ಮತ್ತು ಜಾತ್ರೆ-ಉತ್ಸವಗಳಲ್ಲಿ ಆಗಾಗ ನೃತ್ಯ-ಸಂಗೀತಗಳು ಏರ್ಪಾಡಾಗುತ್ತಿದ್ದವು. ಹೊಯ್ಸಳೇಶ್ವರ ದೇವಾಲಯದ ಗೋಡೆಯ ಶಾಸನಗಳು ದೇವಾಲಯದ ನೃತ್ಯಗಾರ್ತಿಯಾಗಿದ್ದ ಮಾದವ್ವೆ, ಮಲ್ಲವ್ವೆ, ವಾಸವ್ವೆ, ಚಂದ್ರಾವ್ವೆಯರನ್ನು ಕುರಿತಾಗಿ ಉಲ್ಲೇಖಿಸುತ್ತದೆ.[32]

ಜಿ. ಬಾಣಸಿಗರು

ಬಾಣಸಿಗ ಎಂಬ ಪದಕ್ಕೆ ಅಡಿಗೆ ಮಾಡುವವ, ಪಾಕ ತಯಾರಿಸುವವ, ಊಟ ಬಡಿಸುವವ ಎಂಬರ್ಥಗಳು ಕಂಡು ಬರುತ್ತವೆ.33 ಇವರನ್ನು ಅರಮನೆಯಲ್ಲಾಗಲಿ, ದೇವಾಲಯಗಳಲ್ಲಾಗಲಿ, ಸಭೆ-ಸಮಾರಂಭಗಳಲ್ಲಾಗಲಿ ಅಡಿಗೆಯನ್ನು ಮಾಡಲು ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಹೊಯ್ಸಳೇಶ್ವರ ದೇವಾಲಯದ ಶಾಸನವು ದೇವಾಲಯದ ಸಿಬ್ಬಂದಿಯನ್ನು ಹೆಸರಿಸುತ್ತಾ ಬಾಣಸಿಗ ರಾಮದೇವನ ಕುರಿತಾಗಿ ಹೇಳುತ್ತದೆ. ದೇವರಿಗಾಗಿ ಪ್ರಸಾದವನ್ನು, ಭಕ್ತರಿಗಾಗಿ ಭೋಜನವನ್ನು ತಯಾರಿಸುವುದು ಇವರ ದಿನನಿತ್ಯದ ಕೆಲಸವಾಗಿತ್ತು. ವಸ್ತು ಸಂಗ್ರಹಾಲಯದ ವೀರಗಲ್ಲು ಶಾಸನವು ಐದು ಮಂದಿ ಬಾಣಸಿಗರನ್ನು ತಿಳಿಸುತ್ತದೆ. ಅರಮನೆಯಲ್ಲಿ ಬಾಣಸಿಗರಾಗಿದ್ದ ಲಖ್ಖಯ್ಯ ಮತ್ತು ಮಗ ದಾಸಯ್ಯರು ಕಂದೂರ ಯುದ್ಧದಲ್ಲಿ ಹೋರಾಡಿ ಮರಣ ಹೊಂದಿದರೆಂದು, ಇವರ ನೆನಪಿಗಾಗಿ ತಮ್ಮಂದಿರು ವೀರಗಲ್ಲನ್ನು ನೆಟ್ಟರೆಂದು ಉಲ್ಲೇಖಿಸುತ್ತದೆ.[34] ಬಾಣಸಿಗರು ಅಡಿಗೆ ಮಾಡುವ ವ್ಯಕ್ತಿಯ ಜೊತೆಗೆ, ಕೆಲವು ಸಂದರ್ಭಗಳಲ್ಲಿ ಯುದ್ಧದಲ್ಲಿ ಸಹ ಭಾಗವಹಿಸುತ್ತಿದ್ದರೆಂದು ತಿಳಿದು ಬರುತ್ತದೆ.

ಹೆಚ್.ಕಬ್ಬಿಲರು

ಬೇಡ, ಬಿಲ್ಲು, ಬೇಟೆಗಾರ, ಬೇಟೆಪಡೆ ಎಂಬರ್ಥಗಳನ್ನು ಸೂಚಿಸಲಾಗಿದೆ. ಬೇಟೆ ಯಾಡುವುದನ್ನೇ ಮೂಲ ವೃತ್ತಿಯನ್ನಾಗಿಸಿಕೊಂಡವರು ಕಬ್ಬಿಲರು. ಕಬ್ಬಿಲರು ದೈಹಿಕ ಬಲ ಹೊಂದಿದ್ದು ಸೈನಿಕ ಪಡೆಯಲ್ಲಿ ಮಹತ್ವದ ಸ್ಥಾನವನ್ನು ಹೊಂದಿದ್ದರು. ವಸ್ತು ಸಂಗ್ರಹಾಲಯದ ವೀರಗಲ್ಲು ಶಾಸನವು ಕಬ್ಬಿಲ ಜೋಗಯ್ಯ ನಾಯಕ ಮತ್ತು ಅವನ ಹೆಂಡತಿ ಸೌಭಾಗ್ಯಲಕ್ಷ್ಮಿ ಇಬ್ಬರು ಯುದ್ಧದಲ್ಲಿ ಪ್ರಾಣತ್ಯಾಗ ಮಾಡಿದರೆಂದು ಅವರ ನೆನಪಿಗಾಗಿ ಅವನ ಅಳಿಯನಾದ ಲಖ್ಖಯ್ಯನು ವೀರಗಲ್ಲನ್ನು ಕೆತ್ತಿಸಿದನೆಂದು ತಿಳಿಸುತ್ತದೆ.[35] ಕಬ್ಬಿಲರು ಬೇಟೆಯಾಡುವುದರ ಜೊತೆಗೆ ಯುದ್ಧದಲ್ಲಿ ಸೈನಿಕರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದರು.

ಐ. ಅಂಗರಿಕರು

ಅಂಗರಕ್ಷಕರನ್ನು 'ಅಂಗರಿಕ'ನೆಂದು ಕರೆಯಲಾಗಿದೆ. ಇವರುಗಳನ್ನು ಅಧಿಕಾರಿಗಳ ಮತ್ತು ದೇವಾಲಯಗಳ ರಕ್ಷಣೆಗಾಗಿ ನೇಮಕ ಮಾಡಲಾಗುತ್ತಿತ್ತು. ವಸ್ತುಸಂಗ್ರಹಾಲಯದ ವೀರಗಲ್ಲು ಶಾಸನವು ಹೊಯ್ಸಳೇಶ್ವರ ದೇವಾಲಯದ ಕಾವಲುಗಾರರಾಗಿ ಕೇತುನಾಯಕ ಮತ್ತು ಮಾದಯ್ಯ ನಾಯಕರನ್ನು ನೇಮಿಸಲಾಗಿದ್ದು, ದರೋಡೆಕೋರರು ಆಕ್ರಮಣ ಮಾಡಿದಾಗ ಅವರ ಜೊತೆ ಹೋರಾಡಿ ಮರಣ ಹೊಂದಿದರೆಂದು ತಿಳಿಸುತ್ತದೆ.[36] ಕೆರೆಯ ಹತ್ತಿರವಿರುವ ಶಾಸನವು ಸಹ ಅಂಗರಿಕ ಅಯ್ಯಪ್ಪ ಮತ್ತು ರಾಮಯ್ಯರನ್ನು ಕುರಿತಾಗಿ ಹೇಳುತ್ತದೆ.

ಜೆ. ಗರುಡರು

ಗರುಡ ಎಂಬುದು ಅಂಗರಕ್ಷಕರು ಎಂಬುದಕ್ಕೆ ಸಮನಾರ್ಥವಾಗಿದೆಯೆಂದು ಹೇಳಲಾಗುತ್ತದೆ. ಅದರೆ ಗರುಡನ ಮುಖ್ಯ ಲಕ್ಷಣವೇನೆಂದರೆ ಈತನು ಕೇವಲ ಅರಸನಿಗೆ ಮಾತ್ರ ಅಂಗರಕ್ಷಕನಾಗಿದ್ದು, ಅರಸನು ಯುದ್ಧದಲ್ಲಿ ಮರಣ ಹೊಂದಿದ್ದಲ್ಲಿ ಈತನು ಅವನ ಜೊತೆಯಲ್ಲಿಯೇ ಪ್ರಾಣತ್ಯಾಗ ಮಾಡಬೇಕಾಗಿತ್ತು. ಹೊಯ್ಸಳೇಶ್ವರ ದೇವಾಲಯದ ಕಂಬದ ಶಾಸನವು ಒಂದನೆಯ ನರಸಿಂಹನು ತನ್ನ ಇಚ್ಛೆಯಂತೆ ರಾವಳ ಬೋವನನ್ನು ತನ್ನ ಗರುಡನನ್ನಾಗಿ ನೇಮಕ ಮಾಡಿಕೊಂಡಿದ್ದನೆಂದು ಮತ್ತು ಪಂಡಿತನ ಹಳ್ಳಿಯ ಚೌಡೇಶ್ವರಿ ದೇವಾಲಯದ ವೀರಗಲ್ಲು ಶಾಸನವು ಗರುಡ ಬೋರೆಮಯ್ಯನನ್ನು ಅರಸ ವಿಷ್ಣುವರ್ಧನನ ಖಡ್ಗವಾಗಿದ್ದನೆಂದು ತಿಳಿಸುತ್ತವೆ.[37]

ಈ ವೃತ್ತಿಯನ್ನು ಅನುಸರಿಸುತ್ತಿದ್ದವರ ಸಂಖ್ಯೆ ಕಡಿಮೆ. ತಂದೆಯ ನಂತರ ಮಗನಿಗೆ ಸಾಗಿ ಬಂದರೂ ಆಯ್ಕೆಯು ಅರಸರ ಇಚ್ಛೆಯನ್ನವಲಂಬಿಸಿತ್ತು.

ಕೆ.ಚಿಪ್ಪಿಗರು

ಉಡುಗೆ ತೊಡುಗೆಗಳನ್ನು ಸಿದ್ಧಪಡಿಸುವವ ಇಲ್ಲವೆ ಹೊಲಿಯುವರನ್ನು ಚಿಪ್ಪಿಗ ಇಲ್ಲವೆ ಸಿಂಪಿಗ ಎಂದು ಹೇಳಬಹುದು. ಬೆಣ್ಣೆಗುಡ್ಡದ ಶಾಸನವು ಚಿಪ್ಪಿಗರ ಓಣಿಯನ್ನು ಕುರಿತಾಗಿ ಹೇಳುತ್ತದೆ. ಕೆರೆಯ ದಂಡೆಯ ಮೇಲಿನ ಶಾಸನವು ಚಿಪ್ಪಿಗರ ಸಂಘಟನೆಯಾದ ಚಿಪ್ಪಿಗ ಗೊತ್ತಳಿಯ ಬಗೆಗೆ ಮತ್ತು ಈ ಸಂಘಟನೆಯು ಬಂದ ಆದಾಯವನ್ನು ಕುಸುಮೇಶ್ವರ ದೇವರಿಗೆ ದಾನ ಮಾಡಿದರೆಂದು ಈ ಶಾಸನದಿಂದ ತಿಳಿದು ಬರುತ್ತದೆ.[38]

ಸಾಮಾಜಿಕ ಸಂರಚನೆಯ ಕುರಿತಾದ ಈ ಅಧ್ಯಾಯದಲ್ಲಿ ಸಾಮಾಜಿಕ ಇನ್ನಿತರ ಅಂಶಗಳಾದ ಕುಟುಂಬ ವ್ಯವಸ್ಥೆ, ವಿವಾಹ, ಸ್ತ್ರೀ ಸ್ಥಾನಮಾನ, ನಂಬಿಕೆ ಸಂಪ್ರದಾಯಗಳು, ಆಹಾರ ಪಾನೀಯಗಳು ಮತ್ತು ಸಾರ್ವಜನಿಕ ಚಟುವಟಿಕೆಗಳನ್ನು ಅಭ್ಯಸಿಸುವುದು ಅವಶ್ಯಕವಾದರೂ ದೋರಸಮುದ್ರದ ಶಾಸನಗಳಿಂದ ನೇರವಾದ ಉಲ್ಲೇಖಗಳು ಹೆಚ್ಚಾಗಿ ಲಭ್ಯವಾಗಿಲ್ಲ. ಪಕ್ಕದ ನೆಲೆಗಳಲ್ಲಿ ದೊರೆತಿರುವ ಶಾಸನಗಳ ವಿಷಯವನ್ನು ತಿಳಿಯುವುದರ ಜೊತೆಗೆ ನಿರ್ಮಿಸಿದ ದೇವಾಲಯಗಳ ಶಿಲ್ಪಕಲೆಗಳಿಂದ ದೊರೆಯುವ ಮಾಹಿತಿಗಳನ್ನು ಬಳಸಿಕೊಂಡು ಚಿತ್ರಿಸಲಾಗಿದೆ.

ರಾಜಧಾನಿ ದೋರಸಮುದ್ರದಲ್ಲಿ ಕಂಡುಬರುವ ಪ್ರತಿಯೊಂದು ಕುಟುಂಬದ ಹಿರಿಯ ವ್ಯಕ್ತಿಯೇ ಅದರ ಯಜಮಾನ. ಕುಟುಂಬದ ಗೊತ್ತುಗುರಿಗಳು ಆತನ ಮೇಲೆ ಅವಲಂಬಿತ ವಾಗಿದ್ದವು. ಕುಟುಂಬದ ಜೀವನವು ಸಾಮಾಜಿಕ ಆಗುಹೋಗುಗಳು, ಧಾರ್ಮಿಕ ತತ್ವ ಹಾಗೂ ನಂಬಿಕೆಗಳ ಮೇಲೆ ನಿಂತಿರುತ್ತಿತ್ತು. ಕುಟುಂಬ ಜೀವನದ ಭದ್ರತೆಗೆ ತಂದೆ ತಾಯಿ ಮಕ್ಕಳು ಹಾಗೂ ಸಂಬಂಧಿಕರ ನಡುವಿನ ಪ್ರೀತಿ ವಾತ್ಸಲ್ಯಗಳು ಕಾರಣವಾಗಿದ್ದವು. ದಾನ-ಧರ್ಮಗಳಲ್ಲಿ, ವೀರರ ಮಾತಾಪಿತೃಗಳ ಸ್ಮರಣೆಗಾಗಿ, ನಿಶಿಧಿಗಳನ್ನು, ಶಾಸನಗಳನ್ನು ನಿರ್ಮಾಣ ಮಾಡುವಲ್ಲಿ ಆಸಕ್ತ ರಾಗಿದ್ದರು.

ವಿವಾಹಗಳ ಬಗೆಗೆ ಹೇಳುವಾಗ ಜನರ ಬಳಕೆಯಲ್ಲಿದ್ದಿರಬಹುದಾದ ವಿವಿಧ ರೀತಿಯ ವಿವಾಹಗಳ ಆಚರಣೆಯ ಹಾಗೂ ಪದ್ಧತಿಯ ಬಗೆಗಾಗಲಿ ಸಂಬಂಧಿಸಿದ ವಿವರಗಳು ಹೆಚ್ಚಾಗಿ ದೊರೆಯುವುದಿಲ್ಲ. ಆದರೂ ಇತರ ಸಮಾಜಗಳಲ್ಲಿ ಹೆಚ್ಚಾಗಿ ಕಂಡುಬರತಕ್ಕ ವೈವಾಹಿಕ ಜನಬಳಕೆ ಯಲ್ಲಿತ್ತು ಎಂದು ಅಭಿಪ್ರಾಯಪಡಲಾಗಿದೆ. ಅರಸರು ಮತ್ತು ಶ್ರೀಮಂತ ವರ್ಗದವರಲ್ಲಂತೂ ಹಲವು ಪತ್ನಿಯರನ್ನು ಹೊಂದಿದ್ದು ಉಲ್ಲೇಖಗಳು ಕಂಡುಬರುತ್ತವೆ.[39]

ಸಮಾಜದಲ್ಲಿ ಸ್ತ್ರೀಯರಿಗೆ ವಿಶೇಷವಾದ ಸ್ಥಾನಮಾನವಿತ್ತು. ಇವರುಗಳು ರಾಜ್ಯಾಡಳಿತ ದಲ್ಲಿಯು ಭಾಗವಹಿಸುತ್ತಿದ್ದರು, ಜೊತೆಗೆ ಧಾರ್ಮಿಕ, ಸಾಹಿತ್ಯಿಕ ಮತ್ತು ಕಲೆಯಲ್ಲಿಯೂ ಪ್ರಮುಖ ಪಾತ್ರವನ್ನು ವಹಿಸಿದ್ದರು. ತಂತಿಯು ಮೊದಲು ಕವಯಿತ್ರಿಯಾಗಿದ್ದಳು ಶಾಂತಲೆಯು ಸಂಗೀತ ಸರಸ್ವತಿಯೆಂದು ಪ್ರಸಿದ್ಧಳಾಗಿದ್ದಳು, ನೃತ್ಯ ಮತ್ತು ಸಂಗೀತಗಳಲ್ಲಿ ಸ್ತ್ರೀಯರು ಪ್ರಮುಖ ಪಾತ್ರ ವಹಿಸುತ್ತಿದ್ದರೆಂದು ತಿಳಿದು ಬರುತ್ತದೆ.[40]

ಪುರುಷರು ಮತ್ತು ಮಹಿಳೆಯರು ತಮ್ಮ ಉಡುಪು ಮತ್ತು ಅಲಂಕಾರಗಳಿಗೆ ಹೆಚ್ಚಿನ ಗಮನವನ್ನು ನೀಡಿದ್ದರು. ಶಿಂಪಿಗರು ತಮ್ಮ ನೈಪುಣ್ಯತೆಯನ್ನು ಬಳಸಿ ವಿವಿಧ ಉಡುಪುಗಳನ್ನು ಸಿದ್ಧಪಡಿಸುತ್ತಿದ್ದರು. ಶ್ರೀಮಂತ ಹಾಗೂ ಮಧ್ಯಮ ವರ್ಗಗಳ ಜನರು ಸೌಂದರ್ಯ ಸಾಧನಗಳನ್ನು ಮತ್ತು ಆಭರಣಗಳನ್ನು ಧರಿಸುತ್ತಿದ್ದರು. ಬೇಟೆಯಾಡುವುದು, ಕುಸ್ತಿಯಾಟ, ಮರಕೋತಿಯಾಟ, ಮನೋರಂಜನಾ ಚಟುವಟಿಕೆಗಳಾಗಿದ್ದವು. ರಾಜನು ತನ್ನ ಸಹಚರರೊಡನೆ ಬೇಟೆಯನ್ನು ಆಡುತ್ತಿದ್ದನು. ವೀರರ ಸ್ಮರಣೆಗಾಗಿ ನೆಟ್ಟ ವೀರಗಲ್ಲುಗಳು ಆ ಪ್ರದೇಶದ ಭೌಗೋಳಿಕ ಸ್ವರೂಪವನ್ನು ತಿಳಿಸುವುದರ ಜೊತೆಗೆ ಅಲ್ಲಿಯ ಜನರ ದೈಹಿಕ ಮತ್ತು ಮಾನಸಿಕ ಶಕ್ತಿಯ ಸಂರಚನೆಗಳನ್ನು ತಿಳಿಸುತ್ತವೆ.[41]

ಒಟ್ಟಾರೆ ರಾಜಧಾನಿಯಾದ ದೋರಸಮುದ್ರವು ಹಲವಾರು ಬಗೆಯ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದು ವಿವಿಧ ಜನ ವರ್ಗಗಳ ನೆಲೆಬೀಡಾಗಿತ್ತು. ಈ ಜನ ವರ್ಗಗಳು ಪ್ರತ್ಯೇಕವಾಗಿ ಮತ್ತು ಇನ್ನಿತರ ಜನವರ್ಗಗಳ ಜೊತೆಗೂಡಿ ಸಾಂಘಿಕವಾಗಿ ದೋರಸಮುದ್ರದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಚಲನಶೀಲತೆಗೆ ತನುಮನ ಧನದಿಂದ ತಮ್ಮನ್ನರ್ಪಿಸಿ ಕೊಂಡಿದ್ದುದು ಶಾಸನಗಳಿಂದ ತಿಳಿದು ಬರುತ್ತದೆ.

7.9 ಆರ್ಥಿಕ ವ್ಯವಸ್ಥೆ

ಒಂದು ರಾಜ್ಯ ಅಥವಾ ಸಮಾಜದ ಸದೃಢತೆಗೆ ಆರ್ಥಿಕ ವ್ಯವಸ್ಥೆ, ಭದ್ರವಾದ ತಳಪಾಯವಾಗಿದೆ. ಅದರಂತೆ ಹೊಯ್ಸಳರ ರಾಜಧಾನಿಯಾಗಿ ಮೆರೆದ ದೋರಸಮುದ್ರವು ಸಮಾಜದ ಪ್ರತಿನಿಧಿಯಾಗಿ ನಿಂತಿದ್ದು ಹೊಯ್ಸಳರ ಕಾಲದ ಆರ್ಥಿಕ ವ್ಯವಸ್ಥೆಯ ಕೆಲವು ರೂಪುರೇಷೆಗಳನ್ನು ದೋರಸಮುದ್ರದ ಮೂಲಕ ಕಾಣಬಹುದು. ದೋರಸಮುದ್ರದಲ್ಲಿ ದೊರೆತಿರುವ ಶಾಸನಗಳನ್ನಾಧರಿಸಿ ಆರ್ಥಿಕ ವ್ಯವಸ್ಥೆಯ ಒಂದು ರೂಪವನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ.

ಎ. ಭೂಸಂಪತ್ತು ಮತ್ತು ಕೃಷಿಯ ವಿಸ್ತರಣೆ

ಹೊಯ್ಸಳರು ಕೃಷಿ ಭೂಮಿಯ ವಿಸ್ತರಣೆ ಹೊಸ ಜನವಸತಿ ನೆಲೆಗಳ ಸ್ಥಾಪನೆ ಹಾಗೂ ಕೃಷಿಕರಿಗೆ ಪೂರಕವಾದ ಸೌಲಭ್ಯಗಳ ಕಡೆಗೆ ಗಮನವನ್ನು ನೀಡಿದರು. ಹತ್ತನೇ ಮತ್ತು ಹನ್ನೆರಡನೇ ಶತಮಾನಗಳಲ್ಲಿ ದಕ್ಷಿಣ ಕರ್ನಾಟಕದ ಕೃಷಿ ಮತ್ತು ಗ್ರಾಮೀಣ ವ್ಯವಸ್ಥೆಯಲ್ಲಿ ಬದಲಾವಣೆಗಳು ಕಂಡು ಬಂದವೆಂದು ಗುರ್ತಿಸಲಾಗಿದೆ.[42] ಅದರಲ್ಲೂ ವಾಯುವ್ಯ ಭಾಗದಲ್ಲಿ ಅಲ್ಲಲ್ಲಿ ಗ್ರಾಮಗಳು ಸ್ಥಾಪನೆಯಾಗಿ, ಮಲೆನಾಡಿನ ಭಾಗದಲ್ಲಿ ದಟ್ಟವಾದ ಅರಣ್ಯ ಮತ್ತು ಸತತವಾದ ಮಳೆಗಳೇ ಕಾರಣ. ಗ್ರಾಮಗಳ ನೆಲೆಯೂರಿಕೆಗೆ ಹಿತಕರವಾಗಿರಲಿಲ್ಲ. ಆದರೆ ಪಕ್ಕದ ಮೈದಾನ ಪ್ರದೇಶವು ಕೃಷಿಗೆ ಉತ್ತಮ ಹವಾಗುಣ ನೀರಿನ ಸೌಲಭ್ಯಗಳನ್ನು ಹೊಂದಿದ್ದರೂ ಬೆಳವಣಿಗೆಯಾಗದೆ ಹಾಗೆಯೇ ಉಳಿದಿತ್ತು. ಕದಂಬ, ಗಂಗ, ರಾಷ್ಟ್ರಕೂಟ ಮುಂತಾದ ಹೊಯ್ಸಳರ ಪೂರ್ವದ ಪ್ರಭುತ್ವಗಳ ಕೇಂದ್ರ ಪ್ರದೇಶದಿಂದ ಈ ಭಾಗ ಹೊರಗೆ ಉಳಿದಿದ್ದರಿಂದಾಗಿ ಹೆಚ್ಚಿನ ಗಮನವನ್ನು ಇದು ಸೆಳೆದಿರಲಿಲ್ಲ. ಮುಂದೆ ಹೊಯ್ಸಳರು ದೋರಸಮುದ್ರವನ್ನು ತಮ್ಮ ರಾಜಧಾನಿ ಇದರ ಆರ್ಥಿಕ ಅಭಿವೃದ್ಧಿಯು ಪ್ರಾರಂಭವಾಯಿತೆಂದು ಅಭಿಪ್ರಾಯ ಪಡಲಾಗಿದೆ.[43]

ಹನ್ನೊಂದನೆ ಶತಮಾನದಿಂದ ಹೊಯ್ಸಳರು ಬೇಸಾಯದ ಅನುಕೂಲಕ್ಕಾಗಿ ಹಲವಾರು ಕೆರೆ, ಕಟ್ಟೆಗಳನ್ನು ನಿರ್ಮಾಣ ಮಾಡಿದರು. ಪ್ರಾರಂಭದಲ್ಲಿ ಹೊಯ್ಸಳರ ಅರಸನಾಗಿದ್ದ ವಿನಯಾದಿತ್ಯನು ಯಗಚಿ ನದಿಯನ್ನು ತನ್ನ ರಾಜಧಾನಿ ದೋರಸಮುದ್ರದವರೆಗೆ ವಿಸ್ತರಿಸಿ ಹೊಸ ಕಾಲುವೆ ಮತ್ತು ಕೆರೆಗಳನ್ನು ನಿರ್ಮಿಸಿದನೆಂದು ಆಧಾರಗಳಿಂದ ತಿಳಿದು ಬರುತ್ತದೆ.[44] ಇದರಿಂದಾಗಿ ದೋರಸಮುದ್ರ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ಬೇಸಾಯದ ಚಟುವಟಿಕೆಗಳು ಬೆಳೆಯಲು ಆರಂಭಿಸಿದವು.

ಬಿ. ಕೃಷಿ

ಕೃಷಿಯು ದೋರಸಮುದ್ರದ ಅರ್ಥವ್ಯವಸ್ಥೆಯ ಬೆನ್ನೆಲುಬಾಗಿತ್ತು. ಜನರ ಜೀವನೋಪಾಯದ ಇತರ ಮುಖ್ಯ ಕಸುಬುಗಳಾದ ವ್ಯಾಪಾರ, ಉದ್ಯೋಗ, ಕೈಗಾರಿಕೆಗಳನ್ನೊಳಗೊಂಡ ರಾಜ್ಯದ ಸಮಸ್ತ ಆದಾಯಕ್ಕೆಲ್ಲ ಮೂಲ ಕೇಂದ್ರ ಬಿಂದುವಾಗಿತ್ತು. ದೋರಸಮುದ್ರದ ಬೆಣ್ಣೆಗುಡ್ಡದ ಶಾಸನವು ಯಗಚಿ ನದಿಗೆ ನಿರ್ಮಿಸಿದ ಕಾಲುವೆಯ ನೀರನ್ನು ಕೃಷಿಗೆ ಬಳಸಿದುದರ ಬಗ್ಗೆ ತಿಳಿಸುತ್ತದೆ.

ಈ ಶಾಸನವು ರಾಜಧಾನಿಯ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಹೊಲ, ತೋಟ, ಗದ್ದೆಗಳಿಗೆ ಬೇಕಾಗುವ ನೀರನ್ನು ಯಗಚಿ ನದಿಗೆ ನಿರ್ಮಿಸಲಾಗಿದ್ದ ಕಾಲುವೆಗಳಿಂದ ಬಳಸಿಕೊಳ್ಳುತ್ತಿದ್ದರೆಂದು ಸ್ಪಷ್ಟಪಡಿಸುತ್ತದೆ.[45]

ದೋರಸಮುದ್ರ ಶಾಸನಗಳಲ್ಲಿ ಕಂಡುಬಂದಿರುವ ಕೃಷಿ ಭೂಮಿಯ ಪ್ರಕಾರಗಳೆಂದರೆ

1) ತೇವಯುಕ್ತ ಭೂಮಿ
2) ಒಣಭೂಮಿ
3) ತೋಟ

ದೋರಸಮುದ್ರದ ಕೆರೆಯ ಶಾಸನ[46], ಬೆಣ್ಣೆಗುಡ್ಡದ ಕುಳವಾಡಿ ಶಾಸನ[47] ಬಿದರ ಕೆರೆಯ ಶಾಸನಗಳು ಗದ್ದೆಗಳನ್ನು ದಾನ ಮಾಡಿದ ವಿವರಗಳನ್ನು ತಿಳಿಸುತ್ತೆ. ಅದರಂತೆ ಒಣಭೂಮಿಯ ಉಲ್ಲೇಖಗಳು ಬೆಣ್ಣೆಗುಡ್ಡದ ಕುಳವಾಡಿಯ ಶಾಸನ[48] ಮತ್ತು ಭೂತೇಶ್ವರ ದೇವಾಲಯದ ಶಾಸನಗಳು[49] ಒಣಭೂಮಿಯ ಬಗೆಗೆ ಉಲ್ಲೇಖಿಸುತ್ತವೆ. ಅಲ್ಲದೆ ಕೆಲವು ಶಾಸನಗಳಲ್ಲಿ ತೇವಯುಕ್ತ ಭೂಮಿ ಮತ್ತು ಒಣಭೂಮಿ ಎರಡು ಭೂಮಿಗಳ ಉಲ್ಲೇಖ ಕಂಡುಬಂದಿದ್ದು ಅವುಗಳನ್ನು ಕೃಷಿಗಾಗಿ ಬಳಸುತ್ತಿದ್ದರೆಂದು ಹೇಳಬಹುದು. ತೋಟದ ಬೆಳೆಗಳನ್ನು ಪ್ರಮುಖವಾಗಿ ಕೃಷಿಯ ಮತ್ತೊಂದು ರೂಪವೆಂದು ಪರಿಗಣಿಸಲಾಗಿದೆ. ದೋರಸಮುದ್ರ ಭೂತೇಶ್ವರ ಗುಡಿಯ ಶಾಸನವು ಕಬ್ಬಿನ ತೋಟ, ವೀಳ್ಯದೆಲೆ ತೋಟಗಳನ್ನು[50] ಅದರಂತೆ ಗುಮ್ಮತೀರ ತಿಟ್ಟವಿನಲ್ಲಿಯ ಶಾಸನವು ಹೂವಿನ ತೋಟ, ಬಾಳೆ ತೋಟಗಳನ್ನು ಉಲ್ಲೇಖಿಸುತ್ತದೆ.[51]

ಸಿ.ಬೆಳೆಗಳು

ಅಕ್ಕಿ ಅಥವಾ ಭತ್ತವು ತೇವಯುಕ್ತ ಭೂಮಿಯ ಬೆಳೆಯಾಗಿತ್ತು. ಗಂಧಸಲಿ ಎಂಬ ಅಕ್ಕಿಯು ದೋರಸಮುದ್ರದ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿದ್ದು ಇದು ಪ್ರಮುಖ ಬೆಳೆಯಾಗಿರ

ಬೇಕೆಂದು ಅಭಿಪ್ರಾಯ ಪಡಲಾಗಿದೆ.[52] ಹತ್ತಿ ಮತ್ತು ಜೋಳಗಳು ಒಣಭೂಮಿಯ ಬೆಳೆಗಳಾಗಿದ್ದು ದೋರಸಮುದ್ರದ ಶಾಸನಗಳು ಸ್ಪಷ್ಟವಾದ ಉಲ್ಲೇಖವನ್ನು ನೀಡದಿದ್ದರು. ನವಣೆ, ಕುಸುಬೆ, ರಾಗಿ, ಉದ್ದಿನಬೇಳೆಯನ್ನು ಬೆಳೆಯುತ್ತಿದ್ದರ ಬಗೆ ತಿಳಿಸುತ್ತದೆ.[53] ಅದರಂತೆ ತೋಟದ ಬೆಳೆಗಳಾದ ಹಣ್ಣುಗಳನ್ನು, ಹೂಗಳನ್ನು, ವೀಳ್ಯದೆಲೆಗಳನ್ನು, ಕಾಯಿ-ಕಬ್ಬುಗಳನ್ನು ದೋರಸಮುದ್ರದ ಹಳೆಕೋಟೆಯ ಶಾಸನದಿಂದ ತಿಳಿದು ಬರುತ್ತದೆ.[54] ಇವುಗಳನ್ನು ದಿನನಿತ್ಯದ ಕಾರ್ಯಕ್ರಮಗಳಿಗೆ ಉತ್ಸವ ಸಮಾರಂಭಗಳಿಗೆ ಪೂಜೆ ಪುನಸ್ಕಾರಗಳಿಗೆ ಅವಶ್ಯಕವೆಂದು ತೋಟದ ಪ್ರದೇಶಗಳಲ್ಲಿ ಬೆಳೆಯುತ್ತಿದ್ದರು.

ಡಿ.ಸಂತೆಗಳು

ಹೊಯ್ಸಳರ ಕಾಲದಲ್ಲಿ ಸಂತೆಗಳ ಸ್ಥಾಪನೆ ಪಟ್ಟಣಗಳ ಬೆಳವಣಿಗೆಗೆ ಕಾರಣವಾಯಿತು. ಕೊಳ್ಳುವವರು ಮತ್ತು ಮಾರುವರು ಒಂದು ಗೊತ್ತಾದ ಸ್ಥಳದಲ್ಲಿ ಗೊತ್ತಾದ ವೇಳೆಯಲ್ಲಿ ಸೇರುವುದಕ್ಕೆ ಸಂತೆ ಎಂದು ಕರೆಯುತ್ತಾರೆ. ಹೀಗೆ ಸಂತೆ ಒಂದು ಮುಖ್ಯ ವ್ಯಾಪಾರ ಕೇಂದ್ರವಾಗಿತ್ತು. ಈ ಸಂತೆಗಳು ಸಾಮಾಜಿಕ, ಆರ್ಥಿಕ ಹಾಗೂ ಔದ್ಯೋಗಿಕ ಪ್ರಗತಿ ಸಾಧಿಸುವಲ್ಲಿ ಅತ್ಯಂತ ಮಹತ್ತರ ಪಾತ್ರವನ್ನು ವಹಿಸಿವೆ. ಈ ಸಂತೆಯನ್ನು ವರ್ತಕರು ನಾನಾ ಕಡೆಗಳಿಂದ ಬಂದು ಒಂದು ಸ್ಥಳದಲ್ಲಿ ಸೇರಿ ನಡೆಸುತ್ತಿದ್ದರು. ವಾರಕ್ಕೊಂದು ಬಾರಿ ಸೇರುತ್ತಿದ್ದ ಸ್ಥಳಗಳಲ್ಲಿ ವರ್ತಕರು ದಿನ ಬಳಕೆಯ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಅದಕ್ಕಾಗಿ ಈ ಸಂತೆಗಳನ್ನು ವ್ಯಾಪಾರಿ ಹಾಗೂ ಗ್ರಾಹಕರಿಗೆ ಅನುಕೂಲವಾಗುವ ಸ್ಥಳದಲ್ಲಿ ನಡೆಸುತ್ತಿದ್ದರು. ಸಂತೆಗಳು ಪದಾರ್ಥಗಳ ಮಾರಾಟ ಹಾಗೂ ವಿನಿಮಯಗಳಲ್ಲಿ ಪ್ರಮುಖ ಕೇಂದ್ರಗಳಂತಿದ್ದು ಒಳದೇಶದ ವ್ಯಾಪಾರಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ಸಂತೆಗಳಲ್ಲಿ ಸ್ಥಳೀಯ ವರ್ತಕರೇ ಅಲ್ಲದೆ ಸಂಚಾರಿ ಮಾರಾಟಗಾರರು ಭಾಗವಹಿಸುತ್ತಿದ್ದರು. ಹೀಗೆ ಮಧ್ಯಕಾಲೀನ ಯುಗದಲ್ಲಿ ಸಂತೆಗಳು "ಅಂತರ ಸ್ಥಳೀಯ ವಾಣಿಜ್ಯ ಸಂಸ್ಥೆಯ" ಒಂದು ಪ್ರಮುಖ ರೂಪವಾಗಿ ಬೆಳೆದು ಬಂದಿತು.[55]

ಅಂತಹ ಸಂತೆಗಳನ್ನು ಆಳುವ ಅಧಿಕಾರಿಗಳು ಇಲ್ಲವೆ ಅವರ ಪ್ರೋತ್ಸಾಹ ಪಡೆದ ಇತರರು ನಡೆಸುತ್ತಿದ್ದರು. ದಾವಣಗೆರೆಯ ಕ್ರಿ.ಶ. 1218 ರ ಒಂದು ಶಾಸನದ[56] ಪ್ರಕಾರ ಹೊಯ್ಸಳರ ಎರಡನೇ ಬಲ್ಲಾಳನ ರಾಣಿಯಾದ ಅಭಿವನ ಕೇತಲ ದೇವಿಯ ಆಜ್ಞೆಯ ಮೇರೆಗೆ ಕುಂದುವಾಡದ 'ಗೌಡು' ಗಳು 'ಸೆಟ್ಟಿ'ಗಳು ಸೇರಿ ಊರಿನಲ್ಲಿ ಪ್ರತಿ ಬುಧವಾರದಂದು ಸಂತೆ ನಡೆಯುವಂತೆ

ಏರ್ಪಾಡು ಮಾಡಿದರು. ವ್ಯಾಪಾರಾಭಿವೃದ್ಧಿಯಾಗಿ ದೇಶದ ಆರ್ಥಿಕ ಸಂಪತ್ತು ಹೆಚ್ಚಬೇಕೆಂಬ ಉದ್ದೇಶದಿಂದಲೇ ಪ್ರಾಯಶಃ ಆಳುವ ದೊರೆಗಳು ಅಂತಹ ಸಂತೆಗಳಿಗೆ ಅಗತ್ಯವಾದ ರಕ್ಷಣೆ ಮತ್ತು ಪ್ರೋತ್ಸಾಹಗಳನ್ನು ಕೊಡಲು ಕಾತರರಾಗಿದ್ದರು. ಇಲ್ಲಿ ಒಂದು ನಿದರ್ಶನವನ್ನು ಕೊಡಬಹುದು. ಅರಕಲಗೂಡಿನ ಕ್ರಿ.ಶ. 1274ರ ಒಂದು ಶಾಸನ.[57] ಹೊಯ್ಸಳ ಅರಸ ಮೂರನೇ ನರಸಿಂಹನ ಆಜ್ಞೆಯನ್ನು ತಿಳಿಸುತ್ತದೆ. ಕೊಂಗು ನಾಡಿನಲ್ಲಿರುವ ಹೆಬ್ಬಾಲೆ ಎಂಬ ಊರಿನಲ್ಲಿ ಪ್ರತಿ ಮಂಗಳವಾರ ನಡೆಯುವ ಸಂತೆಯಲ್ಲಿ ಯಾರಾದರೂ ಅಧಿಕಾರಿಗಳು ಸುಂಕ ಸೋದಿಗೆ, ಆಯ, ದಾಯ ಇತ್ಯಾದಿಗಳನ್ನು ವಸೂಲು ಮಾಡಿದೇ ಆದರೆ ಅಂತಹವರನ್ನು ದೊರೆ ಶಿಕ್ಷಿಸುವನು ಮತ್ತು ಹುದ್ದೆಯಿಂದ ತೆಗೆದು ಹಾಕುವನು ಎಂದಿದೆ. ಆ ಶಾಸನಗಳಲ್ಲಿ ಅಂದರೆ ಆ ಸಂತೆಯವರು ಮೇಲೆ ಹೇಳಿದ ತೆರಿಗೆಗಳಿಂದ ಪರಿಹಾರವನ್ನು ಪಡೆದಿದ್ದರು ಎಂಬ ಅಂಶ ಸ್ಪಷ್ಟವಾಗುತ್ತದೆ. ಅಲ್ಲದೆ ಅಂಥ ಸಂತೆಗಳಿಂದ ಸರ್ಕಾರಕ್ಕೆ ಆದಾಯವು ಇತ್ತು. "ಸಂತೆ ಮಾಯ" ಎಂಬ ಒಂದು ಬಗೆಯ ತೆರಿಗೆಯನ್ನು ಶಾಸನಗಳು ಹೆಸರಿಸುತ್ತವೆ.[58]

ಅಂಥ ಸಂತೆಗಳ ಬಗ್ಗೆ ಪ್ರಮುಖವಾದ ಮತ್ತೊಂದು ಆರ್ಥಿಕ ಅಂಶವನ್ನು ಇಲ್ಲಿ ಗಮನಿಸ ಬಹುದು. ಸಾಮಾನ್ಯವಾಗಿ ಸಂತೆಗಳು ನಡೆಯುತ್ತಿದ್ದ ಗ್ರಾಮಗಳು ಬಹುಬೇಗ ದೊಡ್ಡ ಊರುಗಳಾಗಿ ಮತ್ತು ಪಟ್ಟಣಗಳಾಗಿ ಬೆಳೆಯುತ್ತಿದ್ದವು ಮತ್ತು ಹಾಗೆ ಬೆಳೆದ ಪಟ್ಟಣಗಳು ಆಳುವ ಅಧಿಕಾರಿಗಳಿಂದ ಆದೇಶ ಅಥವಾ ಸನ್ನದನ್ನು ಪಡೆಯುತ್ತಿದ್ದವು. ಉದಾ. ಧರ್ಮವೊಳಲು, ಸೊಂಡಿ, ಪುಲಿಗೆರೆ ಇತ್ಯಾದಿ ಪಟ್ಟಣಗಳ ನಿದರ್ಶನವನ್ನು ಕೊಡಬಹುದು.[59]

ಡಾ. ಜಿ.ಎಸ್.ದೀಕ್ಷಿತ್ ರವರ ಪ್ರಕಾರ ಒಂದು ಪಟ್ಟಣವನ್ನು ಹಳ್ಳಿಯಿಂದ ಪ್ರತ್ಯೇಕವೆಂದು ಗುರುತಿಸಬಹುದಾಗಿದ್ದು ಸಂತೆಯಿಂದ ಎಂದಿದ್ದಾರೆ. ಶಾಸನಗಳಲ್ಲಿ ಉಲ್ಲೇಖಿಸಲಾಗಿರುವ ಒಂದೆರಡು ನಿದರ್ಶನಗಳನ್ನು ಇಲ್ಲಿ ಕೊಡಬಹುದು.

ಹೊಯ್ಸಳ 3ನೇ ನರಸಿಂಹನ (ಕ್ರಿ.ಶ. 1254-61) ಆಳ್ವಿಕೆಯ ಕಾಲದಲ್ಲಿ ಮೂಗೂರು[60] (ತಿ.ನರಸೀಪುರ ತಾ. ಮೈಸೂರು ಜಿಲ್ಲೆ) ಗ್ರಾಮದ ಪ್ರಭುಗಳು ಮತ್ತು ಗೌಡರು ಸೇರಿ ಆ ಸ್ಥಳದಲ್ಲಿ ಒಂದು ಸಂತೆಯನ್ನು ನಡೆಸುವಂತಾಗಿ ಆ ಗ್ರಾಮವನ್ನು ಪಟ್ಟಣವನ್ನಾಗಿ ಪರಿವರ್ತಿಸಬೇಕೆಂದು

ನಿಶ್ಚಯಿಸುತ್ತಾರೆ. ಅಲ್ಲದೆ ಅವರು ಆ ಹೊಸ ಪಟ್ಟಣಕ್ಕೆ ಒಂದು ಸನ್ನದನ್ನು ಕೊಟ್ಟರೆಂದು ತಿಳಿದು ಬರುತ್ತದೆ.

ಹಾಗೆಯೇ ಹೊಯ್ಸಳರ ಮೂರನೇ ಬಲ್ಲಾಳನ ಆಳ್ವಿಕೆಯ ಕಾಲದಲ್ಲಿ (ಕ್ರಿ.ಶ. 1292–1343) ಚಟ್ಟರಿ–ಬಲಸೆಟ್ಟಿ ಮತ್ತು ಮಸಣ–ಸೆಟ್ಟಿ ಎಂಬಿಬ್ಬರು ಮುಳುಗುನಹಳ್ಳಿಯಲ್ಲಿ[61] (ಚನ್ನಪಟ್ಟಣ ತಾ. ಬೆಂಗಳೂರು ಜಿಲ್ಲೆ) ಒಂದು ಸಂತೆ ನಡೆಯುವಂತೆ ಏರ್ಪಾಡು ಮಾಡಿ ಆ ಗ್ರಾಮವನ್ನು 'ನಾನಾ–ದೇಶಿ–ಪಟ್ಟಣ' ವನ್ನಾಗಿ ಮಾಡಿದರೆಂದು ಅವರ ಮಂತ್ರಿಯಾದ ಸೋಮರಸ ಒಂದು ಶಾಸನವನ್ನು ಕೊಟ್ಟನೆಂದು ತಿಳಿದು ಬರುತ್ತದೆ.

ಆಗಿನ ಕೆಲವು ಊರುಗಳ ಹೆಸರಿನಲ್ಲಿರುವ ಪೂರ್ವ ಪ್ರತ್ಯಯಲಾದ ಪ್ರಿಫಿಕ್ಸ, ಸಂತೆ ಉದಾ. ಸಂತೆಯ ಬಾಗವಡಿ[62] ಎಂಬ ಪದವನ್ನು ಗಮನಿಸಬಹುದು. ಅಂದರೆ ಅಂತಹ ಪಟ್ಟಣಗಳು ಸಂತೆಗಳು ನಡೆಯುತ್ತಿದ್ದ ಕೇಂದ್ರಗಳೆಂದು ಪ್ರಸಿದ್ಧವಾಗಿದ್ದವು ಎಂಬ ಅಂಶ ಸ್ಪಷ್ಟವಾಗುತ್ತದೆ. (ಈಗಿನ ಸಂತೆ ಸರಗೂರು, ಸಂತೆ ಬಿದನೂರು) ಇತ್ಯಾದಿ ಹೆಸರುಗಳನ್ನು ಗಮನಿಸಬಹುದು. ಸಂತೆಗಳು ಸಹಸ್ರಾರು ವ್ಯಾಪಾರಿಗಳು ಹಾಗೂ ಗ್ರಾಹಕರುಗಳಿಂದ ಜನ ಭರಿತವಾಗಿ 'ಗುಜು–ಗುಜು' ಶಬ್ಧದಿಂದ ಕೂಡಿರುತ್ತಿದ್ದವು ಎಂಬ ಅಂಶ ಅಕ್ಕಮಹಾದೇವಿಯ[63] ಸಂತೆಯೊಳಗೊಂದು ಮನೆಯ ಮಾಡಿ ಶಬ್ಧಕ್ಕೆ ನಾಚಿದೊಡೆಂತಯ್ಯ? ಎಂಬ ವಚನದಿಂದ ಸ್ಪಷ್ಟವಾಗುತ್ತದೆ.

ಶಾಸನಗಳು[64] ಆ ಕಾಲದ ಕೆಲವು ಪ್ರಸಿದ್ಧ ವ್ಯಾಪಾರ ಕೇಂದ್ರಗಳನ್ನು ಹೆಸರಿಸುತ್ತವೆ ಅವುಗಳಲ್ಲಿ ಕೆಲವು ಪ್ರಮುಖ ಪಟ್ಟಣಗಳು ಇನ್ನು ಕೆಲವಂತು ರಾಜಧಾನಿಗಳೆನೆಸಿದ್ದ ಬೇಲೂರು, ದ್ವಾರಸಮುದ್ರ ಪ್ರಮುಖವಾಗಿದ್ದವು.

7.10 ಕೈಗಾರಿಕೆಗಳು

ಆರ್ಥಿಕ ವ್ಯವಸ್ಥೆಯಲ್ಲಿ ತೇವಯುಕ್ತ ಭೂಮಿ (ಗದ್ದೆ) ತೋಟಗಳು ಪಡೆದಿರುವ ಪ್ರಾಧಾನ್ಯತೆಯನ್ನು ಕೈಗಾರಿಕೆಗಳು ಸಹ ಪಡೆದಿದ್ದವು. ಕೃಷಿಯಿಂದ ಹಾಗೂ ಭೂಮಿಯ ಮೂಲದ ಎಲ್ಲಾ ಕಚ್ಚಾಪದಾರ್ಥಗಳೇ ಕೈಗಾರಿಕೆಗಳ ಕಚ್ಚಾ ಪದಾರ್ಥಗಳಾಗಿದ್ದವು. ಮಧ್ಯಕಾಲೀನ ಕರ್ನಾಟಕ ದಲ್ಲಿ ದೊಡ್ಡ ಪ್ರಮಾಣದ ಕೈಗಾರಿಕೆಗಳು ಹೆಚ್ಚಾಗಿ ಕಂಡುಬಂದಿದ್ದು ಸಮಾಜದ ಸಾಮಾನ್ಯ

ಮನುಷ್ಯನಿಗೆ ಬೇಕಾದ ಅವಶ್ಯಕ ವಸ್ತುಗಳನ್ನು ಒದಗಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.[65]

ದೋರಸಮುದ್ರದಲ್ಲಿ ಕಂಡುಬಂದಿರುವ ಪ್ರಮುಖ ಕೈಗಾರಿಕೆಗಳಲ್ಲಿ ಎಣ್ಣೆ ಮತ್ತು ಬೆಲ್ಲಗಳ ಉತ್ಪಾದನೆ ಬಹುಶಃ ಸಕ್ಕರೆ ಮತ್ತು ಬೇರೆ ಬೇರೆ ಬಗೆಯ ಬಟ್ಟೆಗಳನ್ನು ನೇಯುವಿಕೆ ಇವು ಕೃಷಿ ಆಧಾರಿತ ಉದ್ಯಮಗಳನ್ನು ಸೂಚಿಸುತ್ತವೆ.[66] ಹೊಯ್ಸಳ ಶಾಸನಗಳಲ್ಲಿ ಎಣ್ಣೆಯ ಉತ್ಪಾದನೆ ಪದೇ ಪದೇ ಉಲ್ಲೇಖಗೊಳ್ಳುತ್ತವೆ. ಈ ವೃತ್ತಿಯಲ್ಲಿ ನಿರತರಾದ ಜಾತಿಯನ್ನು ಗಾಣಿಗರು ಅಥವಾ ತೆಲ್ಲಿಗರು ಎಂದು ಕರೆಯುತ್ತಿದ್ದರು.[67] ಅವರು ಎಣ್ಣೆಯ ಗಾಣಗಳನ್ನು ನಡೆಸುತ್ತ ಸರ್ಕಾರಕ್ಕೆ ಗಾಣದ ಸುಂಕವನ್ನು ಕೊಡುತ್ತಿದ್ದರು.[68] ಶಾಸನಗಳು ಎತ್ತು ಗಾಣ ಅಥವಾ ಎತ್ತಿನಿಂದ ಇಲ್ಲವೆ ಎತ್ತುಗಳಿಂದ ಎಳೆಯಲ್ಪಡುವ ಎಣ್ಣೆ ಗಾಣವನ್ನು ಉಲ್ಲೇಖಿಸುತ್ತವೆ.[69] ಗವುಡರು[70] ಮತ್ತಿತರ ಸಾಮಾಜಿಕ ವರ್ಗಗಳು ಗಾಣಗಳನ್ನು ತಯಾರಿಸಿ ಧಾರ್ಮಿಕ ಸಂಸ್ಥೆಗಳಿಗೆ ದಾನ ಮಾಡುತ್ತಿದ್ದರು. ಎಳ್ಳು ಹರಳು[71], ತೆಂಗು[72] ಗಳಿಂದ ಎಣ್ಣೆಯನ್ನು ತೆಗೆಯುತ್ತಿದ್ದರು. ಕಬ್ಬಿನ ಗಾಣದ ಮೇಲೆ ಸರ್ಕಾರವು ಆಲೆದೆಲೆ[73] ಎಂಬ ತೆರಿಗೆಯನ್ನು ವಸೂಲು ಮಾಡುತ್ತಿದ್ದಿತು.

ಕುಂಬಾರರು, ಬಡಗಿಗಳು, ಅಗಸರು, ನೇಕಾರರು, ಅಕ್ಕಸಾಲಿಗರು, ಕಮ್ಮಾರರು, ಸಾಯಿಂದಿರು, ಕೂಡ ತೆರಿಗೆಗಳನ್ನು ಕೊಟ್ಟು ಭೂಮಿಯನ್ನು ಹೊಂದಿರುತ್ತಿದ್ದರು.[74] ನರ್ತಕಿಯರು ಮೃದಂಗದ, ಗೊಲ್ಲರು, ನಟರು ಮತ್ತು ದೇವಾಲಯಗಳಲ್ಲಿನ ನೌಕರರು ಕೂಡ ಭೂಮಿಯನ್ನು ಹೊಂದಿದ್ದು ಒಂದಲ್ಲ ಒಂದು ರೀತಿಯಲ್ಲಿ ಸರ್ಕಾರಕ್ಕೆ ತೆರಿಗೆಯನ್ನು ಸಲ್ಲಿಸುತ್ತಿದ್ದರು.[75]

ದೋರಸಮುದ್ರದ ಬೆಣ್ಣೆಗುಡ್ಡ ಶಾಸನವು ಎಣ್ಣೆ ಉತ್ಪಾದಕರಾದ ತೆಲ್ಲಿಗರನ್ನು ಎಣ್ಣೆಗಾಣ ಗಳನ್ನು ದಾನ ನೀಡದ ವಿವರಗಳನ್ನು ಮತ್ತು ತೆಲ್ಲಿಗ ಗೊತ್ತುವಳಿ ಎಂಬ ಸಂಘವನ್ನು ರಚಿಸಿಕೊಂಡಿದ್ದಿರಬಹುದೆಂದು ಹೇಳಲಾಗುತ್ತದೆ.[76] ಎಣ್ಣೆಗಾಣಗಳು ಎತ್ತುಗಳಿಂದ ಮನುಷ್ಯರೇ ನಡೆಸುವ ಕೈಗಾಣಗಳಿಂದ ಚಲಿಸಲ್ಪಡುತ್ತಿದ್ದವು, ಸಕ್ಕರೆ, ಬೆಲ್ಲ ತಯಾರಿಕೆಯ ಉದ್ಯಮವನ್ನು ಭೂತೇಶ್ವರ ದೇವಾಲಯದ ಹತ್ತಿರದ ಶಾಸನವು[77] ಕಬ್ಬಿನ ತೋಟಗಳನ್ನು ಮತ್ತು ಸಕ್ಕರೆ ಬೆಲ್ಲಗಳ ಉಲ್ಲೇಖಗಳನ್ನು ನೀಡುತ್ತದೆ. ಉಪ್ಪು ತಯಾರಿಕೆಯ ಉದ್ಯಮವು ಪ್ರಮುಖವಾಗಿದ್ದು ನೇರವಾದ ಉಲ್ಲೇಖಗಳು ಲಭ್ಯವಾಗಿಲ್ಲವಾದರೂ ತಯಾರಿಸಿದ ಉಪ್ಪನ್ನು ಮಾರುವ ಮಳಿಗೆಗಳನ್ನು ನಗರೇಶ್ವರ ದೇವಾಲಯದ ಶಾಸನದಿಂದ ತಿಳಿದು ಬರುತ್ತದೆ.[78] ಬಟ್ಟೆ ತಯಾರಿಕೆ ಉದ್ಯಮವು ದೋರಸಮುದ್ರ

ದಲ್ಲಿ ಪ್ರಚಲಿತವಾಗಿತ್ತೆಂದು ಇದರ ಜೊತೆಗೆ ಅರಸೀಕೆರೆ ಕೆಲ್ಲಂಗೆರೆಗಳು ಸಹ ಪ್ರಮುಖ ಸ್ಥಾನ ಪಡೆದಿದ್ದವೆಂದು ಮತ್ತು ಹತ್ತಿಯ ವರ್ತಕರ ಮತ್ತು ಚಿಪ್ಪಿಗರ (ಶಿಂಪಿಗ), ಸಮುದಾಯದ ಬಗೆಗೆ ಬೆಣ್ಣೆಗುಡ್ಡದ ಕುಳವಾಡಿಯ ಶಾಸನದಿಂದ ತಿಳಿದು ಬರುತ್ತದೆ.[79] ಇಲ್ಲಿ ಸಾದಾ ಮತ್ತು ರೇಷ್ಮೆಯ ಬಟ್ಟೆಗಳನ್ನು ಸೀರೆ ಜರಸೀರೆ, ತೆಳುವಾದ ಬಟ್ಟೆಗಳನ್ನು ತಯಾರಿಸುತ್ತಿದ್ದರೆಂದು ಅಭಿಪ್ರಾಯ ಪಡಲಾಗಿದೆ.[80]

ದಿನನಿತ್ಯದ ಹಲವಾರು ವಸ್ತುಗಳ ತಯಾರಿಕೆಯಲ್ಲಿ ಲೋಹ ತಯಾರಿಕೆ ಉದ್ಯಮವು ಪ್ರಮುಖವಾಗಿದ್ದು ಅದರ ಬಗೆಗೆ ಬಿದರ ಕೆರೆಯ ವೀರಗಲ್ಲು ಶಾಸನದಲ್ಲಿ[81] ಅಕ್ಕಸಾಲಿಗ ತಾಮ್ರ ಪಟಗಳ ಆರತಿಯ ಸಂಗೀತ ಸಾಧನಗಳ ಬಗೆಗೆ ವಿವರಗಳು ಕಂಡುಬರುತ್ತವೆ. ಅದರಂತೆ ಹಲವಾರು ವಿವಿಧ ಆಭರಣಗಳನ್ನು ಹರಳುಗಳನ್ನು ಮತ್ತು ಆಭರಣದ ವರ್ತಕರನ್ನು ಬಿದರ ಕೆರೆಯ[82] ಮತ್ತು ಹೊಯ್ಸಳೇಶ್ವರ ದೇವಾಲಯದ ಗೋಡೆಯ ಶಾಸನಗಳು[83] ಮತ್ತು ಅವರು ನಿರ್ಮಿಸಿರುವ ಶಿಲ್ಪಕಲೆಗಳಲ್ಲಿ ಧರಿಸಿರುವ ವಿವಿಧ ಆಭರಣಗಳನ್ನು ನೋಡಲಾಗಿ ಆಭರಣ ಉದ್ಯಮವು ಪ್ರಮುಖ ಸ್ಥಾನವನ್ನು ಪಡೆದಿತ್ತೆಂದು ತಿಳಿದು ಬರುತ್ತದೆ.

ಉಳಿದ ಗೃಹ ಕೈಗಾರಿಕೆಗಳು ಕೂಡ ಪ್ರಮುಖವಾದವುಗಳೆಂದು ಹೇಳಬಹುದು. ಅವುಗಳಲ್ಲಿ ಕಲಾ ಕೌಶಲ್ಯವನ್ನು ಹೊಂದಿದ್ದ ವಿಶ್ವಕರ್ಮಿಗಳು ರೂವಾರಿಗಳು, ರೂಪಕಾರ, ಪ್ರತಿಮೆಕಾರ ಎಂಬ ವಿವಿಧ ಹೆಸರುಗಳನ್ನು ಹೊಂದಿದ್ದರೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.[84] ಜೊತೆಗೆ ಬಳೆಗಳು, ದರ್ಪಣಗಳ ತಯಾರಿಕೆಗಳ ನೇರವಾದ ಉಲ್ಲೇಖಗಳು ದೊರೆಯದಿದ್ದರೂ ಅವರು ನಿರ್ಮಿಸಿರುವ ದೇವಾಲಯಗಳಲ್ಲಿರುವ ಮೂರ್ತಿ ಶಿಲ್ಪಗಳಲ್ಲಿ ಕಾಣಬಹುದು.

7.11 ವ್ಯಾಪಾರ ಕೇಂದ್ರವಾಗಿ ದೋರಸಮುದ್ರ

ವ್ಯಾಪಾರ ಮತ್ತು ವಾಣಿಜ್ಯಗಳು ವೃತ್ತಿ ಕೈಗಾರಿಕೆಗಳ ಉತ್ಪಾದನೆಯನ್ನು ವಿತರಿಸುವ ಪ್ರಮುಖ ಮಾಧ್ಯಮಗಳಾಗಿವೆ. ಸಾಮಾನ್ಯವಾಗಿ ರಾಜಧಾನಿ ಪಟ್ಟಣಗಳು ರಾಜ್ಯದ ಪ್ರಮುಖ ವ್ಯಾಪಾರ ಕೇಂದ್ರಗಳಾಗಿದ್ದವು. ದೋರಸಮುದ್ರದ ಗುಮ್ಮತೀರ ತಿಟ್ಟನಲ್ಲಿರುವ ಶಾಸನವು ಮೂರು ಪ್ರಮುಖ ಪ್ರದೇಶಗಳಾದ ದೋರಸಮುದ್ರ ಬೇಲೂರು ಮತ್ತು ವಿಷ್ಣುಸಮುದ್ರಗಳನ್ನು ತಿಳಿಸುತ್ತದೆ.[85]

ಬೇಲೂರಿನ ಶಾಸನವು ರಾಜ್ಯದ ಎಲ್ಲ ವ್ಯಾಪಾರಿಗಳ ಸಾರ್ವಭೌಮ ಕೇಂದ್ರವಾಗಿ ದೋರ ಸಮುದ್ರವು ಪರಿಣಮಿಸಿತ್ತು ಎಂಬುದಾಗಿ ಹೇಳುತ್ತದೆ.[86] ದೋರಸಮುದ್ರವು ಭತ್ತ, ಹತ್ತಿ, ಸಾಂಬಾರ ಪದಾರ್ಥಗಳಿಗೆ ಅರಸೀಕೆರೆಯು ಸಹ ಪ್ರಮುಖವಾಗಿ ದೋರಸಮುದ್ರ ಮತ್ತು ಬೇಲೂರುಗಳಿಗೆ ಸರಿ ಸಮನಾಗಿಯೇ ಕಾರ್ಯ ನಿರ್ವಹಿಸುತ್ತಿದ್ದು ಪ್ರಮುಖವಾಗಿ ಹತ್ತಿ, ಗಂಧ ಹಾಗೂ ಅಡಿಕೆಯ ಬೆಳೆಗೆ ಹೆಸರುವಾಸಿಯಾಗಿತ್ತೆಂದು ತಿಳಿದು ಬರುತ್ತದೆ.[87] ರಾಜಧಾನಿ ದೋರಸಮುದ್ರದಿಂದ ಸ್ವಲ್ಪ ದೂರದಲ್ಲಿದ್ದ ಬಳ್ಳಿಗಾವಿಯು ಆಮದು ಮತ್ತು ರಫ್ತು ಚಟುವಟಿಕೆಗಳ ಪ್ರಮುಖ ಕೇಂದ್ರವಾಗಿತ್ತು. ಈ ರೀತಿಯಾಗಿ ರಾಜಧಾನಿ ದೋರಸಮುದ್ರವು ಇತರ ಪಟ್ಟಣಗಳಾಗಿದ್ದ ಅರಸೀಕೆರೆ, ಬೇಲೂರು, ಬಾಣಾವರ ಹಾಗೂ ಬಳ್ಳಿಗಾವಿಗಳು ವ್ಯಾಪಾರ ಮತ್ತು ವಾಣಿಜ್ಯದಲ್ಲಿ ಪರಸ್ಪರ ಸಂಬಂಧವನ್ನು ಹೊಂದಿದ್ದವು.

ಎ. ವ್ಯಾಪಾರದ ಸರಕುಗಳು

ವ್ಯಾಪಾರ ಮತ್ತು ವಾಣಿಜ್ಯಗಳ ಮೂಲಕ ಆಮದು ಮತ್ತು ರಫ್ತು ಕಾರ್ಯ ನಡೆಯುತ್ತಿತ್ತು. ಅದರಂತೆ ದೋರಸಮುದ್ರದ ಗುಮ್ಮತೀರ ತಿಟ್ಟು ಬಸ್ತಿಹಳ್ಳಿಯ ಶಾಸನಗಳಲ್ಲಿ ನಮೂದಿತವಾಗಿರುವ ಕೆಲವು ವಸ್ತುಗಳಾದ ಭತ್ತ, ಜೋಳ, ಸಾಂಬಾರ ಪದಾರ್ಥಗಳು, ಬಟ್ಟೆಗಳು, ಆಭರಣಗಳು, ಪ್ರಾಣಿಗಳು ಚರ್ಮದ ವಸ್ತುಗಳು ಪ್ರಮುಖ ಮಾರುವ ಮತ್ತು ಕೊಳ್ಳುವ ಚಟುವಟಿಕೆಗಳ ಮೂಲ ವಸ್ತುಗಳಾಗಿದ್ದವು.

ಬಿ. ಸಾಗಾಣಿಕೆಯ ಸಾಧನಗಳು

ವ್ಯಾಪಾರವು ಮುಖ್ಯವಾಗಿ ಪಾದಮಾರ್ಗ ಹಾಗೂ ಜಲಮಾರ್ಗಗಳಲ್ಲಿ ನಡೆಯುತ್ತಿದ್ದಿತು.[88] ಪಾದಮಾರ್ಗ ಅಥವಾ ರಸ್ತೆಗಳನ್ನು ಮಾಡಿಸಿ ಅವುಗಳನ್ನು ಆಗಾಗ್ಗೆ ಸರಿಪಡಿಸುವ ವಿಷಯದಲ್ಲಿ ಸರ್ಕಾರವು ಆಸಕ್ತವಾಗಿದ್ದಿತೇ ಎನ್ನುವ ವಿಷಯವು ಶಾಸನಗಳಿಂದ ತಿಳಿದು ಬರುವುದಿಲ್ಲ. ಆಗ ಪ್ರಮುಖ ವ್ಯಾಪಾರ ಕೇಂದ್ರಗಳ ಮಧ್ಯೆ ವಿಶಾಲವಾದ ರಸ್ತೆಗಳಿದ್ದವು. ಭೂಮಾರ್ಗಗಳಲ್ಲಿ ವ್ಯಾಪಾರವು ನಡೆಯುತ್ತಿದ್ದಿತು ಮುಖ್ಯವಾಗಿ ಎತ್ತಿನ ಬಂಡಿಗಳ[89] ಮತ್ತು ಕತ್ತೆ, ಕೋಣ, ಕುದುರೆ, ಆನೆ ಮುಂತಾದ ಪ್ರಾಣಿಗಳ ಮೇಲೆಯು ಸಾಮಾನುಗಳನ್ನು ಹೇರಿ ಸಾಗಿಸುತ್ತಿದ್ದರು.[90] ಸಣ್ಣಸಣ್ಣ ವಸ್ತುಗಳನ್ನು ತಲೆಯ ಮೇಲೆ ಹಸುಬೆ ಚೀಲಗಳಲ್ಲಿ ಹೊತ್ತು ವ್ಯಾಪಾರ ಮಾಡುತ್ತಿದ್ದರು.

ಹಸುಬೆಯ ಚೀಲದ ವರ್ಣನೆಯ ಒಂದು ಶಾಸನದಲ್ಲಿ ಬಂದಿದೆ ಎಣ್ಣೆಯನ್ನು ಕೊಡಗಳಲ್ಲಿ ತುಂಬಿ ಮಾರುತ್ತಿದ್ದರು.[91]

7.12 ವರ್ತಕರು

ವ್ಯಾಪಾರವನ್ನು ವೃತ್ತಿಯಾಗಿಸಿ ಕೊಂಡವರೇ ವರ್ತಕರು. ವರ್ತಕರಲ್ಲಿ ವಿವಿಧ ಪ್ರಕಾರಗಳಿದ್ದು ಅವರನ್ನು ಶೆಟ್ಟಿ ಬಣಂಜಿಗ, ಸೆಟ್ಟಿ, ನೇಕಾರ ನಾನಾದೇಶಿ ಉಭಯ ನಾನಾದೇಶಿ ಎಂಬುದಾಗಿ ಕರೆಯಲಾಗುತ್ತಿತ್ತು.[92] ಅದರಂತೆ ದ್ವಾರಸಮುದ್ರದ ಕುಳವಾಡಿಯ[93] ಪಾರ್ಶ್ವನಾಥ ಬಸದಿಯ[94] ಶಾಸನಗಳು ಜೈನ ಮತ್ತು ಶೈವ ಧರ್ಮಗಳಿಗೆ ಸೇರಿದ ಶೆಟ್ಟಿ ಬಣಂಜಿಗರನ್ನು ಉಲ್ಲೇಖಿಸುತ್ತದೆ.

ಮಧ್ಯಕಾಲೀನ ಕರ್ನಾಟಕದ ಪಟ್ಟಣಗಳ ವರ್ತಕರನ್ನು ನಕಾರರು ಎಂದು ಕರೆಯಲಾಗಿದೆ. ಶಾಸನಗಳು ಇವರನ್ನು ಅಂಗಡಿ ಶೆಟ್ಟಿಯವರೆಂದು ಕರೆದಿದೆ. ಇವರು ಸಂತೆಗಳ ಪಟ್ಟಣಗಳ ವ್ಯಾಪಾರಿಗಳಾಗಿ ಹೆಚ್ಚಾಗಿ ಪಟ್ಟಣಗಳಲ್ಲಿ ವಾಸಿಸುತ್ತಿದ್ದರೆಂದು ಅಭಿಪ್ರಾಯ ಪಟ್ಟಿದ್ದಾರೆ[95] ದೋರಸಮುದ್ರದ ಗುಮ್ಮತೀರ ತಿಟ್ಟುವಿನ ಶಾಸನವು ಮೂರು ಪಟ್ಟಣಗಳಾದ ದೋರಸಮುದ್ರ ಬೇಲೂರು ಮತ್ತು ವಿಷ್ಣು ಸಮುದ್ರಗಳ ನಕಾರರನ್ನು[96] ಬಿದರ ಕೆರೆಯ ಶಾಸನವು ಸಹ ದೋರಸಮುದ್ರದ ನಕರರನ್ನು ಉಲ್ಲೇಖಿಸುತ್ತವೆ.[97] ಅವರು ತಮ್ಮ ವರ್ತಕ ವೃತ್ತಿಯ ಪರವಾಗಿ ದೋರಸಮುದ್ರದಲ್ಲಿ ನಗರೇಶ್ವರ (ನಕರೇಶ್ವರ) ದೇವಾಲಯವನ್ನು ನಿರ್ಮಿಸಿದ್ದರು.

ನಾನಾದೇಸಿ ಉಭಯ ದೇಶಿಗಳು ಒಂದು ನಾಡಿನ ವ್ಯಾಪ್ತಿಯಲ್ಲಿ ಬಳಕೆಯಾಗುತ್ತಿದ್ದ ವರ್ತಕರ ಪದಗಳಾಗಿದ್ದವು. ಇಲ್ಲಿ ದೇಶೀಯರೆಂದರೆ ಆ ನಾಡಿನ ಹಾಗೂ ನಾನಾ ದೇಶಿ ಎಂದರೆ ವಿವಿಧ ನಾಡುಗಳ ವರ್ತಕರೆಂದು ಕರೆದಿದ್ದಾರೆ. ಗುಮ್ಮತೀರ ತಿಟ್ಟುವಿನಲ್ಲಿರುವ ಶಾಸನವು ನಾನಾ ದೇಶಿವರ್ತಕರು ಬೇರೆ ಬೇರೆ ಸ್ಥಳಗಳಿಂದ ಸರಕುಗಳನ್ನು ಹೇರಿಕೊಂಡು ಬಂದರೆಂದು ಆಗ ಹೊಯ್ಸಳರು ಚೋಳರು ಮತ್ತು ಪಾಂಡ್ಯರ ಪ್ರದೇಶಗಳನ್ನು ಗೆದ್ದುಕೊಂಡಿದ್ದ ಪರಿಣಾಮವಾಗಿ ಉಭಯ ನಾನಾದೇಶಿ ವರ್ತಕರು ರಾಜಧಾನಿಗೆ ವ್ಯಾಪಾರಕ್ಕಾಗಿ ಬಂದು ಹೋಗುತ್ತಿದ್ದರೆಂದು ಅಭಿಪ್ರಾಯ ಪಡಲಾಗಿದೆ.[98]

ವರ್ತಕರು ದೇಶದೊಳಗೆ ಮತ್ತು ಹೊರಗೆ ಸರಕುಗಳ ಸಾಗಣೆ ಮಾಡುತ್ತಿದ್ದರು. ಈ ವಾಣಿಜ್ಯ ಚಟುವಟಿಕೆಗಳ ಹೊಯ್ಸಳ ಸರ್ಕಾರಕ್ಕೆ ಹಲವಾರು ಹೊಲವರು ಎಂಬ ಸಾಗಣೆ ಸುಂಕವನ್ನು ತರುತ್ತಿದ್ದಿತು.[99] ಅದು ಆಮದು ರಫ್ತು ತೆರಿಗೆಯಾಗಿತ್ತು. ಸುಂಕ ವಸೂಲಿಯ ಮನೆಯನ್ನು ಸುಂಕದ ಮನೆ ಎಂದು ಕರೆಯುತ್ತಿದ್ದರು.[100] ಅಲ್ಲಿಯ ಅಧಿಕಾರಿಗೆ ಸುಂಕದ ಹೆಗಡೆ ಎಂದು ಹೆಸರು ಜೈನ ಆಗ ವರ್ತಕರು ಪ್ರಭಾವಶಾಲಿಗಳು ಶ್ರೀಮಂತರು ಆಗಿದ್ದರು.[101] ಅವರು ಜೈನ ದೇವಾಲಯಗಳಿಗೆ ಧಾರಾಳವಾಗಿ ದಾನ ಮಾಡುತ್ತಿದ್ದರು. ನೀರಾವರಿಗೆ ಅಗತ್ಯವಾದ ಕೆರೆಗಳ ನಿರ್ಮಾಣದಲ್ಲಿ ಅವರು ಹಣವನ್ನು ದೂಡುತ್ತಿದ್ದರು. ಇದರಿಂದ ವಾಣಿಜ್ಯ, ವ್ಯಾಪಾರಗಳು ವಿಫುಲ ವಾಗಿ ನಡೆಯುತ್ತಿದ್ದವು ಸರ್ಕಾರಕ್ಕೆ ಅದರಿಂದ ಲಾಭವಾಗುತ್ತಿತ್ತು ಎಂದು ಸೂಚಿತವಾಗುತ್ತದೆ. ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡಲಾಗಿದೆ.

1) ಶ್ರೀಮಂತ ವರ್ತಕನಾದ ದೇವಿಸೆಟ್ಟಿಯು ಅವನ ಗುರುಗಳಾದ ಬಾಲಸಂದ್ರ ಮುನಿಗಳ ಕೋರಿಕೆಯ ಮೇರೆಗೆ ದೋರಸಮುದ್ರದಲ್ಲಿ ಜಿನಾಲಯವೆಂಬ ಹೆಸರಿನ ಜೈನ ದೇವಾಲಯವನ್ನು ಕಟ್ಟಿಸಿದನು.[102]
2) ಶ್ರೀಪಾಲ ದೇವನ ಶಿಷ್ಯರಾದ ಮರಿಸೆಟ್ಟಿ, ಕಾಮಿಶೆಟ್ಟಿ, ಭಾರತಿಸೆಟ್ಟಿ, ಮತ್ತು ರಾಜಸೆಟ್ಟಿ ಇವರು ದೋರಸಮುದ್ರದಲ್ಲಿ ಅಭಿನವ ಶಾಮತಿನಾಥನಿಗಾಗಿ ಒಂದು ಜಿನಾಲಯವನ್ನು ನಿರ್ಮಿಸಿದರು.
3) ಕಮ್ಮಟ ಚಟ್ಟ ಸೆಟ್ಟಿಯು ಹಡಗುಗಳಲ್ಲಿ ಕುದುರೆಗಳು ಆನೆಗಳು ಮತ್ತು ಮುತ್ತುಗಳನ್ನು ಆಮದು ಮಾಡಿಕೊಂಡು ರಾಜರಿಗೆ ಮಾರುತ್ತಿದ್ದರು.
4) ದಾಸಯ್ಯ ಸೆಟ್ಟಿಯು ಪೂರ್ವದಿಂದ ಪಶ್ಚಿಮಕ್ಕೆ ಉತ್ತರದಿಂದ ದಕ್ಷಿಣಕ್ಕೆ ಪಶ್ಚಿಮ ಪೂರ್ವ ಹಾಗೂ ದಕ್ಷಿಣ ಉತ್ತರಗಳಿಗೂ ಸರಕುಗಳನ್ನು ಸಾಗಿಸುತ್ತಿದ್ದನು.
5) ಹೊಯ್ಸಳ ಸೋಮೇಶ್ವರನ ಕಾಲದಲ್ಲಿ (ಕ್ರಿ.ಶ. 1225) ಕುಂಜ ನಂಬಿಸೆಟ್ಟಿಯು ಮಾಳವ ಅರಸರು ಕಳಿಂಗ, ಚೋಳ ಮತ್ತು ಪಾಂಡ್ಯ ಅರಸನ ಬೇಡಿಕೆಗಳನ್ನು ಪೂರೈಸುತ್ತಿದ್ದನು.
6) ಗಂಡರ ದೇವಸೆಟ್ಟಿಯು ಹೊಸದಾಗಿ ಕೆರೆಯನ್ನು ನಿರ್ಮಿಸಿದ ಮೇಲೆ ಅದರ ಕೆಲಗಿನ ಕಾಡನ್ನು ಕಡಿದು ಹೊಸ ಭತ್ತದ ಗದ್ದೆಗಳನ್ನು ನಿರ್ಮಿಸಿದನು.

ಹೀಗೆ ವಾಣಿಜ್ಯ ನಿರತರಾದ ವರ್ತಕರು ಕೂಡ ಹೊಯ್ಸಳ ಆಡಳಿತಕ್ಕೆ ಬೆಂಬಲ ನೀಡುತ್ತಿದ್ದರು. ಹೊಯ್ಸಳ ಅರ್ಥವ್ಯವಸ್ಥೆಯ ವಿತರಣ ಕರ್ತವ್ಯಗಳನ್ನು ಅವರು ನಿರ್ವಹಿಸುತ್ತಿದ್ದರು. ವರ್ತಕರ ಸಂಘಗಳು ಅರಸರೊಂದಿಗೆ ನಿಕಟವಾದ ಸಂಪರ್ಕವನ್ನಿರಿಸಿಕೊಂಡಿದ್ದವು.

ಎ. ವರ್ತಕ ಸಂಘಗಳು

ಸಾಮಾನ್ಯವಾಗಿ ವೃತ್ತಿಗಳು ಹುಟ್ಟಿ ಬೆಳೆದ ನಂತರವೇ ಸಂಘಗಳ ರಚನಾ ಕಾರ್ಯ ಪ್ರಾರಂಭಗೊಳ್ಳುವುದು. ಆದರೆ ಮಧ್ಯಕಾಲೀನ ಕರ್ನಾಟಕದಲ್ಲಿ ಎಲ್ಲ ವೃತ್ತಿಗಳು ಸಂಘಗಳಾಗಿ ರೂಪುಗೊಳ್ಳಲಿಲ್ಲ. ಕೆಲವೊಂದು ಪ್ರಮುಖ ವೃತ್ತಿಯವರು ಮಾತ್ರ ಸಂಘಗಳನ್ನು ಸಂಯೋಜಿಸಿ ಕೊಂಡರು. ಹೀಗೆ ಸಮಾನ ವೃತ್ತಿಯವರು ತಮ್ಮ ಸಮಾಜದ ಅಥವಾ ಸಮುದಾಯದ ಜನರೊಂದಿಗೆ ಸೇರಿಕೊಂಡು ಕಟ್ಟಿದ ಶ್ರೇಣಿಗಳೇ ಸಂಘಗಳು.

ಶಾಸನಗಳಲ್ಲಿ ವಿನಿಮಯ ವರ್ತಕ ಪ್ರಕಾರದವರ ವ್ಯವಹಾರ ಚಟುವಟಿಕೆಗಳು ವಿಶೇಷವೆನಿಸಿವೆ. ಇವರಲ್ಲಿ ಸೆಟ್ಟಿ ಬಣಂಜಿಗ, ಸೆಟ್ಟಿ ಗುತ್ತ ನಕರ ವಡ್ಡ ವ್ಯವಹಾರಿ ಗವರೆ, ಗಾತ್ರಿಕ ಸೆಟ್ಟಿಕಾರ ವರ್ತಕ ಸಂಘಗಳಲ್ಲಿ ಇವರು ಅಯ್ಯಾವೊಳೆ ಐನೂರ್ವರು ಎಂಬ ವಿನಿಮಯವರ್ತಕ ಸಂಘದ ಸದಸ್ಯರಾಗಿದ್ದುದಕ್ಕೆ ಶಾಸನಾಧಾರಗಳಿಲ್ಲ.[103]

ವರ್ತಕ ಸಂಘಗಳಿಗೆ ಒಳ್ಳೆಯ ಹೆಸರು ಪಡೆದ ವ್ಯಕ್ತಿಗಳು ಅಧ್ಯಕ್ಷರಾಗಿರುತ್ತಿದ್ದರು. ಇವರನ್ನು ಸೆಟ್ಟಿ ಪಟ್ಟಣಸ್ವಾಮಿಗಳೆಂದು ಕರೆಯಲಾಗುತ್ತಿತ್ತು. ಸಂಘವು ಸಾಮಾನ್ಯವಾಗಿ ದೇವಾಲಯ ದಲ್ಲಿ ಸಭೆ ಸೇರಿ ಕಲಾಪಗಳನ್ನು ನಡೆಸುತ್ತಿತ್ತು. ಸದಸ್ಯರ ನಡುವೆ ಅಹಿತಕರ ಸ್ಪರ್ಧೆಯನ್ನು ತಪ್ಪಿಸುವುದು, ಶಿಸ್ತಿನ ಕೆಲವು ನಿಯಮಗಳನ್ನು ಜಾರಿಗೆ ತರುವುದು ಮತ್ತು ಸದಸ್ಯರ ಸಮಾನ ಹಿತಾಸಕ್ತಿಗಳನ್ನು ಕಾಪಾಡುವುದು ಇದಕ್ಕಾಗಿ ಸಂಘವು ಶ್ರಮಿಸುತ್ತಿತ್ತು. ತನ್ನದೆ ಆದ ನಾಣ್ಯಗಳನ್ನು ಟಂಕಿಸಿಕೊಳ್ಳುವ ಅಧಿಕಾರ ಸಂಘಕ್ಕಿತ್ತು. ತನ್ನ ಸದಸ್ಯರಿಂದ ಸರ್ಕಾರಕ್ಕೆ ಕೊಡಬೇಕಾದ ತೆರಿಗೆಯನ್ನು ಸಂಗ್ರಹಿಸಿ ಕೊಡುವ ಹೊಣೆಯು ಸಂಘದ್ದಾಗಿತ್ತು. ಅದರ ಅಧ್ಯಕ್ಷನು ಅವುಗಳನ್ನು ಸಂಗ್ರಹಿಸಿ ಭಂಡಾರಕ್ಕೆ ಸಲ್ಲಿಸುತ್ತಿದ್ದನು.

ವರ್ತಕ ಸಂಘಗಳು ತಮ್ಮ ಸದಸ್ಯರು ಮಾರಾಟ ಮಾಡುತ್ತಿದ್ದ ವಸ್ತುಗಳ ಮೇಲೆ ತೆರಿಗೆಯನ್ನು ವಿಧಿಸಬಹುದಾಗಿತ್ತು. ಬಹುಸಂಖ್ಯೆಯಲ್ಲಿ ವರ್ತಕರು ಗುಂಪುಗೂಡಿ ಕಾಡುಗಳ ಮೂಲಕ ಪ್ರಯಾಣ ಮಾಡುವ ಸಂದರ್ಭವಿದ್ದರೆ ಅವರು ತಮ್ಮ ಪ್ರಾಣ ಮತ್ತು ಸೊತ್ತುಗಳ ರಕ್ಷಣೆಗಾಗಿ ಕಾವಲುಗಾರರು ಇಲ್ಲವೇ ಪಾಳೆಯಗಾರರೊಂದಿಗೆ ಕರಾರು ಮಾಡಿಕೊಳ್ಳುತ್ತಿದ್ದರು.

ವರ್ತಕ ಸಂಘಗಳು ಕಸುಬು ಸಂಘಗಳ ಮೇಲೆ ಒಂದು ರೀತಿಯ ಅಧಿಕಾರವನ್ನು ಚಲಾಯಿಸುತ್ತಿದ್ದವು ಎಂಬುದನ್ನು ಕೆಲವು ಶಾಸನಗಳು ಸೂಚಿಸುತ್ತವೆ. ಬಹುಶಃ ವರ್ತಕ ಸಂಘವು ಕಸುಬುದಾರರಿಗೆ ಹಣವನ್ನು ಸಾಲವಾಗಿ ನೀಡಿ ನಿರ್ದಿಷ್ಟ ಪ್ರಮಾಣ ವಸ್ತುಗಳನ್ನು ನಿರ್ದಿಷ್ಟ ಸಮಯದೊಳಗೆ ಪೂರೈಸಬೇಕೆಂದು ವಿಧಿಸುತ್ತಿದ್ದಂತೆ ತೋರುತ್ತದೆ. ವರ್ತಕರು ವ್ಯಕ್ತಿಗತವಾಗಿ ಹಾಗೂ ಸಂಘದ ಸದಸ್ಯರಾಗಿ ದೇವಾಲಯಗಳಿಗೆ ಅಪಾರವಾದ ದಾನಧರ್ಮಗಳನ್ನು ಮಾಡುತ್ತಿದ್ದರು. ತಮ್ಮ ಲಾಭದ ಒಂದು ಭಾಗವನ್ನು ಪುಣ್ಯ ಸಂಪಾದನೆಗಾಗಿ ಮೀಸಲಾಗಿ ಇಡುತ್ತಿದ್ದರು. ಸರ್ಕಾರಕ್ಕೆ ವಿವಿಧ ತೆರಿಗೆಯನ್ನು ಸಲ್ಲಿಸುತ್ತಾ ಸಾಮ್ರಾಜ್ಯದ ಸಂಪತ್ತಿಗೂ ಮತ್ತು ಅಭ್ಯುದಯಕ್ಕೆ ತಮ್ಮ ಕೊಡುಗೆಯನ್ನು ಸಲ್ಲಿಸುತ್ತಿದ್ದರು.

ii. ವ್ಯಾಪಾರ

ಪ್ರಾಚೀನ ಕರ್ನಾಟಕದಲ್ಲಿ ಎರಡು ಬಗೆಯ ವ್ಯಾಪಾರ ಪದ್ಧತಿ ರೂಢಿಯಲ್ಲಿತ್ತು. ನಗರ ವ್ಯಾಪಾರದ ಅಂಗಡಿಗಳಲ್ಲಿ ಸಂತೆಯ ವ್ಯಾಪಾರವು ಹರದಲ್ಲಿ ವ್ಯಾಪಾರ ವ್ಯವಹಾರಗಳು ಪಾಣನಿಯ ಕಾಲದಿಂದಲು ಪಣ ಎಂಬ ಹೆಸರಿನಿಂದ ಪ್ರಸಿದ್ಧವಾಗಿತ್ತು. ಪಂಪನು ಹಸ್ತಿನಾವತಿಯಲ್ಲಿ "ಬಚ್ಚರಾಪಣಂಗಳ್" ಕುಬೇರನ ಸದನಗಳ ಹಾಗೆ ಇದ್ದನ್ನು ಧನದರನ್ನರಿ ವರೆನಿಪಪರದರಿಂ" ಎಂದು ವ್ಯಾಪಾರಿಗಳನ್ನು ವರ್ಣಿಸಿದ್ದಾನೆ. ಪಸರದ ಅರ್ಥ ವಿಸ್ತರಿಸಿದ್ದರು ಇಂದಿಗೂ ಸಂತೆಗೆ ಬರುವ ಪಸಾರದವರನ್ನು ಹಳ್ಳಿಗಳಲ್ಲಿ ಕಾಣಬಹುದು. ಈಗಿನಂತೆ ಇನ್ನು ಕೆಲವು ಊರುಗಳಲ್ಲಿ ತೋರಿ ಬರುವ ಅಂಗಡಿಗಳು ಸಂತೆಯು ಕೆಲವಡೆಗಳಲ್ಲಿ ಇದ್ದಿರಬಹುದು. ಒಟ್ಟು ವ್ಯಾಪಾರ ಸಾಮಾನ್ಯವಾಗಿ ಒಂದು ಬಗೆಯ ಜಾತಿ ಅಥವಾ ಜನಾಂಗದವರ ವೃತ್ತಿಯಾಗಿ ಬೆಳೆದಿತ್ತು. ಅವರೆಲ್ಲ ಒಂದು ಸಂಘವೆಂಬ ಭಾವದಿಂದ ನಡೆದುಕೊಳ್ಳುತ್ತಿದ್ದರು. ಈ ಗುಂಪುಗಳೇ ಸಂಘ ಶ್ರೇಣಿಗಳಾಗಿದ್ದವು. ಸಂಘ, ಶ್ರೇಣಿ, ಕೊತ್ತಳಿ ನಖರ (ನಗರ ಅಥವಾ ನಕರ) ಸೆಟ್ಟಿಗಾರ ಇವು ವರ್ತಕರ ಸಂಸ್ಥೆಗಳು ಬಣಜಿಗರೆಂದರೆ ವರ್ತಕರು ಇವರ ಸಂಸ್ಥೆಗಳೇ ಸಂತೆಗಳು ಅಕ್ಕಮಹಾದೇವಿಯ ವಚನ "ಸಂತೆಯೊಳಗೊಂದು ಮನೆಯ ಮಾಡಿ ಶಬ್ಧಕ್ಕೆ ನಾಚಿದಡೆಂತಯ್ಯ" ಎಂಬುದರಿಂದ ಅವುಗಳ ವಹಿವಾಟದ ಗದ್ದಲ ಹೆಚ್ಚು ಎನಿಸುತ್ತದೆ.

ವ್ಯಾಪಾರ ಹಾಗೂ ವಾಣಿಜ್ಯಗಳು ಅವಶ್ಯಕವಾಗಿ ರಫ್ತು ಮತ್ತು ಆಮದು ಸಾರಿಗೆಯ ಮೂಲ ಆಂತರಿಕ ಹಾಗೂ ಬಾಹ್ಯ ವ್ಯಾಪಾರ ಸಮುದ್ರ ವ್ಯಾಪಾರದ ಸಂಘಟನೆ ಹಾಗೆಯೇ

ಪರಿಮಾಣಾತ್ಮಕ ಅಂಶದಂತಹ ಹಲವಾರು ಅಂಶಗಳನ್ನು ಹೊಂದಿದೆ. ಶಾಸನಗಳು ಹಾಗೂ ಇತರ ಮೂಲಗಳು ನಮಗೆ ಈ ಕಾಲದ ವಾಣಿಜ್ಯದ ಹಲವಾರು ವಸ್ತುಗಳ ಪಟ್ಟಿಯನ್ನು ನೀಡುತ್ತದೆ.

ವ್ಯಾಪಾರದ ಪ್ರಮುಖ ಪದಾರ್ಥಗಳೆಂದರೆ ಹತ್ತಿ ಬಟ್ಟೆ, ಗಂಧದ ಮರ, ಅಡಿಕೆ, ಸಾಂಬಾರ ಪದಾರ್ಥಗಳು ತುಪ್ಪ ಹಾಗೂ ಅರಣ್ಯ ಉತ್ಪನ್ನಗಳು ಕುಂಕುಮ, ವೀಳ್ಯದೆಲೆ, ಹಳದಿ ಔಷಧಿಯ ಗಿಡಮೂಲಿಕೆಗಳು, ಕಿತ್ತಳೆ, ಬಾಳೆಹಣ್ಣು, ತೆಂಗು, ಗೋಧಿ, ಅಕ್ಕಿ, ಎಣ್ಣೆ, ಎಳ್ಳು, ಉಪ್ಪು, ಹತ್ತಿದಾರ, ಮರದ ಹಲಗೆಗಳು, ಬಿದಿರು ಲೋಹದ ಪ್ರತಿಮೆಗಳು[104] ಹಾಗೂ ಬರವಣಿಗೆಯ ಸಾಮಗ್ರಿಗಳಾದ ಸ್ಲೇಟು, ಪೆನ್ಸಿಲ್ ಹಾಗೂ ತಾಳೆಗರಿಗಳಾಗಿದ್ದವು.[105] ಇವುಗಳಲ್ಲಿ ಪ್ರಮುಖ ಆಮದು ಪದಾರ್ಥಗಳೆಂದರೆ ಹತ್ತಿ ಬಟ್ಟೆ, ಶ್ರೀಗಂಧ, ಅಡಿಕೆ, ತುಪ್ಪ, ಸಾಂಬಾರ ಪದಾರ್ಥಗಳು ಹಾಗೂ ವನ್ಯ ಉತ್ಪನ್ನಗಳಾಗಿದ್ದವು. ಕರ್ನಾಟಕದ ವರ್ತಕ ಸಮುದಾಯಗಳು ಭಾರತದ ಹಲವಾರು ಭಾಗಗಳಲ್ಲಿ ವ್ಯಾಪಾರ ಮಾಡುತ್ತಿದ್ದರು. ಬಳ್ಳಿಗಾವೆಯ ವರ್ತಕರು ಸೌರಾಷ್ಟ್ರ ಮಗಧ ಪಾಂಡ್ಯ ಚೇರ ಚೋಳ ಹಾಗೂ ಇತರೆ ರಾಷ್ಟ್ರಗಳೊಂದಿಗೆ ವಾಣಿಜ್ಯ ಸಂಪರ್ಕವನ್ನು ಹೊಂದಿದ್ದರು.[106] ಒಂದು ಶಾಸನವು ತಿಳಿಸುವಂತೆ ಲಾಳ ಮಾಲೆಯೊಳ ಹಾಗೂ ಇನ್ನಿತರ ರಾಷ್ಟ್ರಗಳ ನಾನಾ ದೇಶಿಗಳು ಹಿರಿಸುಂಗಿಯಲ್ಲಿ ಒಂದು ಮಲೆನಾಡನ್ನು ಸ್ಥಾಪಿಸಿದರು. ಇನ್ನೊಂದು ಶಾಸನವು ರಾಳ, ಚೋಳ, ಮಲೆಯಾಳ ಹಾಗೂ ತೆಲುಂಗ ವರ್ತಕರ ಬಗ್ಗೆ ಉಲ್ಲೇಖಗಳನ್ನು ನೀಡುತ್ತದೆ.[107]

ಸಿ. ಸಾರಿಗೆಯ ಮಾರ್ಗಗಳು

ಈ ಕಾಲದಲ್ಲಿ ವ್ಯಾಪಾರ ಮಾರ್ಗಗಳು ಬಹಳಷ್ಟಿದ್ದವು ಅವುಗಳು ಪ್ರಮುಖ ಪ್ರಾಂತ್ಯಗಳು ಹಾಗೂ ವಾಣಿಜ್ಯ ಕೇಂದ್ರಗಳನ್ನು ಸಂಪರ್ಕಿಸುತ್ತಿದ್ದವು. ಇವುಗಳಲ್ಲಿ ಕೆಲವನ್ನು ಹೆಬ್ಬಟ್ಟ ಅಥವಾ ಹೆದ್ದಾರಿ ಎಂದು ಕರೆಯಲಾಗುತ್ತಿತ್ತು. ಇನ್ನುಳಿದವು ಕೇವಲ ದಾರಿಗಳಾಗಿದ್ದವು. ರಸ್ತೆಗಳು ಗಾಡಿ ಮಾರ್ಗಗಳು ಹಾಗೂ ಗಲ್ಲಿಗಳು ಅಥವಾ ಓಣಿಗಳು ಸಾರ್ವಜನಿಕ ಸ್ವತ್ತಾಗಿದ್ದು ಸಾಮಾನ್ಯವಾಗಿ ಎಲ್ಲರೂ ಬಳಸಬಹುದಾಗಿತ್ತು. ಜಾತ್ರೆಗಳು ಹಾಗೂ ಸಂತೆಗಳು ಜರುಗುತ್ತಿದ್ದ ಸ್ಥಳಗಳಲ್ಲಿ ಹೆಚ್ಚು ರಕ್ಷಣೆಯನ್ನು ಒದಗಿಸಲು ಪುರಸಭೆಯು ಬಹಳ ಮುತುವರ್ಜಿಯನ್ನು ವಹಿಸುತ್ತಿತ್ತು. ವ್ಯಾಪಾರ ಕೇಂದ್ರಗಳ ನಡುವೆ ಪ್ರಮುಖವಾದ ಮತ್ತು ಅಗಲವಾದ ರಸ್ತೆಗಳಿದ್ದವು ಎಂದು ತಿಳಿದು ಬರುತ್ತದೆ.

ಬಿ. ನಾಣ್ಯವ್ಯವಸ್ಥೆ

ಹೊಯ್ಸಳರ ಕಾಲದಲ್ಲಿ ನಾಣ್ಯ ಹಾಗೂ ವಸ್ತು ವಿನಿಮಯ ಪದ್ಧತಿಗಳೆರಡು ರೂಢಿಯಲ್ಲಿದ್ದವು ಎಂಬ ಊಹೆಯನ್ನು ಮಾಡಬಹುದು. ಸುಂಡಿ, ಲೊಕ್ಕಿಗುಂಡಿ ಹಾಗೂ ದ್ವಾರಸಮುದ್ರದ ಬಳಿಯಿದ್ದ ಟಂಕಸಾಲೆಗಳು ಬಹಳ ಪ್ರಸಿದ್ಧಿಯನ್ನು ಹೊಂದಿದ್ದವು. ಈ ಟಂಕಸಾಲೆಗಳ ಮೇಲ್ವಿಚಾರಣೆಗಾಗಿ ರಾಜನು ಅಧಿಕಾರಿಗಳನ್ನು ನೇಮಿಸಿದ್ದನು.[108] ಕೆಲವು ದೇವಾಲಯಗಳು ಟಂಕಸಾಲೆಗಳಾಗಿದ್ದವು. ಲೊಕ್ಕಿಗುಂಡಿಯ ಬಳಿ ಟಂಕಿಸಲಾಗುತ್ತಿದ್ದ ನಾಣ್ಯವನ್ನು ಲೊಕ್ಕಿ ಗದ್ಯಾಣವೆಂದು[109] ಕರೆಯಲಾಗುತ್ತಿತ್ತು. ಆನೆಯ ಮೊಹರನ್ನು ಹೊಂದಿದ ನಾಣ್ಯವನ್ನು ನವಿಲು ಪೊಣವೆಂದು ಕರೆಯುತ್ತಿದ್ದರು. ಶಾಸನಗಳು ಗದ್ಯಾಣ, ಕಾಲಂಜು, ಪೊಣ್, ಪಣ, ಅಡ್ಡ, ಹಾಗ, ವಿಸ, ಬೆಲೆ ಹಾಗೂ ಕಾಸು ಎಂಬ ವಿವಿಧ ನಾಣ್ಯಗಳ ಉಲ್ಲೇಖವನ್ನು ಮಾಡಿವೆ. ಪಣವು ಗದ್ಯಾಣದ 1/10 ಅಂಶವಾಗಿತೆಂದು ತಿಳಿದು ಬರುತ್ತದೆ. ಗದ್ಯಾಣ ಅಥವಾ ಪೊಣ್ ಬಹಳ ಪ್ರಸಿದ್ಧಿಯನ್ನು ಹೊಂದಿದ್ದ ನಾಣ್ಯವಾಗಿತ್ತು. ಈ ನಾಣ್ಯದ ತೂಕವು 965 ಹಾಗೂ 63 ಗ್ರೇನ್‌ಗಳೆಂದು ಹೇಳಲಾಗುತ್ತದೆ.[110] ಕ್ರಿ.ಶ. 1228ರ ವೀರ ಸೋಮೇಶ್ವರನ ಆಳ್ವಿಕೆಯ ನಂಜನಗೂಡಿನ ತಾಲ್ಲೋಕಿನ ಬದನವಾಳು ಗ್ರಾಮದ ಶಾಸನವೊಂದು ಸ್ಥಾನಿಕರು ನಿರ್ಬಂಧಿಯಾಗಿ ಕೊಡಬೇಕಾದ 6 ಗದ್ಯಾಣ ಗಳಲ್ಲಿ 2 ಗದ್ಯಾಣಗಳಷ್ಟು ಅಕ್ಕಿ ಮತ್ತು 5 ಪಣಗಳಷ್ಟು ದೇವರುಗಳಾದ ಮೂಲಸ್ಥಾನದೇವ ಮತ್ತು ಡೊಂಬೇಶ್ವರ ದೇವರುಗಳ ದಿನನಿತ್ಯದ ಪೂಜೆಗಾಗಿ ಕೊಡಬೇಕೆಂದು ತಿಳಿಸುತ್ತದೆ.[111] ಕೆಲವು ಶಾಸನಗಳಲ್ಲಿ ದಾಖಲಾಗಿರುವ ಇತರ ನಾಣ್ಯಗಳೆಂದರೆ ಡ್ರಮ್ಮ್ ಹಾಗೂ ನಿಷ್ಕ ಡ್ರಮ್ ಎನ್ನುವುದು ಗ್ರೀಕ್‌ನ ಪದವು ಡ್ರಕ್ ಎಂಬ ಪದದಿಂದ ಬಂದಿದೆ. ಇದೊಂದು ರೋಮನ್ ನಾಣ್ಯವಾಗಿದೆ. ನರಸಿಂಹನ ಕಾಲದಲ್ಲಿ ಆತನ ಅಧೀನದಲ್ಲಿದ್ದ ಹೆಬ್ಬಾಳೆ ಎಂಬ ಊರಿನ ಆದಾಯದಿಂದ 402 ಗದ್ಯಾಣಗಳಷ್ಟು ಹಣವನ್ನು ದಾನ ಮಾಡಿರುವುದು ತಿಳಿದು ಬರುತ್ತದೆ. ವಾರಾಣಾಸಿ ನಿವಾಸಿಗಳು ನೀಡುತ್ತಿದ್ದ ಹಣವನ್ನು ಸ್ಥಳೀಯ ನಾಣ್ಯದ ಹೆಸರಿನಿಂದ ಕರೆದಿದ್ದಾರೆ. ಆದ್ದರಿಂದ 402 ಹೊಯ್ಸಳ ನಾಣ್ಯಗಳು 331 ಸಮಕಾಲೀನ ಸುಲ್ತಾನರ ನಾಣ್ಯಗಳಿಗೆ ಸಮನಾಗಿತ್ತೆಂದು ತಿಳಿದು ಬರುತ್ತದೆ.

7.13 ದೇವಾಲಯಗಳ ಆರ್ಥಿಕ ಚಟುವಟಿಕೆ

ದೋರಸಮುದ್ರದ ಶಾಸನಗಳು ತಕ್ಕಮಟ್ಟಿಗೆ ದೇವಾಲಯಗಳು ಆರ್ಥಿಕ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಿದ್ದನ್ನು ತಿಳಿಸುತ್ತವೆ. ಇವು ಸಮಾಜದಲ್ಲಿ ಎಲ್ಲ ವರ್ಗದ ಸದಸ್ಯರಿಗೆ ಬಡ್ಡಿ ರೂಪದಲ್ಲಿ ಸಾಲವನ್ನು ನೀಡುತ್ತಿದ್ದವು. ದೇವಾಲಯಗಳು ತಮ್ಮಲ್ಲಿರುವ ಅಸಲು ಮೊತ್ತವನ್ನು

ಗದ್ಯಾಣ, ಪೊನ್, ಹೊನ್ ಎಂಬ ಪದಗಳಿಂದ ಮತ್ತು ನೀಡಿದ ಸಾಲದಿಂದ ಬರುವ ಬಡ್ಡಿಯನ್ನು ಪಣ, ವಿಸ ಎಂಬ ಹೆಸರುಗಳಿಂದ ಸೂಚಿಸಲಾಗುತ್ತಿತ್ತೆಂದು ಹಾಗೂ ಬಡ್ಡಿಯನ್ನು ತಿಂಗಳಿಗೆ ಇಲ್ಲವೇ ವರ್ಷಕ್ಕೆ ಎಂದು ನಿಗದಿ ಮಾಡಿ ಸಾಲವನ್ನು ನೀಡುತ್ತಿದ್ದವು ಎಂದು ಅಭಿಪ್ರಾಯ ಪಟ್ಟಿದ್ದಾರೆ.[112]

ಎ. ಬಂಡವಾಳ ಹೂಡಿಕೆ ಮತ್ತು ಅದರ ಉಪಯೋಗ

ದೇವಾಲಯಗಳಿಗೆ ಸಮಾಜದ ಪ್ರತಿ ವರ್ಗದಿಂದ ಸ್ಥಿರ ಭದ್ರತೆ ಮತ್ತು ಬಂಡವಾಳ ಹೂಡಿಕೆಯ ರೂಪದಲ್ಲಿ ಲಭ್ಯವಾಗಿತ್ತು. ದಿನದ ಅಸಲು ಮೊತ್ತಕ್ಕೆ ನಿರ್ದಿಷ್ಟ ಬಡ್ಡಿದರವನ್ನು ನಿಗದಿ ಪಡಿಸಿದ್ದರು. ಅದರಂತೆ ಈ ಬಡ್ಡಿಯನ್ನು ದೇವಾಲಯಗಳ ದಿನನಿತ್ಯದ ಪೂಜೆಗಾಗಿ, ದೀಪಗಳನ್ನು ಉರಿಸುವುದಕ್ಕೆ, ವಿದ್ಯಾರ್ಥಿಗಳ ಭೋಜನಕ್ಕಾಗಿ, ಸಿಬ್ಬಂದಿ ನಿಯಂತ್ರಣಕ್ಕಾಗಿ, ದೇವಾಲಯಗಳ ಅಲಂಕಾರಕ್ಕಾಗಿ, ಕೆರೆಕಟ್ಟೆಗಳ ನಿರ್ಮಾಣಕ್ಕಾಗಿ, ಇನ್ನಿತರ ಕಾರ್ಯಗಳಿಗಾಗಿ ಬಳಸಿಕೊಳ್ಳುತ್ತಿದ್ದರು. ಈ ವಿವರಗಳನ್ನು ದೋರಸಮುದ್ರದ ಹೊಯ್ಸಳೇಶ್ವರ ದೇವಾಲಯದ ಗೋಡೆಯ ಮೂರು ಶಾಸನಗಳ ಈ ವಿಷಯವನ್ನು ಖಚಿತ ಪಡಿಸುತ್ತವೆ.[113]

ಬಿ. ನಾಣ್ಯಗಳ ಚಲಾವಣೆ

ಆರ್ಥಿಕತೆಯ ಬೆಳವಣಿಗೆ ಹಾಗೂ ಅದರ ಸಮತೋಲನಕ್ಕಾಗಿ ನಾಣ್ಯಗಳ ಚಲಾವಣೆ ಅತ್ಯವಶ್ಯಕ. ದೋರಸಮುದ್ರದ ಶಾಸನಗಳಲ್ಲಿ ಉಲ್ಲೇಖಗೊಂಡ ನಾಣ್ಯಗಳನ್ನು ನೋಡಿದಾಗ ಈ ನಾಣ್ಯವನ್ನು ತಯಾರಿಸುವ ಕಮ್ಮಟ (ಟಂಕಸಾಲೆ) ಯನ್ನು ದೋರಸಮುದ್ರವು ಹೊಂದಿರಬೇಕು. ಇಂದಿನ ಭಗ್ನಗೊಂಡ ಐದಾರು ಕಟ್ಟಡಗಳ ಅವಶೇಷಗಳ ಆಧಾರದಿಂದ ಹೇಳಬಹುದಾಗಿದೆ.[114] ಪಾರ್ಶ್ವನಾಥ ಬಸದಿಯ ಶಾಸನವು ಕಮ್ಮಟದ ಕುಶಲಕರ್ಮಿಗಳು ದಾನ ನೀಡಿದ ವಿವರವನ್ನು ನೀಡುತ್ತದೆ.[115] ಅದರಂತೆ ದೋರಸಮುದ್ರವು ಟಂಕಸಾಲೆಯನ್ನು ಹೊಂದಿದ್ದುದರ ಬಗೆಗೆ ಹೆಚ್ಚಿನ ಉತ್ಖನನ ಕೈಗೊಂಡಲ್ಲಿ ಖಚಿತವಾಗಬಹುದು.

ಸಿ. ಅಳತೆ ಮತ್ತು ತೂಕಗಳು

ಭೂಮಿ ಇಲ್ಲವೆ ಗದ್ದೆಗಳನ್ನು ಅಳತೆ ಮಾಡಲು ಮತ್ತರು ಕಮ್ಮ, ಸಲಗೆ, ಕೊಳಗ ಎಂಬ ಪದಗಳನ್ನು ಮತ್ತು ಧಾನ್ಯ, ಸಾಂಬಾರ ಪದಾರ್ಥಗಳನ್ನು ಸೊಲ್ಲಗಿ ಬಳ್ಳ, ಮಾನ, ಕೊಳ ಎಂಬ

ತೂಕಗಳಿಂದ ಮತ್ತು ಕಾಯಿ ಹಣ್ಣುಗಳನ್ನು ಎಣಿಕೆ ಮಾಡುತ್ತಿದ್ದರ ವಿವರಗಳನ್ನು ಹೊಯ್ಸಳೇಶ್ವರ ದೇವಾಲಯದ ಗರ್ಭಗುಡಿಯ ಶಾಸನ[116] ಕೇದಾರೇಶ್ವರ ದೇವಾಲಯದ ಶಾಸನ[117] ಸಂತೇವೇರಿಯ ಶಾಸನ[118] ಹಿರಿಯ[119] ಶಾಸನಗಳು ಈ ಮೇಲಿನ ಪದವನ್ನು ಉಲ್ಲೇಖಿಸುತ್ತವೆ.

7.4 ದೋರಸಮುದ್ರದ ಕಲೆ ಮತ್ತು ವಾಸ್ತುಶಿಲ್ಪ

ಹೊಯ್ಸಳರ ಕಾಲದಲ್ಲಿ ಪಟ್ಟಣಗಳ ರಚನೆ ಮತ್ತು ಅದರ ಬೆಳವಣಿಗೆಗೆ ಅನೇಕ ಅಂಶಗಳು ಸಹಾಯಕವಾಗಿದ್ದವು. ಪಟ್ಟಣವು ಅನೇಕ ವೇಳೆ ದೇವಾಲಯಗಳ ಸುತ್ತ ಬೆಳೆಯುತ್ತಿತ್ತು. ಪ್ರಸಿದ್ಧವು ಪವಿತ್ರವು ಆದ ದೇವಾಲಯಗಳು ಯಾತ್ರಾ ಸ್ಥಳಗಳಾಗಿದ್ದು ಹೆಚ್ಚು ಜನರನ್ನು ಆಕರ್ಷಿಸುತ್ತಿದ್ದವು. ಹೀಗೆ ಒಂದು ಮಠೀಯ ಕೇಂದ್ರ ಅಥವಾ ಯಾತ್ರಾಸ್ಥಳ ಒಂದು ಪಟ್ಟಣವಾಗಿ ಬೆಳೆಯುತ್ತಿತ್ತು. ದೋರಸಮುದ್ರ ಮತ್ತು ಅದರ ಉಪನಗರಗಳ ವಿವರಣೆ ಹೊಯ್ಸಳ ಸಾಮ್ರಾಜ್ಯದ ಬೆಳವಣಿಗೆಯನ್ನು ತಿಳಿಯಲು ಸಹಕಾರಿಯಾಗುವುದಲ್ಲದೆ ಆದರೆ ವಿವಿಧ ಉಪನಗರ ಗಳ ಆಡಳಿತವನ್ನು ತಿಳಿಯಲು ಸಹಕಾರಿಯಾಗಿವೆ.[120]

ಹೊಯ್ಸಳ ಶಿಲ್ಪಕಲೆಯ ಪ್ರಮುಖ ಕೇಂದ್ರವಾಗಿ ದೋರಸಮುದ್ರ

ಸುಮಾರು ಮೂರು ಶತಮಾನಗಳವರೆಗೆ ಆಳ್ವಿಕೆ ನಡೆಸಿದ ಹೊಯ್ಸಳರು ರಣರಂಗದಲ್ಲಿ ಅವಿರತವಾಗಿ ಯುದ್ಧದಲ್ಲಿ ತೊಡಗಿದ್ದರು. ಸಾಂಸ್ಕೃತಿಕ ಬೆಳವಣಿಗೆಗೆ ಮಹತ್ವದ ಕೊಡುಗೆಯನ್ನು ಸಲ್ಲಿಸಿದ್ದಾರೆ. ರಾಜಕೀಯ ಸಾಧನೆಗಳಿಗಿಂತ ಸಾಂಸ್ಕೃತಿಕ ರಂಗದಲ್ಲಿ ಅವರು ಸಾಧಿಸಿದ ಸಾಧನೆಗಳು ಮಹತ್ವಪೂರ್ಣವಾಗಿವೆ ಎಂದು ಅಭಿಪ್ರಾಯಪಡಲಾಗಿದೆ.[121] ನಮ್ಮ ದೇಶದಲ್ಲಿ ಕಂಡುಬಂದಿರುವ ವಿವಿಧ ಕಲಾ ಶಾಲೆಗಳು ಆಯಾ ಕಾಲದ ಆಯಾ ಸಂತತಿಯ ಇಲ್ಲವೇ ಆಯಾ ಪ್ರದೇಶಗಳ ಹೆಸರನ್ನು ಹೊಂದಿದ್ದು ಅವುಗಳಲ್ಲಿ ಹೊಯ್ಸಳ ಶೈಲಿಯು ಪ್ರಮುಖವಾಗಿದ್ದು ಈ ಶೈಲಿಯ ಪ್ರಮುಖ ಕೇಂದ್ರವೇ ದೋರಸಮುದ್ರ.

ಹೊಯ್ಸಳರು ದೇವಾಲಯಗಳನ್ನು ನಿರ್ಮಾಣ ಮಾಡುವ ಮೊದಲು ಈ ಅಂಶವನ್ನು ಗಮನದಲ್ಲಿಡುತ್ತಿದ್ದರು. ದೇವಾಲಯಗಳನ್ನು ಗ್ರಾಮಗಳಲ್ಲಿ ಗ್ರಾಮಗಳ ಹೃದಯ ಭಾಗದಲ್ಲಿ ಇಲ್ಲವೇ ಕೆರೆಗಳ ನದಿಗಳ ದಂಡೆಗಳಲ್ಲಿ ಇಲ್ಲವೇ ಗುಡ್ಡದಿಬ್ಬಗಳ ಮೇಲಿನ ಸ್ಥಳಗಳಲ್ಲಿ ನಿರ್ಮಾಣ ಮಾಡುತ್ತಿದ್ದರು. ಹೊಯ್ಸಳರು ಸಾಮಾನ್ಯವಾಗಿ ಶಿವ, ವಿಷ್ಣು ಹಾಗೂ ಜೈನ ದೇವಾಲಯಗಳನ್ನು

ನಿರ್ಮಾಣ ಮಾಡುವಾಗ ಆಯಾ ನೆಲೆಗಳಲ್ಲಿ ಆಯಾ ದೇವರುಗಳ ಅನುಯಾಯಿಗಳನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಿದ್ದರು. ಕೆಲವೊಂದು ಸಮಯದಲ್ಲಿ ಆಯಾ ನೆಲೆಯ ಸುತ್ತಮುತ್ತಲಿನ ಆರಾಧಕರ ಸಂಖ್ಯೆಗೆ ಅನುಗುಣವಾಗಿ ದೇವಾಲಯಗಳನ್ನು ನಿರ್ಮಿಸುತ್ತಿದ್ದರು. ಅದರಂತೆ ವಾಸ್ತು ಶಿಲಿಯು ಯೋಜನೆಯ ಮೇರೆಗೆ ಹೊಸನೆಲೆಯಲ್ಲಿ ಧರ್ಮ ಸಮ್ಮತ, ಸಿದ್ಧಾಂತ ಅನುರೂಪ, ಅನುಕೂಲಗಳಿಗನುಸಾರವಾಗಿ ಯೋಜನೆಗಳನ್ನು ರೂಪಿಸುತ್ತಿದ್ದರೆಂದು ವಿದ್ವಾಂಸರ ಅಭಿಪ್ರಾಯ ವಾಗಿದೆ.[122]

ನಾವು ದೋರಸಮುದ್ರದಲ್ಲಿ ಕಂಡುಬರುವ ಪ್ರಮುಖ ದೇವಾಲಯಗಳು ಅವುಗಳ ತಳವಿನ್ಯಾಸ ಶಿಲ್ಪಗಳ ವಿಷಯಗಳನ್ನು ತಿಳಿಯುವ ಮೊದಲು ಹೊಯ್ಸಳ ಶೈಲಿ ಎಂದರೇನು ಹೊಯ್ಸಳ ಶೈಲಿಗೆ ಬಳಸಿದ ಮಾಧ್ಯಮಗಳು ಇವುಗಳನ್ನು ತಿಳಿಯುವುದು ಸೂಕ್ತವೆನಿಸುತ್ತದೆ.

ಹೊಯ್ಸಳ ಶೈಲ ಅರ್ಥ

ನಮ್ಮ ದೇಶದ ವಾಸ್ತುಶಿಲ್ಪಗಳನ್ನು ನಾಗರ, ವೇಸರ ದ್ರಾವಿಡ ಶೈಲಿಗಳೆಂದು ವಿಂಗಡಿಸ ಲಾಗಿದ್ದು ಅದರಂತೆ ಕಲ್ಯಾಣ ಚಾಲುಕ್ಯರ ವಾಸ್ತುಶೈಲಿಯನ್ನು ಬೆಳೆಸಿಕೊಂಡು ತಮ್ಮದೇ ಆದ ಕೆಲವು ವೈಶಿಷ್ಟ್ಯಗಳನ್ನು ಅಳವಡಿಸಿಕೊಂಡದ್ದಲ್ಲದೆ ಈ ಶೈಲಿಯನ್ನು ವಿವಿಧ ಹೆಸರುಗಳಿಂದ ವಿದ್ವಾಂಸರು ಕರೆದಿದ್ದಾರೆ. ಚಾಲುಕ್ಯರ ಕಾಲದಲ್ಲಿ ರೂಢಿಗೆ ಬಂದ ಈ ಶೈಲಿಯನ್ನು ಹೊಯ್ಸಳರು ರೂಢಿಸಿ ಕೊಂಡು ಪೂರ್ಣ ವಿಕಾಸವನ್ನು ಪಡೆದಿದ್ದರಿಂದ ಅದಕ್ಕೆ ಹೊಯ್ಸಳ ಶೈಲಿಯೆಂದು ಕರೆಯುವುದು ಸೂಕ್ತವೆಂದು ರಾವ್ ಬಹದ್ದೂರ್ ಮತ್ತು ಆರ್.ನರಸಿಂಹ ಚಾರ್ಯರು ಅಭಿಪ್ರಾಯ ಪಟ್ಟಿದ್ದಾರೆ.[123]

ವಿನ್ಸೆಂಟ್ ಸ್ಮಿತ್‌ರವರು ಹೊಯ್ಸಳ ಶೈಲಿ ಎಂದು ರಾಜ ಮನೆತನದ ಹೆಸರನ್ನು ಕೊಡುವುದಕ್ಕಿಂತ ಒಂದು ಪ್ರದೇಶದ ಹೆಸರಾದ 'ಮೈಸೂರು ಶೈಲಿ' (ಕರ್ನಾಟಕ ಶೈಲಿ) ಎಂದು ಕರೆಯುವುದು ಸೂಕ್ತವೆಂದು ಅಭಿಪ್ರಾಯ ಪಟ್ಟಿದ್ದಾರೆ. ಚಾಲುಕ್ಯರ ಸಾಮಂತರಾಗಿದ್ದ ಹೊಯ್ಸಳರು ಚಾಲುಕ್ಯರ ಶೈಲಿಯನ್ನು ಅನುಸರಿಸಿದರು. ತಳವಿನ್ಯಾಸ ಶಿಲ್ಪ, ಶಿಖರ ಇತ್ಯಾದಿ ಅಂಶಗಳಲ್ಲಿ ವೈಶಿಷ್ಟ ವಿರುವುದರಿಂದ ಇದನ್ನು 'ಹೊಯ್ಸಳ ಶೈಲಿ' ಎಂದು ಕರೆಯುವುದು ಸಮಂಜಸವಾಗಿದೆ ಎಂದು ಅಭಿಪ್ರಾಯಪಡಲಾಗಿದೆ.[124]

ಬಳಸಿದ ಮಾಧ್ಯಮ

ಹೊಯ್ಸಳ ಶಿಲ್ಪಿಗಳೂ ಮತ್ತು ರೂವಾರಿಗಳು ದೇವಲಯಗಳ ನಿರ್ಮಾಣಕ್ಕೆ ಬಳಪದ ಶಿಲೆಯನ್ನು ಉಪಯೋಗಿಸಿ ಕಲ್ಯಾಣ ಚಾಲುಕ್ಯರ ಶೈಲಿಯನ್ನು ಮುಂದುವರೆಸಿಕೊಂಡು ಬಂದರು. ಆದರೂ ಸಹ ಚೋಳರಿಂದ ವಶಪಡಿಸಿಕೊಂಡ ದಕ್ಷಿಣದ ಪ್ರದೇಶಗಳಲ್ಲಿ ಬೆಣಚುಕಲ್ಲುಗಳಿಂದ ದೇವಾಲಯವನ್ನು ನಿರ್ಮಿಸಿದರು. ಉಳಿದ ದೇವಾಲಯಗಳೆಲ್ಲವು ಬಳಪದ ಶಿಲೆಯಿಂದ ನಿರ್ಮಿತ ವಾದವು. ಈ ಜಾತಿಯ ಕಲ್ಲನ್ನು ಭೂಮಿಯಿಂದ ಹೊರ ತೆಗೆದಾಗ ಮೊದಲು ಮೃದುವಾಗಿದ್ದು ನಂತರ ಗಾಳಿ ಬಿಸಿಲುಗಳ ಪ್ರಭಾವದಿಂದ ಕಠಿಣವಾಗುತ್ತಿತ್ತೆಂದು ತಿಳಿದು ಬರುತ್ತದೆ.[125]

ದೇವಾಲಯಗಳು

ದೋರಸಮುದ್ರದಲ್ಲಿ ದೊರೆತ ಶಾಸನಗಳು ಹೊಯ್ಸಳೇಶ್ವರ, ಕೇದಾರೇಶ್ವರ, ನಗರೇಶ್ವರ, ಪಂಚಿಕೇಶ್ವರ, ರಂಗನಾಥ ಸ್ವಾಮಿ, ಭೂತೇಶ್ವರ, ಗಳಗೇಶ್ವರ, ಪಾರ್ಶ್ವನಾಥ, ಆದಿನಾಥ, ಶಾಂತಿನಾಥ ಮುಂತಾದ ದೇವಾಲಯಗಳ ಮತ್ತು ಬಸದಿಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಆದರೆ ಶಾಸನಗಳಲ್ಲಿ ಕಂಡುಬರುವ ಕೆಲವು ದೇವಾಲಯಗಳು ಇಂದು ಕಣ್ಮರೆಯಾಗಿವೆ. ಕೆಲವು ದೇವಾಲಯಗಳು ಕಾಲದ ದವಡೆಯಲ್ಲಿ ನಾಶವಾಗಿದೆ. ಇಲ್ಲಿ ಕಂಡುಬಂದಿರುವ ದೇವಾಲಯಗಳು ಹೆಚ್ಚಾಗಿ ಶೈವ ಮತ್ತು ಜೈನ ಪಂಥಗಳಿಗೆ ಸಂಬಂಧಿಸಿದವುಗಳು ಪ್ರಸ್ತುತ ನಾವು ಅಧ್ಯಯನದ ಅನುಕೂಲತೆಗಾಗಿ ಐತಿಹಾಸಿಕ ಪ್ರಾಮುಖ್ಯತೆಯನ್ನು ಪಡೆದ ದೇವಾಲಯಗಳನ್ನು ಆಯ್ದು ಕೊಳ್ಳಲಾಗಿದೆ.

ಹೊಯ್ಸಳೇಶ್ವರ ದೇವಾಲಯ

ಇದು ಹೊಯ್ಸಳ ದೇವಾಲಯಗಳಲ್ಲೆಲ್ಲ ದೊಡ್ಡದಾಗಿದ್ದರೂ ಅದ್ಭುತವಾದ ಕಲಾಕೌಶಲ್ಯ ಕಂಡುಬರುವುದರಿಂದ ಸುಂದರವಾಗಿದೆ. ಇದರ ನಿರ್ಮಾಣ ಕ್ರಿ.ಶ. 1121 ಕ್ಕೆ ಹಿಂದೆಯೇ ಆಯಿತೆಂದು ದೇವಾಲಯದ ಹೆಸರು ವಿಷ್ಣುವರ್ಧನ ಹೊಯ್ಸಳೇಶ್ವರ ಎಂದೂ ಕಟ್ಟಿಸಿದವನು ವಿಷ್ಣುವರ್ಧನನ ದಂಡನಾಯಕನಾದ ಕೇತಮಲ್ಲನೆಂದು ಒಂದು ಶಾಸನದಿಂದ ತಿಳಿದು ಬರುತ್ತದೆ.[126]

ಈ ದೇವಾಲಯದ ಮುಂದಿನ ಮಂಟಪಗಳನ್ನೆಲ್ಲ ಸೇರಿಸಿ ವಿಸ್ತೀರ್ಣವು ಸುಮಾರು 200 ಅಡಿ ಚದುರವಿದೆ. ಈ ದೇವಾಲಯವು ಉತ್ತರ ದಕ್ಷಿಣವಾಗಿ 160 ಅಡಿ, ಪೂರ್ವ ಪಶ್ಚಿಮವಾಗಿ 122 ಅಡಿ ಚದುರ ವಿಸ್ತಾರವಾಗಿದೆ.

ಈ ದೇವಾಲಯವನ್ನು 15 ಅಡಿ ವಿಶಾಲವಾಗಿರುವ ಎತ್ತರವಾದ ಜಗತಿಯ ಮೇಲೆ ನಿರ್ಮಿಸಲಾಗಿದೆ. ಎರಡು ದೊಡ್ಡಗರ್ಭಗುಡಿಗಳಲ್ಲಿ ಹೊಯ್ಸಳೇಶ್ವರ, ಶಾಂತಲೇಶ್ವರ ಎಂಬ ಲಿಂಗಗಳಿವೆ. ಮೇಲಿಟ್ಟ ದೊಡ್ಡ ಶಿಖರಗಳು ಈಗ ಅದೃಶ್ಯಮಯವಾಗಿವೆ ಗರ್ಭಗೃಹದ ದಕ್ಷಿಣ ಪಶ್ಚಿಮ ಮತ್ತು ಉತ್ತರ ಗೋಡೆಗಳಲ್ಲಿರುವ ದೊಡ್ಡ ಗೂಡುಗಳಿಗೆ ಅನುಸಾರವಾಗಿ ಹೊರಗಡೆಯು ಎರಡು ಗೋಪುರಗಳುಳ್ಳ ಗೋಡೆಗಳಿವೆ. ಪ್ರತಿಯೊಂದು ಗರ್ಭಗುಡಿಯ ಮುಂದೆ ಸುಕನಾಸಿ ನವರಂಗಗಳಿದ್ದು ಎರಡು ನವರಂಗಗಳು ಕೂಡಿಕೊಂಡಿವೆ. ಜಗತಿಯಿಂದ ನವರಂಗಕ್ಕೆ ಪೂರ್ವದಿಂದ ಎರಡು ಉತ್ತರದಿಂದ ಒಂದು ದಕ್ಷಿಣದಿಂದ ಒಂದು ದ್ವಾರಗಳಿವೆ. ಮೆಟ್ಟಿಲುಗಳ ಪಕ್ಕದಲ್ಲಿ ಸಣ್ಣ ಗುಡಿಗಳಿವೆ. ಪ್ರತಿಗರ್ಭಗುಡಿಯ ಮುಂದೆ ನಂದಿ ಮಂಟಪದ ಮತ್ತು ನಂದಿ ಇದೆ. ಇಲ್ಲಿಯು ಸಹ ಬೇಲೂರಿನ ಚನ್ನಕೇಶವ ದೇವಾಲಯದಂತೆ ಮೊದಲು ತೆರೆದ ರಂಗಮಂಟಪವಿತ್ತು. ನಂತರ ಜಾಲಂದ್ರಗಳಿಂದ ಕೂಡಿದ ಗೋಡೆಗಳನ್ನು ನಿರ್ಮಿಸಲಾಯಿತೆಂದು ತಿಳಿದು ಬರುತ್ತದೆ.[127] ಎರಡನೇ ಬಲ್ಲಾಳನ ಕಾಲದಲ್ಲಿ ಈ ದೇವಾಲಯವು ಮತ್ತಷ್ಟು ವಿಸ್ತಾರವಾಯಿತು.

ಜಗತಿ

ಹೊಯ್ಸಳ ದೇವಾಲಯಗಳ ವಿಶಿಷ್ಟ ಲಕ್ಷಣಗಳಲ್ಲಿ ಜಗತಿಯು ಕೂಡ ಒಂದಾಗಿದೆ. ಹೊಯ್ಸಳೇಶ್ವರ ದೇವಾಲಯವು ಮೂರರಿಂದ ಐದು ಅಡಿಗಳವರೆಗೆ ಎತ್ತರವಾಗಿರುವ ಜಗತಿಯ ಮೇಲೆ ನಕ್ಷತ್ರಾಕಾರವಾಗಿ ನಿರ್ಮಾಣವಾಗಿದೆ. ಸಾಮಾನ್ಯವಾಗಿ ಹೊಯ್ಸಳೇಶ್ವರ ದೇವಾಲಯದಲ್ಲಿ ಒಳಗೆ ಪ್ರದಕ್ಷಿಣೆಗಾಗಿ ಮಾರ್ಗವಿರುವುದಿಲ್ಲ. ಪ್ರದಕ್ಷಿಣೆಗಾಗಿ ಜಗತಿಯನ್ನೇ ಉಪಯೋಗಿಸಲಾಗಿದೆ ಹೊಯ್ಸಳೇಶ್ವರ ದೇವಾಲಯದ ಜಗತಿಯು ಮೆಟ್ಟು ಮೆಟ್ಟಿಲಾಗಿ ಕೆತ್ತನೆಯ ಕೆಲಸದಿಂದ ಅಲಂಕೃತವಾಗಿದೆ ಮತ್ತು ಮುಖ್ಯ ದಿಕ್ಕುಗಳಲ್ಲಿ ದೇವತಾ ವಿಗ್ರಹಗಳನ್ನು ಹೊಂದಿರುವ ಗೋಪುರ ಗಳಿವೆ. ಈ ದೇವಾಲಯದ ದ್ವಾರಕ್ಕೆ ಎದುರಾಗಿ ಜಗತಿಯನ್ನು ಹತ್ತಲು ಮೆಟ್ಟಿಲುಗಳಿರುತ್ತವೆ.[128]

ಅದಿಷ್ಠಾನ

ದೇವಾಲಯದ ಗೋಡೆಗಳ ಕೆಳಭಾಗವೇ ಅದಿಷ್ಠಾನ. ಇದಕ್ಕೆ ಅಡ್ಡಪಟ್ಟಿಕೆಗಳನ್ನು ಅಳವಡಿಸಲಾಗಿದೆ. ಈ ಅಡ್ಡಪಟ್ಟಿಕೆಗಳ ಸಂಖ್ಯೆಯು ದೇವಾಲಯದ ಗಾತ್ರ ಮತ್ತು ವಿಸ್ತಾರವನ್ನು ಅವಲಂಬಿಸಿದೆ. ಅದರಂತೆ ಹೊಯ್ಸಳೇಶ್ವರ ದೇವಾಲಯವು ಎಂಟು ಅಡ್ಡಪಟ್ಟಿಕೆಗಳನ್ನು ಹೊಂದಿದೆ ಈ ಎಲ್ಲಾ ಅಡ್ಡಪಟ್ಟಿಗಳು ಅಲಂಕಾರಾತ್ಮಕ ಮೂರ್ತಿ ಶಿಲ್ಪಗಳನ್ನು ಹೊಂದಿದ್ದು ಕ್ರಮವಾಗಿ

ಮೊದಲನೆಯದಾಗಿ ಆನೆಗಳ ಸಾಲು, ಎರಡನೆಯದಾಗಿ ಸಿಂಹಗಳ ಸಾಲು, ಮೂರನೆಯ ಹಾಗೂ ಐದನೆಯ ಸಾಲುಗಳು, ಹೂಬಳ್ಳಿಗಳ ಸಾಲು, ನಾಲ್ಕನೆಯದಾಗಿ ಕುದುರೆಗಳ ಸಾಲು, ಆರನೆಯದಾಗಿ ಮಹಾಕಾವ್ಯಗಳ ಸಂದರ್ಭಗಳ ಚಿತ್ರಣದ ಸಾಲು, ಏಳನೇಯದಾಗಿ ಕಾಲ್ಪನಿಕ ಪ್ರಾಣಿ ಮಕರಗಳ ಸಾಲು ಇದ್ದು, ಒಂದೊಂದು ಮಕರ ಪ್ರಾಣಿಯು ಏಳು ಪ್ರಾಣಿಗಳ ಅಂಗಾಂಗಗಳನ್ನು ಹೊಂದಿದೆ. ಇವುಗಳ ಜೊತೆಗೆ ನಾಟ್ಯ ಭಂಗಿಗಳು, ವಾದ್ಯಗೋಷ್ಠಿಗಳ ಭಂಗಿಗಳಲ್ಲಿವೆ. ಈ ಅಲಂಕೃತ ಅಡ್ಡಪಟ್ಟಿಕೆಗಳು ಹೊಯ್ಸಳ ರೂವಾರಿಗಳ ಅಗಾಧ ಬುದ್ಧಿಶಕ್ತಿಗೆ ಶಿಲ್ಪಗಳ ವಿನ್ಯಾಸ ಕುಶಲತೆಗೆ ಉತ್ತಮ ಉದಾಹರಣೆಯಾಗಿದೆ.

ಹೊರಗೋಡೆಗಳು

ಹೊಯ್ಸಳೇಶ್ವರ ದೇವಾಲಯದ ಹೊರಗೋಡೆಗಳ ಮೇಲೆ ಶೈವ, ವೈಷ್ಣವ ಮೂಲದ ಪೌರಾಣಿಕ ಸಂಪ್ರದಾಯಗಳಿಗೆ ಸೇರಿದ ನೂರಾರು ಮೂರ್ತಿಗಳಿದ್ದು ಅವುಗಳಲ್ಲಿ ಸುಮಾರು ನಾಲ್ಕು ನೂರು ಮೂರ್ತಿಗಳು ಪ್ರಮುಖವಾಗಿವೆ. ಈ ಗೋಡೆಗಳ ಮೇಲೆ ಸುಮಾರು 166 ಸ್ತ್ರೀಯರ 114 ಪುರುಷರ ವಿಗ್ರಹಗಳು ಕಂಡು ಬರುತ್ತವೆ. ಗಣೇಶ, ನರಸಿಂಹ, ಬ್ರಹ್ಮ, ಸುಬ್ರಹ್ಮಣ್ಯ, ಉಮಾ ಮಹೇಶ್ವರ, ಸರಸ್ವತಿ, ವೇಣುಗೋಪಾಲ, ದುರ್ಗಾವತಾರ, ಶಿವನ ಅವತಾರಗಳು, ವರಾಹ, ನಟರಾಜ ಮಹಿಷಾಸುರ ಮರ್ಧಿನಿ, ಬ್ರಹ್ಮ, ವಿಷ್ಣು, ಶ್ರೀಕೃಷ್ಣ, ದಕ್ಷಿಣಾಮೂರ್ತಿ ವೇಣುಗೋಪಾಲ, ಅನಂತ ಶಯನ ಮೂರ್ತಿಗಳಿದ್ದು ಕೆಲವು ಮೂರ್ತಿಗಳನ್ನು ಸಮಭಂಗ, ತ್ರಿಭಂಗ ಭಂಗಿಗಳಲ್ಲಿ ಕೆತ್ತಲಾಗಿದೆ. ಜೊತೆಗೆ ಮುಕುಟ, ಕುಂಡಲ ಕೇಯಾರದ, ಮೇಲೆ ಕಟಿಬಂಧ, ವೈಜಯಂತಿ ಮಾಲೆ, ಕಾಲ್ಗಡಗ, ಉಂಗುರ ಇತ್ಯಾದಿ ಆಭರಣಗಳನ್ನು ಅಂದವಾಗಿ ಅಕ್ಕಸಾಲಿಗನ ಕೆಲಸಕ್ಕೆ ಮೆರಗು ಕೊಡುವಂತೆ ಕೆತ್ತಲ್ಪಟ್ಟಿದೆ. ಮೂರ್ತಿಗಳ ಕೆಳಗಡೆ ಶಿಲ್ಪಿಗಳಾದ ದಾಸೋಜ, ನಾಗೋಜ, ಕಾಳಿದಾಸ, ಮೊದಲಾದವರ ಹೆಸರುಗಳನ್ನು ಕೆತ್ತಲಾಗಿದೆ.

ಮಹಾದ್ವಾರಗಳು

ಹೊಯ್ಸಳೇಶ್ವರ ದೇವಾಲಯವು ನಾಲ್ಕು ಮಹಾದ್ವಾರಗಳನ್ನು ಹೊಂದಿದೆ. ಒಂದನೇ ನರಸಿಂಹ ಕಾಲದಲ್ಲಿ ತೆರೆದ ನವರಂಗ ಮಂಟಪವು ಮುಚ್ಚಲ್ಪಟ್ಟು ದಕ್ಷಿಣ, ಆಗ್ನೇಯ, ಈಶಾನ್ಯ ಮತ್ತು ಉತ್ತರದಲ್ಲಿ ನಾಲ್ಕು ಮಹಾದ್ವಾರಗಳನ್ನು ನಿರ್ಮಿಸಲಾಯಿತು. ಇವುಗಳಲ್ಲಿ ದಕ್ಷಿಣದ್ವಾರ ಅತ್ಯುತ್ತಮವೆಂದು ಹೇಳಬಹುದು. ದ್ವಾರದ ಎರಡು ಪಕ್ಕದಲ್ಲಿ ಆರು ಅಡಿ ಎತ್ತರದ ದ್ವಾರಪಾಲಕ ವಿಗ್ರಹಗಳಿವೆ. ಬಲಗಡೆ ದ್ವಾರಪಾಲಕನು ಢಮರುಗ ಸರ್ಪವನ್ನು ಹಿಡಿದು ಮೂರು ಕಣ್ಣು

ಜಟಾಮುಕುಟ ಹೊಂದಿರುವನು. ಮುಂದಿನ ಎರಡು ಕೈಗಳು ಮುರಿದು ಹೋಗಿವೆ. ಎಡಗಡೆಯ ದ್ವಾರಪಾಲಕನ ಹಿಂದಿನ ಕೈಗಳಲ್ಲಿ ಜ್ವಾಲೆ ಡಮರುಗಳಿವೆ. ದ್ವಾರದ ಮೇಲೆ ಹನ್ನೆರಡು ಅಡಿ ಉದ್ದ ಮೂರು ಅಡಿ ಎತ್ತರವಿರುವ ಕಲ್ಲಿನ ಮೇಲೆ ಅಷ್ಟಭುಜದ ಅಂಧಕಾಸುರ ಸಂಹಾರ ಮೂರ್ತಿಯ ತಾಂಡವ ಮಾಡುತ್ತಿರುವನು. ದೇವರ ತಲೆಯ ಮೇಲೆ ಐದು ಹೆಡೆಗಳ ಸರ್ಪ ಶಿಖರವಿದೆ. ಬಲ ಮತ್ತು ಎಡಭಾಗಗಳಲ್ಲಿ ಬ್ರಹ್ಮ ವಿಷ್ಣು ವಿಗ್ರಹಗಳಿವೆ. ಯೋಧನನ್ನು ಬಾಯಲ್ಲಿ ಹಿಡಿದಿರುವ ಮಕರ, ಅದರ ಮೇಲೆ ವರುಣ ಅದರ ಕಾಲಿನ ಹತ್ತಿರ ವೀರಾಸನದಲ್ಲಿರುವ ಯೋಧರು ಎರಡು ಪಕ್ಕಗಳಲ್ಲು ಇರುವರು. ಅಂಚಿನಲ್ಲಿ ಸರ್ಪವನ್ನು ಕಚ್ಚಿಕೊಂಡಿರುವ ಸಿಂಹ ಗಜದೊಡನೆ ಮತ್ತು ಸಳನೊಡನೆ ಹೋರಾಡುವಂತಿದೆ. ಈ ಮಕರ ತೋರಣದ ಮೇಲೆ ಸಪ್ತ ಮಾತೃಕೆಯರು ನರ್ತಕರು ಮತ್ತು ಅಷ್ಟ ದಿಕ್ಪಾಲಕರು ಇರುವರು.[129]

ದ್ವಿಕೂಟ

ತಳವಿನ್ಯಾಸ ಮತ್ತು ಶಿಖರಗಳ ಆಧಾರದ ಮೇಲೆ ಹೊಯ್ಸಳ ದೇವಾಲಯಗಳನ್ನು ಐದು ಪ್ರಕಾರಗಳಾಗಿ ವಿಂಗಡಿಸಲಾಗಿದೆ. ಅವು ಏಕಕೂಟ, ದ್ವಿಕೂಟ, ತ್ರಿಕೂಟ, ಚತುಷ್ಕೂಟ ಮತ್ತು ಪಂಚಕೂಟಗಳು ಅದರಂತೆ ಹೊಯ್ಸಳೇಶ್ವರ ದೇವಾಲಯವು ಒಂದೇ ದೇವಾಲಯವೆಂದು ಕಂಡರೂ ಅದು ಎರಡು ಗರ್ಭಗೃಹಗಳನ್ನೊಳಗೊಂಡ 'ದ್ವಿಕೂಟಚಲ ದೇವಾಲಯ'ವಾಗಿದೆ.

ಶಿಖರ

ಗರ್ಭಗೃಹದ ಮೇಲಿನ ಶಿಖರವು ನಕ್ಷತ್ರಾಕಾರದ ತಲವಿನ್ಯಾಸವನ್ನು ಹೊಂದಿದೆ. ಈ ಶಿಖರವು ಅನೇಕ ಮೆಟ್ಟಿಲುಗಳನ್ನು ಹೊಂದಿದ್ದು ಉತ್ತರ ಹಾಗೂ ದಕ್ಷಿಣ ಶೈಲಿಯ ಮಿಶ್ರಣವನ್ನು ಹೊಂದಿದೆ ಮತ್ತು ಹೊಯ್ಸಳೇಶ್ವರ ದೇವಾಲಯದ ಶಿಖರ ನಿರ್ಮಾಣವು ಅಪೂರ್ಣವಾಗಿದೆ ಎಂದು ಅಭಿಪ್ರಾಯ ಪಡಲಾಗಿದೆ. ಅಲ್ಲದೆ ಹೊಯ್ಸಳರ ಇತರ ದೇವಾಲಯಗಳನ್ನು ನೋಡಲಾಗಿ ಅವು ಶಿಖರವನ್ನು ಹೊಂದಿರುವುದು ಕಂಡು ಬರುತ್ತದೆ.

ಕೋಷ್ಠಗಳು

ಕೋಷ್ಠಗಳನ್ನು ಸಾಮಾನ್ಯವಾಗಿ ಗೂಡುಗಳೆಂದು ಕರೆಯಬಹುದು. ಹೊಯ್ಸಳೇಶ್ವರ ದೇವಾಲಯದಲ್ಲಿ ಒಟ್ಟು ಆರು ಕೋಷ್ಠಗಳಿದ್ದು ಅವುಗಳು ಶಿಖರಗಳನ್ನು ಹೊಂದಿದ್ದು ಐದರಿಂದ ಆರು ಅಡಿಯವರೆಗೆ ಎತ್ತರವಾಗಿದೆ. ಕೋಷ್ಠಗಳ ದ್ವಾರದ ಪಕ್ಕಗಳಲ್ಲಿ ದ್ವಾರಪಾಲಕರ

ಮೂರ್ತಿಗಳನ್ನು ಮತ್ತು ಮೂಲ ಗರ್ಭಗೃಹ ಪ್ರತಿಷ್ಠಾಪಿತ ಮೂರ್ತಿಗೆ ಸಂಬಂಧಿಸಿದ ಪರಿವಾರ ದೇವತಾ ಮೂರ್ತಿಗಳಿರುತ್ತವೆ.

ಕಂಬಗಳು

ಕಲ್ಯಾಣದ ಚಾಲುಕ್ಯರ ಕಾಲದ ಕಂಬಗಳ ನಿರ್ಮಾಣ ಶೈಲಿಯನ್ನು ಹೊಯ್ಸಳರು ಮುಂದುವರಿಸಿದರು. ಹೊಯ್ಸಳೇಶ್ವರ ದೇವಾಲಯದಲ್ಲಿ ಒಟ್ಟು ಹದಿನಾರು ಕಂಬಗಳು ಕಂಡು ಬಂದಿವೆ. ಹೊಯ್ಸಳೇಶ್ವರ ದೇವಾಲಯದ ಒಂದೊಂದು ಕಂಬಗಳನ್ನು ಐದು ಭಾಗಗಳಾಗಿ ಹೊಂದಿಸಿ ಜೋಡಣೆ ಮಾಡಲಾಗಿದೆ. ಇದನ್ನು ಪಂಚ ಶಿಲಾಸ್ತಂಭವೆಂದು ಕರೆಯಲಾಗಿದೆ. ಕೆಳಭಾಗವು ಚಚ್ಚೌಕವಾಗಿದ್ದು, ಕಾಂಡಭಾಗವು ತಲೆಕೆಳಗಾದ ಗಂಟೆಯಾಕಾರದ್ದಾಗಿರುತ್ತದೆ. ಹೊಯ್ಸಳ ಶಿಲ್ಪಿಗಳ ಕೌಶಲ್ಯಕ್ಕೆ ಮಾದರಿಯಾಗುವ ಈ ಕಂಬಗಳನ್ನು ಲೆಥಯಂತ್ರದಿಂದ ತಯಾರಿಸಿರ ಬೇಕೆಂಬ ಕಲ್ಪನೆ ಮೂಡುತ್ತದೆ. ಇಂತಹ ನಕ್ಷತ್ರಾಕಾರದ ಕೆಲವು ಕಂಬಗಳಲ್ಲಿ ಎಂಟರಿಂದ ಮೂವತ್ತೆರಡರವರೆಗೆ ಕೋನಗಳು ಕಂಡು ಬಂದಿದೆ.

ಗರ್ಭಗುಡಿ

ಹೊಯ್ಸಳೇಶ್ವರ ದೇವಾಲಯವು ಎರಡು ಲಿಂಗಗಳನ್ನು ಹೊಂದಿದೆ ಈ ಎರಡು ಗರ್ಭಗುಡಿಗಳ ಪ್ರವೇಶ ದ್ವಾರಗಳು ಸುಂದರ ಕೆತ್ತನೆಯನ್ನೊಳಗೊಂಡಿವೆ. ಈ ದ್ವಾರಗಳ ಲಲಾಟ ಬಿಂಬಗಳಲ್ಲಿ ಗಜಲಕ್ಷ್ಮಿ, ಲತಾಸುರುಳಿ, ಡಮರುಗ, ತ್ರಿಶೂಲಗಳು ಕಂಡುಬಂದಿವೆ. ಈ ಗರ್ಭಗುಡಿ ಗಳು ಚಚ್ಚೌಕವಾಗಿದ್ದು ಮಧ್ಯದಲ್ಲಿ ಎರಡು ಅಡಿ ಎತ್ತರದ ಲಿಂಗಗಳಿವೆ. ಈ ಎರಡು ಲಿಂಗಗಳನ್ನು ಕ್ರಮವಾಗಿ ಹೊಯ್ಸಳೇಶ್ವರ ಮತ್ತು ಶಾಂತಲೇಶ್ವರ ಎಂಬ ಹೆಸರಿನಿಂದ ಕರೆಯಲಾಗಿದೆ.

ನೃತ್ಯಪೀಠ

ಈ ದೇವಾಲಯದ ಎರಡು ನವರಂಗಗಳಲ್ಲಿ ವೃತ್ತಾಕಾರದ ನೃತ್ಯಪೀಠಗಳು ಕಂಡುಬಂದಿವೆ. ನವರಂಗದ ನಾಲ್ಕು ಕಂಬಗಳ ಮಧ್ಯೆ ಈ ನೃತ್ಯ ಪೀಠವು ರಚನೆಯಾಗಿದೆ. ದೇವರಪೂಜೆ ಹಾಗೂ ಸಭೆ ಸಮಾರಂಭಗಳಲ್ಲಿ ನೃತ್ಯವನ್ನು ಮಾಡುವುದಕ್ಕೆ ಇದನ್ನು ಉಪಯೋಗಿಸಲಾಗುತ್ತಿತೆಂದು ತಿಳಿದು ಬರುತ್ತದೆ.

ಭುವನೇಶ್ವರಿ

ಈ ದೇವಸ್ಥಾನದ ಭುವನೇಶ್ವರಿಗಳೆಲ್ಲವೂ ತಟ್ಟೆಯಾಕಾರದಲ್ಲಿದೆ. ಇಲ್ಲಿ ಎರಡು ಭುವನೇಶ್ವರಿಗಳು ಸಾಮ್ಯತೆ ಹೊಂದಿದ್ದು ಅಲ್ಲಿ ತಾಂಡವೇಶ್ವರ, ಬ್ರಹ್ಮ, ವಿಷ್ಣು ಹಾಗೂ ಅಷ್ಟ ದಿಕ್ಪಾಲಕರ ಮೂರ್ತಿಗಳು ಕಂಡುಬಂದಿದೆ. ಈ ಭುವನೇಶ್ವರಿಯು ವೃತ್ತಾಕಾರವಾಗಿದ್ದು ಒಂದಗೊಳ ಗೊಂದರಂತೆ ಚಕ್ರಗಳನ್ನು ಹೊಂದಿರುವಂತೆ ಕಾಣಿಸುತ್ತದೆ.

ಮದನಿಕಾ ವಿಗ್ರಹಗಳು

ನವರಂಗಗಳ ಕಂಬಗಳ ಮೇಲಿನ ಬೋದುಗೆಗಳಿಗೆ ಆನಿಸಿ ಮದನಿಕಾ ವಿಗ್ರಹಗಳನ್ನು ಇಟ್ಟಿರುವರು. ವಿವಿಧ ಆಕಾರ ನೃತ್ಯ ಶೈಲಿಯಲ್ಲಿರುವ ಇವು ಸುಮಾರು ಹತ್ತರಿಂದ ಹದಿನಾಲ್ಕು ವಿಗ್ರಹಗಳು ಕಂಡುಬಂದಿವೆ. ಇವು 2.5 ಅಡಿ ಅಳತೆಯಲ್ಲಿದ್ದು ಬಹುತೇಕ ಸ್ತ್ರೀ ಮೂರ್ತಿಗಳಿದ್ದು ವಿವಿಧ ಭಂಗಿ ರಸಭಾವಗಳನ್ನು ಹೊಂದಿದೆ. ಈ ಮದನಿಕಾ ವಿಗ್ರಹಗಳ ಕೆಳಗೆ ಶಿಲ್ಪಿಗಳಾದ ದಾಸೋಜ, ಚಾವಣ ಮತ್ತು ನಾಗೋಜರ ಹೆಸರುಗಳು ಕೆತ್ತಲ್ಪಟ್ಟಿವೆ.

ನಂದಿ ಮಂಟಪಗಳು

ಹೊಯ್ಸಳೇಶ್ವರ ಮತ್ತು ಶಾಂತಲೇಶ್ವರ ದೇವಾಲಯಗಳ ಎದುರಿನ ತೆರೆದ ಮೂವತ್ತೆರಡು ಕಂಬಗಳನ್ನು ಹೊಂದಿದ ಮಂಟಪದಲ್ಲಿ ನಂದಿ ವಿಗ್ರಹಗಳನ್ನು ಕಾಣಬಹುದು. ಇವು ಒಂದು ಹದಿಮೂರು ಅಡಿ ಉದ್ದ 8.5 ಅಡಿ ಎತ್ತರ ಇನ್ನೊಂದು ಹತ್ತು ಅಡಿ ಉದ್ದ ಮತ್ತು 7.5 ಅಡಿ ಎತ್ತರವಾಗಿದ್ದು ಇವುಗಳು ಭಾರತದಲ್ಲಿ ಆರನೆಯ ಮತ್ತು ಏಳನೆಯ ಅತ್ಯಂತ ಬೃಹದಾಕಾರದ ನಂದಿ ವಿಗ್ರಹಗಳಾಗಿವೆ.

ಈ ರೀತಿಯಾಗಿ ಹೊಯ್ಸಳ ವಾಸ್ತುಶೈಲಿಯ ಉತ್ತಮ ಉದಾಹರಣೆಯಾಗಿ ಹೊಯ್ಸಳೇರ್ಶವರ ದೇವಾಲಯವು ಭವ್ಯವು, ಸೌಂದರ್ಯವು ಮತ್ತು ಶಿಲ್ಪಿಗಳ ಶ್ರಮ ನೈಪುಣ್ಯ ಗಳನ್ನು ಗಮನಿಸಿ ವಿದ್ವಾಂಸರು ಮುಕ್ತಕಂಠದಿಂದ ಪ್ರಶಂಸಿದ್ದಾರೆ. ಹೆನ್ರಿ ಕಸಿಸ್ಸ್‌ರವರು "ಚಿಕ್ಕ ಬೆಳ್ಳಿಯ ಕೆತ್ತನೆಯ ನುಣ್ಣು ಗುಣ್ಣೆಗಳು ಈ ದೇವಾಲಯಗಳಲ್ಲಿರುವ ಕೆತ್ತನೆಗಿಂಗ ಸೊಗಸಾಗಿರ ಲಾರವು" "ಜೇಮ್ಸ್ ಪರ್ಗ್ಯುಸನ್‌ರವರು" ದೇವಾಲಯದ ಪ್ರತಿಯೊಂದು ಭಾಗದಲ್ಲೂ ಶಿಲ್ಪಿಯ

ಕಲ್ಪನಾ ವಿಲಾಸವು ಗರ ಕಟ್ಟಿ ಹರಡಿದ ಮಾನವ ಹೃದಯದ ಬಾವಾವೇಶವೆಲ್ಲ ದೇವಾಲಯದ ಬಿತ್ತಿಗಳಲ್ಲಿ ಚಿತ್ರಿಸಲಾಗಿದೆ ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ.[130]

ಕೇದಾರೇಶ್ವರ ದೇವಾಲಯ

ದೋರಸಮುದ್ರದಲ್ಲಿ ಹೊಯ್ಸಳೇಶ್ವರ ದೇವಾಲಯವನ್ನು ಬಿಟ್ಟರೆ ಕಲಾ ದೃಷ್ಟಿಯಿಂದ ಪ್ರಮುಖವೆನಿಸುವ ಮತ್ತೊಂದು ದೇವಾಲಯವೆಂದರೆ ಕೇದಾರೇಶ್ವರ ದೇವಾಲಯವಾಗಿದೆ. ಹೊಯ್ಸಳ ಶೈಲಿಯಲ್ಲಿರುವ ಇದು ಚಿಕ್ಕದಾದರೂ ಕಲಾದೃಷ್ಟಿಯಿಂದ ಮಹತ್ವವಾಗಿದೆ.

ಕೇದಾರೇಶ್ವರ ದೇವಾಲಯವು ನಕ್ಷತ್ರಾಕಾರದ ಗರ್ಭಗೃಹ ತೆರೆದ ಸುಕನಾಸಿ ಚೌಕಾಕಾರದ ನವರಂಗಗಳನ್ನು ಹೊಂದಿದ್ದು 'ಏಕಕೂಟ ದೇವಾಲಯ'ವಾಗಿದೆ. ಇದರ ಹೊರಗೋಡೆಯ ಮೇಲಿನ ಶಿಲ್ಪ ಕಲಾ ಸೌಂದರ್ಯಕ್ಕೆ ಬೇರೆ ಯಾವ ದೇವಾಲಯವು ಸರಿಸಮವಾಗಲಾರದು. ಇದು ಭುವನೇಶ್ವರಿಯ ಗುಮ್ಮಟಾಕಾರವನ್ನು ಹೊಂದಿದ್ದು ಅಲ್ಲಿ ವಿವಿಧ ಆಕೃತಿಗಳನ್ನು ಬಿಡಿಸಲಾಗಿದೆ. ಜೇಮ್ಸ್ ಪರ್ಗ್ಯುಸನ್ ಪ್ರಕಾರ ಈ ದೇವಾಲಯದ ಯೋಜನೆಯು ಬಹಳ ಆಸಕ್ತಿಯಿಂದ ಕೂಡಿದ್ದು ಇದು ನೇರವಾಗಿ ಪೂರ್ವಾಭಿಮುಖವಾಗಿರದೇ ಆಗ್ನೇಯಕ್ಕೆ ತಿರುಚಿಕೊಂಡಿದೆ. ಕ್ರಿ.ಶ. 1219 ರಲ್ಲಿ ಎರಡನೇ ಬಲ್ಲಾಳನ ಕಾಲದಲ್ಲಿ ಅವನ ರಾಣಿಯಾದ ಕೇತಲದೇವಿಯು ಈ ಕೇದಾರೇಶ್ವರ ದೇವಾಲಯವನ್ನು ನಿರ್ಮಿಸಿದಳೆಂದು ತಿಳಿದು ಬರುತ್ತದೆ.[131]

ಕೇದಾರೇಶ್ವರ ದೇವಾಲಯವನ್ನು ಜಗತಿಯ ಕಟ್ಟೆಯ ಮೇಲೆ ನಿರ್ಮಿಸಲಾಗಿದ್ದು ಅದು ನಕ್ಷತ್ರಾಕಾರವನ್ನು ಹೊಂದಿದ್ದು ಮೂರರಿಂದ ಐದು ಅಡಿಯವರೆಗೆ ಎತ್ತರವಿದೆ. ಈ ದೇವಾಲಯದ ಪ್ರವೇಶ ದ್ವಾರವು ಉತ್ತರ ಭಾಗದಲ್ಲಿದೆ. ಈ ದೇವಾಲಯಕ್ಕೆ ಹತ್ತಿ ಬರಲು ಉತ್ತರ, ಪೂರ್ವ, ದಕ್ಷಿಣ ದಿಕ್ಕುಗಳಲ್ಲಿ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ದೇವಾಲಯದ ಗೋಡೆಯ ಕೆಳಭಾಗದಲ್ಲಿ ಅಲ್ಲಲ್ಲಿ ಮೂರ್ತಿಗಳನ್ನು ಹೊಂದಿದ ಅಡ್ಡಪಟ್ಟಿಕೆಗಳನ್ನು ರಚಿಸಲಾಗಿದೆ.

ದೇವಾಲಯದ ಹೊರಗೋಡೆಗಳ ಮೇಲೆ ಶೈವ, ವೈಷ್ಣವ, ಪೌರಾಣಿಕ ಮಹಾಕಾವ್ಯಗಳಿಗೆ ಸಂಬಂಧಿಸಿದಂತೆ ಸುಮಾರು ನೂರ ಎಪ್ಪತ್ತಾರು ವಿಗ್ರಹಗಳಿದ್ದು, ತೊಂಭತ್ತು ಪುರುಷರ ಹಾಗೂ ಎಂಬತ್ತಾರು ಸ್ತ್ರೀಯರ ಮೂರ್ತಿಗಳಿವೆ. ಅವು ವಿಷ್ಣು, ಲಕ್ಷ್ಮಿ, ನಾರಾಯಣ, ವರಾಹ, ವಾಮನ,

ಗೋವರ್ಧನಗಿರಿ ವೇಣುಗೋಪಾಲ, ಬ್ರಹ್ಮ, ಶಿವ, ದಕ್ಷಿಣಮೂರ್ತಿ, ಸರಸ್ವತಿ, ದುರ್ಗಾ ಮೋಹಿನಿ ಮೂರ್ತಿಗಳು ಪ್ರಮುಖವಾಗಿವೆ. ಈ ದೇವಾಲಯವು ಮೂರು ಕೊಠಡಿಗಳನ್ನು ಒಳಗೊಂಡಿದ್ದು ಕೊಠಡಿಯ ಸ್ತಂಭಗಳಲ್ಲಿ ವಿಷ್ಣು ಮತ್ತು ಶಿವನ ಮೂರ್ತಿಗಳನ್ನು ಕೆತ್ತಲಾಗಿದೆ.

ಈ ದೇವಾಲಯದ ಗರ್ಭಗೃಹವು ಚಚ್ಚೌಕವಾಗಿದ್ದು ಮಧ್ಯದಲ್ಲಿ ಮೂರು ಅಡಿ ಎತ್ತರದ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯವು ಏಕಕೂಟವಾಗಿದ್ದು, ನವರಂಗದಲ್ಲಿ ಹನ್ನೆರಡು ಕಂಬಗಳಿದ್ದು ಅದರ ಮಧ್ಯಭಾಗದಲ್ಲಿ ನೃತ್ಯಪೀಠ ಕಂಡುಬಂದಿಲ್ಲ. ಕಂಬಗಳಲ್ಲಿ ವಿಷ್ಣು, ಶಿವ ಹಾಗೂ ಹನುಮನ ಮೂರ್ತಿಗಳನ್ನು ಕೆತ್ತಲಾಗಿದೆ. ಇಲ್ಲಿಯ ಕಂಬಗಳು ಹೊಯ್ಸಳೇಶ್ವರ ದೇವಾಲಯದಲ್ಲಿನ ಕಂಬಗಳಂತೆ ಆಕರ್ಷಣೆಯನ್ನು ಹೊಂದಿದೆ. ದೇವಾಲಯದ ಗರ್ಭಗೃಹ ಹಾಗೂ ಸುಕನಾಸಿಗಳ ಮಧ್ಯದಲ್ಲಿ ಐದು ಅಡಿ ಉದ್ದ, ಮೂರು ಅಡಿ ಅಗಲದ ಬೆಳಕಿನ ಕಿಂಡಿಯನ್ನು ರಚಿಸಲಾಗಿದೆ. ದೇವಾಲಯದ ನವರಂಗದಲ್ಲಿ ಸುಕನಾಸಿಯಲ್ಲಿ ಮತ್ತು ಕೊಠಡಿಗಳಲ್ಲಿ ಭುವನೇಶ್ವರಿ ಯನ್ನು ಕೆತ್ತಲಾಗಿದ್ದು ಅವು ಕಮಲದ ಮೊಗ್ಗು ಮತ್ತು ಹೂವುಗಳಿಂದ ಅಲಂಕಾರವನ್ನು ಹೊಂದಿವೆ.

ಜೈನ ಬಸದಿಗಳು

ಹೊಯ್ಸಳೇಶ್ವರ ದೇವಾಲಯದ ಪಶ್ಚಿಮ ದಿಕ್ಕಿನಲ್ಲಿ ಹೊಯ್ಸಳರ ಕಾಲದ ಮೂರು ಜೈನ ಬಸದಿಗಳಾದ ಪಾರ್ಶ್ವನಾಥ, ಅಧಿನಾಥ ಮತ್ತು ಶಾಂತಿನಾಥ ಬಸದಿಗಳನ್ನು ಕಾಣಬಹುದು. ವಿಷ್ಣುವರ್ಧನನ ಆಪ್ತ ದಂಡನಾಯಕನಾಗಿದ್ದ ಗಂಗರಾಜನ ಮಗ ಬೊಪ್ಪನು ತನ್ನ ತಂದೆಯ ಹೆಸರಿನಲ್ಲಿ ಪಾರ್ಶ್ವನಾಥ ಬಸದಿಯನ್ನು ಕ್ರಿ.ಶ. 1133 ರಲ್ಲಿ ಕಟ್ಟಿಸಿದನು. ಅದೇ ಸಮಯದಲ್ಲಿ ವಿಷ್ಣುವರ್ಧನನ ಮಗನಾದ ನರಸಿಂಹನು ಜನಿಸಿದ್ದರಿಂದ ಆಗ ಬಂಕಾಪುರದಲ್ಲಿದ್ದ ವಿಷ್ಣುವರ್ಧನನು ಅದಕ್ಕೆ ವಿಜಯಪಾರ್ಶ್ವನಾಥನೆಂಬ ಹೆಸರಿಟ್ಟನೆಂದು ತಿಳಿದು ಬರುತ್ತದೆ.[132]

ಪಾರ್ಶ್ವನಾಥ ಬಸದಿಯಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಮುಖ ಮಂಟಪಗಳಿವೆ. ಬಲಿಪೀಠ ಮೂವತ್ತೆರಡು ದಳದ ಕಮಲದಂತಿದೆ. ಮುಖಮಂಟಪದಲ್ಲಿ ಮೂವತ್ತೆರಡು ಸ್ತಂಭಗಳು, ಜಗತಿ ಮತ್ತು ಚಿತ್ರ ಫಲಕಗಳಿವೆ. ನವರಂಗದಲ್ಲಿರುವ ಇಪ್ಪತ್ತನಾಲ್ಕು ಪೀಠಗಳ ಮೇಲೆ ಬಹುಶಃ ತೀರ್ಥಂಕರರ ವಿಗ್ರಹಗಳಿದ್ದವು. ನವರಂಗದ ಸ್ತಂಭಗಳು ಮತ್ತು ಭುವನೇಶ್ವರಿ

ಬಹಳ ಸುಂದರವಾಗಿದೆ. ಗರ್ಭಗುಡಿಯಲ್ಲಿರುವ ಪಾರ್ಶ್ವನಾಥ ಸುಮಾರು ಹದಿನಾಲ್ಕು ಅಡಿ ಎತ್ತರ ಇದ್ದು ಏಳು ಹೆಡೆಗಳ ಸರ್ಪವನ್ನು ಶಿರದ ಮೇಲೆ ಹೊಂದಿದೆ.[133]

ಆದಿನಾಥ ಬಸದಿ

ಪಾರ್ಶ್ವನಾಥ ಬಸದಿಯ ಪೂರ್ವಭಾಗದಲ್ಲಿ ಆದಿನಾಥ ಬಸದಿಯು ಕಂಡುಬಂದಿದ್ದು ಆಕಾರದಲ್ಲಿ ಚಿಕ್ಕದಾಗಿದ್ದರೂ ಸುಂದರವಾಗಿದೆ. ಇದರ ಗರ್ಭಗೃಹವು ಸಹ ಚಿಕ್ಕದಾಗಿದೆ. ನವರಂಗಕ್ಕೆ ಸಾದಾರಣ ದ್ವಾರವಿದ್ದು ಜೈನರ ಹಾಗೂ ಸಿಂಹಗಳ ಮೂರ್ತಿಗಳನ್ನು ನಾಲ್ಕು ಚೌಕಾಕಾರದ ಕಂಬಗಳನ್ನು ರಚಿಸಲಾಗಿದೆ. ಆದಿನಾಥನ ವಿಗ್ರಹವು 2.5 ಅಡಿ ಎತ್ತರವಿದ್ದು ಎಡಬಲಗಳಲ್ಲಿ ಯಕ್ಷ ಯಕ್ಷಿಣಿಯರನ್ನು ಕಾಣಬಹುದು. ಈ ಬಸದಿಯ ಮೂಲವಿಗ್ರಹವು ಭಂಗವಾಗಿ ಈಗ ಅದನ್ನು ಶಾಂತಿನಾಥ ಬಸದಿಯಲ್ಲಿಡಲಾಗಿದೆ. ಈಗ ಒಂದು ಸ್ಥಾನಿಕ ಮೂರ್ತಿಯಿದ್ದು ಇದನ್ನು ನಂತರದಲ್ಲಿ ಪ್ರತಿಷ್ಠಾಪಿಸಲಾಯಿತೆಂದು ತಿಳಿದು ಬರುತ್ತದೆ.[134]

ಶಾಂತಿನಾಥ ಬಸದಿ

ಇದು ವಿಜಯನಗರ ಕಾಲದಲ್ಲಿ ಬಹಳ ಮಟ್ಟಿಗೆ ಮಾರ್ಪಾಡು ಹೊಂದಿತು. ಮುಂದಿನ ಮಾನಸ್ತಂಭ ಇಪ್ಪತ್ತು ಅಡಿ ಎತ್ತರವಿದ್ದು ಮೇಲ್ಭಾಗದಲ್ಲಿ ಯಕ್ಷ ವಿಗ್ರಹವಿದೆ. ಇಲ್ಲಿನ ಮೂಲ ಸುಮಾರು ಹದಿನಾಲ್ಕು ಅಡಿ ಎತ್ತರವಿದೆ. ಈ ಬಸದಿಯನ್ನು ಕ್ರಿ.ಶ. 1196ರಲ್ಲಿ 2ನೇ ಬಲ್ಲಾಳನ ಆಳ್ವಿಕೆಯಲ್ಲಿ ನಿರ್ಮಿಸಲಾಯಿತೆಂದು ತಿಳಿದು ಬರುತ್ತದೆ.[135]

ವೀರಭದ್ರ ದೇವಾಲಯ

ಇದು ಹಳೇಬೀಡಿನ (ದೋರಸಮುದ್ರ) ಆಗ್ನೇಯದಲ್ಲಿ ಕೋಟೆ ಗೋಡೆಯ ಹತ್ತಿರವಿದೆ. ಇದರ ಮುಖ ಮಂಟಪ ವಿಜಯನಗರ ಕಾಲದ್ದಾಗಿದೆ. ಆದರೆ ಒಳಗಿನ ನವರಂಗ ಸುಕನಾಸಿ, ಗರ್ಭ ಗುಡಿಗಳು ಹೊಯ್ಸಳರ ಕಾಲದಲ್ಲಿ ನಿರ್ಮಾಣವಾದವುಗಳಾಗಿವೆ. ಗರ್ಭಗುಡಿಯ ಸುತ್ತಲು ಆನೆ ಸಾಲು, ಲತಾ ಪಟ್ಟಿಕೆ ಸುಮಾರು ಎರಡೂವರೆ ಅಡಿ ಎತ್ತರದ ದೊಡ್ಡ ವಿಗ್ರಹಗಳಿವೆ. ಶಿಖರವು ಮೆಟ್ಟಿಲು ಮೆಟ್ಟಿಲಾಗಿ ಅದರ ಮುಂದೆ ಸಳ-ಹುಲಿ ವಿಗ್ರಹವನ್ನು ಹೊಂದಿದೆ. ವೀರಭದ್ರ ವಿಗ್ರಹವು ಆರು ಅಡಿ ಎತ್ತರವಾಗಿದ್ದು ಕತ್ತಿ, ತ್ರಿಶೂಲ ಮತ್ತು ಡಮರುಗಗಳನ್ನು ಹಿಡಿದಿದೆ. ಮೇಲೆ ಪುಷ್ಪತೋರಣ, ಮಲ್ಲಾರ ತೋರಣಗಳಿವೆ. ಇವುಗಳ ಮಧ್ಯದಲ್ಲಿ ಕಪಾಲ, ಕೀರ್ತಿ ಮುಖಗಳಿವೆ.

ಮುಂದಿನ ನವರಂಗ ಮಂಟಪದಲ್ಲಿರುವ ನಂದಿ ಸುಮಾರು ಹದಿನೇಳನೇ ಶತಮಾನದ್ದಾಗಿದೆ. ಆದ್ದರಿಂದ ವೀರಭದ್ರ ಮೊದಲಿನ ವಿಗ್ರಹವೇ ಎಂಬುದರಲ್ಲಿ ಸಂಶಯವಿದೆ.

ರಂಗನಾಥ ದೇವಾಲಯ

ಇದು ಮೊದಲು ಶಿವ ದೇವಾಲಯವಾಗಿತ್ತೆಂದು ಇಲ್ಲಿ ದೊರಕಿರುವ ಶಾಸನದಿಂದ ತಿಳಿದು ಬರುತ್ತದೆ.136 ರಂಗನಾಥ ದೇವಾಲಯದ ಗೋಪುರ ಮೆಟ್ಟಿಲು ಮೆಟ್ಟಿಲಾದ ಪಿರಮಿಡ್ ಆಕಾರ ದಲ್ಲಿದೆ. ಗರ್ಭಗೃಹ, ಸುಕನಾಸಿ ಮತ್ತು ಮಂಟಪ ಹಳೆಯ ಭಾಗಗಳಾಗಿವೆ. ಮಂಟಪದ ದ್ವಾರ ಪಾಲಕರು ಶೈವದ್ವಾರಪಾಲಕರು ಮತ್ತು ಹೊರಗಿನ ನವರಂಗ ಭುವನೇಶ್ವರಿಯಲ್ಲಿ ತಾಂಡವೇಶ್ವರ, ಅಷ್ಟ ದಿಕ್ಪಾಲಕರು ಇರುವರು. ಈಗ ಗರ್ಭಗುಡಿಯಲ್ಲಿರುವ ಅನಂತಶಾಯಿ ವಿಗ್ರಹವನ್ನು ನಂತರ ಸ್ಥಾಪಿಸಿದಂತೆ ಕಂಡುಬರುವುದು. ಇದರ ಕುಟ್ಟಿತ ತೋರಣದಲ್ಲಿ ದಶಾವತಾರಗಳಿವೆ. ನಂತರ ಮೇಲೆ ಮಲಗಿರುವ ಪದ್ಮನಾಭನ ಪಾದಗಳ ಹತ್ತಿರ ಶ್ರೀದೇವಿ, ಶಿರೋಭಾಗದಲ್ಲಿ ಭೂದೇವಿ, ಹಿಂದೆ ಚಾಮರ ಧಾರಿಣಿ ಇರುವರು. ಮಹಾದ್ವಾರವನ್ನು ಇತರ ದೇವಾಲಯಗಳ ಕಲ್ಲುಗಳಿಂದ ಕಟ್ಟಿರುವರು. ಆನೆಸಾಲು, ಕುದುರೆಸಾಲು, ಪೌರಾಣಿಕ ಕಥೆಗಳು, ಬ್ರಹ್ಮ, ವಿಷ್ಣು, ಗಣೇಶ, ತಾಂಡವೇಶ್ವರ ವಿಗ್ರಹಗಳು ಇಲ್ಲಿವೆ.

ಪಂಚಲಿಂಗೇಶ್ವರ ದೇವಾಲಯ

ಪ್ರವಾಸಿಗರ ಭವನದ ಪಶ್ಚಿಮ ದಿಕ್ಕಿನಲ್ಲಿ ಐದು ದೇವಾಲಯಗಳ ಸಮೂಹ ಕಂಡು ಬರುತ್ತದೆ. ಇವುಗಳ ಮಧ್ಯದಲ್ಲಿ ನಗರೇಶ್ವರ, ಉಳಿದವು ಪಂಚಲಿಂಗೇಶ್ವರ ದೇವಾಲಯ ಟಂಕಸಾಲೆ, ಆನೆಗುಂಡಿ, ಲಾಯದ ಸಲಿಗೆ ಕಟ್ಟಡಗಳಿದ್ದವೆಂದು ತಿಳಿದು ಬರುತ್ತದೆ. ಈ ಸಮೂಹದ ಉತ್ತರದಲ್ಲಿ ಪಂಚಲಿಂಗೇಶ್ವರ ಹಾಗೂ ದಕ್ಷಿಣದಲ್ಲಿ ನಗರೇಶ್ವರ ದೇವಾಲಯಗಳಿದ್ದುವೆಂದು ತಿಳಿದು ಬರುತ್ತದೆ.137 ಇವೆಲ್ಲವು ಭಗ್ನಗೊಂಡಿದ್ದು ಸಣ್ಣಗೂಡುಗಳ ಭುವನೇಶ್ವರಿಯ ಭಾಗಗಳು ಗೋಡೆಯಲ್ಲಿರುವ ವಿಗ್ರಹಗಳು ಹಂಸಗಳು, ಮಕರಗಳ ಸಾಲುಗಳು ಕಂಡು ಬಂದಿವೆ. ದ್ವಾರಬಾಗಿಲು ಮತ್ತು ಕೆಲವು ಚಿಕ್ಕಮೂರ್ತಿಗಳನ್ನು ಇಂದು ಕೇದಾರೇಶ್ವರ ದೇವಾಲಯದ ಆವರಣ ದಲ್ಲಿಡಲಾಗಿದೆ.

ಒಟ್ಟಾರೆ ಹೇಳುವುದಾದರೆ ದೋರಸಮುದ್ರದಲ್ಲಿ ಹಲವಾರು ದೇವಾಲಯಗಳು ಕಂಡು ಬಂದಿದ್ದು ಅವು ಶೈವ ಜೈನ ಮತ್ತು ವೈಷ್ಣವ ಧರ್ಮಗಳಿಗೆ ಸಂಬಂಧಿಸಿದ ದೇವಾಲಯಗಳಾಗಿವೆ. ಹೆಚ್ಚಾಗಿ ಶೈವ ದೇವಾಲಯಗಳು ಕಂಡುಬಂದಿರುವುದರಿಂದ ದೋರಸಮುದ್ರವು ಶೈವ ಧರ್ಮದ ಪ್ರಮುಖ ಕೇಂದ್ರ ಸ್ಥಳವಾಗಿರಬೇಕು. ಹೊಯ್ಸಳರ ಸಮಗ್ರ ವಾಸ್ತುಶೈಲಿಯ ಲಕ್ಷಣಗಳನ್ನೊಳಗೊಂಡ ಹೊಯ್ಸಳೇಶ್ವರ ದೇವಾಲಯವು ಇಂದಿಗೂ ಶಿಲ್ಪ ಸೌಂದರ್ಯದಿಂದ ಪ್ರಸಿದ್ಧವಾಗಿದೆ.

7.15 ಧಾರ್ಮಿಕ ಹಬ್ಬ ಆಚರಣೆಗಳು

ಹೊಯ್ಸಳ ಅರಸರು ಎಲ್ಲ ಧರ್ಮಗಳಿಗೂ ಸಮಾನ ಪ್ರೋತ್ಸಾಹ ನೀಡಿದ್ದರು. ಆಯಾ ಧರ್ಮಗಳಿಗನುಗುಣವಾಗಿ ದೇವಾಲಯಗಳು ನಿರ್ಮಾಣವಾಗಿದ್ದವು. ಈ ದೇವಾಲಯಗಳು ಹಲವಾರು ಧಾರ್ಮಿಕ ಹಬ್ಬ ಆಚರಣೆಗಳ ಪ್ರಮುಖ ಕೇಂದ್ರಗಳಾಗಿದ್ದವು.

ರಾಜಧಾನಿ ದೋರಸಮುದ್ರವು ಹಲವಾರು ದೇವಾಲಯಗಳ ಬೀಡಾಗಿದ್ದು ಅಲ್ಲಿ ಕಂಡುಬಂದಿರುವ ಹಬ್ಬಗಳಾದ ಶಿವರಾತ್ರಿ, ದೀಪಾವಳಿ, ಸಂಕ್ರಮಣ, ಕಾರ್ತಿಕ ಹಬ್ಬಗಳು ಪ್ರಮುಖ ವಾಗಿದ್ದು ಅದರಂತೆ ಅನಂತಸಿನೊಂಪಿ, ತುಲಾಪುರುಷ, ಹೋಮ, ಅಭಿಷೇಕ, ಪರೋಕ್ಷ ವಿನಯ ಮುಂತಾದ ಧಾರ್ಮಿಕ ಆಚರಣೆಗಳು ಕಂಡು ಬಂದಿವೆ.

ಶಿವರಾತ್ರಿ

ದೋರಸಮುದ್ರದ ಹೊಯ್ಸಳೇಶ್ವರ ದೇವಾಲಯದ ಮಹಾದ್ವಾರದ ಗೋಡೆಯ ಮೇಲಿನ ಶಾಸನವು ಇದೇ ದೇವಾಲಯದಲ್ಲಿ ಶಿವರಾತ್ರಿ ಹಬ್ಬದ ಆಚರಣೆ ಭಕ್ತರ ಹಾಗೂ ಅವರು ನೀಡಿದ ದಾನದ ವಿವರಗಳನ್ನು ತಿಳಿಸುತ್ತದೆ.[138]

ದೀಪಾವಳಿ

ದೋರಸಮುದ್ರದ ಹೊಯ್ಸಳೇಶ್ವರ ದೇವಾಲಯದ ಕಂಬದ ಮೇಲಿನ ಶಾಸನವು ದೀಪಾವಳಿ ಹಬ್ಬವನ್ನು ಆಚರಿಸುವ ಹಾಗೂ ಸತತವಾಗಿ ದೀಪಗಳನ್ನು ಉರಿಸಲು ಬೇಕಾದ ಎಣ್ಣೆಯನ್ನು ಕೊಳ್ಳಲು ನೀಡಿರುವ ದಾನವನ್ನು ತಿಳಿಸುತ್ತದೆ.[139]

ಸಂಕ್ರಮಣ

ಈ ಹಬ್ಬದ ಕುರಿತಾಗಿ ದೋರಸಮುದ್ರದ ಬಾವಿಯ ಹತ್ತಿರ ಸಿಕ್ಕಿರುವ ಶಾಸನವು ವಿವರವನ್ನು ನೀಡುತ್ತವೆ. ಸಂಕ್ರಮಣ ದಿವಸದಂದು ಹಲವಾರು ದಾನದತ್ತಿಗಳನ್ನು ನೀಡಿದ್ದನ್ನು ಹಾಗೂ ಪ್ರತಿಯೊಂದು ವರ್ಗವು ಈ ಹಬ್ಬವನ್ನು ಆಚರಿಸುತ್ತಿದ್ದರ ಬಗೆಗೆ ಪಾರ್ಶ್ವನಾಥ ಬಸದಿಯ ಶಾಸನದಿಂದ ತಿಳಿದು ಬರುತ್ತದೆ.[140]

ಕಾರ್ತಿಕ

ಕಾರ್ತಿಕ ಹಬ್ಬದ ಕುರಿತಾಗಿ ಹೊಯ್ಸಳೇಶ್ವರ ದೇವಾಲಯದ ಗೋಡೆಯ ಮೇಲಿನ ಶಾಸನವು ಈ ಹಬ್ಬದ ದಿನದಂದು ಭಕ್ತರು ನೀಡಿದ ದಾನವನ್ನು ಹಾಗೂ ಆ ದಾನದಿಂದ ಬಂದ ಬಡ್ಡಿಯ ಆದಾಯವನ್ನು ದೇವರ ಪೂಜೆಗೆ ಬಳಸಬೇಕೆಂದು ವಿವರವನ್ನು ನೀಡುತ್ತದೆ.[141]

ಅನಂತನ ನೋಂಪಿ

ಈ ಆಚರಣೆಯು ಪ್ರಮುಖವಾಗಿ ಜೈನ ಧರ್ಮಿಯರಿಗೆ ಸಂಬಂಧಿಸಿದ ದೋರಸಮುದ್ರದ ಬೆಣ್ಣೆಗುಡ್ಡದ ಕುಳವಾಡಿಯ ಶಾಸನವು ಅನಂತನೋಂಪಿಯನ್ನು ಆಚರಿಸಿದ್ದುದರ ಜೈನ ಸಿದ್ಧಾಂತಿಗಳ ಹಾಗೂ ಶಾಂತಿನಾಥ ದೇವರಿಗೆ ದಾನ ನೀಡಿದ ವಿವರಗಳನ್ನು ಉಲ್ಲೇಖಿಸುತ್ತದೆ.[142]

ತುಲಾಪುರುಷ

ಮಹಾಸಾಧನೆಗಳನ್ನು ಮಾಡಿದ ವ್ಯಕ್ತಿಗೆ ಗೌರವಿಸುವ ಪದ್ಧತಿಯೇ ತುಲಾಪುರುಷ ಇಲ್ಲಿ ವ್ಯಕ್ತಿಯ ಭಾರದಷ್ಟು ಬಂಗಾರ, ಬೆಳ್ಳಿ ನಾಣ್ಯಗಳನ್ನು ತೂಕ ಮಾಡುವುದು ಇಲ್ಲವೇ ಆತನ ಹೆಸರಿನಲ್ಲಿ ದಾನ ನೀಡುವುದು ಮುಖ್ಯವಾಗಿದೆ. ದೋರಸಮುದ್ರದ ಕೆರೆಯ ಪೂರ್ವಕ್ಕೆ ದೊರೆತಿರುವ ಶಾಸನವು ತುಲಾ ಪುರುಷರ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಅಲ್ಲದೆ ವಿಷ್ಣುವರ್ಧನನು ವರದಾ ನದಿ ದಡದ ಮೇಲೆ ಹುಲ್ಲುನಿಯ ತೀರ್ಥದಲ್ಲಿ ತುಲಾಪುರುಷವನ್ನು ನೆರವೇರಿಸಿದನೆಂದು ತಿಳಿಸುತ್ತದೆ.[143]

ಅಭಿಷೇಕ

ಇದು ದೇವರಿಗೆ ವಿಶೇಷವಾದ ಪೂಜೆಯನ್ನು ಸಲ್ಲಿಸುವ ವ್ರತಾಚರಣೆ ಪದ್ಧತಿ ಎನ್ನಬಹುದು ದೋರಸಮುದ್ರದ ಹೊಯ್ಸಳೇಶ್ವರ ದೇವಾಲಯದ ಗೋಡೆಯ ಮೇಲಿನ ಶಾಸನವು ಅಭಿಷೇಕ ವನ್ನಾಚರಿಸಿದ ಕುರಿತು ಹೇಳುತ್ತದೆ.[144]

ಪರೋಕ್ಷ ವಿನಯ ಆಚರಣೆ

ಶೌರ್ಯ ಮತ್ತು ಸಾಹಸ ಕಾರ್ಯಗಳಲ್ಲಿ ಹೋರಾಡಿ ವೀರ ಮರಣವನ್ನು ಹೊಂದಿದವರ ನೆನಪಿಗಾಗಿ ನೆಡುವ ವೀರಗಲ್ಲುಗಳೇ 'ಪರೋಕ್ಷ ವಿನಯ ಆಚರಣೆ' ಎಂದು ಹೇಳಬಹುದು. ದೋರಸಮುದ್ರದಲ್ಲಿ ಹಲವಾರು ವೀರಗಲ್ಲುಗಳು ಕಂಡುಬಂದಿವೆ. ದೋರಸಮುದ್ರದ ಹೊಯ್ಸಳೇಶ್ವರ ದೇವಾಲಯದ ನಂದಿಯ ಮಂಟಪದ ಶಾಸನ.[145] ಹೊಲವೊಂದರಲ್ಲಿನ ಶಾಸನ[146] ಮತ್ತು ವಸ್ತು ಸಂಗ್ರಹಾಲಯದಲ್ಲಿರುವ ಶಾಸನಗಳು[147] ಪರೋಕ್ಷ ವಿನಯ ಆಚರಿಸಿದುದರ ಬಗೆಗೆ ತಿಳಿಸುತ್ತವೆ.

7.16 ದೋರಸಮುದ್ರದ ಅವನತಿ

ಕ್ರಿ.ಶ. ಹತ್ತನೇ ಶತಮಾನದಿಂದ ಹನ್ನೆರಡನೇ ಶತಮಾನದವರೆಗೆ ಕರ್ನಾಟಕದ ಇತಿಹಾಸದಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದ ಹೊಯ್ಸಳ ಸಾಮ್ರಾಜ್ಯವು ಕ್ರಮೇಣ ಅವನತಿಯ ಹಾದಿ ಹಿಡಿಯಿತು. ಈ ಅವನತಿಗೆ ಪ್ರಮುಖ ಕಾರಣಗಳೆಂದರೆ ರಾಜ್ಯದ ವಿಭಜನೆ. ನೆರೆಯ ರಾಜ್ಯಗಳೊಡನೆ ಸಂಬಂಧ, ರಾಜಕೀಯ ಮತ್ತು ಆರ್ಥಿಕ ಅಂಶಗಳನ್ನು ಒಳಗೊಂಡಿದೆ.

ಹೊಯ್ಸಳ ವಂಶದ ಕಡೆಯ ಮಹಾಚಕ್ರವರ್ತಿ ಮೂರನೇ ಬಲ್ಲಾಳನ ಆಳ್ವಿಕೆಯ ಕಾಲವು ದಕ್ಷಿಣ ಭಾರತದಲ್ಲಿ ಪ್ರಕ್ಷುಬ್ಧತೆಯ ಕಾಲವಾಗಿತ್ತು. ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಥಮವಾಗಿ ಕ್ರಿ.ಶ. 1310 ರಲ್ಲಿ ಮುಸ್ಲಿಮರು ದಂಡೆಯಾತ್ರೆ ನಡೆಸಿ ಸಂಪತ್ತನ್ನು ವಿಫುಲವಾಗಿ ಸೂರೆ ಮಾಡಿದರು. ದಕ್ಷಿಣದ ಹಿಂದೂ ರಾಜ್ಯಗಳಿಗೆ ಅವರ ಆಕ್ರಮಣದ ವಿನಾಶ ಸ್ವರೂಪದ ಕಲ್ಪನೆಯೇ ಇರಲಿಲ್ಲ. ಅಂತಃ ಕಲಹಗಳಿಂದ ಕೂಡಿದ್ದ ರಾಜ್ಯಗಳಿಗೆ ಮುಸ್ಲಿಮರ ಘೋರ ದಾಳಿಯನ್ನು ಎದುರಿಸಿ ರಕ್ಷಣೆ ಮಾಡಿಕೊಳ್ಳಲು ಸಿದ್ಧತೆಯೇ ಇರಲಿಲ್ಲ. ಈ ರಾಜ್ಯಗಳ ಪೈಕಿ ಸೆವುಣರೆಂದು ಹೆಸರು ಪಡೆದ ದೇವಗಿರಿಯ ಯಾದವರು, ವಾರಂಗಲ್ಲಿನ ಕಾಕತೀಯರು, ಹೊಯ್ಸಳರು ಮತ್ತು ಪಾಂಡ್ಯರು ಮುಖ್ಯರಾದವರು. ಒಬ್ಬೊಬ್ಬರು ತಮ್ಮ ಪರಮಾಧಿಕಾರಕ್ಕಾಗಿ ಹೋರಾಡುತ್ತಿದ್ದರು. ಎಲ್ಲರೂ ಒಂದಾಗಿ ಹಿಂದೂಧರ್ಮವನ್ನು ರಕ್ಷಿಸಬೇಕೆಂಬ ಅವಶ್ಯಕತೆ ಇದರ ತರುವಾಯವೇ ಅವರಿಗೆ ಅರಿವಾದುದು. ಮೂರನೇ ಬಲ್ಲಾಳನು ಮುಸ್ಲಿಮರ ದಾಳಿಯನ್ನು ಎದುರಿಸುವುದಕ್ಕಾಗಿ ಒಂದು ರೀತಿಯ ಸಂಘಟಿತ ರೂಪದ ಹೋರಾಟಕ್ಕೆ ಪ್ರಯತ್ನಿಸಿದರು. ಅನಾನುಕೂಲತೆಗಳ ದೆಸೆಯಿಂದ ಅವನ ಮಹಾಯೋಜನೆ ನಿಷ್ಫಲವಾಯಿತು. ಇತಿಹಾಸದಲ್ಲಿ ಹೊಯ್ಸಳರ ಮೂರನೇ ಬಲ್ಲಾಳನು

ಒಳ್ಳೆಯ ಪ್ರತಿಭಾವಂತನಾಗಿ ರಚನಾ ಸಾಮರ್ಥ್ಯವನ್ನುಳ್ಳ ಕೊನೆಯ ವಿಶಿಷ್ಟ ಸ್ಥಾನವನ್ನು ಗಳಿಸಿ ಕೊಂಡಿದ್ದಾನೆಂಬುದು ನಿಸ್ಸಂದೇಹವಾದುದೇ ಸರಿ.

ಮೂರನೆಯ ಬಲ್ಲಾಳನು ರಾಜ್ಯದ ವಿಭಜನೆಯನ್ನು ಕೊನೆಗಾಣಿಸಿ ಪುನಃ ಒಟ್ಟುಗೂಡಿದ ರಾಜ್ಯವನ್ನು ಆಳಲಾರಂಭಿಸಿದನು. ಕ್ರಿ.ಶ. 1310 ರಲ್ಲಿ ಮಲ್ಲಿಕಾಫರನು ದಕ್ಷಿಣ ಭಾರತಕ್ಕೆ ದಂಡೆತ್ತಿ ಬರುವವರೆಗೂ ಅವನು ರಾಜ್ಯದ ಶಾಂತಿ ಮತ್ತು ಸುವ್ಯವಸ್ಥೆಗಳನ್ನು ಮತ್ತೆ ಸ್ಥಾಪಿಸಿ ಗಳಿಸಿದ ಘನತೆಯನ್ನು ಗಳಿಸಿಕೊಳ್ಳುವ ಪ್ರಥಮ ಕಾರ್ಯದಲ್ಲಿಯೇ ನಿರತನಾಗಿದ್ದನು. ಬನವಾಸಿ ಪ್ರದೇಶದಲ್ಲಿ ಹತೋಟಿಗೆ ಬಾರದ ಕೆಲವು ನಾಯಕರನ್ನು ಅಳುಕದೆ ಮಟ್ಟ ಹಾಕಿದನು. ಬಲ್ಲಾಳನ ಬಾವಮೈದುನ ಸೋಮೆಯ ದಂಡನಾಯಕನು ಶತ್ರುಗಳಾದ ಸೇವುಣರ ಜೊತೆ ದಿಟ್ಟತನದಿಂದ ಹೋರಾಡಿದನು. ರಾಜ್ಯಕ್ಕೆ ಅವರ ದಾಳಿಯ ಭಯ ತಪ್ಪಲಿಲ್ಲ. ಮಾಧವ ದಂಡನಾಯಕನು ಜಟಾವರ್ಮನ್ ವೀರಪಾಂಡ್ಯನ ಮೇಲೆ ಪ್ರಚಂಡ ವಿಜಯ ಗಳಿಸಿ ದಕ್ಷಿಣದಲ್ಲಿ ಹೊಯ್ಸಳರ ಅಧಿಕಾರವನ್ನು ಮತ್ತೆ ಸ್ಥಾಪಿಸಿದನು. ಕ್ರಿ.ಶ. 1310 ರಲ್ಲಿ ಬಲ್ಲಾಳನು ರಾಜಧಾನಿಯಲ್ಲಿ ಇಲ್ಲದಿದ್ದಾಗ ಮಲ್ಲಿಕಾಫರನು ದಂಡೆಯಾತ್ರೆ ನಡೆಸಿ ದೋರಸಮುದ್ರವನ್ನು ಕೊಳ್ಳೆ ಹೊಡೆದನು. ಬಲ್ಲಾಳನು ತಕ್ಷಣ ರಾಜಧಾನಿಗೆ ಹಿಂದಿರುಗಿದ್ದರೂ ಸಾಕಷ್ಟು ಸಿದ್ಧತೆಯಿಲ್ಲದೆ ಅಂಥ ಪ್ರಬಲ ಶತ್ರುವಿನ ಮೇಲೆ ಯುದ್ಧ ಮಾಡುವುದು ಮೂರ್ಖತನವೆಂದು ಭಾವಿಸಿ ಸಾಮಂತರ ಸಲಹೆಗೆ ವಿರುದ್ಧವಾಗಿಯೇ ಮಲ್ಲಿಕಾಫರನೊಡನೆ ಶಾಂತಿಯ ಒಪ್ಪಂದಕ್ಕೆ ಬಂದುದು. ಆಗಿನ ವಿಷಮ ಪರಿಸ್ಥಿತಿಯನ್ನು ದಾಟಿದುದಾಯಿತು. ಆಗ ವಿನಾಶದ ಭೀತಿಯಿಂದ ರಾಜ್ಯವು ಪಾರಾಯಿತು.[148] ಬಲ್ಲಾಳನು ತನ್ನ ರಾಜ್ಯದಲ್ಲಿ ಮುಸ್ಲಿಂ ದಂಡನ್ನು ಇಟ್ಟುಕೊಳ್ಳಲು ಒಪ್ಪಿಗೆ ನೀಡದಿದ್ದುದರಿಂದ ಕ್ರಿ.ಶ.1318ರಲ್ಲಿ ಅವರು ಮತ್ತೊಂದು ಬಾರಿ ದಂಡೆತ್ತಿ ಬಂದರು. ಕಠಾರಿಯ ಸಾಳುವ ರೇಸೆಯ ನಾಯಕನು ದಾಳಿಗಾರರನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದನು. ಈ ದಂಡಯಾತ್ರೆಯ ಪ್ರಭಾವದಿಂದ ಎಲ್ಲ ರಾಜರ ದೃಷ್ಟಿಕೋನ ಬದಲಾಯಿಸಿತು.

ಬಲ್ಲಾಳನು ಹಿಂದೆ ಶತ್ರುವಿಗೆ ವಶವಾಗಿ ಅದರಿಂದ ಉಂಟಾಗಿದ್ದ ಅಪಮಾನದಿಂದ ಕನಲಿದ್ದನು. ಅವನು ಇತರ ಹಿಂದೂ ರಾಜ್ಯಗಳ ಮೇಲೆ ಅದಿಪತ್ಯ ಸ್ಥಾಪಿಸಬೇಕೆಂಬ ಅಭಿಪ್ರಾಯವನ್ನು ತ್ಯಜಿಸಿದ್ದನು. ಮುಸ್ಲಿಂ ದಾಳಿಕಾರರ ವಿರುದ್ಧವಾಗಿ ನಿಲ್ಲಲು ಯಾವುದಾದರೊಂದು ಸುಸಂಘಟಿತವಾದ ಪ್ರಯತ್ನವನ್ನು ತ್ವರಿತವಾಗಿ ಮಾಡಬೇಕಾದುದು ಅವಶ್ಯಕವೆನಿಸಿತ್ತು. ಬಲ್ಲಾಳನೇ ಮುಖಂಡತ್ವ ವಹಿಸಿಕೊಂಡು ತಿರುವಣ್ಣಾಮಲೆಯನ್ನು ತನ್ನ ರಾಜಧಾನಿಯನ್ನಾಗಿಯೂ ಕಾರ್ಯ ಸ್ಥಾನವನ್ನಾಗಿಯೂ ಮಾಡಿಕೊಂಡು ದಕ್ಷಿಣದ ಎಲ್ಲ ರಾಜರಿಗೂ ಒದಗಿದ್ದ ಆಪತ್ತನ್ನು ಎದುರಿಸಲು

ಹಿಂದೂ ರಾಜ್ಯಗಳ ಒಂದು ರೀತಿಯ ಕೂಟವನ್ನು ರಚಿಸಿದನು. ಆಗ ಬಹಾವುದ್ದೀನ್ ಗುರುಷಸ್ಪ್ ದಂಗೆಯೆದ್ದ ಕಾರಣದಿಂದ ಕ್ರಿ.ಶ. 1326 ರಲ್ಲಿ ಮಹಮ್ಮದ್-ಬಿನ್-ತುಘಲಕನು ದಕ್ಷಿಣದ ಮೇಲೆ ಮತ್ತೊಮ್ಮೆ ದಂಡೆಯಾತ್ರೆ ಮಾಡುವ ಅಗತ್ಯ ಒದಗಿತು. ಆದರೆ ತಲೆ ತಪ್ಪಿಸಿಕೊಂಡಿದ್ದ ದಂಗೆಕೋರರನ್ನು ಸುಲ್ತಾನನಿಗೆ ಒಪ್ಪಿಸಿದ ಪರಿಣಾಮವಾಗಿ ಆ ಸನ್ನಿವೇಶ ತಪ್ಪಿತು. ಕ್ರಿ.ಶ. 1336ರಲ್ಲಿ ಮಧುರೆಯಲ್ಲಿ ಸುಲ್ತಾನನ ಆಡಳಿತವನ್ನು ಸ್ಥಾಪಿಸಿದ ಪರಿಣಾಮವಾಗಿ ಹಿಂದೂಗಳ ಮನಸ್ಸಿನಲ್ಲಿ ಭಯವುಂಟಾಯಿತು. ಘಿಯಾಸುದ್ದೀನನು ಕ್ರಿ.ಶ. 1341ರಲ್ಲಿ ಸುಲ್ತಾನನಾದ ಮೇಲೆ ಅವರ ಆತಂಕ ಪರಮಾವಧಿಯನ್ನು ಮುಟ್ಟಿತು. ಇಬ್ನಬತೂತನು ವಿವರಿಸಿದಂತೆ ಸುಲ್ತಾನನು ನಡೆಸಿದ ಕಾರ್ಯಕ್ಕೆ ಮಿತಿಯೇ ಇರಲಿಲ್ಲ. ಹಿಂದೂ ಧರ್ಮ ರಕ್ಷಣೆಯು ಎಲ್ಲಕ್ಕಿಂತ ಪ್ರಮುಖವಾದ ವಿಷಯವಾಯಿತು. ಕ್ರಿ.ಶ. 1342ರಲ್ಲಿ ನಡೆದ ಕೊಪ್ಪಂ (ಇಬ್ನ ಬತೂತ ಹೇಳುವ ಕೊಬ್ಬನ್) ಯುದ್ಧದಲ್ಲಿ ಬಲ್ಲಾಳನೇ ಮುಸ್ಲಿಮರ ಮೇಲೆ ನಿರ್ಣಾಯಕ ವಿಜಯವನ್ನು ಗಳಿಸುವುದರಲ್ಲಿದ್ದನು. ಶತ್ರುಗಳ ಅಪೇಕ್ಷೆಯಂತೆ ಹದಿನಾಲ್ಕು ದಿನಗಳ ಯುದ್ಧ ವಿರಾಮಕ್ಕೆ ಒಪ್ಪಿಗೆಯಿತ್ತನು. ಬಲ್ಲಾಳ ಕೊಟ್ಟ ಮಾತಿನಂತೆ ಯುದ್ಧ ವಿರಾಮವನ್ನು ಗೌರವವಾಗಿ ನಡೆಸಿದರು ಮುಸ್ಲಿಮರು ಅದನ್ನು ಉಲ್ಲಂಘಿಸಿದರು. ಅವರು ಯುದ್ಧ ವಿರಾಮ ಕಾಲದಲ್ಲಿಯೇ ಬಲ್ಲಾಳನನ್ನು ಅವನ ಸೈನ್ಯವನ್ನು ಹಠಾತ್ತಾಗಿ ಎದುರಿಸಿ ಅವನನ್ನು ಮೋಸದಿಂದ ಸೆರೆ ಹಿಡಿದು ಕೊಂದು ಹಾಕಿದರು. "ಅವನ (ಬಲ್ಲಾಳನ) ಚರ್ಮವನ್ನು ಹುಲ್ಲಿನಿಂದ ತುಂಬಿ ಮಧುರೆಯ ಕೋಟೆಗೋಡೆಯ ಮೇಲೆ ನೇತು ಹಾಕಿದನು. ಅದೇ ಶರೀರ ಭಂಗಿಯನ್ನು ಕಂಡೆ" ಎಂದು ಇಬ್ನ ಬತೂತನು ಬರೆದಿದ್ದಾನೆ. (ಬಲ್ಲಾಳ ರಣರಂಗದಲ್ಲಿ ವೀರ ಮರಣವನ್ನು ಅಪ್ಪಿದರು ಅವನು ಜೀವತೆತ್ತ ಉದ್ದೇಶವು ವಿಫಲವಾಗಲಿಲ್ಲ ಹಿಂದೂ ಧರ್ಮವು ರಕ್ಷಿಸಲ್ಪಟ್ಟಿತು. ಬಲ್ಲಾಳನ ಈ ಘನಕಾರ್ಯವನ್ನು ವಿಜಯನಗರ ಸಾಮ್ರಾಜ್ಯ ಸಂಪೂರ್ಣಗೊಳಿಸಿತು).[149]

ಈ ಅನಿರೀಕ್ಷಿತ ಸೋಲು ಹೊಯ್ಸಳ ಸಾಮ್ರಾಜ್ಯಕ್ಕೆ ಪೆಟ್ಟು ನೀಡಿತು. ಸಮಯವನ್ನು ಕಾಯುತ್ತಿದ್ದ ವಿಜಯನಗರದ ಹರಿಹರನು ಕ್ರಿ.ಶ. 1346ರಲ್ಲಿ ಹೊಯ್ಸಳರ ಕೊನೆಯ ಅರಸ ನಾಲ್ಕನೇ ಬಲ್ಲಾಳನನ್ನು ಸೋಲಿಸಿ ಇಡೀ ಸಾಮ್ರಾಜ್ಯವನ್ನು ತನ್ನ ಅಧೀನಕ್ಕೆ ತೆಗೆದುಕೊಂಡನು. ಇದರಿಂದ ಅನಾಥವಾದ ರಾಜಧಾನಿ ದೋರಸಮುದ್ರವು .ತನ್ನ ವೈಭವವನ್ನು ಕಳೆದುಕೊಳ್ಳಬೇಕಾಯಿತು. ಸುಮಾರು ಮೂರು ಶತಮಾನಗಳವರೆಗೆ ದೋರಸಮುದ್ರವು ಹೊಯ್ಸಳರ ರಾಜಧಾನಿಯಾಗಿ ಕರ್ನಾಟಕದಲ್ಲಿ ಮಾತ್ರವಲ್ಲದೆ ದಕ್ಷಿಣ ಭಾರತದ ಪ್ರಮುಖ ರಾಜಧಾನಿ ಪಟ್ಟಣವಾಗಿ ಮೆರೆಯಿತು. ವಿಜಯನಗರದ ಜನರ ಬಾಯಲ್ಲಿ ದೋರಸಮುದ್ರವು ಹಳೆಯ ಬೀಡಾಗಿ, ಹಳೆಯ ನೆಲೆಯಾಗಿ, ಕೊನೆಗೆ ಹಳೇಬೀಡು ಎಂಬ ಹೆಸರನ್ನು ಪಡೆಯಿತೆಂದು ತಿಳಿದು ಬರುತ್ತದೆ.[150]

ಅಧ್ಯಾಯ ಏಳರ ಅಡಿಟಿಪ್ಪಣಿಗಳು

1) ಕನ್ನಡ ವಿಷಯ ವಿಶ್ವಕೋಶ 1979 ಪು 1048.
2) ಡೆರೆಟ್. ಜಿ.ಡಿ.ಎಂ – ದಿ ಹೊಯ್ಸಳಾಸ್ 1957 ಲಂಡನ್ ಪು 35
3) ಎ.ಇ.ಸಂ 11 ಪು. 54 ಮತ್ತು ಎಮ್.ಎ.ಆರ್. 1927–28.
4) ಎ.ಕ.ಸಂ. 11 ಪು.143
5) ಮುದ್ದಾಚಾರಿ ಬಿ. – ದಕ್ಷಿಣ ಭಾರತದ ಇತಿಹಾಸ 1975 ಪು.315
6) ಚನ್ನಬಸಪ್ಪ ಎಸ್.ಪಾಟೀಲ – ಕರ್ನಾಟಕದ ಕೋಟೆಗಳು ಸಂಪುಟ–1, ಪು.40
7) ಶೆಟ್ಟರ್ ಎಸ್. – ಅದೇ ಪು 6
8) ಎಮ್. ಎ. ಆರ್. 1931 ಪು 58
9) ಎ.ಕ.ಸಂ. 9 ಪು. 260
10) ಎ.ಕ.ಸಂ. 9 ಪು 291
11) ಎ.ಕ.ಸಂ. 9 ಪು. 313
12) ಎ.ಕ.ಸಂ. 9 ಪು. 333
13) ಎ.ಕ.ಸಂ. 9 [ಪು. 322
14) ಎ.ಕ.ಸಂ. 9 ಪು. 274
15) ಎ.ಕ.ಸಂ. 9 ಪು. 337
16) Half yearly Journal of Mysore University Vol. II, 1928
17) ಎ.ಕ. (ಡ.ಅ.) ಸಂ. 8 ಅಗೂ. ಶಾ. ಸಂ. 132–134
18) ಎ.ಕ.ಸಂ. 9 ಪು. 266
19) ಎ.ಕ.ಸಂ. 9 ಪು. 282
20) ಎಮ್.ಎ.ಆರ್. ವರದಿ (1912) ಪು. 80
21) ಎ.ಕ.ಸಂ. 9 ಪು. 278
22) ಎ.ಕ.ಸಂ. 9 ಪು. 277
23) ಎ.ಕ.ಸಂ. 9 ಪು. 290
24) ಎ.ಕ.ಸಂ. 9 ಪು. 290
25) ಎ.ಕ.ಸಂ. 9 ಪು. 290

26) ಎ.ಕ.ಸಂ. 9 ಪು. 295

27) ಕಿಟೆಲ್ ಎಫ್ – ಕನ್ನಡ ಮತ್ತು ಇಂಗ್ಲಿಷ್ ನಿಘಂಟು ಪು. 1587

28) ಎ.ಕ.ಸಂ. 9 ಪು. 271

29) ಎ.ಕ.ಸಂ. 9 ಪು. 291

30) ಎ.ಕ.ಸಂ. 9 ಪು. 766

31) ಎ.ಕ.ಸಂ. 9 ಪು. 277 278

32) ಎ.ಕ.ಸಂ. 9 ಪು. 276

33) ಕ್ವಿಟೆಲ್ ಎಫ್. ಅದೇ ಪು. 1587

34) ಎ.ಕ.ಸಂ. 9 ಪು. 272

35) ಎ.ಕ.ಸಂ. 9 ಪು. 272

36) ಎ.ಕ.ಸಂ. 9 ಪು. 273

37) ಎ.ಕ.ಸಂ. 9 ಪು. 327

38) ಎ.ಕ.ಸಂ. 9 ಪು. 307

39) ಕಾಮತ್ ಜ್ಯೋತ್ಸ್ನಾ – ಸೋಸಿಯಲ್ ಲೈಫ್ ಇನ್ ಮಿಡೀವಲ್ ಕರ್ನಾಟಕ 1980 ದೆಹಲಿ ಪು. 65

40) ಕರ್ನಾಟಕ ಪರಂಪರೆ ಭಾಗ–1 ಪು.69

41) ಕಾಮತ್ ಜ್ಯೋತ್ಸ್ನಾ – ಅದೇ ಪು. 69

42) ಕುಪ್ಪುಸ್ವಾಮಿ ಜಿ.ಆರ್. – ಎಕನಾಮಿಕ್ ಕಂಡೀಸನ್ಸ್ ಇನ್ ಕರ್ನಾಟಕ ಧಾರವಾಡ 1980 ಪು

43) ಶೆಟ್ಟರ್ ಎಸ್.–ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಅಂಡ್ ಕಲ್ಚರ್ ಬೆಂಗಳೂರು 1982 ಪು. 70

44) ಎಮ್.ಎ.ಆರ್. ವರದಿ (1929) ಪು. 125 ಮತ್ತು ಎ.ಕ.ಸಂ. 9 ಹಳೇ 320

45) ಎ.ಕ.ಸಂ. 9 ಹಳೇ 320

46) ಎ.ಕ.ಸಂ. 9 ಹಳೇ 321

47) ಎ.ಕ.ಸಂ. 9 ಹಳೇ 321

48) ಎ.ಕ.ಸಂ. 9 ಹಳೇ 322

49) ಎ.ಕ.ಸಂ 9 ಹಳೇ 340

50) ಎ.ಕ.ಸಂ. 9 ಹಳೇ 347

51) ಎ.ಕ.ಸಂ. 9 ಹಳೇ 328

52) ಕುಪ್ಪುಸ್ವಾಮಿ ಜಿ.ಆರ್. ಅದೇ ಧಾರವಾಡ 1980 ಪು 60

53) ಕುಪ್ಪುಸ್ವಾಮಿ ಜಿ.ಆರ್. – ಅದೇ ಧಾರವಾಡ 1980 ಪು. 64

54) ಎ.ಕ.ಸಂ. 9 309 333

55) ಅಪ್ಪಾದೊರೈ ಎ. – ದಕ್ಷಿಣ ಭಾರತದ ಆರ್ಥಿಕ ಇತಿಹಾಸ ಪು. 417

56) ಎ.ಕ.ಸಂ. 11 ದಾವಣಗೆರೆ 105

57) ಎ.ಕ.ಸಂ. 5 ಅರಕಲಗೂಡು 2

58) E1, XV ಪು. 98 ಕ್ರಿ.ಶ. 1075 KI V. No.46 ಕ್ರಿ.ಶ. 1288

59) ಜಿ.ಎಸ್. ದೀಕ್ಷಿತ –ಮಧ್ಯಕಾಲೀನ ಕರ್ನಾಟಕದ ಸ್ಥಳೀಯ ಸರ್ಕಾರ ಪು. 140

60) ಎಮ್. ಎ. ಆರ್. 1912 ಪು. 45 ಪ್ಯಾರ 49

61) IA VIII p. 304 ಕ್ರಿ.ಶ. 1204

62) SII No. 106 ಕ್ರಿ.ಶ. 1116

63) KI V. No. 98 ಕ್ರಿ.ಶ. 1181

64) KI II No. 8 ಕ್ರಿ.ಶ. 1072

65) ಕಿಟೆಲ್ ಎಫ್ ಅದೇ ಪು. 1587

66) ಎ.ಕ.ಸಂ. 9 ಹಳೇ 317

67) ಎ.ಕ. 5 (ಹೊಸಸರಣಿ) ಮೈಸೂರು 214 ಕ್ರಿ.ಶ. 1188

68) ಅದೇ ಮೈಸೂರು 216 1195 ಎ.ಕ. 61 (ಹೊಸಸರಣಿ) ಪಾಂಡವಪುರ

69) ಎ.ಕ. 6 (ಹೊಸಸರಣಿ) ಪಾಂಡವಪುರ 63 ಕ್ರಿ.ಶ. 1196

70) ಎ.ಕ. 5 (ಹೊಸಸರಣಿ) ಮೈಸೂರು 121 ಕ್ರಿ.ಶ. 1277

71) ಅದೇ ತಿನ 136 ಕ್ರಿ.ಶ. 1179 ಎ.ಕ. 3 ಮೈಸೂರು ಕ್ರಿ.ಶ. 1196

72) ಎ.ಕ. 5 ಬೇಲೂರು 155 ಕ್ರಿ.ಶ. 1280

73) ಅದೇ ಕೆ.ಎಲ್ 110 1280 ಅದೇ 6 ಕೆ.ಡಿ. 49 1291 ಅದೇ 6 (ಹೊಸಸರಣಿ) ಪಾಂಡವಪುರ 220 2ನೇ ವೀರಬಲ್ಲಾಳ

74) ಎ.ಕ. 5 244 ಎಂ.ಎ.ಆರ್. 1917 ಪು. 46

75) ಎಂ.ಎ.ಆರ್. 1915 ಪು. 48

76) ಎ.ಕ,ಸಂ. 9 ಹಳೇ 317

77) ಎ.ಕ.ಸಂ. 9 ಹಳೇ 317

78) ಎ.ಕ.ಸಂ. 9 ಹಳೇ 309

79) ಎ.ಕ.ಸಂ. 9 ಹಳೇ 333

80) ಕುಪ್ಪುಸ್ವಾಮಿ ಜಿ.ಆರ್. ಅದೇ ಪು. 107

81) ಎ.ಕ.ಸಂ. 9 ಹಳೇ 352

82) ಎ.ಕ.ಸಂ. 9 ಹಳೇ 293–294

83) ಎ.ಕ.ಸಂ. 9 ಹಳೇ 328

84) ಶೆಟ್ಟರ್ ಎಸ್. ಅದೇ ಸಂ–1 ಪು. 84–85

85) ಎ.ಕ.ಸಂ. 9 ಹಳೇ 328

86) ಎ.ಕ.ಸಂ. 9 ಹಳೇ 332

87) ಎ.ಕ (ಹಳೇಯ) ಸಂ–5 ಹಳೇ 79

88) ಎ.ಕ. 7 VII S K 118, ಕ್ರಿ.ಶ. 1054

89) ಎ.ಕ. VI B_1 117, ಕ್ರಿ.ಶ. 1136

90) IA XIV p-15, ಕ್ರಿ.ಶ. 181, KI 125 ಕ್ರಿ.ಶ. 1186

91) ಎ.ಕ. XII S K 118, ಕ್ರಿ.ಶ. 1054

92) ಹಿರೇಮಠ ಬಿ.ಆರ್. – ಶಾಸನಗಳಲ್ಲಿ ಕರ್ನಾಟಕದ ವರ್ತಕರು ಧಾರವಾಡ 1986 ಪು 12

93) ಎ.ಕ.ಸಂ. 9 ಹಳೇ 323

94) ಎ.ಕ.ಸಂ. 9 ಹಳೇ 392

95) ಹಿರೇಮಠ ಬಿ.ಆರ್. – ಅದೇ ಪು. 24

96) ಎ.ಕ.ಸಂ. 9 ಹಳೇ 328

97) ಎ.ಕ.ಸಂ. 9 ಹಳೇ 347

98) ಬಿ.ಷೇಕ್ ಆಲಿ (ಸಂ) – ದಿ ಹೊಯ್ಸಳ ಡೈನಾಸ್ಟಿ ಮೈಸೂರು 1979 ಪು 164

99) ಎ.ಕ. 6 (ಹೊಸಸರಣಿ) ಪಾಂಡವಪುರ 8 ಕ್ರಿ.ಶ. 1233

100) ಎ.ಕ. 5 (ಹೊಸಸರಣಿ) ಕೆ.ಆರ್. ನಗರ 108

101) ಅದೇ ಮೈಸೂರು 215 ಕ್ರಿ.ಶ. 1175

102) ಕರ್ನಾಟಕ ಥ್ರೊ ದಿ ಏಜಸ್ ಪು. 453

103) ಹಿರೇಮಠ ಬಿ.ಆರ್. – ಅದೇ ಪು. 194

104) ಹಿರೇಮಠ ಬಿ.ಆರ್. – ಅದೇ ಪು. 194

105) ಶಾಸನ ಸಾಹಿತ್ಯ ಸಂಚಯ ಪು. 152

106) ಎ.ಕ. 8 S.K. 118, 1054

107) SII IXI 297–1177

108) ಎ.ಕ. 12–9b 34–1134

109) ಎ.ಕ. 7 S K 191

110) The R.K.S. ಪು. 367

111) ಎ.ಕ. VII Ng 274 ಕ್ರಿ.ಶ. 1228

112) ಕುಪ್ಪುಸ್ವಾಮಿ ಜಿ.ಆರ್. ಅದೇ ಪು. 118

113) ಎಮ್.ಎ.ಆರ್ ವರದಿ 1930 ಪು. 51

114) ಎಕ.ಸಂ. 9 ಹಳೇ 287–288

115) ಎ.ಕ.ಸಂ. 9 ಹಳೇ 403

116) ಎ.ಕ.ಸಂ. 9 ಹಳೇ 281

117) ಎ.ಕ.ಸಂ. 9 ಹಳೇ 309

118) ಎ.ಕ.ಸಂ. 9 ಹಳೇ 317

119) ಎ.ಕ.ಸಂ. 9 ಹಳೇ 327

120) ದೀಕ್ಷಿತ್ – ಕರ್ನಾಟಕದ ಆರ್ಥಿಕ ಮತ್ತು ಸಾಮಾಜಿಕ ಇತಿಹಾಸ ಪು. 40

121) ಶೆಟ್ಟರ್ ಎಸ್ –ಅದೇ ಸಂ–1 ಪು.4

122) ಶೆಟ್ಟರ್ ಎಸ್ – ಅದೇ ಸಂ–1 ಪು. 125

123) ಬೋರಲಿಂಗಯ್ಯ ಎಂ – ಮೈಸೂರು ದೇಶದ ವಾಸ್ತುಶಿಲ್ ಪು. 130

124) ಶ್ರೀಕಂಠಶಾಸ್ತ್ರಿ ಎಸ್ – ಹೊಯ್ಸಳ ವಾಸ್ತುಶಿಲ್ಪ 1965 ಪು. 4

125) ಶೆಟ್ಟರ್ ಎಸ್. – ದಿ ಹೊಯ್ಸಳ ಟೆಂಪಲ್ಸ್ ಪು. 17

126) ಶ್ರೀಕಂಠಶಾಸ್ತ್ರಿ ಎಸ್ – ಅದೇ ಪು. 39

127) ಎಮ್.ಎ.ಆರ್. ವರದಿ 1930 ಪು. 35

128) ಶ್ರೀಕಂಠಶಾಸ್ತ್ರಿ ಎಸ್. ಅದೇ ಪು. 15

129) ಶ್ರೀಕಂಠಶಾಸ್ತ್ರಿ ಎಸ್. ಅದೇ ಪು. 41

130) ಕೃಷ್ಣರಾವ್ ಎಂ.ವಿ.– ಕರ್ನಾಟಕ ಇತಿಹಾಸ ದರ್ಶನ ಪು.1040

131) ಎಮ್.ಎ.ಆರ್. ವರದಿ 1930 ಪು.50

132) ಎ.ಕ.ಸಂ. 7 ಚೇ 147 ಪು. 180

133) ಶ್ರೀಕಂಠಶಾಸ್ತ್ರಿ ಎಸ್. – ಅದೇ ಪು.44

134) ಎಮ್.ಎ.ಆರ್. ವರದಿ 1930 ಪು. 58

135) ಎಮ್.ಎ.ಆರ್. ವರದಿ 1930 ಪು. 55

136) ಶ್ರೀಕಂಠಶಾಸ್ತ್ರಿ ಎಸ್. – ಅದೇ ಪು.46

137) ಎಮ್.ಎ.ಆರ್ ವರದಿ 1930 ಪು. 50

138) ಎ.ಕ.ಸಂ. 9 ಪು. 505

139) ಎ.ಕ.ಸಂ. 9 ಪು. 277

140) ಎ.ಕ.ಸಂ. 9 ಪು. 262

141) ಎ.ಕ.ಸಂ. 9 ಪು. 235

142) ಎ.ಕ.ಸಂ. 9 ಪು. 303

143) ಎ.ಕ.ಸಂ. 9 ಪು. 318

144) ಎ.ಕ.ಸಂ. 9 ಪು. 255

145) ಎ.ಕ.ಸಂ. 9 ಪು. 288

146) ಎ.ಕ.ಸಂ. 9 ಪು. 327

147) ಎ.ಕ.ಸಂ. 3 ಪು. 85

148) ಕರ್ನಾಟಕ ಪರಂಪರೆ ಸಂ–1 ಪು. 476

149) ಎ.ಕ.ಸಂ. 5 ಮತ್ತು ಹಯವದನರಾವ್ ಸಿ.– ಮೈಸೂರು ಗೆಜೆಟಿಯರ್ ಪು. 950

ಅಧ್ಯಾಯ 8
ಉಪಸಂಹಾರ

ಪ್ರಸ್ತುತ ನಗರ ಕೇಂದ್ರಗಳ ಅಧ್ಯಯನವು ಹೊಯ್ಸಳ ಸಾಮ್ರಾಜ್ಯದ ಸುಮಾರು ಕ್ರಿ.ಶ. ಹತ್ತರಿಂದ ಹದಿಮೂರನೇ ಶತಮಾನದಲ್ಲಿನ ವಿಶೇಷವಾಗಿ ಕರ್ನಾಟಕಕ್ಕೇ ಸಂಬಂಧಿಸಿದಂತೆ ನಗರೀಕರಣದ ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಹಲವು ಮುಖಗಳಾದ ಪಟ್ಟಣಗಳ ಹುಟ್ಟು ಹಾಗೂ ಬೆಳವಣಿಗೆ ಹಾಗೂ ರಚನೆ ಮತ್ತು ಪಟ್ಟಣಗಳಲ್ಲಿನ ಆಡಳಿತ, ಆರ್ಥಿಕ ಹಾಗೂ ಸಾಮಾಜಿಕ ಜೀವನಗಳನ್ನು ಅಧ್ಯಯನ ಮಾಡಲಾಗಿದೆ. ಪಟ್ಟಣಗಳು ಹಳ್ಳಿಗಳಿಗಿಂತ ಭಿನ್ನವಾಗಿದ್ದವು ಹಾಗೂ ಹಳ್ಳಿಗಳಿಗೆ ಹೋಲಿಸಿದರೆ ಅಲ್ಲಿನ ಜೀವನ ಹೆಚ್ಚು ಸಂಕೀರ್ಣವು ಹಾಗೂ ವೈವಿಧ್ಯಮಯ ವಾಗಿತ್ತು ಎಂಬ ಅಂಶವನ್ನು ಮಹಾಪ್ರಬಂಧದಲ್ಲಿ ಎತ್ತಿ ಹಿಡಿಯಲಾಗಿದೆ.

ಪಟ್ಟಣಗಳ ಉದಯಕ್ಕೆ ಕಾರಣವಾಗುವ ಅಂಶಗಳ ಚರ್ಚೆಯೊಂದಿಗೆ ಸಂಶೋಧನೆ, ಪ್ರಾರಂಭಗೊಂಡಿದೆ. ಇದಕ್ಕೆ ಹೊಂದಿಕೊಂಡಂತೆ ನಗರ ಕೇಂದ್ರಗಳ ಬೆಳವಣಿಗೆ ಹಾಗೂ ವಿಸ್ತರಣೆಯು ಕಂಡುಬರುತ್ತದೆ. ಪಟ್ಟಣಗಳ ಬೆಳವಣಿಗೆಯನ್ನು ಚರ್ಚಿಸುವಾಗ ವಿವಿಧ ರೀತಿಯ ಪಟ್ಟಣಗಳನ್ನು ವರ್ಗೀಕರಿಸುವ ಹಾಗೂ ಅವುಗಳ ಸ್ವರೂಪವನ್ನು ನಿರ್ಧರಿಸುವ ಒಂದು ಪ್ರಯತ್ನವನ್ನು ಮಾಡಲಾಗಿದೆ. ಪಟ್ಟಣಗಳ ಉಗಮ ಹಾಗೂ ಬೆಳವಣಿಗೆಯಿಂದಾಗಿ ಪಟ್ಟಣಗಳಲ್ಲಿ ಒಂದು ರೀತಿಯ ವಾತಾವರಣವು ಸೃಷ್ಟಿಯಾಯಿತು. ಪಟ್ಟಣಗಳು ಭೌತಿಕ ಅಂಗಗಳಾಗಿ ಹೊರಹೊಮ್ಮಿದವು. ಇದರ ಜೊತೆಗೆ ಈ ಅಧ್ಯಯನವು ಪಟ್ಟಣಗಳಲ್ಲಿನ ಆಡಳಿತ ಹಾಗೂ ನಗರ ಆರ್ಥಿಕ ಜೀವನದ ಒಂದು ಪರಿಶೀಲನೆಯನ್ನು ಒಳಗೊಂಡಿದೆ.

ಪ್ರಸ್ತುತ ಸಂಶೋಧನೆಯಲ್ಲಿ ಅಳವಡಿಸಿಕೊಂಡಿರುವ ವಿಧಾನ ಹಾಗೂ ಆರಿಸಿಕೊಂಡಿರುವ ಮಾರ್ಗವು ಪರಿಮಾಣಾತ್ಮಕತೆಗಿಂತ ಹೆಚ್ಚು ಗುಣಾತ್ಮಕವಾಗಿದೆ. ಏಕೆಂದರೆ ಪರಿಮಾಣಾತ್ಮಕತೆಯು ವಸ್ತು ವಿಷಯ ಹಾಗೂ ಅಧ್ಯಯನದ ಕಾಲಕ್ಕೆ ಅಷ್ಟಾಗಿ ಸರಿ ಬರುವುದಿಲ್ಲ. ಆದರೆ ಗುಣಾತ್ಮಕ ಅಧ್ಯಯನವು ಹೆಚ್ಚು ಸೂಕ್ತವಾಗಿದೆ. ಪಟ್ಟಣಗಳನ್ನು ವಿಶೇಷವಾಗಿ ಅವುಗಳ ಬೆಳವಣಿಗೆಯನ್ನು ವಿಶ್ಲೇಷಿಸುವಾಗ ಅವುಗಳ ಹಂಚಿಕೆಯ ವಿಧಾನವನ್ನು ವಿವರಿಸುವಾಗ ಪಟ್ಟಣಗಳನ್ನು ವರ್ಗೀಕರಿಸುವಾಗ ಹಾಗೂ ಅವುಗಳ ಸ್ವರೂಪವನ್ನು ನಿರ್ಧರಿಸುವಾಗ ಅವುಗಳು ನಿರ್ವಹಿಸಿದ ಪಾತ್ರ ಹಾಗೂ ಕಾರ್ಯಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದೆ. ಪರಿಮಾಣಾತ್ಮಕ ಮಾಹಿತಿಯ ಅನುಪಸ್ಥಿತಿ ಯಿಂದಾಗಿ ಗುಣಾತ್ಮಕ ವಿಶ್ಲೇಷಣೆಯನ್ನು ಮಾಡಲಾಗಿದೆ.

ಮೊದಲನೆಯದಾಗಿ ಪಟ್ಟಣಗಳ ಉದಯದ ಕೆಲವು ಅಂಶಗಳನ್ನು ಅಧ್ಯಯನ ಮಾಡಲಾಗಿದೆ. ನಗರ ಕೇಂದ್ರಗಳ ಉದಯಕ್ಕೆ ಕಾರಣವಾದ ವಿವಿಧ ಅಂಶಗಳ ಪರಿಶೀಲನೆಯನ್ನು ಮಾಡಲಾಗಿದೆ. ನಗರೀಕರಣದ ಪ್ರಕ್ರಿಯೆಯು ಹಲವಾರು ಅಂಶಗಳ ಪರಸ್ಪರ ಒಂದನ್ನೊಂದರ ಪರಿಣಾಮ ಎಂದು ತೋರಿಸಲಾಗಿದೆ. ವಿದ್ವಾಂಸರು ನಗರ ಕೇಂದ್ರಗಳ ಉದಯ ಹಾಗೂ ಬೆಳವಣಿಗೆಗೆ ರಾಜಕೀಯ, ಆರ್ಥಿಕ, ಇಲ್ಲವೇ ಸಾಮಾಜಿಕ ಅಂಶಗಳು ಕಾರಣವಾಗಿದ್ದವು ಎಂದು ಹೇಳಿದರೂ ಪ್ರಸ್ತುತ ಅಧ್ಯಯನವು ನಗರೀಕರಣದ ಪ್ರಕ್ರಿಯೆಯ ಹಲವಾರು ಅಂಶಗಳ ಫಲ ಎಂಬುದನ್ನು ಸ್ಪಷ್ಟಪಡಿಸಿದೆ. ಈ ಅಂಶಗಳು ಅವುಗಳ ಕಾರ್ಯ ಹಾಗೂ ಪರಿಣಾಮಗಳಲ್ಲಿ ಭಿನ್ನವಾಗಿದ್ದವು.

ನಗರೀಕರಣದ ಪ್ರಮುಖ ಅಂಶಗಳಲ್ಲಿ (ಮಿಗುತೆ ಮಾರಲು ಅವಕಾಶವಿರುವ ಹೆಚ್ಚುವರಿ ಉತ್ಪಾದನೆ) ಒಂದಾಗಿತ್ತು. ಪಟ್ಟಣಗಳ ಉದಯದಲ್ಲಿ ಇದು ಪ್ರಧಾನ ಕಾರಣವಾಗಿತ್ತು. ಹೊಯ್ಸಳರ ಕಾಲದಲ್ಲಿ ಮಿಗುತೆಯು ಹೆಚ್ಚಿನ ಪ್ರಮಾಣದಲ್ಲಿತ್ತು. ದೊರೆಯುತ್ತಿದ್ದ ಮಿಗುತೆಯನ್ನು ವಿವಿಧ ಮೂಲಗಳಿಂದ ಬಳಕೆ ಮಾಡಲಾಗುತ್ತಿತ್ತು. ಇದು ನಗರೀಕರಣಕ್ಕೆ ದಾರಿಯನ್ನುಂಟು ಮಾಡಿತು. ಕೃಷಿ ಪದಾರ್ಥಗಳಲ್ಲಿ ಮಿಗುತೆಯು ಸಂಭವಿಸಿತು. ಶಾಸನಗಳಲ್ಲಿ ಸಂತೆಗೆ ಆಹಾರ ಧಾನ್ಯಗಳು ಬರುತ್ತಿದ್ದು ದರ ಉಲ್ಲೇಖವು ಇರುವುದರಿಂದ ರೈತನ ಸ್ವಂತ ಅಗತ್ಯವನ್ನು ಪೂರೈಸಿದ ನಂತರ ಉಳಿದ ಹೆಚ್ಚುವರಿ ಆಹಾರಧಾನ್ಯವು ಮಾರುಕಟ್ಟೆಗೆ ಬರುತ್ತಿದ್ದಿತು ಎಂದು ಹೇಳಬಹುದು. ಇದರಿಂದ ಅರಸರ ಭಂಡಾರಕ್ಕೆ ಅಧಿಕ ಆದಾಯ ಬರುತ್ತಿತ್ತು. ಹಾಗಾಗಿ ವಾಣಿಜ್ಯದ ಅಗತ್ಯ ಮತ್ತು ಹೆಚ್ಚುವರಿ ಇದ್ದುದು ಈ ಕಾರಣಗಳಿಂದ ಹೊಯ್ಸಳ ಯುಗದಲ್ಲಿ ಹಲವು ನಗರಕೇಂದ್ರಗಳು ಉದಯಿಸಲು ಅವಕಾಶವಾಯಿತು.

ಮಿಗುತೆಯ ಜೊತೆಗೆ ನಗರೀಕರಣದ ಪ್ರಕ್ರಿಯೆಗೆ ಇತರೆ ಅಂಶಗಳು ಸಹಾಯಕವಾದವು. ಉದಾಹರಣೆಗೆ ಒಂದು ಪ್ರದೇಶದ ಭೌಗೋಳಿಕ ವ್ಯವಸ್ಥೆ ನಗರೀಕರಣಕ್ಕೆ ಅನುಕೂಲಕಾರಿಯಾದ ಅಂಶವಾಗಿ ಪರಿಣಮಿಸಿತು. ದಕ್ಷಿಣ ಭಾರತದ ಪರ್ವತ ಗುಡ್ಡಗಳು ನೈಸರ್ಗಿಕ ಕೋಟೆಯನ್ನು ನಿರ್ಮಿಸಿದ್ದವು ಹಾಗೂ ಕೋಟೆ ಕೊತ್ತಲಗಳನ್ನು ನಿರ್ಮಿಸಲು ಹೆಚ್ಚು ಅವಕಾಶ ಕಲ್ಪಿಸಿಕೊಟ್ಟವು ಮುಂದೆ ಈ ಕೋಟೆಗಳೇ ಪಟ್ಟಣಗಳಾಗಿ ಬೆಳೆದವು. ದಕ್ಷಿಣ ಭಾರತದ ಪೂರ್ವ ಪಶ್ಚಿಮ ತೀರಗಳೆಂದು ಹೆಸರಾಗಿದ್ದ ತೀರ ಪ್ರದೇಶಗಳು ಅವುಗಳ ಹೊರಜಗತ್ತಿನೊಂದಿಗಿನ ಜಲಸಾರಿಗೆ

ಸಂಪರ್ಕದಿಂದಾಗಿ ವ್ಯಾಪಾರ ಮತ್ತು ವಾಣಿಜ್ಯವನ್ನು ಉಂಟು ಮಾಡಿದವು. ಇದರ ಫಲವಾಗಿ ಪಟ್ಟಣಗಳ ಬೆಳವಣಿಗೆಯಾಯಿತು. ಪಟ್ಟಣಗಳನ್ನು ನಿರ್ಮಿಸುವಾಗ ಆ ಸ್ಥಳದ ನಕಾಶೆಯು ಪರಿಗಣನಾತ್ಮಕವಾಗಿತ್ತು.

ನಗರೀಕರಣದ ಮತ್ತೊಂದು ಪ್ರಮುಖ ಅಂಶವೆಂದರೆ ಆರ್ಥಿಕ ಅಂಶವಾಗಿದೆ. ಪಟ್ಟಣಗಳ ಬೆಳವಣಿಗೆಯಲ್ಲಿ ವ್ಯಾಪಾರವು ಪ್ರಮುಖವಾದ ಅಂಶವಾಗಿತ್ತು. ವ್ಯಾಪಾರದಿಂದಾಗಿ ಮಾರುಕಟ್ಟೆಯು ಅಸ್ತಿತ್ವಕ್ಕೆ ಬಂದಿತು ಹಾಗೂ ಮಾರುಕಟ್ಟೆಯು ಹೆಚ್ಚು ಕಡಿಮೆ ಎಲ್ಲಾ ನಗರ ಕೇಂದ್ರಗಳಲ್ಲೂ ಕಂಡು ಬರುತ್ತಿತ್ತು. ಉತ್ತಮ ಸಾರಿಗೆ ಸಂಪರ್ಕದಿಂದಾಗಿ ನಗರೀಕರಣ ತೀವ್ರಗೊಂಡಿತು. ವ್ಯಾಪಾರ ಮಾರ್ಗಗಳಲ್ಲಿ ಹಲವಾರು ನಗರ ಕೇಂದ್ರಗಳು ತಲೆ ಎತ್ತಿದವು. ಉತ್ತಮವಾದ ಸಾರಿಗೆ ವ್ಯವಸ್ಥೆಯು ಪಟ್ಟಣಗಳ ಬೆಳವಣಿಗೆಗೆ ಸಹಕಾರಿಯಾಯಿತು. ಇದರ ಜೊತೆಗೆ ಸಾಮ್ರಾಜ್ಯದಲ್ಲಿ ಹಲವಾರು ವಿಧದ ಕೈಗಾರಿಕೆಗಳು ಅಸ್ತಿತ್ವಕ್ಕೆ ಬಂದು, ಆರ್ಥಿಕ ಅಂಶವಾಗಿ ನಗರೀಕರಣವನ್ನು ಪ್ರೇರೇಪಿಸಿದವು. ಆ ಕಾಲದ ಪ್ರಮುಖ ಅಂಶಗಳಲ್ಲಿ ಸಂತೆಗಳನ್ನು ಸ್ಥಾಪಿಸಿದ್ದು ಒಂದಾಗಿತ್ತು. ಇದರಿಂದಾಗಿ ಪಟ್ಟಣಗಳು ಬೆಳೆದವು ಸಂತೆಗಳನ್ನು ಪ್ರಾರಂಭಿಸಿದರಿಂದ ಹೊಸ ಪಟ್ಟಣಗಳು ಅಸ್ತಿತ್ವಕ್ಕೆ ಬಂದವು.

ಎರಡನೆಯದಾಗಿ ಪಟ್ಟಣಗಳ ಬೆಳವಣಿಗೆಗೆ ರಾಜಕೀಯ ಅಂಶಗಳು ಸಹಕಾರಿಯಾಗಿದ್ದವು ಮಿಗುತೆಯ ನಿರ್ವಹಣೆ ಹಾಗೂ ಅದರ ಸಮರ್ಥ ನಿಭಾಯಿಸುವಿಕೆಯು ರಾಜಕೀಯ ಅಂಶವಾಗಿತ್ತು. ಹೊಯ್ಸಳ ಅರಸರು ರಾಜಕೀಯ ಸ್ಥಿರತೆ ಹಾಗೂ ಸುವ್ಯವಸ್ಥೆಯನ್ನು ಸ್ಥಾಪಿಸಿ ಕೃಷಿ ಹಾಗೂ ಕೈಗಾರಿಕೆಯನ್ನು ಪ್ರೋತ್ಸಾಹಿಸುವ ಮೂಲಕ ಹಾಗೂ ವ್ಯಾಪಾರ ಮತ್ತು ವಾಣಿಜ್ಯಕ್ಕೆ ಗಮನ ನೀಡುವುದರ ಮೂಲಕ ನಗರ ಬೆಳವಣಿಗೆಗೆ ಅನುಕೂಲಕಾರಿಯಾದ ಸನ್ನಿವೇಶವನ್ನು ಸೃಷ್ಟಿಸಿದರು. ಹೊಯ್ಸಳ ಅರಸರು ಉದಾರ ನೀತಿಯಿಂದ ವ್ಯಾಪಾರ ಮತ್ತು ವಾಣಿಜ್ಯವನ್ನು ಪ್ರೋತ್ಸಾಹಿಸಿದರು ಹಾಗೂ ಅದಕ್ಕೆ ರಕ್ಷಣೆ ಮತ್ತು ಭದ್ರತೆಯನ್ನು ಒದಗಿಸಿದರು. ಪಟ್ಟಣಗಳ ನಿರ್ಮಾಣ ಹಾಗೂ ಬೆಳವಣಿಗೆಯಲ್ಲಿ ಉತ್ತೇಜನ ನೀಡಿದ ರಾಜರು, ಮಂತ್ರಿಗಳು, ದಂಡನಾಯಕರು, ಅಧಿಕಾರಿಗಳು ಇತರೆ ವ್ಯಕ್ತಿಗಳ ನಿದರ್ಶನಗಳಿದ್ದವು. ಇವೆಲ್ಲರೂ ಹಲವು ವಿಧದಲ್ಲಿ ನಗರ ಚಟುವಟಿಕೆಯನ್ನು ಪ್ರೋತ್ಸಾಹಿಸಿದರು. ರಾಜಕೀಯ ಅಂಶಕ್ಕೆ ಅಧೀನವಾಗಿ ಯುದ್ಧವು ಸಹ ನಗರೀಕರಣದ ಅಂಶವಾಗಿ ಪರಿಗಣಿಸಲ್ಪಟ್ಟಿದೆ. ಆದರೆ ಅದು ಸಕಾರಾತ್ಮಕವಾಗಿರುವುದಕ್ಕಿಂತ ಹೆಚ್ಚಾಗಿ ನಕಾರಾತ್ಮಕವಾಗಿ ಕಂಡು ಬಂದಿತು.

ಪಟ್ಟಣಗಳ ಬೆಳವಣಿಗೆಗೆ ಧಾರ್ಮಿಕ ಅಂಶಗಳುಕೂಡ ಸಹಕಾರಿಯಾಗಿದ್ದವು. ಧಾರ್ಮಿಕ ಸಂಸ್ಥೆಗಳಾದ ದೇವಾಲಯಗಳು ಮಠಗಳು ಹಾಗೂ ಆಶ್ರಮಗಳು ಪಟ್ಟಣಗಳ ಬೆಳವಣಿಗೆಗೆ ಸಹಕಾರಿಯಾಗಿದ್ದವು. ಈ ಧಾರ್ಮಿಕ ಸಂಸ್ಥೆಗಳು ಜನರನ್ನು ತಮ್ಮ ಕಡೆಗೆ ಆಕರ್ಷಿಸಿದವು. ಆರ್ಥಿಕ ಚಟುವಟಿಕೆಗಳು ದೇವಾಲಯಗಳ ಸುತ್ತಮುತ್ತ ಬೆಳೆದವು. ಇದರ ಜೊತೆಗೆ ಧಾರ್ಮಿಕ ಕೇಂದ್ರಗಳಾಗಿ ಜನರನ್ನು ತಮ್ಮ ಕಡೆಗೆ ಸೆಳೆದವು. ಇದರಿಂದಾಗಿ ಪಟ್ಟಣಗಳು ದೇವಾಲಯಗಳ ಸುತ್ತಮುತ್ತ ಬೆಳೆದವು.

ಹೊಯ್ಸಳರ ಸಾಮ್ರಾಜ್ಯದಲ್ಲಿ ಹಳ್ಳಿಗಳನ್ನು ಪುರಗಳು ಅಥವಾ ಪಟ್ಟಣಗಳಾಗಿ ಪರಿವರ್ತಿಸಿದ ಹಲವಾರು ನಿದರ್ಶನಗಳಿದ್ದವು. ಇದು ಅನೇಕ ಪಟ್ಟಣಗಳು ಬೆಳೆಯಲು ಕಾರಣವಾಯಿತು. ಅವುಗಳಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿದರು. ಇದರಿಂದ ಇವುಗಳು ಪಟ್ಟಣಗಳಾಗಿ ಪರಿವರ್ತನೆಯಾದವು. ಹೊಯ್ಸಳ ಅರಸರು ಹೊಸ ಪಟ್ಟಣಗಳ ರಚನೆಯ ಜೊತೆಗೆ ಅನೇಕ ಉಪಪಟ್ಟಣಗಳನ್ನು ನಿರ್ಮಿಸಿದರು. ಹೊಸದಾಗಿ ನಿರ್ಮಿಸಿದ ಪಟ್ಟಣಗಳ ಹೊರತಾಗಿ ಬೆಳವಣಿಗೆಯ ಹಂತದಲ್ಲಿದ್ದ ಹಲವಾರು ಪಟ್ಟಣಗಳಿದ್ದವು. ಈ ಪಟ್ಟಣಗಳು ನಿರ್ವಹಿಸಿದ ಪಾತ್ರ ಪ್ರಮುಖವಾಗಿತ್ತು. ಇವುಗಳು ಬೇರೆ ಪಟ್ಟಣಗಳಿಗಿಂತ ಭಿನ್ನವಾಗಿದ್ದವು ಹಾಗೂ ಅವುಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸಬಹುದಾಗಿತ್ತು. ಅವುಗಳನ್ನು ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ಸ್ವರೂಪದ ಪಟ್ಟಣಗಳು ಎಂದು ಗುರುತಿಸಬಹುದು.

ಆರ್ಥಿಕ ಸ್ವರೂಪದ ಪಟ್ಟಣಗಳು ವ್ಯಾಪಾರ ಹಾಗೂ ವಾಣಿಜ್ಯವನ್ನು ತಮ್ಮ ನೆಲೆಯನ್ನಾಗಿ ಮಾಡಿಕೊಂಡಿದ್ದವು. ಕ್ರಮೇಣವಾಗಿ ಮಧ್ಯಕಾಲೀನ ಪಟ್ಟಣಗಳ ಅನೇಕ ಆಸ್ತಿಗಳಾದ ಮಾರುಕಟ್ಟೆಗಳು, ದೇವಾಲಯಗಳು ಮುಂತಾದವುಗಳನ್ನು ಅವುಗಳು ಬೆಳೆಸಿದವು. ಈ ಪಟ್ಟಣ ಗಳಲ್ಲಿ ವರ್ತಕರು ಕುಶಲಕರ್ಮಿಗಳು ಹಾಗೂ ವೈವಿಧ್ಯಮಯ ಗುಂಪುಗಳಿದ್ದವು. ಸಾಮಾನ್ಯವಾಗಿ ಈ ರೀತಿಯಾದ ಪಟ್ಟಣಗಳು ಸಮುದ್ರ ತೀರಗಳ ಬಳಿ ಕಂಡುಬರುತ್ತಿದ್ದವು. ಈ ಅಂಶವನ್ನು ಸ್ಪಷ್ಟಪಡಿಸಲು ಕೆಲವು ಉದಾಹರಣೆಗಳನ್ನು ಕೊಡಬಹುದು. ವಾಣಿಜ್ಯ ಪಟ್ಟಣಗಳ ಬೆಳವಣಿಗೆಗೆ ಒಂದು ಫಲವತ್ತಾದ ಪ್ರದೇಶವೆಂದರೆ ಅದು ಪಶ್ಚಿಮ ತೀರವಾಗಿದ್ದಿತು. ಹೆಚ್ಚು ಸಂಖ್ಯೆಯ ಪಟ್ಟಣಗಳನ್ನು ದಕ್ಷಿಣ ಹಾಗೂ ಉತ್ತರ ಕನ್ನಡ ತೀರಗಳ ಮೇಲೆ ನೋಡಬಹುದು. ಶಾಸನಗಳು ಈ ಪಟ್ಟಣಗಳಲ್ಲಿನ ಆರ್ಥಿಕ ಹಾಗೂ ವಾಣಿಜ್ಯ ಚಟುವಟಿಕೆಗಳ ಬಗ್ಗೆ ತಿಳಿಯಲು ಸಹಕಾರಿಯಾಗಿವೆ.

ರಾಜಕೀಯ ಸ್ವರೂಪದ ನಗರಕೇಂದ್ರಗಳು ರಾಜಕೀಯ ಚಟುವಟಿಕೆಗಳ ಕೇಂದ್ರಗಳಾಗಿದ್ದವು. ಅವುಗಳು ಸಾಮ್ರಾಜ್ಯದ ರಾಜಧಾನಿಗಳು, ಪ್ರಮುಖ ಕೇಂದ್ರಗಳು ಹಾಗೂ ಕೋಟೆಗಳು ಆಡಳಿತ ಕೇಂದ್ರಗಳು ಮತ್ತು ಸೇನಾ ಮುಖ್ಯ ನೆಲೆಗಳಾಗಿದ್ದವು.

ಮಧ್ಯಕಾಲೀನ ಯುಗದಲ್ಲಿ ಕೋಟೆಗಳು ಪ್ರಮುಖವಾಗಿದ್ದವು ಹಾಗೂ ಅವುಗಳು ಕೋಟೆಯ ಪಟ್ಟಣಗಳಾಗಿ ಉದಯಿಸಿದವು. ಅವುಗಳ ಆಯಕಟ್ಟಿನ ನೆಲೆ ಹಾಗೂ ಶಕ್ತಿಯಿಂದಾಗಿ ಸಮಕಾಲೀನ ಯುಗದಲ್ಲಿ ಒಂದು ಪ್ರಮುಖವಾದ ಪಾತ್ರವನ್ನು ವಹಿಸುವಂತೆ ಮಾಡಿದವು.

ಧಾರ್ಮಿಕ ಸ್ವರೂಪದ ನಗರಕೇಂದ್ರಗಳು ದೇವಾಲಯಗಳಾಗಿದ್ದು ದೊಡ್ಡ ಮೂರ್ತಿಗಳು (ದೇವತೆಗಳು) ಮಠಗಳು ಹಾಗೂ ಆಶ್ರಮಗಳ ಆಶ್ರಯ ಸ್ಥಾನಗಳಾಗಿದ್ದವು. ಇವುಗಳು ಯಾತ್ರಾ ಸ್ಥಳಗಳು ಆಗಿದ್ದವು. ನಗರ ಚಟುವಟಿಕೆಗಳಲ್ಲಿ ಧರ್ಮದ ಪಾತ್ರವೂ ಪ್ರಮುಖವಾಗಿತ್ತು ಹಾಗೂ ನಗರ ಬೆಳವಣಿಗೆಯಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಮಹತ್ವವಾದ ಪಾತ್ರವನ್ನು ವಹಿಸಿದವು.

ಮೂರನೆಯದಾಗಿ ನಗರ ಬೆಳವಣಿಗೆಯಿಂದಾಗಿ ವಿವಿಧ ರೀತಿಯ ಹಾಗೂ ವೈವಿಧ್ಯಮಯ ವಾದ ನಗರಕೇಂದ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಂಡವು. ಆದರೆ ಆ ಬೆಳವಣಿಗೆಯು ಸಮಾನವಾಗಿರಲಿಲ್ಲ. ಅದು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನವಾಗಿತ್ತು. ಈ ಭಿನ್ನತೆಯು ಪ್ರಮಾಣ ಹಾಗೂ ಗಾತ್ರಗಳೆರಡರಲ್ಲೂ ಕಂಡುಬರುತ್ತಿತ್ತು. ಗಾತ್ರದಲ್ಲಿನ ಭಿನ್ನತೆಯು ಸಾಮ್ರಾಜ್ಯದುದ್ದಕ್ಕೂ ಹರಡಿದ್ದ ಪಟ್ಟಣಗಳಲ್ಲಿನ ಒಂದು ಜೋಡಣೆ ಅಥವಾ ಹಂಚಿಕೆಯ ವಿಧಾನವನ್ನು ತೋರಿಸುತ್ತಿತ್ತು. ಇದನ್ನು ನಗರ ರಚನೆಯೊಂದು ಹೇಳಬಹುದು. ಈ ನಗರ ರಚನೆಯು ಎರಡು ಹಂತಗಳಲ್ಲಿತ್ತು ಇದರ ಅಧ್ಯಯನವು ಎರಡು ದೃಷ್ಟಿಕೋನಗಳನ್ನು ಹೊಂದಿದೆ. ಒಂದು ಸಾಮ್ರಾಜ್ಯದ ವಿವಿಧ ಪ್ರದೇಶಗಳಲ್ಲಿದ್ದ ವಿವಿಧ ಗಾತ್ರಗಳ ಪಟ್ಟಣಗಳ ಹಂಚಿಕೆ ಎರಡನೆಯದೆಂದರೆ ಪಟ್ಟಣವೊಂದರ ಒಳರಚನೆ, ಅಂದರೆ ಒಂದು ಪಟ್ಟಣವು ದೇವಾಲಯಗಳು, ಅರಮನೆಗಳು, ಮಾರುಕಟ್ಟೆ, ರಸ್ತೆಗಳು, ಮನೆಗಳ ಸಾಲುಗಳು ಹಾಗೂ ಅದರೊಳಗಿನ ಕಟ್ಟಡಗಳು ಪಟ್ಟಣದ ಒಳಭಾಗದಲ್ಲಿ ಅದೊಂದು ರೀತಿಯ ಜೋಡಣೆ ಅಥವಾ ರಚನಾ ವಿಧಾನವಾಗಿತ್ತು.

ಒಂದು ಪಟ್ಟಣದ ಗಾತ್ರವನ್ನು ನಿರ್ಧರಿಸುವಲ್ಲಿ ಒಂದು ನಿರ್ದಿಷ್ಟ ಪಟ್ಟಣವನ್ನು ಅಭ್ಯಸಿಸಿ ಅದರ ಆಧಾರದ ಮೇಲೆ ಮಾಡಿದ ಅಭಿಪ್ರಾಯಗಳ ಮಾದರಿಯ ಅಧ್ಯಯನವು ಗುಣಾತ್ಮಕವಾಗಿದೆ. ಈ ಅಭಿಪ್ರಾಯವು ಸ್ವಲ್ಪಮಟ್ಟಿಗೆ ಅಮೂರ್ತವಾಗಿ ತೋರುತ್ತದೆ. ಇದರ ಜೊತೆಗೆ ಈ ಒಂದು ಅಧ್ಯಯನದಲ್ಲಿ ಪಟ್ಟಣಗಳು ನಿರ್ವಹಿಸಿದ ಪಾತ್ರ ಹಾಗೂ ಅವುಗಳು ಮಾಡಿದ ಕಾರ್ಯಗಳು ಹಾಗೂ ಕಾರ್ಯಾಚರಣೆಯ ಸಾಂಧ್ರತೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

ಹೊಯ್ಸಳರ ಸಾಮ್ರಾಜ್ಯದಲ್ಲಿ ನಗರ ರಚನೆಯು ವಿವಿಧ ಸ್ಥರಗಳಲ್ಲಿ ವಿವಿಧ ಗಾತ್ರದ ಮನೆಗಳನ್ನು ಹೊಂದಿತು. ಕೆಳವಲಯದಲ್ಲಿ ಸಣ್ಣಗಾತ್ರದ ನಗರ ಕೇಂದ್ರಗಳಿದ್ದವು. ಈ ವಸಾಹತುಗಳು ದೊಡ್ಡ ಹಳ್ಳಿಗಳಿಗಿಂತ ದೊಡ್ಡದಾಗಿರದಿದ್ದರು ಅವು ನಗರ ಲಕ್ಷಣಗಳನ್ನು ಹೊಂದಿದ್ದವು. ಈ ಪಟ್ಟಣಗಳು ಗ್ರಾಮೀಣ ಪರಿಸರದ ಮಧ್ಯೆ ಇದ್ದರು ಬಹಳ ವಿಶಿಷ್ಟವಾಗಿದ್ದವು. ಈ ರೀತಿಯ ವಸಾಹತುಗಳು ನಗರ ಕೇಂದ್ರಗಳಾಗಿ ಬೆಳೆದ ಮೇಲೆ ವಿಸ್ತರಣೆಯ ಲಕ್ಷಣಗಳನ್ನು ತೋರಿಸಲಿಲ್ಲ. ಈ ರೀತಿಯ ನಗರ ಕೇಂದ್ರಗಳು ಹೆಚ್ಚಿನ ಪಾತ್ರಗಳನ್ನು ಹೊಂದಿದ್ದವು. ಅವುಗಳು ಹೆಚ್ಚಿನ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು. ಮಧ್ಯಕಾಲೀನ ಪಟ್ಟಣಗಳು ವೈಶಿಷ್ಟತೆಗಳನ್ನು ಹೊಂದಿದ್ದವು. ಪಟ್ಟಣಗಳ ಕಾರ್ಯಕ್ಷೇತ್ರವು ಕೇವಲ ಸುತ್ತಮುತ್ತಲಿನ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಅವುಗಳು ನಿರ್ವಹಿಸುತ್ತಿದ್ದ ವಿವಿಧ ಕಾರ್ಯಗಳ ಜೊತೆಗೆ ಕೆಲವು ಪಟ್ಟಣಗಳು ರಾಜಕೀಯ, ಆರ್ಥಿಕ, ಧಾರ್ಮಿಕ ಪಾತ್ರಗಳನ್ನು ನಿರ್ವಹಿಸುತ್ತಿದ್ದವು. ಇವುಗಳ ಸಂಖ್ಯೆ ಕಡಿಮೆ ಇದ್ದರೂ ಇವುಗಳ ಕಾರ್ಯ ಬಹಳ ಪ್ರಮುಖವಾಗಿತ್ತು. ಈ ರೀತಿಯ ಪಟ್ಟಣಗಳನ್ನು ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ಕಾಣಬಹುದಾಗಿತ್ತು.

ಮಧ್ಯಕಾಲೀನ ಪಟ್ಟಣದ ಪ್ರಮುಖ ವೈಶಿಷ್ಟತೆಯೇನೆಂದರೆ ಕೋಟೆಯಾಗಿದೆ ಆಗ ಪಟ್ಟಣಗಳ ಸುತ್ತ ಕೋಟೆಯನ್ನು ನಿರ್ಮಿಸಲಾಗುತ್ತಿತ್ತು ಅಥವಾ ನೈಸರ್ಗಿಕ ರಕ್ಷಣೆ ದೊರೆಯುವಂತಹ ಸ್ಥಳಗಳಲ್ಲಿ ಪಟ್ಟಣಗಳನ್ನು ನಿರ್ಮಿಸಲಾಗುತ್ತಿತ್ತು. ಕೃತಕ ಹಾಗೂ ನೈಸರ್ಗಿಕ ಕೋಟೆಗಳೆರಡನ್ನು ರಕ್ಷಣೆಯ ದೃಷ್ಟಿಯಿಂದ ನಿರ್ಮಿಸಲಾಗಿತ್ತು. ಸಾಮ್ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದ ಕೋಟೆಗಳೇ ಇದಕ್ಕೆ ಸಾಕ್ಷಿಯಾಗಿವೆ. ಹಳೇಬೀಡು ಕೋಟೆಯ ಸುತ್ತ ಬೆಳೆದಿತು. ಹಳೇಬೀಡಿನ ಒಳರಚನೆಗೆ ಸಂಬಂಧಿಸಿದಂತೆ ಕೋಟೆಯ ಹೊರಪದರದಿಂದ ಹಿಡಿದು ಅದರ ಕೇಂದ್ರ ಸ್ಥಾನದವರೆಗೂ ಹಲವಾರು ರೀತಿಯ ಕಟ್ಟಡಗಳನ್ನು ಹೊಂದಿತ್ತು. ಅವುಗಳೆಂದರೆ ರಾಜರ ಅರಮನೆ,

ಮಾರುಕಟ್ಟೆಯ ಸ್ಥಳ, ರಸ್ತೆಗಳು, ಮನೆಗಳ ಸಾಲುಗಳು, ದೇವಾಲಯ ಹಾಗೂ ಅನೇಕ ಭವ್ಯವಾದ ಕಟ್ಟಡಗಳಿದ್ದವು.

ನಾಲ್ಕನೆಯದಾಗಿ ವಿವಿಧ ರೀತಿಯ ಹಾಗೂ ವಿವಿಧ ಗಾತ್ರಗಳ ಪಟ್ಟಣಗಳು ಉತ್ತಮವಾದ ಆಡಳಿತವನ್ನು ಹೊಂದಿದ್ದವು ಹಾಗೂ ನಿರ್ವಹಣೆಯನ್ನು ಹೊಂದಿದ್ದವು. ಅಧ್ಯಯನದ ಈ ಅಂಶವು ಪಟ್ಟಣ ಸಭೆಯ ಅಧಿಕಾರ ಹಾಗೂ ಕರ್ತವ್ಯಗಳು ಮತ್ತು ಅದರ ಅಧಿಕಾರಗಳನ್ನೊಳಗೊಂಡಿದೆ. ಪಟ್ಟಣಗಳು ತಮ್ಮದೇ ಆದ ಸಭೆಗಳನ್ನು ಹೊಂದಿದ್ದವು. ಈ ಸಭೆಗಳು ಅವುಗಳ ಪ್ರತಿನಿಧಿಗಳು ಹಾಗೂ ಸದಸ್ಯರ ಮುಖಾಂತರ ಕಾರ್ಯ ನಿರ್ವಹಿಸುತ್ತಿದ್ದವು.

ಪುರಸಭೆಗಳು ನಗರ ಸಭಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು. ಅವುಗಳಿಗೆ ವಿಶೇಷ ಹಕ್ಕು ಬಾಧ್ಯತೆಗಳಿದ್ದವು. ಈ ಸಭೆಗಳೊಂದಿಗೆ ಪಟ್ಟಣಗಳ ಆಡಳಿತವನ್ನು ನಿರ್ವಹಿಸಲು ಹಲವಾರು ಅಧಿಕಾರಿಗಳಿದ್ದರು. ದಕ್ಷಿಣ ಕನ್ನಡದ ಕೆಲವು ಪಟ್ಟಣಗಳ ಅಧ್ಯಯನದಿಂದ ಅವುಗಳನ್ನು ಹಲವು ಕೇರಿಗಳಾಗಿ ವಿಂಗಡಿಸಲಾಗಿತ್ತು ಎಂಬ ಅಂಶ ತಿಳಿದು ಬರುತ್ತದೆ.

ಪಟ್ಟಣಗಳ ಆಡಳಿತಕ್ಕೆ ಸಂಬಂಧಿಸಿದಂತೆ ಪಟ್ಟಣಸ್ವಾಮಿಯೆಂಬ ಪ್ರಮುಖ ಅಧಿಕಾರಿಯಿದ್ದನು. ಅವನು ಪಟ್ಟಣದ ಪಾಲಕನಾಗಿದ್ದನು. ಸಾಮಾನ್ಯವಾಗಿ ವೃತ್ತಿದ ಸಂಘದ ಪ್ರಮುಖ ಸದಸ್ಯನನ್ನು ಪಟ್ಟಣಸ್ವಾಮಿಯಾಗಿ ಆಯ್ಕೆ ಮಾಡಲಾಗುತ್ತಿತ್ತು. ಪಟ್ಟಣಸ್ವಾಮಿಯ ಹುದ್ದೆಯ ವಂಶಪಾರಂಪರ್ಯವಾಗಿದ್ದರು. ಕೆಲವು ವೇಳೆ ಆಯ್ಕೆಯ ಮುಖಾಂತರ ನಡೆಯುತ್ತಿತ್ತು. ಹೊಯ್ಸಳ ಶಾಸನಗಳು ಪಟ್ಟಣಸ್ವಾಮಿಗಳನ್ನು ಮೂಲಸ್ಥಂಭ ಅಥವಾ ರಾಜ್ಯದ ಅಭ್ಯುದಯಕ್ಕೆ ಕಂಬದಂತೆ ಆಧಾರವಾಗಿರುವವರು ಎಂದು ವರ್ಣಿಸುತ್ತವೆ. ಪಟ್ಟಣಸ್ವಾಮಿಯು ಕಾರ್ಯಾಂಗ ಹಾಗೂ ನ್ಯಾಯಾಂಗದ ಎರಡು ಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಅವನು ನಿರ್ವಹಿಸುತ್ತಿದ್ದ ಕರ್ತವ್ಯಗಳಿಗೆ ಸಂಭಾವನೆಯನ್ನು ಪಡೆಯುತ್ತಿದ್ದನು.

ಐದನೆಯದಾಗಿ ಪಟ್ಟಣಸ್ವಾಮಿಯ ಅಧಿಕಾರ ಮತ್ತು ಸ್ಥಾನಮಾನಗಳು ಹಾಗೂ ಪಟ್ಟಣ ಆಡಳಿತದಲ್ಲಿ ಅವನ ಪಾತ್ರವು ಪಟ್ಟಣಗಳ ಆರ್ಥಿಕ ಪ್ರಾಮುಖ್ಯತೆಯನ್ನು ತೋರಿಸುತ್ತದೆ. ನಗರಳು ಉತ್ಪಾದನೆ ಹಾಗೂ ಹಂಚಿಕೆಯ ಕೇಂದ್ರಗಳಾಗಿದ್ದವು. ವ್ಯಾಪಾರ ಮತ್ತು ವಾಣಿಜ್ಯ ಕೈಗಾರಿಕೆ ಪಟ್ಟಣ

ವಾಸಿಗಳ ಪ್ರಮುಖ ಕಸುಬುಗಳಾಗಿದ್ದವು. ಕೈಗಾರಿಕೆಗಳ ಬೆಳವಣಿಗೆ ವ್ಯಾಪಾರದ ವಿಸ್ತರಣೆ ಹಾಗೂ ವಾಣಿಜ್ಯದ ವಿಸ್ತರಣೆಯು ನಗರಗಳ ಬೆಳವಣಿಗೆಗೆ ದಾರಿಯಾಯಿತು.

ಕೃಷಿಕೈಗಾರಿಕೆಗಳು, ಗಣಿಗಾರಿಕೆ ಹಾಗೂ ಕಲ್ಲಿದ್ದಲು, ಕರಕುಶಲ ಕೈಗಾರಿಕೆ, ಜವಳಿ ಉದ್ಯಮ ಹಾಗೂ ಮೀನುಗಾರಿಕೆಯಂತಹ ಹಲವು ಕೈಗಾರಿಕೆಗಳು ಈ ಕಾಲದಲ್ಲಿ ಅಭಿವೃದ್ಧಿ ಹೊಂದಿದವು. ಇದರ ಜೊತೆಗೆ ಹಲವಾರು ಅಂಶಗಳಿಂದಾಗಿ ಆಂತರಿಕ ಹಾಗೂ ಬಾಹ್ಯ ವ್ಯಾಪಾರ ಗಳೆರಡು ವಿಸ್ತಾರವಾದವು.

ಪಟ್ಟಣಗಳಲ್ಲಿನ ಆರ್ಥಿಕ ಜೀವನಕ್ಕೆ ಸಂಬಂಧಿಸಿದಂತೆ ಮತ್ತೊಂದು ಪ್ರಮುಖ ಅಂಶವೆಂದರೆ ವೃತ್ತಿ ಸಂಘದ ಅಸ್ಥಿತ್ವವಾಗಿತ್ತು. ಪಟ್ಟಣಗಳಲ್ಲಿನ ಆರ್ಥಿಕ ಚಟುವಟಿಕೆಗಳು ಈ ವೃತ್ತಿ ಸಂಘಗಳನ್ನು ಅವಲಂಬಿಸಿದವು. ಆಗ ಎರಡು ರೀತಿಯ ವೃತ್ತಿ ಸಂಘಗಳಿದ್ದವು. ಅವುಗಳೆಂದರೆ ವೃತ್ತಿ ಸಂಘ ಹಾಗೂ ವರ್ತಕ ಸಂಘ.

ಮಧ್ಯಕಾಲೀನ ಯುಗದಲ್ಲಿ ಪಾಂಚಾಲರು ಅಥವಾ ವೀರ ಪಾಂಚಾಲರು ಕೈಕೊಳರು ಗಾಣಿಗರು, ಕುಂಬಾರರು ಮುಂತಾದ ಅನೇಕ ವೃತ್ತಿ ಸಂಘಗಳಿದ್ದವು. ನಗರೀಕರಣದ ಪರಿಣಾಮವಾಗಿ ವೃತ್ತಿಸಂಘಗಳು ಪ್ರಾಮುಖ್ಯತೆಯನ್ನು ಗಳಿಸಿದವು. ಹಾಗೂ ಕುಶಲಕರ್ಮಿಗಳು ತಮ್ಮ ಸ್ಥಾನಮಾನ ಗಳನ್ನು ಉತ್ತಮ ಪಡಿಸಿಕೊಂಡರು. ಅವರು ಆಡಳಿತ ವರ್ಗದವರಿಂದ ಬಿರುದು ಬಾವಲಿಗಳು ಮತ್ತು ಹಕ್ಕುಬಾಧ್ಯತೆಗಳನ್ನು ಪಡೆದರು. ಕೆಲವು ಬಾರಿ ಧಾರ್ಮಿಕ ಪಂಥಗಳ ಮುಖ್ಯಸ್ಥರು ಅವರಿಗೆ ಕೆಲವು ವಿಶೇಷ ಸವಲತ್ತುಗಳನ್ನು ಹಾಗೂ ಹಕ್ಕುಗಳನ್ನು ನೀಡುತ್ತಿದ್ದರು.

ಆ ಕಾಲದಲ್ಲಿ ಆರ್ಥಿಕ ಜೀವನದಲ್ಲಿ ವೃತ್ತಿ ಸಂಘಗಳ ಪಾತ್ರಕ್ಕಿಂತ ವ್ಯಾಪಾರಿಗಳ ಪಾತ್ರ ಪ್ರಮುಖವಾಗಿತ್ತು. ಆಗ ಹಲವಾರು ಅಂಶಗಳು ವರ್ತಕ ಸಂಘಗಳ ರಚನೆಗೆ ಕಾರಣವಾಗಿತ್ತು.

ದಕ್ಷಿಣ ಕನ್ನಡವು ಸಾಮ್ರಾಜ್ಯದ ಅತ್ಯಂತ ಹೆಚ್ಚು ನಗರೀಕರಣ ಪ್ರದೇಶಗಳಲ್ಲಿ ಒಂದಾಗಿತ್ತು. ಇದು ಹಲವು ವರ್ತಕ ಸಂಘಗಳ ಚಟುವಟಿಕೆಯ ಕೇಂದ್ರವಾಗಿತ್ತು. ಅಲ್ಲಿದ್ದ ವರ್ತಕ ಸಂಘಗಳು ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದವು.

ಈ ರೀತಿಯಾಗಿ ವೃತ್ತಿ ಹಾಗೂ ವರ್ತಕ ಸಂಘಗಳೆರಡು ಆ ಕಾಲದ ಪಟ್ಟಣಗಳ ಆರ್ಥಿಕ, ಸಾಮಾಜಿಕ ಜೀವನದಲ್ಲಿ ಪ್ರಬಲ ಶಕ್ತಿಗಳಾಗಿದ್ದವು. ಅವುಗಳು ಪೌರ ವಿಷಯಗಳಲ್ಲಿ ಅಂದರೆ ಆಡಳಿತ ಹಾಗೂ ಆರ್ಥಿಕ ಚಟುವಟಿಕೆಗಳಲ್ಲಿ ಬಹಳ ಪ್ರಬಲವಾಗಿದ್ದವು. ಆ ಕಾಲದ ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಇವುಗಳು ಹಲವಾರು ಕಾರ್ಯಗಳನ್ನು ನಿರ್ವಹಿಸುತ್ತಿದ್ದವು.

ಆರನೆಯದಾಗಿ ನಗರ ಅಧ್ಯಯನಕ್ಕೆ ಸಂಬಂಧಿಸಿದ ಮತ್ತೊಂದು ಪ್ರಮುಖ ಅಂಶವೆಂದರೆ ನಗರ ಸಾಮಾಜಿಕ ರಚನೆಯು ವಿಶ್ಲೇಷಣೆಯಾಗಿದೆ. ನಗರವು ವೈವಿಧ್ಯಮಯ ಸಾಮಾಜಿಕ ಲಕ್ಷಣಗಳನ್ನು ಹೊಂದಿದ್ದರಿಂದ ಅದರ ಸ್ವರೂಪವು ಸಂಕೀರ್ಣವಾಗಿತ್ತು. ನಗರ ಸಂಯೋಜನೆಯು ವಿವಿಧ ಗುಂಪುಗಳು ಜಾತಿಗಳು ಹಾಗೂ ವರ್ಗಗಳನ್ನು ಹೊಂದಿತ್ತು. ಇದರ ಜೊತೆಗೆ ನಗರ ಸಮಾಜವು ಮುಕ್ತವು ಹಾಗೂ ಸಡಿಲವು ಆಗಿದ್ದರಿಂದ ನಗರಗಳಲ್ಲಿ ಒಂದು ರೀತಿಯ ಸ್ಥಿತಿಸ್ಥಾಪಕತೆ ಸಾಧ್ಯವಿತ್ತು.

ಪಟ್ಟಣದ ಜನ ಸಂಯೋಜನೆಯು ಉನ್ನತ ಶ್ರೇಣಿ ಹಾಗೂ ಇನ್ನಿತರ ಸಾಮಾಜಿಕ ನಿರ್ಬಂಧಗಳು ಸಡಿಲಗೊಳ್ಳತೊಡಗಿದವು. ಇದಕ್ಕೆ ಕಾರಣವೇನೆಂದರೆ ವಸತಿಯಾಗಿತ್ತು. ಆ ಕಾಲದಲ್ಲಿ ಬಹಳಷ್ಟು ಗುಂಪುಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳಿಂದ ವಲಸೆ ಹೋಗುತ್ತಿದ್ದವು. ಇದರಿಂದಾಗಿ ನಗರದ ಜನಸಂಖ್ಯೆಯು ತ್ವರಿತವಾಗಿ ಬೆಳೆಯುತ್ತ ಹೋಯಿತು.

ನಗರ ಸಮಾಜದ ಸಡಿಲ ಸ್ವರೂಪವು ಒಂದು ನಿರ್ದಿಷ್ಟ ಜಾತಿ ವರ್ಗ ಅಥವಾ ಗುಂಪಿನ ಜನರ ಸಾಮಾಜಿಕ ಸ್ಥಾನಮಾನಗಳು ಸುಧಾರಿಸಿದುದರ ಮೂಲಕವಾಗಿ ಕಂಡುಬಂದಿತು. ಆ ಕಾಲದಲ್ಲಿ ಅನೇಕ ಕೆಳಜಾತಿಗಳು ಸಾಮಾಜಿಕ ಶ್ರೇಣಿಯ ಹಲವಾರು ಸ್ತರಗಳನ್ನು ಹತ್ತುವ ಪ್ರಯತ್ನ ಮಾಡಿದರು. ಇದು ಸಂಘರ್ಷ ಹಾಗೂ ಗಲಭೆಗೆ ಅವಕಾಶವನ್ನುಂಟು ಮಾಡಿತು. ಏಕೆಂದರೆ ನಗರೀಕರಣ ಪ್ರವೃತ್ತಿಯು ಅವ್ಯಾಹತವಾಗಿ ಸಾಗಿತ್ತು. ಆಗ ಅರಸರು ಸಮಾಜದಲ್ಲಾಗುತ್ತಿದ್ದ ಮಾರ್ಪಾಡುಗಳಿಗೆ ಸ್ಪಂದಿಸಬೇಕಾಯಿತು. ಹಾಗೂ ವಿಶೇಷ ಹಕ್ಕುಬಾಧ್ಯತೆಗಳು ರಿಯಾಯಿತಿಗಳು, ಸವಲತ್ತುಗಳು ಮತ್ತು ಗೌರವಾಧಾರಗಳನ್ನು ನೀಡಬೇಕಾಗಿ ಬರುತ್ತಿತ್ತು. ಆ ಕಾಲದಲ್ಲಿ ಕೆಲವು ಕೆಳಜಾತಿಗಳು ಸಮನಾದ ಸವಲತ್ತುಗಳನ್ನು ಪಡೆದಿದ್ದವು.

ಗ್ರಂಥಸೂಚಿ
ಮೂಲ ಆಧಾರಗಳು

Epigraphy

- Annual Reports of the Archaeological Survey of India 1887 onwards
- Annual Reports of the Archaeological Department 1906 onwards
- Annual Reports of Indian Epigraphy 1964 onwards
- Annual Reports of South Indian Epigraphy 1887 onwards
- Annual Reports of Epigraphy Madras
- Andhra Pradesh Government Archaeological Series Hyderabad Select Stone Inscriptions
- Corpus Inscriptions Indiacarum Vol. IV (Ed) by Mirashi V.V.Ootacamund 1955
- Desai P.B. (Ed) A Corpus of Inscriptions in the Kannada Districts of Hyderabad State, Hyderabad 1958. Desai P.B. (Ed) Sasana Parichaya.
- Descriptive list of Kannada Stone Inscriptions Examined by Research Institute (Ed) by Annigeri A.M. and Joshi B.R. Dharwar 1961.
- Desai P.B. Jainism in South India and some Jaina Epigraphy – Sholapur, 1957.
- Epigraphia Carnatica Vols 1 to 16 Bangalore 1980 onwards.
- Epigraphica Carnatica (Revised Edition) volumes 1 to 9 Kannada Adhyana University of Mÿsore 1892 onwards.

Epigraphia India

- Elliot Sir. Walter Collection of South Indian Inscriptions Vol. 11 Kannada and Other Dynastics.
- Fleet John Faithfull. Pali Sanskrit and Old Canarese Inscriptions from the Bombay Presidency, etc. London 1878.
- Hyderabad Archaeologial Reports Indian Antiquary Bombay 1872-1923.
- Karnataka Inscriptions Vol. 1 to 3 (Ed) R.S. Panchamukhi Vol. 4, (Ed) A.M. Annigeri Vol.5, (Ed) P.B. Desai Vol.6 (Ed) Gopal, Dharwar, 1941, 1961.
- Kundangar K.G. (Ed) Inscriptions in Northern Karnataka and Kolhapur State, Kolhapur 1939.
- Rangacharya V.A. Topographical List of the Inscription of Southern India Vols. 1 to 3. Madras, 1919.
- South Indian Inscriptions Archaeological Survey of India Vols. III, VII, VIII, IX, XV, XX, 1890 onwards.
- Srikanta Sastry S. Sources of Karnataka History Vol.1 Mysore, 1946.

ಇಂಗ್ಲಿಷ್ ಪುಸ್ತಕಗಳು

- Appadoraj A. – Economic Conditions in Southern India, Madras, 1936.
- Basavaraja K.R. – History and Culture of Karnataka Dharwar, 1984.
- Bhandarkar R.G. – Early History of the Deccan 3rd Edition, Calcutta, 1928.
- Bulher G. – Indian Palaeography Calcutta, 1959.
- Chidananda Murthy M. – Kannada Sasanagala Samskritika Adhyayana (A.d. 450-1150), Mysore 1966

- Chandrasekhara Sastri – Economic Conditions under the Hoysalas, Half Yearly Journal of the Mysore University Vol. 11, No.2, Mysore, 1928.
- Coelho, William-Hoysalavamsa Bombay, 1950.
- Karmarkar A.P. – Administrative Machinery in Medieval Karnataka QJMS XXX VIII PP. 435-52, Bangalore 1941.
- Krishna Rao M.V. – The Gangas of Talkad, Madras 1936.
- Krishna Rao M.V. and Keshava Bhat M. – Karnataka Itihasa Darshana, Bangalore, 1970.
- Krishna Sastri H. – The Hoysalas in and beyond Mysore. QJMS Vol. II, Madras, 1911.
- Krishna Swamy Aiyangar S. Rajendra – Hindu State in Southern India CH XVIII or Vol. III of the Cambridge History of India Cambridge, 1928.
- Kuppaswamy G.R. – Economic Conditions in Karnataka, Dharwar, 1975.
- Kuppuswamy Aiyangar, G.R. – Kalachuryas of Kalyani and their Times Unpublished Thesis, Mysore University, 1955.
- Leela Shantakumari S. – History of the Agraharas of Karnataka, Madras.
- Mahalingam T.V. – South Indian Polity Madras, 1955.
- Mahalingam T.V. – The Banas in South Indian History JIH for 1951 Trivandrum 1951.
- Mastivenkatesha Aiyangar – Popular Culture in Karnataka, 1937.
- Mugali R.S. – The Heritage of Karnataka, Bangalore, 1946.
- Nanjundayya H.V. and Ananthà Krishna Iyet, - The Mysore Tribes and Castes Vol. II, 1928.
- Narasimhamurthy A.V. – The Coins of Karnataka, Mysore 1975.
- Nagaraja Rao C.K. – Pattamahadevi Shanthale, Bangalore.

- Nagaraja Rao C.K. – Veera Ganga Vishnuvardhana, Bangalore, 1992.
- Nilakanta Sastri K.A. – A History of South India Madras, 1955, (Revised Edn), 1965.
- Nilakanta Sastri K.A. – The Cholas (2nd Edn) Madras, 1955.
- Panchamukhi Vidyartna R.S. and Lakshminarayana Rao N – Dynastics of Karnataka Dharwar, 1946.
- Panchmuki, R.S. – Archaeology of Karnataka, Dharawar, 1953.
- Panukkar K.M. – Essential Features of Indian Culture, Bombay, 1964.
- Ramesh K.V. – History of South Kanara, Dharwar, 1970.
- Rice B. Lewis – Mysore and Coorg. Gazetter, Bangalore 1876-78.
- Rice – Mysore Gazateer. West Minister, 1897.
- Seletore B.A. – Ancient Karnataka Vol. I History of Tuluva, Poona, 1963.
- Saletore B.A. – Ancient Indian Political Thought and Institutions, Bombay, 1963.
- Settar S. – The Hoysala Temples, Dharwar, 1992.
- Setter S. – Inviting Death, Dharwar, 1986.
- Sircar D.C. – Studies in the Geography of Ancient and Medieval India, New Delhi.
- Srikantaiya S. – The Hoysala Empire QJMS Vol. VII PP. 292-310 and Vol VIII PP. 61-76, Bangalore 1917.
- Srikantasastry S. – Sources of Karnataka, History Vol. I Mysore, 1940.
- Shivanna K.S. – A Critique of Hoysal Polity, Mysore 1988.
- Sheik Ali B (Ed) – The Hoysala Dynasty, Mysore, 1972.
- Venkataraman, K.R. – The Hoysalas in the Tamil Country.
- Yazdani G. (Ed) – The Early History of Deccan Voes, 1-2, Bombay, 1960.

ಕನ್ನಡ ಆಧಾರ ಗ್ರಂಥಗಳು

- ಅಣ್ಣಿಗೇರಿ ಎಂ.ಎಂ. ಮತ್ತು ಮೇವುಂಡಿ ಮಲ್ಲಾರಿ – ಶಾಸನ ಸಾಹಿತ್ಯ ಸಂಚಯ, ಧಾರವಾಡ –1956.
- ಅಣ್ಣಿಗೇರಿ ಎಂ.ಎಂ. ಮತ್ತು ಆರ್. ಶೇಷಶಾಸ್ತ್ರಿ– ಕನ್ನಡ ಶಾಸನ ಸಂಗ್ರಹ, ಬೆಂಗಳೂರು–1975.
- ಕರ್ನಾಟಕ ಪರಂಪರೆ – ಸಂ–1 ದಿವಾಕರ್.ಆರ್.ಆರ್. ಮೈಸೂರು ರಾಜ್ಯ ಸರ್ಕಾರ–1970.
- ಕರ್ನಾಟಕ ವಿಷಯ ವಿಶ್ವಕೋಶ – ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ–1977.
- ಡಾ॥ ಕೃಷ್ಣ ಎಂ.ಎಚ್. – ಕನ್ನಡ ನಾಡಿನ ಚರಿತ್ರೆ – 1977 (ಸಂ–3) ಬೆಂಗಳೂರು.
- ಕೃಷ್ಣರಾವ್ ಎಂ.ವಿ. ಮತ್ತು ಕೇಶವ ಭಟ್ಟ – ಕರ್ನಾಟಕ ಇತಿಹಾಸ ದರ್ಶನ – ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳುರು–1970.
- ಚಿದಾನಂದ ಮೂರ್ತಿ ಎಂ. – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ಜಯಪ್ಪಗೌಡ ಡಿ.ಎಸ್. – ಕರ್ನಾಟಕದ ಕಡಲಾಚೆಯ ಸಂಪರ್ಕಗಳು ಶುಭೋಧಯ ಪ್ರಕಾಶನ, ಮೈಸೂರು–1983.
- ಜೋಶಿ ಎಸ್.ಬಿ. – ಕನ್ನಡ ನೆಲೆ, ಧಾರವಾಡ–1952.
- ತಿಪ್ಪೇರುದ್ರಸ್ವಾಮಿ ಎಚ್ – ಕರ್ನಾಟಕದ ಸಂಸ್ಕೃತಿ ಸಮೀಕ್ಷೆ, ಮೈಸೂರು –1961.
- ಡಾ.ದೇಸಾಯಿ ಪಾಂಡುರಂಗರಾಯರು – ಶಾಸನ ಪರಿಚಯ, ಧಾರವಾಡ–1956.
- ನರಸಿಂಹಚಾರ್.ಆರ್ – ಶಾಸನ ಪದ್ಯಮಂಜರಿ (ಕ್ರಿ.ಶ. 700–1465) ಬೆಂಗಳೂರು–1923.
- ನೇಮಿಚಂದ್ರ – ಲೀಲಾವತಿ ಪ್ರಬಂಧಮಂ – ಶಾರದಾ ಮಂದಿರ, ಮೈಸೂರು–1966.
- ಪಂಚಮುಖಿ ಆರ್.ಎಸ್. – ಕರ್ನಾಟಕದ ಶಿಲಾ ಶಾಸನಗಳು, ಧಾರವಾಡ–1953.
- ಪಂಚಮುಖಿ ಆರ್.ಎಸ್. – ಕರ್ನಾಟಕ ಹರಿದಾಸ ಸಾಹಿತ್ಯ, ಬೆಂಗಳೂರು– 1952.

- ಪಂಚಮುಖಿ. ಆರ್.ಎಸ್. ಮತ್ತು ಲಕ್ಷ್ಮಿ ನಾರಾಯಣರಾವ್ – ಕರ್ನಾಟಕದ ಅರಸು ಮನೆತನಗಳು ಸಂ–1, ಧಾರವಾಡ – 1946.
- ಮೇವಾಡಿ ಮಲ್ಲಾರಿ – ಕನ್ನಡ ಶಾಸನ ಸಂಗ್ರಹ, ಬೆಂಗಳೂರು – 1975.
- ಮುಗುಳಿ ಆರ್.ಎಸ್ – ಕನ್ನಡ ಸಾಹಿತ್ಯ ಚರಿತ್ರೆ, ಮೈಸೂರು – 1960.
- ರಮೇಶ್ ಕೆ.ವಿ. – ತುಳುನಾಡಿನ ಶಾಸನಗಳೂ – 1978.
- ರಮೇಶ್ ಕೆ.ವಿ. – ಕರ್ನಾಟಕ ಶಾಸನ ಸಂಹಿತೆ, ಬೆಂಗಳೂರು– 1971.
- ರಘುನಾಥ ಭಟ್ಟ ಎಚ್.ಆರ್. (ಸಂ) – ಕರ್ನಾಟಕದ ಶಾಸನಕಲೆ – ಭಾರತೀ ಪ್ರಕಾಶನ, ಮೈಸೂರು–1977.
- ಶಾಮಶಾಸ್ತ್ರಿ ಆರ್. – ಕರ್ನಾಟಕದ ವೀರಗಲ್ಲುಗಳು, ಬೆಂಗಳೂರು–1982.
- ಶ್ರೀಕಂಠಶಾಸ್ತ್ರಿ.ಎಸ್–ಹೊಯ್ಸಳ ವಾಸ್ತುಶಿಲ್ಪ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ–1965.
- ಶ್ರೀಕಂಠಶಾಸ್ತ್ರಿ ಎಸ್ – ಭಾರತೀಯ ಸಂಸ್ಕೃತಿ, ಮೈಸೂರು 1975.
- ಶ್ರೀನಿವಾಸ ಮೂರ್ತಿ ಎಂ.ಆರ್. – ಭಕ್ತಿ ಭಂಡಾರಿ ಬಸವಣ್ಣನವರು, ಬೆಂಗಳೂರು–1936.
- ಹಿರೇಮಠ ಬಿ.ಆರ್. ಶಾಸನಗಳಲ್ಲಿ ಕರ್ನಾಟಕದ ವರ್ತಕರು ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ–1936.
- ಡಾ. ಹಿರೇಮಠ ಆರ್.ಸಿ. ಮತ್ತು ಪ್ರೊ.ಎಂ.ಎಂ.ಕಲಬುರ್ಗಿ – ಕನ್ನಡ ಶಾಸನ ಸಂಪದ, ಧಾರವಾಡ–1968.

KEY TO ABBREVIATIONS

A. Books and Journals

E.C.	-	Epigraphica Carnatica
E.I.	-	Epigraphia Indica
I.A.	-	Indian Antiguary
J.I.H.	-	Journal of Indian History
M.A.R.	-	Mysore Archaeological Reports
Q.J.M.S.	-	Quarterly Journal of Mythic Society
S.I.I.	-	South Indian Inscriptions

B. Taluqs

A.G.	-	Arkalgud
A.K.	-	Arsikere
Bl	-	Belur
Bn	-	Bangalore
BP	-	Bowringpet
Cd	-	Chitradurga
Cg	-	Coorg
Ch	-	Chamarajanagar
Ci	-	Chikkanayakanahalli
Cm	-	Chikkamagalur
Cn	-	Channaraya Pattana
Cp	-	Channapatna
Db	-	Doddaballapur
Gu	-	Gundlupet
Hd	-	Heggadadevanakote
Hi	-	Honnalli
Hn	-	Hassan
Hr	-	Hiriyur

Kd	-	Kadur
Ki	-	Kolar
Kn	-	Kanakanahalli
Kr	-	Krishnaraja Pet
Md	-	Mandya
Ng	-	Nagamangala
Nj	-	Nanjangud
Nl	-	Nelamangala
Sa	-	Sagar
Sb	-	Sorab
Sb	-	Shravanabelagola
Sh	-	Shimoga
Si	-	Sira
Sr	-	Srirangapatna
Tk	-	Tarikere
Tm	-	Tumkur
Tn	-	T.Narasipur
Tp	-	Tiptur
Yd	-	Yedatore
Yi	-	Yalandur

ಗೆಜಟಿಯರ್ ಮತ್ತು ನಿಘಂಟುಗಳು

ಹಯವದನರಾವ್, ಮೈಸೂರು ಗೆಜಟಿಯರ್ ಸಂ 1 ರಿಂದ 5.1930.

Epigraphia Glossary – Sircar. D.C.

ಸೂರ್ಯನಾಥ ಕಾಮತ್. ಸಂ. ಕರ್ನಾಟಕ ರಾಜ್ಯ ಗೆಜಟಿಯರ್.

ಭಾಗ 1 : ಕರ್ನಾಟಕ ಸರ್ಕಾರ

ಭಾಗ 2 : 1982

ಕಿಟಲ್ – A Kannada English Dictionary Mangalore, 1984

ಕಿಟಲ್ – Kannada English Dictionary, Vol. I to IV, Madras, 1968

ಕನ್ನಡ ನಿಘಂಟು – ಕರ್ನಾಟಕ ಸಾಹಿತ್ಯ ಪರಿಷತ್, ಬೆಂಗಳೂರು (1970–80)

ಬಿ.ಎಲ್.ರೈಸ್. ಮೈಸೂರು ಗೆಜಟಿಯರ್ 1987.

ಇಂಗ್ಲೀಷ್ – ಕನ್ನಡ ನಿಘಂಟು ಮೈಸೂರು ವಿಶ್ವವಿದ್ಯಾನಿಲಯ – 1994

JOURNALS

Annuals of Bhandarkar Oriented Research Institute, Poona

Half Yearly Journals of the Mysore University, Indian Antiquary.

Indian Historical Quarterly

Indian History Congress (Proceedings) Journal of Indian History

Journal of Bombay Branch of Royal Asciatic Society

Journal of Karnataka University Humanities and Social Sciences, Number.

Journal of Historical Studies

Journal of Historical Society University of Mysore

Journal of Indian Research Institute


Journal of Modern Review

Quarterly Journal of Mythic Society, Bangalore

Quarterly Journal of Andhra Historical Society

ಹೊಯ್ಸಳರ ವಂಶಾವಳ

- ಸಳ
  - ನೃಪಕಾಮ (ಕ್ರಿ.ಶ. 1000–1045)
    - ವಿನಯಾದಿತ್ಯ (ಕ್ರಿ.ಶ. 1045–1098)
      - ಎರೆಯಂಗ (ಕ್ರಿ.ಶ. 1098–1100)
        - ಒಂದನೇ ಬಲ್ಲಾಳ (ಕ್ರಿ.ಶ. 1100–1108)
        - ವಿಷ್ಣುವರ್ಧನ (ಕ್ರಿ.ಶ. 1108–1152)
          - ಬಲ್ಲಾಳದೇವ
          - ಒಂದನೆಯ ನರಸಿಂಹ (ಕ್ರಿ.ಶ. 1152–1173)
            - ಎರಡನೆಯ ಬಲ್ಲಾಳ (ಕ್ರಿ.ಶ. 1173–1220)
              - ಎರಡನೆಯ ನರಸಿಂಹ (ಕ್ರಿ.ಶ. 1220–1235)
                - ಸೋಮೇಶ್ವರ (ಕ್ರಿ.ಶ. 1235–1253)
                  - ಮೂರನೆಯ ನರಸಿಂಹ (ಕ್ರಿ.ಶ. 1253–1292)
                    - ಮೂರನೆಯ ಬಲ್ಲಾಳ (ಕ್ರಿ.ಶ. 1292–1342)
                      - ವಿರೂಪಾಕ್ಷ ನಾಲ್ಕನೆಯ ಬಲ್ಲಾಳ (ಕ್ರಿ.ಶ. 1342–1346)
                  - ರಾಮನಾಥ (ಕ್ರಿ.ಶ. 1253–1295)
        - ಉದಯಾದಿತ್ಯ



ಹಳೇಬೀಡು ಕೋಟೆಯ ನಕಾಶೆ



ಹಳೇಬೀಡು ಮುಖ್ಯರಸ್ತೆ

AKSHARA GRANTHALAYA
ACC.NO. 130022

☎ : 2544984, Mob : 98804 11009
SARASWATHI
BOOK BINDERS
D Binding, Spiral/Comb Binding, Screen Printing,
ax Lamination, Plastic Covers & Laser Printing
13th Main, 3rd Cross, Saraswathipuram, Mysore-9